ಕಸ್ತೂರಿ

ಜೂನ್ ೧೯೬



ರೂ. ೧-

ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ :
ಎಚ್. ಆರ್. ಬಸವರಾಜ್

ಸಂಪಾದಕ :
ಪ. ಸು. ಭಟ್ಟ

ಕಲೆ :
ಕೆ. ಬಿ. ಕುಲಕರ್ಣಿ

ಮುಖಪುಟ :
ನೀರು—ನೀರೆ
ಚಿತ್ರ :
ಧನು ಕ್ಷತ್ರಿ

ಚಂದಾದರ :
ಅರ್ಧವರ್ಷ ಅಂಚೆ ಸೇರಿ ರೂ. ೧೦-೦೦
೧ ವರ್ಷ ,, ರೂ. ೧೮-೦೦
(ವಿಶೇಷ ಸಂಚಿಕೆ ಸೇರಿ)

KASTURI June 1980

ಬೆಳಕಿಂಡಿ

ನೀವು ಬಯಕೆಯಿಂದ ತೆಗೆದು, ಸಂತಸದಿಂದ, ಲಾಭವಾಯಿತೆಂಬ ಭಾವನೆಯೊಂದಿಗೆ ಮುಚ್ಚಿಡಬಲ್ಲಂಥದೇ ಒಳ್ಳೆಯ ಪುಸ್ತಕ.

— ಡಾರ್ಕರ್

*

ಹೆಂಗಸರು ಪುಸ್ತಕ ಇದ್ದ ಹಾಗೆ. ನೀವು ದೂರದಿಂದಲೇ ನೋಡಿ ಸಂತಸ ಪಡಬೇಕು, ಮುಟ್ಟಿ ತೆರೆದು ಓದತೊಡಗಿದಿರೋ ನಿಮ್ಮ ತಲೆಗೇ ನೋವು.

— ಅನುಭವಿ

*

ಮೆಚ್ಚುಗೆ ಅಜ್ಞಾನದ ಮಗಳಂತೆ.

— ಬೆಂಜಾಮಿನ್ ಫ್ರಾಂಕ್ಲಿನ್

*

ಕನಸುಗಳ ಸ್ಥಾನವನ್ನು ಪಶ್ಚಾತ್ತಾಪ ಆಕ್ರಮಿಸಿದರೆ ಮುಪ್ಪು ಬಂದಂತೆ.

— ಜಾನ್ ಬ್ಯಾರಿಮೋರ್

*

ಶ್ರೀಸಾಮಾನ್ಯನಿಗೆ ನಾವು ಮಾಡಬಹುದಾದ ಅತಿ ದೊಡ್ಡ ಸೇವೆ ಎಂದರೆ ಆತನನ್ನು ನಿರ್ವಂಶ ಮಾಡುವುದು.

— ಸರ್ ಜಾನ್ ಎಂಜೆಲ್

*

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ಸಂಖ್ಯೆ ಹಾಕಿರಬೇಕು.

✡

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನ

ಘಂಡಿನ ರಾಮಣ್ಣ

ವಸಂತ ಸಂಚಿಕೆಗೆ ಜೀವಂತಿಕೆ ತಂದುಕೊಟ್ಟ ಲೇಖನವೆಂದರೆ 'ಘಂಡಿನ' ರಾಮಣ್ಣ. ಇಂತಹ ಸರಳ ಸಮಾಜ ಸೇವಕನನ್ನು ಕುರಿತು ಬರೆದುದಕ್ಕೆ ಲೇಖಕರಿಗೆ, ಪ್ರಕಟಿಸಿದ ತಮಗೆ ಧನ್ಯವಾದಗಳು. ನಾನು ಎರಡು- ಮೂರು ವರ್ಷಗಳ ಕಾಲ ನನ್ನ ವಿದ್ಯಾರ್ಥಿ ಜೀವನವನ್ನು ಅವರ ಬಳಿ ಕಳೆದುದರಿಂದ, ಅವರ ಜೀವನದ ಹಿರಿಮೆಯರಿತುಕೊಳ್ಳುವ ಅವಕಾಶ ನನಗೊದಗಿತ್ತು.

ಬೆಳಗಾಂವಿ — ಚಿದಂಬರ ಇನಾಮದಾರ

ರಸಿಕಜೀವಿ

ವಸಂತ ಸಂಚಿಕೆಯಲ್ಲಿ ಯೋಗ-ಭೋಗ ಸಮನ್ವಯಕಾರ ರತ್ನಾಕರವರ್ಣಿಯ ಬಗೆಗಿನ, 'ಎನ್ಕೆ'ಯವರ ಲೇಖನ ಚೆನ್ನಾಗಿತ್ತು. "ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು ರಮ್ಯ. ಮಂಚಿದಿಯೆನೆ ತೆಲುಗು, ಅಯ್ಯಯ್ಯ ಎಂಚ ಪೊರ್ಲಾಂಡೆಂದು ತುಳುವರು" ಮೈಯುಬ್ಬಿ ಕೇಳುವ ಹಾಗೆ ಕೃತಿ (ಭರತೇಶ ವೈಭವ) ರಚಿಸಿದ ರಸಿಕಜೀವಿ ರತ್ನಾಕರವರ್ಣಿಯ ಕೃತಿಯ ರಸಭಾಗದ ಪರಿಚಯಕ್ಕಾಗಿ ಎನ್ಕೆಯವರಿಗೆ ಅಭಿನಂದನೆಗಳು.

ಬೆಳಗಾಂವಿ — ಗುಣಪಾಲ ಜೈನ

ಬಾಯ್ದೆರೆದು ಕುಣಿದಳಾ......

'ಕಸ್ತೂರಿ' ವಸಂತ ಸಂಚಿಕೆಯಲ್ಲಿನ 'ಬಾಯ್ದೆರೆದು ಕುಣಿದಳಾ ನಿರಾಶಾಣಿ' ಸಾಹಸಮಯ ಪ್ರವಾಸದ ರೋಮಾಂಚಕಾರಿ ಅನುಭವವನ್ನು ಓದುವಾಗ, ನಾವೂ ಕೂಡ ಆ ಪ್ರವಾಸದಲ್ಲಿ ಭಾಗವಹಿಸಿದ ಅನುಭವವಾಯಿತು. 'ನಮ್ಮೂರಿನಲ್ಲೊಬ್ಬ ತಲಾಠಿ'ಯು ಒಂದು ಚಿಕ್ಕ ಕುಟುಂಬದ ಆದರ್ಶ ಚಿತ್ರಣವಾಗಿತ್ತು. ಆದರೆ ಲೇಖಕರು, ಸ್ವಾಮಣ್ಣನವರನ್ನು ಕೆಲವೊಮ್ಮೆ ಬಹುವಚನದಲ್ಲಿಯೂ ಇನ್ನು ಕೆಲವೊಮ್ಮೆ (ಕೆಲಸ ಕಳೆದುಕೊಂಡಾಗ) ಏಕವಚನದಲ್ಲಿಯೂ ಸಂಬೋಧಿಸಿದ್ದಾರೆ. ಇಂತಹ ತಾರತಮ್ಯ ಏಕೆ ಮಾಡಿದ್ದಾರೊ !

ದುಬಾಯಿ — ಜೋನ್ ಪಿಂಟೊ

ಮೇ ತಿಂಗಳಲ್ಲಿ ಬಂದ ಎಚ್. ಆರ್. ಕನವಳ್ಳಿಯವರ 'ಬಾಯ್ದೆರೆದು ಕುಣಿದಳಾ...' ಒಂದು ಮೈ ನವಿರೇಳಿಸುವಂಥ ಭಯಾನಕ ಅಂಶಗಳಿಂದ ಕೂಡಿದ ಘಟನೆ. ತಮ್ಮ ೧೨ ವರ್ಷದ ಹಿಂದಿನ ಅನುಭವವನ್ನು ನಮ್ಮೊಡನೆ ಹಂಚಿಕೊಂಡಿದ್ದಕ್ಕಾಗಿ ಕನವಳ್ಳಿಯವರಿಗೆ ಧನ್ಯವಾದಗಳು.

ಸೊರಬ — ಎಂ. ಕಲ್ಪನಾ ಬಾಪಟ

೧೯೮೦ರ 'ಕಸ್ತೂರಿ' ವಸಂತ ಸಂಚಿಕೆಯಲ್ಲಿ ಪ್ರಕಟವಾದ ಪ್ರವಾಸ ಲೇಖನ 'ಬಾಯ್ದೆರೆದು ಕುಣಿದಳಾ ನಿಶಾರಾಣಿ' ತುಂಬಾ ಮೆಚ್ಚುವಂಥಾದ್ದು. ಅದು ಒಬ್ಬ ನಿಷ್ಠಾವಂತ ಶಿಕ್ಷಕನಲ್ಲಿರಬೇಕಾದ ಕಾರ್ಯ ಪ್ರಜ್ಞೆ ಮತ್ತು ಶಿಕ್ಷಕರಾಗಿ ನಾವು ಮಕ್ಕಳಿಗೆ ಜ್ಞಾನ ಧಾರೆಯೆರೆಯಬೇಕೆನ್ನುವ ಹಂಬಲವನ್ನೆತ್ತಿ ತೋರುತ್ತದೆ.

ಕೂಡ್ಲಿಗಿ — ಎಂ. ಜಾತಯ್ಯ

ಸತ್ತ ಕಥೆ

'ಕಸ್ತೂರಿ' ವಸಂತ ವಿಶೇಷಾಂಕ ತುಂಬ ಸುಂದರವಾಗಿ ಹೊರ ಬಂದದ್ದು ಕನ್ನಡಿಗರಿಗೆ ಹೆಮ್ಮೆ. ಕಥೆಗಳು, ಲೇಖನಗಳು ಚೆನ್ನಾಗಿವೆ. ಅದರಲ್ಲೂ 'ಸತ್ತ ಕಥೆ' ಅತ್ಯಂತ ಪರಿಣಾಮಕಾರಿ.

ಇಂಡಿ — ಆರ್. ಎಸ್. ಸಿಂಧೆ

ಧೂಮಕೇತು

ವಿಜ್ಞಾನ- ಅಂಧಶ್ರದ್ಧೆ, ತಂತ್ರವಿದ್ಯೆ-ಯಜ್ಞಕಾರ್ಯ, ಮಾನವಯತ್ನ- ಭಗವದಾಶೀರ್ವಾದ ಈ ದ್ವಂದ್ವಗಳನ್ನು ಅತ್ಯಂತ ಆಕರ್ಷಕವಾಗಿ, ತರ್ಕಬದ್ಧವಾಗಿ ಕನ್ನಡದಲ್ಲೇ ಯೋಚಿಸಿ, ಯೋಚಿಸಿ ಬರೆದಷ್ಟು ಸಮರ್ಪಕವಾಗಿ ನಿರೂಪಿಸಲಾಗಿದೆ. ಮೂಲ ಲೇಖಕರಿಗೂ ಅನುವಾದಕಗೂ ಕೃತಜ್ಞತೆಗಳು. ಪುಟ ೧೨೧ ಬಲ ಕಾಲಮ್ಮಿನಲ್ಲಿ ಎರಡು ಸಲ ಬಂದಿರುವ 'ವೇಗ ಕೇಂದ್ರ'ದ ಸರಿಯಾದ ರೂಪ 'ವೇಧ ಕೇಂದ್ರ' ಅಥವಾ ಇನ್ನೂ ಸರಿಯಾದ ರೂಪ 'ವೇಧಶಾಲೆ'.

ಮೈಸೂರು — ಜಿ. ಟಿ. ನಾರಾಯಣರಾವ್

ರಮಣೀಯತೆ-ಲಾವಣ್ಯ

'ರಮಣೀಯತೆ'ಯ ರೂಪಾಂತರ 'ಲಾವಣ್ಯ' ಎಂಬ ಪಾ. ವೆಂ. ರವರ ಮಾತಿನ ಬಗ್ಗೆ ಒಂದು

ಸಂದೇಹ. ಸಾಮಾನ್ಯವಾಗಿ ಪ್ರಕೃತಿ ಮುಂತಾದ ನಿರ್ಜೀವ ವಸ್ತುಗಳ ವರ್ಣನೆಯನ್ನು ಮಾಡುವಾಗ 'ರಮಣೀಯ'ವೆಂಬ ಪದವನ್ನು ಬಳಸುವುದನ್ನು ನೋಡಿದ್ದೇನೆ. ಈ (ರಮಣೀಯ) ಪದದ ರೂಪಾಂತರವೇ 'ಲಾವಣ್ಯ' ಎನ್ನುವುದಕ್ಕಿಂತ 'ಲಲಿತ'ದಿಂದಲೇ ಲಾವಣ್ಯ ಹುಟ್ಟಿರಬಹುದೆಂಬುದು ಹೆಚ್ಚು ಸೂಕ್ತ-ವೆನಿಸುವುದಿಲ್ಲವೆ? ಅಪ್ರತಿಮ ಸೌಂದರ್ಯ, ಮನಸ್ಸಿಗೆ ಅಹ್ಲಾದವನ್ನುಂಟುಮಾಡುವ ಸೂಕ್ಷ್ಮ ಕಂಪನ (ವಿಶೇಷವಾಗಿ ಜೀವವುಳ್ಳ- ಅದರಲ್ಲೂ ಸ್ತ್ರೀಯರ) ಮೊದಲಾದವುಗಳನ್ನು, ಒಂದೆಡೆಯಲ್ಲಿ ಹಿಡಿದಿರುವ ಪದ 'ಲಲಿತ'ವಿರಬಹುದಾದ್ದರಿಂದ ಇದೇ ಲಾವಣ್ಯಕ್ಕೆ ಮೂಲವಿರಬಹುದೇನೋ.

ಸೊರಬ —ರಘುನಾಥ ಬಾಪಟ

ಜೋಕರ್

ಕಸ್ತೂರಿ ವಸಂತ ಸಂಚಿಕೆಯಲ್ಲಿ ಬಂದ ಡಿ. ಆರ್. ಬಾಲುರವರ 'ಜೋಕರ್' ನನಗೆ ಬಹುವಾಗಿ ಹಿಡಿಸಿದ ಕಥೆ. ನನ್ನನ್ನೊಳಗೊಂಡಂತೆ ಅನೇಕ ಯುವಕರ ಜೀವನದಲ್ಲಿ ನಡೆದು ಹೋಗಿರಬಹುದಂತಹ ಒಂದು ಅಂಶವನ್ನೇ ಲೇಖಕರು ಸೆರೆಹಿಡಿದಿದ್ದಾರಿಲ್ಲಿ.

ಚಾಕೇನಹಳ್ಳಿ —ಎಂ. ಡಿ. ದಾಸೇಗೌಡ

ಕಸ್ತೂರಿ ಪರಿಮಳ

ವಸಂತ ಸಂಚಿಕೆಯ 'ಕಸ್ತೂರಿ'ಯ ಪರಿಮಳ ಎಲ್ಲಿಯವರೆಗೆ ಹರಡಿತ್ತೆಂದರೆ, ನಾನು ಬದರೀಯಾತ್ರೆಯಲ್ಲಿದ್ದು, ಆಂಧ್ರದ ಒಳ ಪ್ರದೇಶವಾದ ವಾಲ್ತೇರಿನಲ್ಲಿ ಅದರ ಒಂದು ಪ್ರತಿಯನ್ನು ರೇಲ್ವೆ ಸ್ಟಾಲಿನಲ್ಲಿ ಸಹಜವಾಗಿ ಗ್ರಹಿಸಿ, ಅದರ ಸುಗಂಧವನ್ನು ಮೂಸಿ 'ಇಲ್ಲಿಯವರೆಗೂ ಕನ್ನಡದ ಕಸ್ತೂರಿಯೆ?' ಎಂದು ಆಶ್ಚರ್ಯ ಪಡುತ್ತ ದಿಙ್ಮೂಢನಾದೆ.

ದೇವದುರ್ಗ —ವ್ಹಿ. ಸಿ. ಜೋಶಿ

ಅಪ್ಪಗೆ ಬರೆಯಬೇಕು

ಕಸ್ತೂರಿಯ ವಸಂತ ಸಂಚಿಕೆ ನಮಗೆಲ್ಲ ರಸ-ದೌತಣವನ್ನು ಉಂಡ ಸಮಾಧಾನ ಸಂತೋಷ ಕೊಟ್ಟಿದೆ. ಅದರಲ್ಲಿ ಕನ್ನಡದ ಶ್ರೇಷ್ಠ ಬರಹಗಾರರಾದ ಶಿವರಾಮ ಕಾರಂತರ ಉತ್ತಮ ಕಾದಂಬರಿಯಾದ 'ಮೈಮನಗಳ ಸುಳಿಯಲ್ಲಿ.' ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಮೂವರು ಧೀರರು ಬೇತಾಳನನ್ನು ಗೆದ್ದುದು' ಮನನೀಯವಾಗಿವೆ. ಅದರಂತೆ ಕಥೆಗಳಲ್ಲಿ ಶ್ರೀಮತಿ ಗೀತಾ ಕುಲಕರ್ಣಿಯವರ 'ಅಪ್ಪಗೆ ಬರೆಯಬೇಕು' ಅನೇಕ ಸಮಸ್ಯೆಗಳಿಗೆ ಕನ್ನಡಿ ಹಿಡಿಯುವಂಥ ಉತ್ತಮ ಕಥೆ.

ಬೆಂಗಳೂರು —ಸುಮಾ

'ಕಸ್ತೂರಿ'ಯ ವಸಂತ ಸಂಚಿಕೆಯಲ್ಲಿ ನನಗೆ ತುಂಬ ಹಿಡಿಸಿದ ಕಥೆ 'ಅಪ್ಪಗೆ ಬರೆಯಬೇಕು.'

ಶಿರಸಿ —ಶಶಿರೇಖಾ ಕಾಮತ

ನಮ್ಮೂರಿನಲ್ಲೊಬ್ಬ ತಲಾಠಿ

ಅತಿ ಶಿಸ್ತು, ಕಟ್ಟು ನಿಟ್ಟುಗಳನ್ನು ತನ್ನ ಮೇಲೆ ಹೇರಿಕೊಂಡ ವ್ಯಕ್ತಿ ಸಮಾಜದಲ್ಲಿ ಅನೇಕರ ನಿಷ್ಠುರಕ್ಕೆ ಒಳಗಾಗಿ ತನ್ನ ವೈಯಕ್ತಿಕ ಬದುಕನ್ನು ಎಂತಹ ದುರಂತಕ್ಕೆ ಈಡು ಮಾಡಿಕೊಳ್ಳುತ್ತಾನೆಂಬುದು ಈ ವರ್ಷದ ವಸಂತ ಸಂಚಿಕೆಯಲ್ಲಿನ 'ನಮ್ಮೂರಿನಲ್ಲೊಬ್ಬ ತಲಾಠಿ' ಕಥೆಯಲ್ಲಿ ತುಂಬಾ ಚೆನ್ನಾಗಿ ಮೂಡಿಬಂದಿದೆ.

ನಾಗಪುರ —ಟಿ. ಆರ್. ದಕ್ಷಿಣಾಮೂರ್ತಿ

ಉತ್ತಮ ಲೇಖನಗಳು

ಅರ್ಥವನ್ನರಿಯದೆ, ಭಾವೈಕ್ಯ-ಭಾವೈಕ್ಯವೆಂದು ಬಾಯ್ಬಿಡುವ ಇಂದಿನ ಸಮಾಜಕ್ಕೆ, ದೇಜಗೌ ಅವರ 'ಭಾವೈಕ್ಯ'ವು ಮಾರ್ಗದರ್ಶನೀಯವಾಗಿದೆ. ವಿಜ್ಞಾನ ಜಗತ್ತು ನಾಸ್ತಿಕ ಜಗತ್ತು ಎಂದೆನ್ನುವ ಇಂದಿನ ಜನಗಳಿಗೆ, ದೇವರ ಬಗೆಗಿನ ವೈಜ್ಞಾನಿಕ ಕಲ್ಪನೆಯನ್ನು ರಾಜಶೇಖರ ಭೂಸನೂರಮಠರು 'ವಿಜ್ಞಾನಿಯ ದೃಷ್ಟಿಯಲ್ಲಿ ದೇವರು' ಎಂಬ ಲೇಖನದಲ್ಲಿ, ಸಕಲರ ಮನಮುಟ್ಟುವಂತೆ, ಮಾಡಿಕೊಟ್ಟಿದ್ದಾರೆ. ಡಾ. ಹಾ. ಮಾ. ನಾಯಕರ 'ಓದುವ ಕಲೆ' ಕೆ. ಸಿ. ಶಿವಪ್ಪನವರ 'ಪುಸ್ತಕ ಮತ್ತು ಸಂತೋಷ' ಮಾರ್ಮಿಕವಾಗಿವೆ.

ಬಾಗಲಕೋಟೆ —ಬಸವರಾಜ ಭಗವತಿ

ಕಸ್ತೂರಿ

ಸಂಚಿಕೆ: ೧೦ ಕಸ್ತೂರಿ, ಜೂನ್ ೧೯೮೦ ವರ್ಷ: ೨೪

ಆತ್ಮಶಕ್ತಿ

ಸಾಧು ಟಿ. ಎಲ್. ವಾಸವಾನಿ

ಪಾಶ್ಚಾತ್ಯ ಜಗತ್ತಿನಲ್ಲಿ ಎಕ್‌ಹಾರ್ಟ್ ತತ್ವ ಚಿಂತನೆಯಲ್ಲಿ ಬಹು ದೊಡ್ಡ ಹೆಸರು. ಒಮ್ಮೆ ಅವರು ಧ್ಯಾನಮಗ್ನರಾಗಿದ್ದಾಗ ಎಲ್ಲಿಂದಲೋ ಸ್ಫುರದ್ರೂಪಿಯಾದ ಬಾಲಕನೊಬ್ಬ ಪ್ರತ್ಯಕ್ಷನಾದದ್ದನ್ನು ಕಂಡು ಗಲಿಬಿಲಿಗೊಂಡ ಎಕ್‌ಹಾರ್ಟ್, "ಯಾರಪ್ಪಾ ನೀನು ? ಎಲ್ಲಿಂದ ಬಂದಿದ್ದೀ ? ಇಲ್ಲಿಗೇಕೆ ಬಂದಿದ್ದೀ ? ನನ್ನಿಂದ ನಿನಗೇನಾಗಬೇಕು ?" ಎಂದೆಲ್ಲಾ ಪ್ರಶ್ನೆಗಳ ಮಳೆಯನ್ನೇ ಸುರಿಸಿದರಂತೆ. ಆದರೆ ಆ ಬಾಲಕ ಅದಾವುದಕ್ಕೂ ಉತ್ತರಕೊಡದೆ ಆವನು ಪರಮಾತ್ಮನ ಬಳಿಯಿಂದ ಬಂದಿರುವುದಾಗಿ ಮಾತ್ರ ಉತ್ತರಿಸಿದ. "ಹಾಗಾದರೆ ಆ ಪರಮಾತ್ಮ ಎಲ್ಲಿ ಇರುತ್ತಾನಪ್ಪಾ ?" ಎಕ್‌ಹಾರ್ಟ್ ಕೇಳಿದರು. "ಆತ ಪವಿತ್ರಹೃದಯದಲ್ಲಿರದೆ ಮತ್ತೆಲ್ಲಿರಬೇಕು ?" ಎಂದು ಉತ್ತರ ಬಂತು. "ಹಾಗಾದರೆ ನೀನು ಯಾರು ?" ಕುತೂಹಲದಿಂದ ಕೇಳಿದರು ಎಕ್‌ಹಾರ್ಟ್. "ನಾನೊಬ್ಬ ರಾಜ" ಬಾಲಕ ಉತ್ತರಿಸಿದ. ಆ ಬಾಲಕನನ್ನು ಕಂಡು ಅವರಿಗೆ ಅದೇಕೋ ಪ್ರೀತಿ ಉಕ್ಕಿ ಬಂತು. ಅವರು ಆತನನ್ನು ಪಕ್ಕದ ಕೋಣೆಗೆ ಕರೆದುಕೊಂಡು ಹೋಗಿ, ಅಲ್ಲಿರುವ ವಸ್ತುಗಳನ್ನೆಲ್ಲಾ ತೋರಿಸಿ, "ನಿನಗೇನು ಬೇಕೋ ಅದನ್ನ ತೆಗೆದುಕೋ," ಎಂದು ಹೇಳಿದರು. ಬಾಲಕ ಘೃಣಾತ್ಮಕವಾಗಿ ನಗುತ್ತಾ, "ರಾಜರು ಬೇಡಿ ತೆಗೆದುಕೊಳ್ಳುವುದು ಅವರ ಮರ್ಯಾದೆಗೇ ಕುಂದು ಎಂಬುದು ಗೊತ್ತಿಲ್ಲವೆ ?" ಎಂದ. ಎಕ್‌ಹಾರ್ಟ್ ಬಾಯ್ದೆರೆಯುವಷ್ಟರಲ್ಲೆ ಬಾಲಕ ನಿಂತನಿಂತಲ್ಲೆ ಅದೃಶ್ಯವಾಗಿ ಹೋದ.

ಒಂದು ರೀತಿಯಲ್ಲಿ ಈ ಕಥೆ ಮಾರ್ಮಿಕವಾಗಿದೆ. ಈ ಕಥೆಯಲ್ಲಿ ಬರುವ ರಾಜ ಯಾರು ಗೊತ್ತೇ? ನಿಮ್ಮ ಹೃದಯದಲ್ಲೆ ಆಸೀನನಾದ ಆತ್ಮನೇ ಆತ. ಮುಪ್ಪು ಸಾವುಗಳಿಂದ ಅತೀತನಾದ ಅವನು ಚಿರ ಯುವಕನಾಗಿಯೆ ಇರುತ್ತಾನೆ. ನೀವು ನಿಮ್ಮಲ್ಲಿರುವ ಆತ್ಮಶಕ್ತಿಯನ್ನು ಬೆಳಿಸಿಕೊಳ್ಳಿ—ಅದರಿಂದ ಬೇಕಾದರೆ ಇಡೀ ಜಗತ್ತನ್ನೇ ಜಯಿಸಬಹುದು. ಅಂದ ಹಾಗೆ ಆತ್ಮಶಕ್ತಿಯನ್ನು ಹೇಗೆ ಬೆಳಿಸಿಕೊಳ್ಳಬೇಕೆಂಬುದು ಗೊತ್ತೆ! ಅದು ಬಹು ಸರಳ. ಕಾಮನೆಗಳ ಸಂಕೋಲೆಯಲ್ಲಿ ಬಂಧಿತವಾದ ಹಾಗೆ ಅದರ ಶಕ್ತಿ ಕುಗ್ಗುತ್ತದೆ. ಆದರೆ ನೀವು ನಿಃಸ್ವಾರ್ಥಿಗಳಾದ ಹಾಗೆ, ನಿರ್ಲಿಪ್ತರಾದ ಹಾಗೆ ಆತ್ಮಶಕ್ತಿ ತಂತಾನೆ ಬೆಳೆಯುತ್ತದೆ. ಮತ್ತೆ, ಆತ್ಮಶಕ್ತಿಯಿಂದ ಏನೇನು ಸಾಧಿಸಲಾಗಲಿಕ್ಕಿಲ್ಲ!

ಸ್ಪೆಶಲ್ ಖೀರು

ಮೈಸೂರರಮನೆಯ ಪಾಕಶಾಲೆಯಲ್ಲಿ ದಸರೆಯ ದಿನಗಳಲ್ಲಿ ನಿತ್ಯ ಬಗೆ-ಬಗೆಯ ಭಕ್ಷ್ಯ–ಭೋಜನ. ದಿನವೂ ಒಂದೊಂದು ರೀತಿಯ ಖೀರು ಆಗಲೇ ಬೇಕು. ಅಡಿಗೆಯವರಲ್ಲಿ ಬಸವಯ್ಯ ಎಂಬಾತ ಮುಖ್ಯಸ್ಥ. ಮೋಜಿನ ಸ್ವಭಾವ-ದವ. 'ರಾಯಲ್ ಕುಕ್' ಎಂದು ತನ್ನನ್ನೇ ಕರೆದುಕೊಳ್ಳುವವ. ಅಡಿಗೆ ಮನೆಯಿಂದ ರಾಜಮನೆತನದವರ ಊಟದ ಮನೆಗೆ ಒಯ್ದು ಬಡಿಸುವ ಆಳುಗಳಲ್ಲಿ ಮಾದಯ್ಯ ಎಂಬವನೊಬ್ಬ. ಸ್ವಲ್ಪ ಪೆದ್ದು. ಹಬ್ಬ ಮುಗಿದರೂ, "ಇವತ್ತು ಕೀರು ಮಾಡಿಲ್ವೆ?" ಎಂದೇ ಆತನ ಪ್ರಶ್ನೆ. ನಾಲ್ಕಾರು ದಿನ ಹೀಗೇ ಕೇಳಿದ. ಆ ದಿನ ಆತ ಕೇಳಿದ್ದೇ ತಡ ಬಸವಯ್ಯ ಬಾಳೆಲೆ ಮುಚ್ಚಿ ಬಾಯಿ ಕಟ್ಟಿದ್ದ ತಂಬಿಗೆಯನ್ನು ಆತನ ಕೈಗಿತ್ತು, "ಮಾದಯ್ಯ ಈವತ್ತು ಸ್ಪೆಶಲ್ ಖೀರು" ಅಂದ. ಮಾದಯ್ಯ ಅದನ್ನು ಖುಷಿಯಿಂದಲೇ ಒಯ್ದ. ರಾಜಮನೆತನದವರಿಗೆ "ಪೆಶಲ್ ಕೀರಂತೆ" ಎಂದೇ ಬಡಿಸಿದ; ಬಾಯಿಗಿಟ್ಟವರೆಲ್ಲ ಮೋರೆ ಸೊಟ್ಟಮಾಡಿದರು. ಅದು ಯಾವ ರುಚಿಯೂ ಇಲ್ಲದ ಬಿಳಿ ದ್ರವ !

ವಿಚಾರಣೆ ಶುರುವಾಯಿತು, ಸ್ಪೆಶಲ್ ಖೀರು ತಯಾರಿಸಿದ ಬಸವಯ್ಯನ ಮೇಲೆ ಮಹಾರಾಜರು ಕೆಂಡವಾಗಿದ್ದರು. "ಊಟದಲ್ಲಿ ಬಡಿಸಿದರಲ್ಲ, ಸ್ಪೆಶಲ್ ಖೀರಂತ, ಅದು ಏನು ?" ಎಂದು ಕೇಳಿದರು. ಬಸವಯ್ಯನಿಗೆ ಆಗರ್ಥವಾಯಿತು. ವಿನಯದಿಂದ, "ಪ್ರಭು, ಮಾದಯ್ಯ ಹಬ್ಬ ಮುಗಿದ್ರೂ ಖೀರು ಖೀರು ಅಂತ ಪೀಡಿಸ್ತಿದ್ದ. ಚೇಷ್ಟೆ ಮಾಡೋಣಾಂತ ಅಡಿಗೆ ಮಾಡುವಾಗ ಕೈ ಅದ್ದಿ ತೊಳೆದ ನೀರು ಅದು" ಅಂತ ಉತ್ತರಿಸಿದಾಗ ಪೆದ್ದು ಮಾದಯ್ಯ ಮುಖ ಮೇಲೆತ್ತಲಿಲ್ಲ. "ಆಯ್ತು, ಮಾದಯ್ಯ ಇನ್ನೊಮ್ಮೆ ಖೀರು ಅನಬೇಡ" ಎಂದು ಎಚ್ಚರಿಸಿ ವಿಚಾರಣೆ ಮುಗಿಸಿದರು ಮಹಾರಾಜರು.


— **ಊರ್ಮಿಳಾ ರಾಜೇಶ್ವರಿ**

ಐರಿಶ್ ಲೋಹ ಕಲೆ

ಕೆಲ ತಿಂಗಳುಗಳ ಹಿಂದೆ ಅಮೇರಿಕದ ದೊಡ್ಡ ನಗರಗಳಲ್ಲಿ ಪ್ರದರ್ಶಿತಗೊಂಡು ಮರಳಿ ಡಬ್ಲಿನ್ನಿಗೆ ಬಂದ ಐರ್‌ಲಂಡಿನ ಲೋಹ ಕಲಾಕೃತಿಗಳು ಐರಿಶ್ ಕಲೆಗಾರಿಕೆಯ ಪರಂಪರೆ–ಔನ್ನತ್ಯಕ್ಕೆ ಸಾಕ್ಷಿಯೆನಿಸಿದುವು. ಹಿತ್ತಾಳೆ, ಕಂಚು ಚಿನ್ನ, ಬೆಳ್ಳಿಗಳಲ್ಲಿ ತಯಾರಿಸಿದ ಕಲಾಕೃತಿಗಳವು. ಅವುಗಳಲ್ಲಿನ ನಯ–ನಾಜೂಕಿನ ಸುಳುವು ಚಿತ್ತಾರಗಳು ಮತ್ತು ಕೆಲವೊಂದಕ್ಕೆ ಕೆತ್ತಿದ ಹರಳುಗಳು ಈ ಕಲಾಕೃತಿಗಳನ್ನು 'ಅದ್ಭುತ'ಗಳನ್ನಾಗಿಸಿವೆ. ಐರಿಶ್ ಲೋಹಕಲೆಯದು ಹಳೆಯ ಪರಂಪರೆ. ಕ್ರಿ.ಪೂ. ೧೫೦೦ ರಿಂದಲೇ ಈ ಕಲೆಯ ಇತಿಹಾಸ ಆರಂಭ. ಕ್ರಿ.ಶ. ೧೫೦೦ ರ ವರೆಗಿನ ಕಲಾಕೃತಿಗಳನ್ನು ಡಬ್ಲಿನ್ನಿನ ಸರಕಾರಿ ವಸ್ತುಸಂಗ್ರಹಾಲಯದಲ್ಲಿಡಲಾಗಿದೆ. ಪಾತ್ರೆಗಳು, ಶಿಲುಬೆ, ಸೂಜಿ, ಗಂಟೆಗಳು, ಒಂದೇ ಎರಡೇ ಎಲ್ಲವೂ ಒಂದಕ್ಕಿಂತ ಇನ್ನೊಂದುಅಪ್ರತಿಮ. ಈ ಮೂರು ಸಾವಿರ ವರ್ಷಗಳಲ್ಲಿ ಐರಿಶ್ ಲೋಹ ಕಲೆ ಬೆಳೆದುಬಂದ ಪರಿಯನ್ನಿವು ಸಾರುತ್ತವೆ.

ವೈಯಕ್ತಿಕ ಉಪಯೋಗಕ್ಕಾಗಿ ತಯಾರಿಸಿದ ಶೃಂಗಾರ ವಸ್ತುಗಳು, ಆಭರಣಗಳು ಚಿನ್ನದವು. ಬೆಳ್ಳಿಯಲ್ಲಿ ತಯಾರಿಸಿದ ಕೃತಿಗಳು ೭ ರಿಂದ ೯ನೆಯ ಶತಮಾನದ ಕಾಲದವು. ಚಿನ್ನ ಬೆಳ್ಳಿಯ ಈ ಆಭರಣ ಕೃತಿಗಳ ಕಾಲ 'ಐರಿಶ್ ಚಿನ್ನದ ಯುಗ.'







ಸೇಂಟ್ ಪೀಟರ್ ಬೆಲ್‌ನ ಸ್ಮಾರಕ ಎಂಬುದು ೧೨ನೆಯ ಶತಮಾನದ್ದು. ಇದರಲ್ಲಿ ಹರಳು ಕೆತ್ತಲಾಗಿದೆ. ರೋಮಾನೆಸ್ಕ್ ಪೀರಿಯಡ್ ಎಂದು ಈ ಅವಧಿಯನ್ನು ಗುರುತಿಸುವುದುಂಟು.

ಬೆಳ್ಳಿಯಲ್ಲಿ ತಯಾರಿಸಿದ ಶಿಲುಬೆ, ಬಂಗಾರದ ಸೂಜಿ, ಕಂಚಿನ ಪಾತ್ರೆಗಳು, ಆಯುಧ, ಮಂಕಿಗೆ ಬಂಗಾರದ ಹಿಡಿಯುಡುವ ಕೈಬಡಿಗೆ, ಕಂಠಾಭರಣ ಬಂಗಾರದ ಲೇಪವುಳ್ಳ ಬುಕ್ ಆಫ್ ಡುರೋದ ಪುಟ ಇವೆಲ್ಲ ಐರಿಶ್ ಲೋಹಕಲೆಯ ಕೆಲ ಉದಾಹರಣೆಗಳು ಮಾತ್ರ. ✡

ಇದೊಂದು ಮರಣಶಾಸನ

ಜೀವನಶಯ್ಯೆ

ಎಂ. ಜೈಕುಮಾರ್

ಸಾವು ಬದುಕುಗಳ ನಡುವೆ ಕಾರ್ಯ ಮಗ್ನವಾಗಿರುವಾಗ ಯಾವುದೋ ಆಸ್ಪತ್ರೆಯ ಶುಭ್ರ ಬಿಳಿ ಚಾದರ ಹೊದಿಸಿದ ಹಾಸಿಗೆಯ ಮೇಲೆ ನನ್ನ ದೇಹವೂ ಒರಗುವ ಒಂದು ದಿನ ಬರುತ್ತದೆ. ಯಾವುದೋ ನಿರ್ದಿಷ್ಟ ಕ್ಷಣದಲ್ಲಿ ವೈದ್ಯನೊಬ್ಬ ಬಂದು ನನ್ನ ಮೆದುಳು ತನ್ನ ಚಟುವಟಿಕೆಯನ್ನು ನಿಲ್ಲಿಸಿದೆ, ನನ್ನ ಜೀವ ಹಾರಿಹೋಗಿದೆ ಎಂದು ನಿರ್ಣಯಿಸುತ್ತಾನೆ.

"ಹೀಗಾದಾಗ ಯಂತ್ರದ ನೆರವಿನಿಂದ ನನ್ನಲ್ಲಿ ಕೃತಕ ಜೀವ ತುಂಬಲು ಪ್ರಯತ್ನಿಸಬೇಡಿ. ಅದು ನನ್ನ 'ಮೃತ್ಯುಶಯ್ಯೆ' ಎಂದು ಕರೆಯಬೇಡಿ. 'ಜೀವನಶಯ್ಯೆ' ಎನ್ನಿರಿ. ಇತರರು ಪೂರ್ಣ ಬದುಕು ನಡೆಸಲು ಅನುವಾಗುವಂತೆ ನನ್ನ ದೇಹವನ್ನು ಅಲ್ಲಿಂದ ಕೊಂಡೊಯ್ಯಿರಿ.

"ಎಂದೂ ಸೂರ್ಯೋದಯವನ್ನು ನೋಡಿರದವನಿಗೆ, ಮಗುವಿನ ಮುಖವನ್ನು ಕಾಣದವನಿಗೆ, ಹೆಣ್ಣಿನ ಕಣ್ಣಲ್ಲಿನ ಪ್ರೇಮದ ಬೆಳಕನ್ನು ಕಂಡಿರದವನಿಗೆ ನನ್ನ ಕಣ್ಣುಗಳನ್ನು ಕೊಡಿ.

"ಯಾರ ಹೃದಯ ಕೊನೆಯಿಲ್ಲದ ನೋವನ್ನಷ್ಟನ್ನೇ ತಂದಿದೆಯೋ ಆ ವ್ಯಕ್ತಿಗೆ ನನ್ನ ಹೃದಯವನ್ನು ನೀಡಿ.

"ಅಪಘಾತಕ್ಕೀಡಾದ ಕಾರಿನಿಂದ ಎತ್ತಿ ತಂದ ಹದಿಹರೆಯದವನಿಗೆ ನನ್ನ ರಕ್ತವನ್ನು ತುಂಬಿರಿ. ತನ್ನ ಮೊಮ್ಮಕ್ಕಳ ನಲಿವಿನ ಕುಣಿತ ಕಾಣುವ ಅವಕಾಶ ದೊರೆಯಲಿ ಅವನಿಗೆ.

"ವಾರದಿಂದ ವಾರಕ್ಕೆ ಬದುಕನ್ನು ದೂಡಲು ಯಂತ್ರಕ್ಕೆ ಮೊರೆಹೊಕ್ಕವನಿಗೆ ನನ್ನ ಮೂತ್ರಪಿಂಡವನ್ನು ಕೊಡಿರಿ.

"ನನ್ನ ಮೂಳೆಯನ್ನು ತೆಗೆಯಿರಿ, ಮಾಂಸವನ್ನು ತೆಗೆಯಿರಿ, ಎಳೆ ಎಳೆಯನ್ನೂ ಪಕ್ಕ. ನರ ನರವನ್ನೂ ಬಿಡಿಸಿ, ಅಂತೂ ಕಾಲಿರದ ಮಗುವೊಂದು ಮತ್ತೆ ನಡೆಯುವಂತೆ ಮಾಡಿರಿ. ನನ್ನ ಮೆದುಳಿನ ಮೂಲೆ ಮೂಲೆಯನ್ನು ಹುಡುಕಿ, ಅವಶ್ಯ ಬಿದ್ದರೆ ಕಣಕಣವನ್ನೂ ತೆಗೆದುಕೊಳ್ಳಿ, ಬೆಳೆಸಿ, ಎಂದಿಲ್ಲೊಂದು ದಿನ ಇದರಿಂದ ದಾಂಡಿನ ಶಬ್ದಕ್ಕೆ ಮೂಕ ಬಾಲಕನೊಬ್ಬ ಕೇಕೇ ಹಾಕಲಿ. ಕಿವುಡ ಹುಡುಗಿ ತನ್ನ ಕಿಟಕಿಯ ಬಳಿ ಮಳೆಯ ಪಟ ಪಟ ನಾದ ಕೇಳಲಿ,



"ಆಯ್, ಅದ್ಯಾಕ್ ತುಂಬ ಕಷ್ಟಪಡ್ತೀರಿ ಸಾರ್, ಕನ್ನಡದಲ್ಲಿ ಕಾದಗ ಬರೆಯೊಕ್ಕೆ ಸುಲಬ ಸಾರ್, ಬರ್ಕೊಳ್ಳಿ ನಾ ಯೋಳ್ತೀನಿ ಎಂಗೆ ಅಂತ."

"ನನ್ನ ದೇಹದಲ್ಲಿ ಮತ್ತೇನು ಉಳಿದಿದೆಯೋ ಅದನ್ನು ಸುಟ್ಟು ಹಾಕಿ, ಬೂದಿಯನ್ನು ಗಾಳಿಯಲ್ಲಿ ತೇಲಿಬಿಡಿ, ಸುಂದರ ಹೂಗಳು ಬೆಳೆಯಲು ನೆರವಾಗಲಿ.

"ಏನನ್ನಾದರೂ ಹೂಳಲೇಬೇಕು ಎಂದಿದ್ದರೆ ನನ್ನ ತಪ್ಪುಗಳನ್ನು ಹೂಳಿ, ನನ್ನ ದೌರ್ಬ-ಲ್ಯಗಳನ್ನು ಹೂಳಿ, ಸಹಬಾಂಧವರ ಬಗ್ಗೆ ನನಗಿದ್ದ ಪೂರ್ವಾಗ್ರಹಗಳನ್ನು ಹೂತುಹಾಕಿ.

"ನನ್ನ ಪಾಪಗಳನ್ನು ಸೈತಾನನಿಗೆ ಕೊಡಿ, ನನ ಆತ್ಮವನ್ನು ಭಗವಂತನಿಗೆ ಅರ್ಪಿಸಿ.

"ಒಂದು ಪಕ್ಷ ನನ್ನನ್ನು ಸ್ಮರಿಸಬೇಕು ಎಂದು ನಿಮಗೇನಾದರೂ ಅನ್ನಿಸಿದರೆ, ನಿಮ್ಮ ಅಗತ್ಯ ಯಾರಿಗಿದೆಯೋ ಅವರಿಗೊಂದು ಅಂತಃಕರಣದ ಕಾಣಿಕೆ, ಕರುಣೆಯ ನುಡಿ ನೀಡುವ ಮೂಲಕ ನನ್ನನ್ನು ಸ್ಮರಿಸಿ.

"ನಾನು ಕೇಳಿದಷ್ಟನ್ನೂ ನೀವು ನಡೆಸಿ ಕೊಟ್ಟಲ್ಲಿ ನಾನು ಚಿರಾಯುವಾಗುತ್ತೇನೆ..."

—ಇದು ರಾಬರ್ಟ್ ಎನ್. ಟೆಸ್ಟ್ ಅವರು 'ಸಿನ್‌ಸಿನಟ್ಟಿ ಪೋಸ್ಟ್' ಪತ್ರಿಕೆಯಲ್ಲಿ ಪ್ರಕಟಿಸಿದ ಹೃದಯಂಗಮ ಮರಣಶಾಸನ. ✡

ಔಷಧಿಶಾಸ್ತ್ರದ ಅದ್ಭುತ

ಅಳಲೇಕಾಯಿ

ಡಾ. ವಿಷ್ಣು ಶರ್ಮ ವನಹಳ್ಳಿ

ಆಯುರ್ವೇದಶಾಸ್ತ್ರವನ್ನು 'ಅಳಲೆಕಾಯಿ ಪಂಡಿತರ ವೈದ್ಯ'ವೆಂದೂ. ಸಂಸ್ಕೃತವನ್ನು ಸತ್ತ ಭಾಷೆ, ತಿಥಿ ಮಾಡುವ ಭಾಷೆ ಎಂದೂ ಹೀಯಾಳಿಸಿ ಮಾತನಾಡುವ ಎಷ್ಟೋ ಜನ ನಮ್ಮಲ್ಲಿದ್ದಾರೆ. ಆದರೆ ಆಯುರ್ವೇದದಲ್ಲಿ ಇರಬಹುದಾದ ಔಷಧಿಗಳ ಲಾಭ ಹಾಗೂ ಸಂಸ್ಕೃತದಲ್ಲಿರಬಹುದಾದ ಜ್ಞಾನಭಾಂಡಾರದ ಉಪಯೋಗ ಮಾಡಿಕೊಳ್ಳಲು ನಿರಾಕರಿಸುವ ದುರಾಗ್ರಹ ಇದರಿಂದ ವ್ಯಕ್ತವಾಗುವುದೇ ವಿನಾ ಬೇರೇನೂ ಇಲ್ಲ.

ಅಳಲೇಕಾಯಿ ಅರ್ಥಾತ್ ಹರೀತಕಿ ಆಯುರ್ವೇದದಲ್ಲಿ ಬಹು ಉನ್ನತ ಸ್ಥಾನ ಗಳಿಸಿದೆ. ಇದು ಕೇವಲ ಅತಿಶಯೋಕ್ತಿಯಾಗಿರಬಹುದೆಂದು ನನ್ನ ಭಾವನೆಯಾಗಿತ್ತು. ಆದರೆ ರೋಗಿಗಳ ರೋಗ ನಿವಾರಣೆಯಲ್ಲಿ ಅದರ ಪ್ರಭಾವವನ್ನು ಪ್ರತ್ಯಕ್ಷ ಕಂಡುಕೊಂಡ ಮೇಲೆ ಔಷಧಿಶಾಸ್ತ್ರದ ಅದ್ಭುತ ಎಂಬ ವಿಶೇಷಣ-ವನ್ನುಪಯೋಗಿಸಿದಲ್ಲಿ ತಪ್ಪೇನೂ ಇಲ್ಲ ಎಂದೆನಿಸಿತು.

ಶ್ರೀಮತಿ ಕೆ. ಬಹು ದಿನಗಳ ಉಬ್ಬಸ ರೋಗಿ. ಮುಂಬಯಿಯಿಂದ ಹುಬ್ಬಳ್ಳಿಯವರೆಗಿನ ಎಲ್ಲ ಪ್ರಸಿದ್ಧ ಡಾಕ್ಟರರ ಸಲಹೆಯ ಮೇರೆಗೆ ಉಪಚಾರ ಪಡೆದಾಕೆ. ಏನು ಮಾಡಿದರೂ ಉಬ್ಬಸ ಏರುಮುಖವಾಗಿಯೇ ಇತ್ತು. ಪ್ರತಿ ಸಲವೂ ಆಕ್ಸಿಜನ್ ಇಲ್ಲದೆ ಉಸಿರಾಡಲೂ ತೊಂದರೆ ಆಗುತ್ತಿತ್ತು. ಇದಕ್ಕಾಗಿ ಮೇಲಿಂದ ಮೇಲೆ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಬೇಕಾಗುತ್ತಿತ್ತು. ಆಧುನಿಕ ವೈದ್ಯಕದ ಎಲ್ಲ ಔಷಧಿಗಳೂ ಮುಗಿದುಹೋಗಿದ್ದುವು. ಇತ್ತೀಚೆಗೆ ಈ ಔಷಧಿಗಳಿಂದ ಇತರ ತೊಂದರೆಗಳೂ ಆಗಲಾರಂಭಿಸಿದ್ದುವು. ಅವರ ಈ ಸ್ಥಿತಿಯನ್ನು ನಾನು ಸುಮಾರು ೬ ವರುಷಗಳಿಂದ ನೋಡಿದ್ದೆ. ಇತ್ತೀಚೆಗೆ ಅವರ ಯಜಮಾನರು ಭೇಟಿಯಾಗಿದ್ದರು. ಅವರ ವಿವರಣೆಯ ಪ್ರಕಾರ ಈಗ ಉಬ್ಬಸ ಕಡಿಮೆಯಾಗಿ ಮೊದಲಿಗಿಂತ ಆರೋಗ್ಯವಾಗಿದ್ದಾರೆ. ಏನು ಮಾಡಿದಿರಿ ಎಂದಾಗ ವಿವರಗಳನ್ನು ಕೊಟ್ಟರು. ಯಾರೋ ಬ್ಬರು

ಅವರಿಗೆ ಅಳಲೇಕಾಯಿಯ ಪುಡಿಯನ್ನು ದಿನಾಲು ಸೇವಿಸಲು ಹೇಳಿದ್ದರು. ಆಶ್ಚರ್ಯವೆಂದರೆ ಉಚ್ಛ್ವಾಸ ಕ್ರಮೇಣ ಕಡಿಮೆಯಾಗಿತ್ತು. ಇದನ್ನು ಒಂದು ವರುಷ ನಿರಂತರ ಸೇವಿಸಲು ಹೇಳಿದ್ದರಿಂದ ಅವರು ಇನ್ನೂ ಅದನ್ನು ನಿತ್ಯ ತೆಗೆದುಕೊಳ್ಳುತ್ತಲೇ ಇದ್ದಾರೆ. ಇದೀಗ ಉಸಿರಾಟದ ತೊಂದರೆ ಇಲ್ಲ. ಪ್ರಕೃತಿಯೂ ಸುಧಾರಿಸಿದೆ.

ಅದೇ ರೀತಿಯಾಗಿ ನನ್ನ ಇನ್ನೊಬ್ಬ ರೋಗಿಗೆ ಅಲರ್ಜಿಕ್ ರ್‍ಯಾನ್ಯಾಟಿಸ್. ಎಲ್ಲಾ ತಜ್ಞರಿಗೆ ತೋರಿಸಿ ಕೈಬಿಟ್ಟಿದ್ದರು. ನಾನು ಅವರಿಗೆ ಹರೀತಕಿ (ಅಳಲೇಕಾಯಿ) ಹೆಚ್ಚಾಗಿ ಇದ್ದ ಆಯುರ್ವೇದ ಔಷಧಿಯೊಂದನ್ನು ಸೇವಿಸಲು ಹೇಳಿದೆ. ಸುಮಾರು ೨೦–೨೫ ದಿನಗಳಲ್ಲಿ ಅನಿರೀಕ್ಷಿತ ಗುಣ ಕಂಡುಬಂತು. ಮೂರು ತಿಂಗಳು ಚಿಕಿತ್ಸೆ ಮುಂದುವರಿಸಲು ಸೂಚಿಸಿದೆ. ಉತ್ಕೃಷ್ಟ ಬದಲಾವಣೆ ಆಯಿತು.

ನನ್ನ ಪರಿಚಿತರೊಬ್ಬರ ತಲೆಗೂದಲು ಅಕಾಲದಲ್ಲಿ ಬೆಳ್ಳಗಾಗತೊಡಗಿತ್ತು. ಅವರಿಗೆ ಇತರ ತೊಂದರೆಗಳೂ ಇದ್ದವು. ಹರೀತಕಿಯ ಚಿಕಿತ್ಸೆಯನ್ನು ಆರಂಭಿಸಿದಾಗ ಕೇವಲ ೨೫ ದಿನಗಳಲ್ಲಿ ತಲೆ ಕೂದಲಿನ ಬಣ್ಣದಲ್ಲಿ ವ್ಯತ್ಯಾಸ ಕಂಡು ಬರತೊಡಗಿತು.

ಆಯುರ್ವೇದದ ಪ್ರಾಚೀನ ದಿಗ್ಗಜಗಳಲ್ಲಿ ಒಬ್ಬನಾದ ಚರಕ ಮಹರ್ಷಿಯು ತನ್ನ ಸಂಹಿತೆಯ ರಸಾಯನ ಪಾದದಲ್ಲಿ ಹರೀತಕಿಯ ಗುಣವನ್ನು ಬಾಯಿ ತುಂಬಾ ಹೊಗಳಿದ್ದಾನೆ. ಅವನು ಹೇಳಿದ ಸೂತ್ರಗಳನ್ನು ನಾವು ಇಂದಿನ ಆಧುನಿಕ ವಿಜ್ಞಾನದ ಬೆಳಕಿನಲ್ಲಿ ವಿಶ್ಲೇಷಿಸಿ ಅದನ್ನು ನಮ್ಮ ದೈನಂದಿನ ಚಿಕಿತ್ಸೆಯಲ್ಲಿ ಅಳವಡಿಸಿಕೊಳ್ಳದಿದ್ದಲ್ಲಿ ರೋಗಿಗಳಿಗೆ ಪರಮ ಅನ್ಯಾಯವನ್ನೇ ಮಾಡಿದಂತೆ ಎಂದು ನನಗನಿಸುತ್ತಿದೆ. ಇದು ವೈದ್ಯ ವಿಜ್ಞಾನಿಗಳು ಗಂಭೀರವಾಗಿ ಆಲೋಚಿಸಬೇಕಾದ ವಿಷಯವಾಗಿದೆ. ರಸಾಯನ ಚಿಕಿತ್ಸೆಯ ಮುಖ್ಯ ಉದ್ದೇಶ ಅಕಾಲ ಮುಪ್ಪು ಹಾಗೂ ರೋಗಗಳು ಬರುವುದನ್ನು ತಡೆದು ವ್ಯಕ್ತಿಯು ದೀರ್ಘಾಯುಷಿಯಾಗುವಂತೆ ಮಾಡುವುದೇ ಆಗಿದೆ. ರೋಗಿಗಳು ಎಂದರೆ ಈ ಯುಗದ ಮಾರಕ ರೋಗಗಳೂ ಅಡಕವಾದಂತೆಯೇ ಸೈ. ಇಂದು ಕ್ಯಾನ್ಸರಿನಂಥ ರೋಗಕ್ಕೆ ನಮ್ಮಲ್ಲಿ ಹೇಳಿಕೊಳ್ಳುವಂಥ ಔಷಧಿಗಳೂ ಇಲ್ಲ; ಅದನ್ನು ತಡೆಗಟ್ಟುವ ಪ್ರಭಾವೀ ಉಪಾಯಗಳೂ ಇಲ್ಲ. ಅಂಥ ಸಂದರ್ಭದಲ್ಲಿ ಈ ರಸಾಯನ ಔಷಧಿಗಳು ಒಂದು ಮಹತ್ವದ ಸಾಧನವೆನಿಸಬಲ್ಲವಾದರೆ ನಾವು ಅವುಗಳ ಬಗ್ಗೆ ಯಾಕೆ ವಿಚಾರ ಮಾಡಬಾರದು ? ಮಹತ್ವದ ಅಂಶವೆಂದರೆ ಇವುಗಳಲ್ಲಿ ಅಳಲೇಕಾಯಿಯ ಔಷಧಿಗಳೇ ಪ್ರಥಮ ಸ್ಥಾನವನ್ನು ಪಡೆದಿವೆ. ಚರಕ ಮಹರ್ಷಿಯ ಸೂತ್ರಗಳು ಇಂತು ವಿವರಿಸುತ್ತವೆ:

"ಹರೀತಕಿಯು ಪಂಚರಸವುಳ್ಳದ್ದು, ಲವಣ ವಿರಹಿತ ದೋಷಗಳನ್ನು ಕೆಳಗೆ ನೂಕುವಂಥದು, ಹಗುರಾದದ್ದು, ಅಗ್ನಿವರ್ಧಕ, ಪಚನ ಶಕ್ತಿಯನ್ನು ಹೆಚ್ಚಿಸುವಂಥದು, ಆಯುಷ್ಯ ವರ್ಧಕ, ಪೌಷ್ಟಿಕ, ವಯಸ್ಸನ್ನು ಸ್ಥಿರವಾಗಿಸುವಂಥದು, ಎಲ್ಲ ರೋಗಗಳನ್ನು ಪ್ರಶಮನಗೊಳಿಸುವ ಶಕ್ತಿಯುಳ್ಳದ್ದು, ಬುದ್ಧಿ, ಇಂದ್ರಿಯಗಳಿಗೆ ಶಕ್ತಿದಾಯಕವೂ ಆಗಿದೆ.

"ಕುಷ್ಠ, ಗುಲ್ಮ, ಉದಾವರ್ತ, ಶೋಷ, ಪಾಂಡು ಮದಾತ್ಮಯ, ಅರ್ಶ ಗ್ರಹಣೀ, ಹಳೆಯ, ವಿಷಮ ಜ್ವರ, ಹೃದ್ರೋಗ, ಶಿರೋರೋಗ, ಅತಿಸಾರ, ಅರುಚಿರೋಗ, ಕೆಮ್ಮು - ದಮ್ಮು, ಪ್ರಮೇಹ, ಹೊಟ್ಟೆಯುಬ್ಬರ, ಪ್ಲೀಹಾವೃದ್ಧಿ, ಉದರರೋಗ, ಸ್ವರಭಂಗ ವಿವರ್ಣತೆ, ಕಾಮಾಲೆ ಹಾಗೂ ಕ್ರಿಮಿ. ಬಾವು, ನಿಃಶಕ್ತಿ, ಸ್ಮೃತಿನಾಶ, ಬುದ್ಧಿನಾಶ, ಮುಂತಾದ ಅನೇಕ ರೋಗಗಳನ್ನು ಹರೀತಕಿಯು ತ್ವರಿತವಾಗಿ ಗುಣಪಡಿಸುವುದು."

ಬಹುಶಃ ಹರೀತಕಿಯ ಈ ವಿಶಾಲ ಗುಣವತ್ತತೆಯ ಆಳವನ್ನು ನೋಡಿಯೇ ಕೆಲವು ಪ್ರಾಚೀನ ಗ್ರಂಥಗಳಲ್ಲಿ ಇಂದ್ರನು ಅಮೃತವನ್ನು ಕುಡಿಯುತ್ತಿದ್ದಾಗ ಬಿದ್ದ ಕೆಲ ಹನಿಗಳೇ ಪೃಥ್ವಿಯ ಮೇಲೆ ಅಳಲೇಕಾಯಿಯ ರೂಪವನ್ನು ತಳೆದವೆಂದು ಕಾವ್ಯಾತ್ಮಕವಾಗಿ ವರ್ಣಿಸಲಾಗಿದೆ.

ಆಧುನಿಕ ವೈಜ್ಞಾನಿಕರು ಹರೀತಕಿ ಗೈಲೋ–ಟ್ಯಾನಿಕ್ ಆ್ಯಸಿಡ್ ಹಾಗೂ ಗ್ಯಾಲಿಕ್

ಆ್ಯಸಿಡ್, ರಾಳ ಮತ್ತು ಅಂಟುಗಳನ್ನೂ ಒಳಗೊಂಡಿದೆ ಎನ್ನುತ್ತಾರೆ.

ಚರಕ ಮಹರ್ಷಿಯು ತನ್ನ ಸಂಹಿತೆಯ ರಾಸಾಯನಿಕ ಪಾದದಲ್ಲಿ ರಸಾಯನ ಔಷಧಿಗಳ ಹಾಗೂ ಚಿಕಿತ್ಸೆಯ ವಿವರಗಳನ್ನು ಅಳಲೇಕಾಯಿಯಿಂದಲೇ ಆರಂಭಿಸುತ್ತಾನೆ. ಅವನು ಹೇಳಿದ ಹರೀತಕೀ ಯೋಗಗಳಲ್ಲಿ

೧) ಬ್ರಾಹ್ಮರಸಾಯನ-ಒಂದನೆಯ ಪ್ರಕಾರ
೨) ಬ್ರಾಹ್ಮರಸಾಯನ-ಎರಡನೆಯ ಪ್ರಕಾರ
೩) ಚ್ಯವನಪ್ರಾಶ್ಯಾವಲೇಹ
೪) ಅಗಸ್ತ್ಯಹರೀತಕೀ



—ಮುಂತಾದವುಗಳು ಮುಖ್ಯವಾಗಿವೆ. ಈ ಔಷಧಿಗಳನ್ನು ಆಯಾ ವ್ಯಕ್ತಿಯ ಜೀರ್ಣ ಶಕ್ತಿಯನ್ನವಲಂಬಿಸಿ ಸೇವಿಸಿ ಮೇಲೆ ಹಾಲನ್ನು ಸೇವಿಸಿದಲ್ಲಿ ಬಹುತರವಾಗಿ ಎಲ್ಲ ರೋಗಗಳನ್ನು ತಡೆಯಬಹುದೆಂದು ಚರಕ ಮಹರ್ಷಿ ಹೇಳುತ್ತಾನೆ. ಅಷ್ಟೇ ಅಲ್ಲ ವ್ಯಕ್ತಿಯ ಶರೀರದಲ್ಲಿ ಬರತಕ್ಕ ಮುಪ್ಪನ್ನು ಕೂಡ ಸಾಕಷ್ಟು ಕಾಲ ತಡೆಗಟ್ಟಬಹುದು, ಎಂದು ಆಯುರ್ವೇದಾಚಾರ್ಯರು ಉದಾಹರಣಪೂರ್ವಕ ಸ್ಪಷ್ಟಪಡಿಸಿದ್ದಾರೆ.

ಶರೀರಸ್ವಾಸ್ಥ್ಯವನ್ನು ಕಾಯ್ದುಕೊಂಡು ಬಲ, ಉತ್ಸಾಹಗಳನ್ನೂ ಹೆಚ್ಚಿಸಿಕೊಳ್ಳಬೇಕೆನ್ನುವವರು ಬೇರೆ ಬೇರೆ ಋತುಗಳಲ್ಲಿ ಬೇರೆ ಬೇರೆ ದ್ರವ್ಯಗಳೊಂದಿಗೆ ಹರೀತಕಿಯನ್ನು ಸೇವಿಸಿದಲ್ಲಿ ನಿರೋಗಿಗಳಾಗಿ ಉಳಿಯುತ್ತಾರೆ ಅದರ ವಿವರಗಳು ಈ ರೀತಿ ಇವೆ:

ಮಳೆಗಾಲ	ವರ್ಷಾಋತುವಿನಲ್ಲಿ ಸೈಂಧವ ಲವಣದೊಂದಿಗೆ, ಶರದ್ ಋತುವಿನಲ್ಲಿ ಸಕ್ಕರೆಯೊಂದಿಗೆ.
ಚಳಿಗಾಲ	ಹೇಮಂತ ಋತುವಿನಲ್ಲಿ ಶುಂಠಿಯೊಂದಿಗೆ, ಶಿಶಿರದಲ್ಲಿ ಹಿಪ್ಪಲಿಯೊಂದಿಗೆ.
ಬೇಸಿಗೆಕಾಲ	ವಸಂತ ಋತುವಿನಲ್ಲಿ ಜೇನುತುಪ್ಪದೊಂದಿಗೆ, ಗ್ರೀಷ್ಮ ಋತುವಿನಲ್ಲಿ ಬೆಲ್ಲದೊಂದಿಗೆ.

ಹರೀತಕಿಯನ್ನು ಅಗಿದು ತಿಂದಲ್ಲಿ ಜಠರಾಗ್ನಿಯನ್ನು ಉದ್ದೀಪನಗೊಳಿಸುತ್ತದೆ. ತೇಯ್ದು ತೆಗೆದುಕೊಂಡಲ್ಲಿ ಮಲಶುದ್ಧಿಯನ್ನು ಮಾಡುತ್ತದೆ. ಕುದಿಸಿ ತೆಗೆದುಕೊಂಡಲ್ಲಿ ಮಲವನ್ನು ತಡೆಯುತ್ತದೆ. ಹುರಿದು ತಿಂದರೆ ತ್ರಿದೋಷಗಳನ್ನು ನಾಶಗೊಳಿಸುತ್ತದೆ. ಊಟದೊಂದಿಗೆ ತೆಗೆದುಕೊಂಡಲ್ಲಿ ಬುದ್ಧಿಬಲ, ಇಂದ್ರಿಯಗಳಿಗೆ ಶಕ್ತಿಯನ್ನು ಕೊಡುತ್ತದೆ, ತ್ರಿದೋಷಗಳನ್ನು ನಾಶಮಾಡುತ್ತದೆ. ಮಲ, ಮೂತ್ರ, ವಾಯುಗಳನ್ನು ಹೊರಗೆ ಹಾಕುತ್ತದೆ. ಅದನ್ನೇ ಊಟದ ನಂತರ ತೆಗೆದುಕೊಂಡಲ್ಲಿ ಅನ್ನಪಾನದಿಂದುಂಟಾದ ರೋಗಗಳನ್ನು ಶಮನಗೊಳಿಸುತ್ತದೆ. ಸೈಂಧವ ಲವಣದೊಂದಿಗೆ ತೆಗೆದುಕೊಂಡರೆ ಕಫ ಸಂಬಂಧದ ವಿಕಾರಗಳನ್ನು, ಸಕ್ಕರೆಯೊಂದಿಗೆ ಸೇವಿಸಿದಲ್ಲಿ ಪಿತ್ಥ ವಿಕಾರಗಳನ್ನು ತುಪ್ಪದೊಂದಿಗೆ ಸೇವಿಸಿದಲ್ಲಿ ವಾತವಿಕಾರಗಳನ್ನು, ಬೆಲ್ಲದೊಂದಿಗೆ ಸೇವಿಸಿದಲ್ಲಿ ಸರ್ವರೋಗಗಳನ್ನು ಪರಿಹರಿಸುತ್ತದೆ.

ಸಾಂಕ್ರಾಮಿಕ ರೋಗಗಳಿಗೆ ಪ್ರತಿಬಂಧಕದಂತೆ ಕೂಡ ಚರಕ ಮಹರ್ಷಿ ರಸಾಯನ ಔಷಧಿಗಳನ್ನೇ ಸೇವಿಸಲು ಹೇಳಿದ್ದಾನೆ. ಆದರೊಂದಿಗೆ ಆಚಾರ ಸಂಹಿತೆಯನೂ ಸೂಚಿಸಿದ್ದಾನೆ. ಮುಖ್ಯವಾಗಿ ಹರೀತಕಿ ಹಾಗೂ ಹರೀತಕೀ ವರ್ಗದ ಔಷಧಿಗಳ ರೋಗ ಪ್ರತೀಕಾರ ಕ್ಷಮತೆಯನ್ನು ಹೆಚ್ಚಿಸುವ ಗುಣದ ಬಗ್ಗೆ ನಾವು ಗಂಭೀರವಾಗಿ ಆಲೋಚಿಸುವುದು ಇಂದಿನ ಅವಶ್ಯಕತೆಯಾಗಿದೆ, ಹಾಗೂ ಪ್ರಸಿದ್ಧ ವೈದ್ಯರ, ವಿಜ್ಞಾನಿಗಳ ಹಾಗೂ ಸರಕಾರದ ಕೆಲಸವಾಗಿದೆ. ✿

ಮಾತುಕತೆ

"ಸ್ವಾಮಿ, ತಾವು ಇಪ್ಪತ್ತು ನಿಮಿಷದಿಂದಲೂ ಫೋನ್ ಹಿಡಿದಿರುವಿರಿ. ಆದರೆ ತಮ್ಮ ಬಾಯಿಂದ ಒಂದು ಶಬ್ದವೂ ಹೊರಬರುತ್ತಿಲ್ಲ. ರಿಸೀವರ್ ಕೆಳಗಿಳಿಸಿ. ನನಗೆ ಅರ್ಜೆಂಟ್ ಕೆಲಸವಿದೆ."

"ಸ್ವಾಮಿ! ನಾನು ನನ್ನ ಪತ್ನಿಯೊಡನೆ ಮಾತನಾಡುತ್ತಿದ್ದೇನೆ."

ನೋಬೆಲ್ ಬಹುಮಾನವನ್ನು ನಿರಾಕರಿಸಿದವರು

ಮಾಧವ ನಾ. ಮಹಿಷಿ

ನೋಬೆಲ್ ಬಹುಮಾನ ಪಡೆಯುವುದೆಂದರೆ ಇಂದು ಜಗತ್ತಿನಲ್ಲಿ ಅತ್ಯುಚ್ಚ ಸಾಧನೆಗೈದಂತೆ ಎಂಬ ಭಾವನೆ ಸಾರ್ವತ್ರಿಕವಾಗಿದೆ. ೧೯೦೧ರಲ್ಲಿ ಪ್ರಾರಂಭವಾದ ಈ ಪರಿಪಾಠ ಇಂದಿನವರೆಗೂ ಅವ್ಯಾಹತವಾಗಿ ನಡೆದುಕೊಂಡುಬಂದಿದೆ. ಅಂದಿನಿಂದಲೂ ಅದು ತನ್ನ ಸರ್ವೋಚ್ಚ ಸ್ಥಾನವನ್ನು ಕಾಯ್ದುಕೊಂಡಿದೆ – ಮತ್ತನೇಕ ಭಾರಿ ಮೊತ್ತದ ಬಹುಮಾನಗಳು ನಾನಾ ಭಾಗಗಳಲ್ಲಿ ತಲೆಯೆತ್ತಿವೆಯಾದರೂ ಈ ೨೨ ವರ್ಷಗಳಲ್ಲಿ ನಾಲ್ವರು ಭಾರತೀಯರಿಗೆ ಮಾತ್ರ ಈ ಗೌರವ ಲಭಿಸಿದೆಯೆಂಬುದನ್ನು ಗಮನಿಸಬೇಕು. ರವೀಂದ್ರನಾಥ ಠಾಕೂರ, ಸಿ. ವಿ. ರಾಮನ್, ಹರಗೋವಿಂದ ಖುರಾನಾ ಮತ್ತು ಮದರ್ ತೆರೆಸಾ ಇವರೇ ಆ ನಾಲ್ವರು ಮಹನೀಯರಾದರೂ ಈ ಬಹುಮಾನ ಬರುವ ಹೊತ್ತಿಗೆ ಖೋರಾನಾ ಭಾರತೀಯ ನಾಗರಿಕತ್ವ ತ್ಯಜಿಸಿದ್ದರೆಂಬುದೂ ಅಷ್ಟೇ ಗಮನಾರ್ಹ.

ನೋಬೆಲ್ ಬಹುಮಾನ ಪಡೆದು ಜಗದ್ವಿಖ್ಯಾತರೆನಿಸಿದ ನೂರಾರು ಹೆಸರುಗಳ ಪಟ್ಟಿಯನ್ನೇ ಕೊಡಬಹುದಾದರೂ ವಿಜೇತರನ್ನು ನಿರ್ಧರಿಸುವ ರೀತಿ ಮಾತ್ರ ಪೂರ್ತಿ ನಿಷ್ಪಕ್ಷಪಾತವೂ ವಿವಾದಾತೀತವೂ ಆಗಿದೆಯೆಂದು ಎಲ್ಲರೂ ಒಪ್ಪುವದಿಲ್ಲ. ಸಂಪೂರ್ಣವಾಗಿ ಅಭ್ಯರ್ಥಿಗಳ ಕಾರ್ಯದ ಗುಣವನ್ನು ಮಾತ್ರವೇ ಗ್ರಹಿಸಿ ಇದನ್ನು ನೀಡುವುದಾಗಿದ್ದರೆ ಬಹುಶಃ ಇನ್ನೂ ಅನೇಕರಿಗೆ ಇದು ಸಿಗಬೇಕಿತ್ತಲ್ಲದೆ ಕೆಲವರಿಗಾದರೂ ಸಿಗಲೇಬಾರದಿತ್ತು ಎಂಬ ಅಭಿಪ್ರಾಯವುಳ್ಳವರೂ ಇದ್ದಾರೆ. ಒಮ್ಮೆ ಮಹಾತ್ಮಾ ಗಾಂಧಿಯವರಿಗೆ ಸಿಕ್ಕೇತೀರುವುದೆಂದು ಭಾವಿಸಲಾಗಿದ್ದ ನೋಬೆಲ್ ಶಾಂತಿ ಬಹುಮಾನ ತಪ್ಪಿಹೋಗಲಿಕ್ಕೆ ಅಂದಿನ ಬ್ರಿಟಿಷ್ ಸರಕಾರದ ರಾಜಕೀಯ ಒತ್ತಡವೂ ಕಾರಣ. ಇದರಂತೆಯೇ ಕನಿಷ್ಠ ಇಬ್ಬರು ರಶಿಯನ್ ಸಾಹಿತಿಗಳಿಗೆ ಈ ಬಹುಮಾನ ನೀಡುವಾಗ ಅವರ ಕೃತಿಯ ಗುಣಗ್ರಾಹಕತೆಗಿಂತ ಸದ್ಯದ ಸೋವಿಯೆತ್ ವ್ಯವಸ್ಥೆಯ ಬಗ್ಗೆ ಈ ಮಹನೀಯರಿಗಿದ್ದ ತೀವ್ರ ಅಸಮಾಧಾನವೇ ಕಾರಣ ಎಂದೂ ಆರೋಪಿಸಲಾಗುತ್ತಿದೆ. ಇಷ್ಟೆಲ್ಲ ಇರುವಾಗಲೂ ತನ್ನ ಸರ್ವೋಚ್ಚ ಸ್ಥಾನವನ್ನು ನೋಬೆಲ್ ಕಾಯ್ದುಕೊಂಡಿದೆಯೆಂಬುದೇನೂ ಸಣ್ಣ ಮಾತಲ್ಲ.


ಆದರೆ ನೋಬೆಲ್ ಬಹುಮಾನದ ಇತಿಹಾಸದಲ್ಲಿ ಅದನ್ನು ನಿರಾಕರಿಸಿದವರೂ ಇದ್ದಾರೆ. ಅಂಥ ಮೂರು ಉದಾಹರಣೆಗಳನ್ನು ನೋಡಬಹುದು. ಜಾರ್ಜ್ ಬರ್ನಾರ್ಡ್ ಶಾ, ಬೋರಿಸ್ ಪಾಸ್ಟರ್‌ನ್ಯಾಕ್, ಜೀನ್ ಪಾಲ್ ಸಾರ್ತ್ರೆ ಈ ಮೂವರು ತೀರ ವಿಭಿನ್ನ ಪ್ರಕೃತಿಯ ಜನ ಈ ಬಹುಮಾನವನ್ನು ನಿರಾಕರಿಸಿದವರು. ಆದರೆ ಅವರವರ ಸ್ವಭಾವಕ್ಕೆ ಅನುಗುಣವಾಗಿ ಅವರವರು ಕೈಕೊಂಡ ನಿರ್ಣಯ ಅಷ್ಟೇ ಭಿನ್ನ ಕಾರಣಗಳಿಗಾಗಿಯೇ ಇದೆ.

ಜಾರ್ಜ್ ಬರ್ನಾರ್ಡ್ ಶಾ ಕನಿಷ್ಠ ಆಂಗ್ಲ ಸಾಹಿತ್ಯದಲ್ಲಾದರೂ ಈ ಶತಮಾನದ ಶ್ರೇಷ್ಠ ನಾಟಕಕಾರ. ತನ್ನ ನಾಟಕಗಳನ್ನು ಅವುಗಳ

ಗುಣಕ್ಕಾಗಿಯೇ ಓದಬೇಕು ಮತ್ತು ಆ ಮಾನದಂಡದಿಂದಲೇ ಅವುಗಳ ಮೌಲ್ಯಮಾಪನ ಮಾಡಬೇಕೆಂದು ಅಪೇಕ್ಷಿಸುತ್ತಿದ್ದ ಶಾ ಬರಿ ದೊಡ್ಡದೊಂದು ಬಹುಮಾನ ಸಿಕ್ಕಿತೆಂಬ ಕಾರಣಕ್ಕಾಗಿ ಜನ ತಮ್ಮ ಕೃತಿಗಳತ್ತ ನೋಡಬೇಕಾದಂಥ ಪರಿಸ್ಥಿತಿ ಬರುವುದು ಹೀನವೆಂದು ಹೇಳುತ್ತಿದ್ದರು. ಅವರ ಆತ್ಮವಿಶ್ವಾಸ ಅದೆಷ್ಟು ಗಾಢವಾಗಿತ್ತೆಂದರೆ ತಮ್ಮನ್ನು ಆಧುನಿಕ ಶೇಕ್ಸ್‌ಪಿಯರ್ ಎಂದು ಜನ ಬಣ್ಣಿಸುವುದೂ ಅವರಿಗೆ ಸಹ್ಯವಾಗುತ್ತಿರಲಿಲ್ಲ. ಅಂಥ ಸಂದರ್ಭಗಳಲ್ಲಿ ತಾವು ಶೇಕ್ಸ್‌ಪಿಯರ್‌ನಿಗಿಂತಲೂ ಶ್ರೇಷ್ಠ ನಾಟಕಕಾರನೆಂದು ಹೇಳಿಕೊಳ್ಳಲೂ ಅವರು ಹಿಂಜರಿಯಲಿಲ್ಲ.

ಶಾ ಮಹಾ ಬುದ್ಧಿವಂತ, ಹಾಸ್ಯ ಪ್ರವೃತ್ತಿಯ ಮನುಷ್ಯನಾಗಿರುವಷ್ಟೇ ಸಾಮಾನ್ಯರ ಕಣ್ಣಿಗೆ ತೀರ ವಿಚಿತ್ರವಾಗಿ ತೋರುವ ವ್ಯಕ್ತಿಯೂ ಆಗಿದ್ದರು. ಜನ್ಮತಃ ಐರಿಶ್‌ನಾಗಿದ್ದ ಅವರಿಗೆ ಇತರ ಸ್ವಾಭಿಮಾನಿ ಐರಿಶ್‌ರಂತೆಯೇ ಬ್ರಿಟಿಷ್ ಸಾಮ್ರಾಜ್ಯದ ಬಗ್ಗೆ ಅಷ್ಟೇನೂ ಗೌರವವಾಗಲಿ ಹೆಮ್ಮೆಯಾಗಲಿ ಇರಲಿಲ್ಲ. ಸಾಮಾನ್ಯವಾಗಿ ಮನಸ್ಸಿನಲ್ಲಿ ಆಧ್ಯಾತ್ಮದ ಬೀಜ ಅಂಕುರಿಸತೊಡಗುವ ವಯಸ್ಸಿಗೆ ಶಾ ವಿವಾಹವಾದರು. ೧೮೯೮ರಲ್ಲಿ ತಮ್ಮ ೪೨ನೆಯ ವಯಸ್ಸಿನಲ್ಲಿ ಅವರು ಹಿಡಿದದ್ದು ೧೪ ವರ್ಷದ ಒಬ್ಬ ಧನಾಢ್ಯ ಕನ್ಯೆಯ ಕೈಯನ್ನು. ಆದರೆ ಪ್ರಾರಂಭದಿಂದಲೂ ಈ ಜೋಡಿ ಎರಡು ಧ್ರುವಗಳನ್ನು ಹೇಗೋ ಒಟ್ಟಿಗೆ ತಂದು ಸೇರಿಸಿದಂಥ ವಿಪರ್ಯಾಸವೇ ಆಗಿತ್ತೆಂಬುದು ಬರಿಗಣ್ಣಿಗೂ ಕಾಣುವಂತಿತ್ತು. ಈ ಮಹಾ ಪ್ರತಿಭಾವಂತ ನಾಟಕಕಾರ ಸಾಮಾನ್ಯ ಮಧ್ಯಮ ವರ್ಗದಿಂದ ಮೇಲೆದ್ದು ಸ್ವಪ್ರಯತ್ನದಿಂದಲೇ ತನಗಾಗಿ ಒಂದು ಸ್ಥಾನ ಗಳಿಸಿಕೊಂಡ ವ್ಯಕ್ತಿ. ಮೇಲಾಗಿ ಸಮಾಜವಾದಿ ಹಾಗೂ ಇದಕ್ಕೆ ಕಳಸವಿಡುವಂತೆ ತನ್ನ ಪ್ರಖ್ಯಾತಿಯನ್ನು ಮುಚ್ಚುಮರೆಯಿಲ್ಲದೆ ಮೆಚ್ಚಿಕೊಳ್ಳುತ್ತಿದ್ದ ಗೃಹಸ್ಥ. ಆಕೆಯೋ ಬ್ರಿಟನ್ನಿನಲ್ಲಿ ಅಂದು ಸಭ್ಯ ಸಮಾಜವೆಂದು ಭಾವಿಸಲಾಗುತ್ತಿದ್ದ ಉಚ್ಚ ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿದಾಕೆ. ತನ್ನ ಕುಲದ ಅಂತಸ್ತಿಗೆ ತಕ್ಕಂಥ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದ ಆಕೆ ತೀರ ಮೃದು ಸ್ವಭಾವದ ಹೆಣ್ಣುಮಗಳು. ಆಕೆಯ ಸ್ವಭಾವಕ್ಕೆ ವಿಪರೀತವಾಗಿದ್ದ ಅಹಂಮನ್ಯತೆಯೇ ಮೈವೆತ್ತಂತಿತ್ತು ಗಂಡನ ಒರಟು ಸ್ವಭಾವ. ಶಾ ಎಷ್ಟೊಂದು ವಿಕ್ಷಿಪ್ತ ಪ್ರಾಣಿಯೆಂದರೆ ಮದುವೆಯಾದೊಡನೆಯೆ ಅವರು ಲೈಂಗಿಕ ಸಂಬಂಧಕ್ಕೆ ಮಂಗಳ ಹಾಡಿಬಿಟ್ಟರಂತೆ. ಆದರೂ ಮುಂದಿನ ೪೨ ವರ್ಷ ಕಾಲ ಇವರ ವೈವಾಹಿಕ ಜೀವನ ಮುಂದುವರಿಯಿತು. ವಿವಾಹವಾಗುವ ಹೊತ್ತಿಗೇ ಅವರು ಪೂರ್ತಿ ಶಾಕಾಹಾರಿಯಾಗಿಬಿಟ್ಟಿದ್ದರು. ಹಾಗೇಕೆಂದು ಯಾರೋ ಕೇಳಿದಾಗ, "ಸತ್ತ ಪ್ರಾಣಿಗಳನ್ನು ತಂದು ಚೆಲ್ಲಲು ನನ್ನ ಹೊಟ್ಟೆಯೇನೂ ತಿಪ್ಪೆ ಗುಂಡಿಯಲ್ಲ," ಎಂದುತ್ತರಿಸಿದ್ದರಂತೆ.

೧೯೨೫ರಲ್ಲಿ ಶಾರವರ ಮೌಲಿಕ ಸಾಹಿತ್ಯ ರಚನೆಗಾಗಿ ಅವರಿಗೆ ನೋಬೆಲ್ ಬಹುಮಾನ



ಕೊಡಮಾಡಿರುವುದಾಗಿ ಸ್ವೀಡಿಶ್ ಅಕಾಡೆಮಿ ಘೋಷಿಸಿತು. ಶಾರವರ ಪ್ರತಿಕ್ರಿಯೆ ತಕ್ಷಣ ಬಂತು. "ನೀವು ನನಗೆ ನೋಬೆಲ್ ಬಹುಮಾನ ಕೊಟ್ಟರೆ ಈ ಕಾರಣಕ್ಕಾಗಿಯೇ ಜನ ನನ್ನ ಪುಸ್ತಕಗಳನ್ನು ಕೊಂಡು ತಮ್ಮ ಕಪಾಟುಗಳಲ್ಲಿ ಅಲಂಕಾರಿಕ ವಸ್ತುಗಳಂತೆ ಇಟ್ಟು ಪ್ರದರ್ಶನ ಮಾಡುತ್ತಾರೆ. ಇದೇ ಕಾರಣಕ್ಕಾಗಿ ನನ್ನ ಕೃತಿಗಳು ಅನೇಕ ನಾಲಾಯಕ ವ್ಯಕ್ತಿಗಳ ಮನೆಗಳನ್ನೂ ಸೇರಬಹುದು. ಅಂಥ ಗೌರವ ನನಗೆ ಬೇಡ. ನನಗೆ ಪಾರಿತೋಷಕ ಸಿಕ್ಕಿತೆಂದು

ಯಾರೂ ನನ್ನ ಕೃತಿಗಳನ್ನು ಓದುವುದು ಬೇಡ; ಅವು ಉಚ್ಚ ಮಟ್ಟದ ಕೃತಿಗಳೆಂದೂ ಅವುಗಳಲ್ಲಿ ಸತ್ವವಿದೆಯೆಂದೂ ಭಾವಿಸುವವರು ಅವುಗಳನ್ನು ಸಂಗ್ರಹಿಸಲಿ, ಪುನಃ ಪುನಃ ಅಭ್ಯಸಿಸಲಿ," ಎಂದು ಸ್ವೀಡಿಶ್ ಅಕಾಡೆಮಿಗೆ ಬರೆದು ಬಹುಮಾನವನ್ನು ನಿರಾಕರಿಸಿಬಿಟ್ಟರು.

ಜಾರ್ಜ್ ಬರ್ನಾರ್ಡ್ ಶಾ ನೋಬೆಲ್ ಬಹುಮಾನವನ್ನು ನಿರಾಕರಿಸಿದ ತರುವಾಯದ ಮೂರು ದಶಕಗಳಲ್ಲಿ ಅಂಥ ಇನ್ನೊಂದು ಘಟನೆ ಸಂಭವಿಸಲಿಲ್ಲ. ಶಾ ಈ ಬಗೆಯ ನಿರ್ಣಯ ಕೈಕೊಳ್ಳಲು ಅವರ ಸ್ವಭಾವದ ವಿಕ್ಷಿಪ್ತತೆಯಂಥ ತೀರ ವೈಯಕ್ತಿಕ ಕಾರಣವೇ ಹೊಣೆಯಾಯಿತಾದರೆ ೧೯೫೮ರಲ್ಲಿ ರಶಿಯನ್ ಸಾಹಿತಿ ಬೋರಿಸ್ ಪಾಸ್ಟರ್‌ನ್ಯಾಕ್ ಅಂಥದೇ ನಿರ್ಧಾರ ಕೈಕೊಳ್ಳಲು ಜಾಗತಿಕ ರಾಜಕಾರಣದಲ್ಲಿಯ ಶೀತಲ ಯುದ್ಧವೇ ಮೂಲವಾಗಿ ಪರಿಣಮಿಸಿತು.

ಶಾ ಮತ್ತು ಪಾಸ್ಟರ್‌ನ್ಯಾಕರ ಸ್ವಭಾವದಲ್ಲಿ ಒಂದು ಮೂಲಭೂತವೂ ಮಹತ್ವದ್ದೂ ಆದ ಅಂತರವಿತ್ತು. ಶಾಗೆ ಸ್ವಪ್ರಸಿದ್ಧಿಯಿಂದ ಖಂಡಿತ ಆನಂದವಾಗುತ್ತಿತ್ತಲ್ಲದೆ ಅವರು ನೋಬೆಲ್ ಬಹುಮಾನ ನಿರಾಕರಿಸಿದ್ದು ಕೂಡ ಅದರಿಂದ ದೊರೆಯಬಹುದಾಗಿದ್ದ, ತಾನು ಜಗತ್ತಿನಲ್ಲಿ ಇನ್ನಾರಿಗಿಂತಲೂ ಭಿನ್ನನೆಂಬುದನ್ನು ಜನಮಾನಸದ ಮೇಲೆ ಬಿಂಬಿಸುವಂಥ ಅವಕಾಶಕ್ಕಾಗಿಯೇ ಎಂದು ನಂಬುವವರೂ ಇದ್ದಾರೆ. ಆದರೆ ಪಾಸ್ಟರ್‌ನ್ಯಾಕ್ ತೀರ ಪ್ರಸಿದ್ಧಿಪರಾಙ್ಮುಖ ವ್ಯಕ್ತಿ, ಸದ್ದು ಗದ್ದಲವಿಲ್ಲದೆ ತನ್ನ ವಿವೇಕಕ್ಕೆ ಸಮ್ಮತಿಸಿದ್ದನ್ನು ಮಾತ್ರ ಮಾಡುತ್ತ ಕಾಲ ತಳ್ಳಿದ ವ್ಯಕ್ತಿ.

ಬೋರಿಸ್ ಪಾಸ್ಟರ್‌ನ್ಯಾಕ್ ಜನಿಸಿದ್ದು ಝಾರ್ ಸಾಮ್ರಾಜ್ಯವಿನ್ನೂ ಅಸ್ತಿತ್ವದಲ್ಲಿದ್ದ ಕಾಲದಲ್ಲಿ. ಅವರ ತಂದೆ ರಶಿಯದಲ್ಲಿ ಖ್ಯಾತ ಚಿತ್ರಕಲಾವಿದನಾಗಿದ್ದರು. ಟಾಲ್‌ಸ್ಟಾಯ್‌ರ ಹಲವು ಗ್ರಂಥಗಳಿಗೆ ಅವರು ಚಿತ್ರಗಳನ್ನೂ ಬರೆದಿದ್ದರು. ಅವರ ತಾಯಿ ಕೂಡ ನಿಷ್ಣಾತ ಸಂಗೀತಗಾರ್ತಿ–ಪಿಯಾನೋವಾದಕಿ. ಬೋರಿಸ್ ಕೂಡ ಮೊದಮೊದಲು ಪ್ರಾರಂಭಿಸಿದ್ದು ಸಂಗೀತಗಾರನಾಗಲೆಂದೇ. ಆದರೆ ಒಂದು ಹಂತದಲ್ಲಿ ಅವರಿಗೆ ಸಂಗೀತ ತಮ್ಮ ಕ್ಷೇತ್ರವಲ್ಲವೆಂದು ಅನಿಸಿಬಿಟ್ಟಿತು. ಅದನ್ನು ಪೂರ್ತಿ ಕೈಬಿಟ್ಟು ಕಾವ್ಯೋದ್ಯೋಗಕ್ಕೆ ಇಳಿದರು. ಆ ಮುನ್ನ ಸಂಗೀತಗಾರನಾಗಲು ಯತ್ನಿಸುತ್ತಿದ್ದಾಗ ನಿತ್ಯ ಅಭ್ಯಾಸ ಮಾಡುವ ರೂಢಿಯನ್ನು ಬೆಳೆಸಿಕೊಂಡುದು ಇಲ್ಲಿ ಅವರಿಗೆ ಉಪಯೋಗಕ್ಕೆ ಬಂತು. ನಿತ್ಯವೂ ಕಾವ್ಯರಚನೆ ಮಾಡುವ ಪರಿಪಾಠವನ್ನೇ ಅವರು ರೂಢಿಸಿಕೊಂಡರು. ಅವರ ಯೌವನದಲ್ಲೇ ಬೋಲ್‌ಶೇವಿಕ್ ಕ್ರಾಂತಿಯಾದುದರಿಂದ ತಮ್ಮ ದೇಶದ ಭವಿತವ್ಯದ ಬಗ್ಗೆ ಏನೇನೋ ಕನಸುಗಳನ್ನು ಕಟ್ಟಿಕೊಂಡರು. ಅವರ ಕಾವ್ಯಕ್ಕೆ ಪ್ರಾರಂಭದಲ್ಲಿ ಮನ್ನಣೆಯೂ ದೊರೆಯತೊಡಗಿತು. ಆದರೆ ಸ್ಟಾಲಿನ್ ರಾಷ್ಟ್ರವರಿಷ್ಠನಾದ ಬಳಿಕ ವಾತಾವರಣದಲ್ಲಿ ತೀವ್ರ ಮಾರ್ಪಡಾಯಿತು. ಸ್ಟಾಲಿನ್ನನ ಆಡಳಿತದಲ್ಲಿ ಸಾಹಿತಿಗಳು ಪೂರ್ತಿಯಾಗಿ ಕಮ್ಯೂನಿಸ್ಟ್ ಪಕ್ಷದ ಮತ್ತು ಸರಕಾರದ ಕೈಗೊಂಬೆಗಳಂತೆ ಮಾತ್ರ ಬರೆಯಬೇಕು, ಅರ್ಥಾತ್ ಕೇಂದ್ರ ಪ್ರಾಧಿಕಾರದ ಅನುಮತಿ ಮುದ್ರೆಯ ವಿನಾ ರಶಿಯದಲ್ಲಿ ಏನು ಪ್ರಕಟವಾಗುವುದೂ ಅಸಾಧ್ಯವೆಂಬಂಥ ಪರಿಸ್ಥಿತಿ ನಿರ್ಮಾಣವಾಯಿತು.

ಬೋರೀಸ್ ಪಾಸ್ಟರ್‌ನ್ಯಾಕರ ತಲೆಮಾರಿನ ಲೇಖಕರು ಝಾರ್‌ಶಾಹಿಯ ನಿರಂಕುಶ ಪ್ರಭುತ್ವದಲ್ಲೇ ಹುಟ್ಟಿ ಬೆಳೆದವರಾದರೂ ವೈಯಕ್ತಿಕ ಅಭಿವ್ಯಕ್ತಿಯಲ್ಲಿ ಆ ಕಾಲದ ಯೂರೋಪಿನಲ್ಲಿಯ ಮುಕ್ತ ವಾತಾವರಣವನ್ನೇ ಮೈಗೂಡಿಸಿಕೊಂಡವರು. ಕತ್ತು ಹಿಸುಕುವಂಥ ಹೊಸ ಸಾಹಿತ್ಯಿಕ ವಾತಾವರಣದಲ್ಲಿ ಉಸಿರಾಡುವುದೇ ಅವರಿಗೆಲ್ಲ ಕಷ್ಟವಾಯಿತು. ಪ್ರತಿಭಟಿಸಲೆತ್ನಿಸಿದ, ಪ್ರತಿಭಟಿಸಿದ ಹಲವರಿಗೆ ಅವರವರ 'ಅಪರಾಧ'ದ ತೀವ್ರತೆಗೆ ಅನುಗುಣವಾಗಿ ಸೈಬೀರಿಯದ ಕನ್ಸೆಂಟ್ರೇಶನ್ ಕ್ಯಾಂಪುಗಳಲ್ಲಿ, ಮಾನಸಿಕ ರೋಗಿಗಳ ಆಸ್ಪತ್ರೆಗಳಲ್ಲಿ ಕೊಳೆಯುವುದೇ ಗತಿಯಾದರೆ ಇನ್ನು ಕೆಲವರಿಗೆ ಮರಣದಂಡನೆಯೇ ಮುಕ್ತಿಯಾಗಿ ದೊರೆಯಿತು. ಸ್ವಭಾವತಃ ಅಂತರ್ಮುಖಿಯಾಗಿದ್ದ ಪಾಸ್ಟರ್‌ನ್ಯಾಕ್ ಮುಂದೆಂದೋ ಚಿಮುಕನೆಯು

ನಿಸ ಉಪಯೋಗಿಸಬಹುದೆಂಬ ಆಸೆಯಿಂದ ಬೇರೊಂದು ದಾರಿಯನ್ನೇ ಹಿಡಿದರು: ಲೇಖನ ಸನ್ಯಾಸ ತಮ್ಮ ಪ್ರಕೃತಿಧರ್ಮಕ್ಕೆ ವ್ಯತಿರಿಕ್ತವಾದುದರಿಂದ ಅವರು ಸ್ವತಂತ್ರವಾಗಿ ಬರೆದುದನ್ನು ಪ್ರಕಟಿಸುವ ಪ್ರಯತ್ನವನ್ನೇ ಮಾಡದೆ ಪ್ರಕಟನೆಗಾಗಿ ಶೇಕ್ಸ್‌ಪಿಯರನ ನಾಟಕಗಳನ್ನು ರಶಿಯನ್ ಭಾಷೆಗೆ ಅನುವಾದಿಸತೊಡಗಿದರು. ಅವರ ಮಟ್ಟಿಗೆ ಈ ಅನುವಾದ ಕಾರ್ಯ ಉಪಜೀವನದ ಮಾರ್ಗವಾದರೆ ಸ್ವತಂತ್ರವಾಗಿ ಬರೆದುದೆಲ್ಲ ಭದ್ರವಾಗಿ ಬೀರುವಿನಲ್ಲಿ ಹಸ್ತಪ್ರತಿಗಳ ರೂಪದಲ್ಲಿ ಉಳಿಯಿತು. ವೈಯಕ್ತಿಕ ಸ್ವಾತಂತ್ರ್ಯಕ್ಕಾಗಿ ತವಕಿ-



ಸುತ್ತಿದ್ದ ಈ ಕವಿಯ ಲೇಖನಿಯಿಂದ ನೂರಾರು ಕವನಗಳಂತೆಯೇ 'ಲಾಸ್ಟ್ ಸಮರ್' ಮತ್ತು 'ಡಾ. ಝಿವಾಗೋ' ಎಂಬೆರಡು ಕಾದಂಬರಿಗಳೂ ಮೂಡಿಬಂದುವು. 'ಡಾ. ಝಿವಾಗೋ' ರಶಿಯನ್ ಕ್ರಾಂತಿಯನ್ನು ಕಣ್ಣಾರೆ ಕಂಡು ಮಾನವೀಯ ಮೌಲ್ಯಗಳು ಅಲ್ಲಿ ಹುಸಿಯಾಗಿ ಹೋಗುತ್ತಿರುವುದನ್ನು ನೋಡಿ ನೊಂದು ಬೆಂದ ಜೀವಿಯೊಬ್ಬನ ಕಥೆ. ಒಂದು ದೃಷ್ಟಿಯಿಂದ ಇದು ಲೇಖಕನ ಆತ್ಮಕಥೆ. ರಶಿಯದ ವಿದ್ಯಮಾನಗಳ ಮೇಲೆ ಆತ್ಮಸಾಕ್ಷಿಯನ್ನು ಜೀವಂತವಾಗಿ ಇರಿಸಿಕೊಂಡ ಒಬ್ಬ ರಶಿಯನ್ನನ ಭಾಷ್ಯವೇ ಆಗಿದೆ.

ನಿಕಿತಾ ಖ್ರುಶ್ಚೆವ್ ಅಧಿಕಾರಕ್ಕೆ ಬಂದು ಸ್ಟಾಲಿನ್ನನ ದೌರ್ಜನ್ಯಗಳನ್ನೆಲ್ಲ ಖಂಡಿಸಿದ ತರುವಾಯ ರಶಿಯದಲ್ಲಿ ಬೌದ್ಧಿಕ ವಾತಾವರಣ ತಿಳಿಯಾಗಿ ಬಿಡುಗಡೆಗಾಗಿ ಹಂಬಲಿಸುತ್ತಿದ್ದವರ ಹೃದಯದಲ್ಲಿ ಆಶಾಕಿರಣ ಅಂಕುರಿಸಿತು. ಅಂಥ ಅವಕಾಶದ ಪ್ರಯೋಜನ ದೊರೆಯಬಹುದೆಂಬ ಭಾವನೆಯಿಂದ ಪಾಸ್ಟರ್‌ನ್ಯಾಕ್ ತಮ್ಮ 'ಡಾ. ಝಿವಾಗೋ' ಹಸ್ತಪ್ರತಿಯನ್ನು ದೇಶದ ಅಧಿಕೃತ ಪ್ರಕಾಶಕರಿಗೆ ಕಳಿಸಿದರು. ಖ್ರುಶ್ಚೇವರ ಸ್ಟಾಲಿನ್ ಖಂಡನ ಪ್ರಕಾಶನ ಜಗತ್ತಿನ ಮೇಲೆ ಪ್ರಭಾವ ಬೀರಿದಂತೆ ತೋರಲಿಲ್ಲ. ಹಸ್ತಪ್ರತಿ ಮರಳಿಬಂತು; ದೇಶದ ಅಧಿಕೃತ ಲೇಖಕ - ವಿಮರ್ಶಕರು "ಇದೊಂದು ಹೀನ ದರ್ಜೆಯ ಕೃತಿ" ಎಂದು ಅಪ್ಪಣೆ ಕೊಡಿಸಿದರು. ಪಾಸ್ಟರ್‌ನ್ಯಾಕರ ಆಸೆ ಮತ್ತೆ ಚಿಪ್ಪು ಹೊಕ್ಕಿತು.

ಒಮ್ಮೆ ಪಾಸ್ಟರ್‌ನ್ಯಾಕ್ ವಿದೇಶ ಪ್ರವಾಸಕ್ಕೆಂದು ಹೋದಾಗ ತಮ್ಮೊಂದಿಗೆ 'ಡಾ. ಝಿವಾಗೋ'ದ ಹಸ್ತಪ್ರತಿಯನ್ನು ಒಯ್ದಿದ್ದರು, ಇಟಾಲಿಯನ್ ಕಮ್ಯೂನಿಸ್ಟ್ ಪ್ರಕಾಶಕನೊಬ್ಬ ಅದನ್ನು ಮೆಚ್ಚಿ ಮೊದಲು ಇಟಾಲಿಯನ್ ಅನುವಾದವನ್ನು ಪ್ರಕಟಿಸಿದನಲ್ಲದೆ, ಅನಂತರ ಹಲವು ಯುರೋಪಿಯನ್ ಭಾಷೆಗಳಲ್ಲಿ ಅನುವಾದಿಸಿ ಅದು ಪ್ರಕಟವಾಗುವಂತೆಯೂ ನೋಡಿಕೊಂಡನು. ಈ ಅನುವಾದವನ್ನೇ ಸ್ವೀಕರಿಸಿ ಸ್ವೀಡಿಶ್ ಅಕಾಡೆಮಿ ಬೋರಿಸ್ ಪಾಸ್ಟರ್‌ನ್ಯಾಕರಿಗೆ ೧೯೫೮ರಲ್ಲಿ ನೋಬೆಲ್ ಬಹುಮಾನ ನೀಡಿರುವುದಾಗಿ ಸಾರಿತು.

ಸ್ವದೇಶದಲ್ಲಿ ಹೀನ ದರ್ಜೆಯದೆಂದು ಹೀಗಳೆಯಲ್ಪಟ್ಟ ತಮ್ಮ ಕಾದಂಬರಿಗೆ ಜಗತ್ತಿನ ಅತ್ಯುತ್ಕೃಷ್ಟ ಮನ್ನಣೆ ದೊರಕಿದ್ದುದು ಪಾಸ್ಟರ್‌ನ್ಯಾಕರಿಗೆ ಸಂತಸವನ್ನೇ ನೀಡಿತು. ಹಾಗೆಂದು ಸ್ವೀಡಿಶ್ ಅಕ್ಯಾಡೆಮಿಗೆ ಅವರು ತಂತಿ ಮೂಲಕ ತಿಳಿಸಿಯೂಬಿಟ್ಟರು. ಆದರೆ ಸ್ವೀಡಿಶ್ ಅಕ್ಯಾಡೆಮಿ ಈ ಬಹುಮಾನವನ್ನು ಅವರಿಗೆ ನೀಡಲು ನಿರ್ಧರಿಸಿದ್ದು ಕೃತಿಯ ಗುಣಮಟ್ಟದ ಕಾರಣಕ್ಕಾಗಿಯಲ್ಲ. ಪರ್ಯಾಯವಾಗಿ ಸೋವಿಯತ್ ವ್ಯವಸ್ಥೆಯನ್ನು ಖಂಡಿಸುವುದಕ್ಕಾಗಿ ಎಂದು ರಶಿಯನ್ ಮೂಲಗಳಿಂದ ಟೀಕೆಯ ಹೊಳೆಯೇ ಹರಿಯಿತು. ಕಮ್ಯೂನಿಸ್ಟ್ ವ್ಯವಸ್ಥೆಯಲ್ಲಿ ಅಲ್ಲಿಯ ಪ್ರಜೆಗಳು ಮುಕ್ತ ನಾಗರಿಕರಲ್ಲವಾದ್ದರಿಂದ ಇಂಥ ಬಹುಮಾನ

ಸ್ವೀಕರಿಸುವುದಕ್ಕೂ ಸರಕಾರದ ಅನುಮತಿ ಅವರಿಗೆ ಅತ್ಯಗತ್ಯ. ಪಾಸ್ಟರ್‌ನ್ಯಾಕ್ ನೋಬೆಲ್ ಬಹುಮಾನ ಸ್ವೀಕರಿಸಲು ಸ್ವೀಡನ್ನಿಗೆ ಹೋಗಿ ಬರಲು ಅನುಮತಿ ನೀಡಬೇಕೆಂದು ಬಿನ್ನವಿಸಿದರು. ಅದಕ್ಕೆ ಸರಕಾರದಿಂದ ಬಂದ ಪ್ರತಿಕ್ರಿಯೆ ಅವರನ್ನು ಕಂಗೆಡಿಸಿತು. ಪಾಸ್ಟರ್‌ನ್ಯಾಕ್ ಸ್ವೀಡನ್ನಿಗೆ ಹೋಗಿ ಆ ಬಹುಮಾನವನ್ನು ಸ್ವೀಕರಿಸಬಹುದು, ಆದರೆ ಅನಂತರ ಸೋವಿಯೆತ್ ನೆಲದ ಮೇಲೆ ಅವರು ಕಾಲಿಕ್ಕುವಂತಿಲ್ಲ.

ಆಗಲೆ ನೊಂದು ಬೆಂದು ಒಂದು ಪರಿಪಕ್ವವೆನ್ನಬಹುದಾದ ಮಟ್ಟಕ್ಕೆ ಪಾಸ್ಟರ್‌ನ್ಯಾಕರ ಹೃದಯ ಬಂದಿತ್ತಾದರೂ ಸರಕಾರದ ಈ ಉತ್ತರ ಅವರ ರಾಷ್ಟ್ರನಿಷ್ಠೆಯನ್ನೇ ಒರೆಗೆ ಹಚ್ಚಿತ್ತು. ಈಗ ಅವರು ಕೈಕೊಂಡ ನಿರ್ಣಯ ಅವರ ವ್ಯಕ್ತಿತ್ವದ ಇನ್ನೊಂದು ಅಂಶದ ಮೇಲೆ ಬೆಳಕು ಬೀರುತ್ತದೆ. ಅವರ ರಾಷ್ಟ್ರಪ್ರೇಮ ಮತ್ತು ರಾಷ್ಟ್ರನಿಷ್ಠೆ ಅಚಲವಾದುದಾಗಿತ್ತು. ಅದುವರೆಗೆ ಅವರು ಏನೇ ಮಾಡಿದ್ದರೂ ರಾಷ್ಟ್ರದ ಕಲ್ಯಾಣವನ್ನು ಕಣ್ಣೆದುರಿಟ್ಟುಕೊಂಡೇ. ರಶಿಯದ ಮಣ್ಣಿನಿಂದ ತಾನು ಬೇರ್ಪಡಬಹುದೆಂಬ ವಿಚಾರವೇ ಅವರಿಗೆ ಸಹ್ಯವಾಗಲಿಲ್ಲ. ತಟ್ಟನೆ ತಮಗೆ ನೋಬೆಲ್ ಬಹುಮಾನ ಬೇಡವೆಂದು 'ಸ್ವೀಡಿಶ್ ಅಕ್ಯಾಡಮಿಗೆ ತಿಳಿಸಿ ರಾಷ್ಟ್ರವರಿಷ್ಠರಿಗೆ ಮತ್ತೊಂದು ಪತ್ರ ಬರೆದು, "ನಾನು ನೋಬೆಲ್ ಬಹುಮಾನ ಸ್ವೀಕರಿಸುವುದಿಲ್ಲ; ಆದರೆ ನಾನು ಕೊನೆಯುಸಿರೆಳೆಯುವವರೆಗೂ ರಶಿಯದಲ್ಲೇ ಉಳಿಯಲು ನನಗೆ ಅನುಮತಿ ನೀಡಬೇಕು," ಎಂದವರು ಪ್ರಾರ್ಥಿಸಿದರು.

ಪ್ರಾಯಶಃ ೧೯೫೮ರ ಸುಮಾರಿಗೆ ಜಗತ್ತು ಸ್ಥೂಲವಾಗಿ ಕಮ್ಯೂನಿಸ್ಟ್ ಮತ್ತು ಕಮ್ಯೂನಿಸ್ಟೇತರ ಎಂಬೆರಡು ಭಾಗಗಳಲ್ಲಿ ವಿಂಗಡಿತವಾಗಿ ಈ ಎರಡು ಗುಂಪುಗಳಲ್ಲಿ ಶೀತಲ ಯುದ್ಧವು ತೀವ್ರ ಮಟ್ಟದಲ್ಲಿಲ್ಲದಿದ್ದರೆ ಸ್ವೀಡಿಶ್ ಅಕ್ಯಾಡಮಿ ಪಾಸ್ಟರ್‌ನ್ಯಾಕರ 'ಡಾ. ಝಿವಾಗೋ'ಗೆ ನೋಬೆಲ್ ಬಹುಮಾನ ನೀಡುತ್ತಿತ್ತೆ? ಒಂದು ವೇಳೆ ಈ ಬಹುಮಾನ ನೀಡಿದ್ದರೂ ರಶಿಯದ ವರಿಷ್ಠರು ಆ ಬಗ್ಗೆ ಇಷ್ಟೊಂದು ಕಠಿಣ ನಿಲುಮೆ ತಳೆಯುತ್ತಿದ್ದರೆ ? ಈ ಎರಡು ಪ್ರಶ್ನೆಗಳನ್ನು ನಮಗೆ ನಾವೇ ಎಷ್ಟು ಸಲ ಕೇಳಿಕೊಂಡರೂ ಉತ್ತರಿಸುವುದು ಜಟಿಲವಾಗುತ್ತಲೇ ಹೋಗುತ್ತದೆ. ಫ್ರಾನ್ಸಿನ ವಿಖ್ಯಾತ ಲೇಖಕ ಮತ್ತು ತತ್ತ್ವಜ್ಞಾನದಲ್ಲಿ ಅಸ್ತಿತ್ವವಾದದ ಪುರಸ್ಕರ್ತ ಜೀನ್ ಪಾಲ್ ಸಾರ್ತ್ರ್. ಅಸ್ತಿತ್ವವಾದದ ಪ್ರಕಾರ ಮನುಷ್ಯ ತನ್ನ ಧರ್ಮಕ್ಕೆ ತನ್ನ ಕರ್ಮದಿಂದಲೇ ಜವಾಬ್ದಾರನಾಗಿರುತ್ತಾನೆ ಇಲ್ಲಿ ಧರ್ಮವೆಂದರೆ ಹಿಂದೂ, ಮುಸಲ್ಮಾನ್, ಕ್ರಿಶ್ಚಿನ್, ಮುಂತಾದ ಹೆಸರುಗಳಿಂದ ಗುರುತಿಸಬಹುದಾದ ಧರ್ಮವೆನ್ನುವುದಕ್ಕಿಂತ ಪ್ರತಿ ವ್ಯಕ್ತಿಯೂ ಆತ್ಮಸಾತ್ ಮಾಡಿಕೊಂಡಿರುವಂಥ ತತ್ತ್ವಪ್ರಣಾ



ಲಿಯೇ ಆಗಿದೆ. ಮನುಷ್ಯ ತನ್ನ ಕರ್ಮದಿಂದಲೇ ದೇವತ್ವಕ್ಕೆ ಏರಬಲ್ಲ. ದೇವರೆಂದರೆ ವಿಶಿಷ್ಟ ಪ್ರಾಣಿಯೇನಲ್ಲ; ತನ್ನ ಕೃತಿಯಿಂದಲೇ ಮನುಷ್ಯ ಆ ಅವಸ್ಥೆಯನ್ನು ತಲಪಬಲ್ಲ. ಒಬ್ಬನು ಇನ್ನೊಬ್ಬನ ಕೃತಿಯ ಬೆಲೆ ಕಟ್ಟಲು ಪ್ರಯತ್ನಿಸುವುದೆಂದರೆ ಅದು ಅವನವನ ದೊಡ್ಡಿಸ್ತನಕ್ಕೆ ಒಡ್ಡಿದ ಅಪಮಾನವೇ ಆಗುತ್ತದೆ. ಇಂತು ಒಬ್ಬನ ಕೃತಿಯನ್ನು ಅದರ ಬೆಲೆ ಕಟ್ಟಲು ಒಡ್ಡುವುದೆಂದರೆ ಮನುಷ್ಯನ ಪರಾಜಯವೇ ಅದು. ಆದ್ದರಿಂದ ನೋಬೆಲ್ ಪಾರಿತೋಷಕವನ್ನು ಸ್ವೀಕರಿಸುವುದೆಂದರೆ ತನ್ನ ತತ್ತ್ವಪ್ರಣಾಲಿಯ ವೈಫಲ್ಯವೇ ಎಂದು ಸಾರ್ತ್ರ್ ಭಾವಿಸಿ ಬಹುಮಾನವನ್ನು ನಿರಾಕರಿಸಿಬಿಟ್ಟರು.

ಸಾರ್ತ್ರ್‌ರ ಈ ಕೃತಿಯಿಂದ ನೋಬೆಲ್ ಬಹುಮಾನ ಸ್ವೀಕರಿಸಿದ್ದರೆ ದೊರೆಯಬಹುದಾಗಿದ್ದ ಪ್ರಚಾರಕ್ಕಿಂತ ಹೆಚ್ಚಿನ ಪ್ರಚಾರ ಅವರಿಗೆ ದೊರೆಯಿತು. ಅನೇಕರು ಅವರ ನಿಲುವೆಯನ್ನು ಪ್ರಶಂಸಿಸಿದರಾದರೆ ಮತ್ತೆ ಹತ್ತು ಹಲವು ಜನ ಬಗೆ ಬಗೆಯಾಗಿ ಆಡಿಕೊಂಡರು, ಟೀಕಿಸಿದರು. ಸಾರ್ತ್ರ್ ಭಾರಿ ಧನಾಢ್ಯ ಕುಳವಿರಬೇಕು; ಅವರಿಗೆ ನೋಬೆಲ್ ಬಹುಮಾನದಿಂದ ದೊರೆಯುವ ಹಣದ ಆವಶ್ಯಕತೆ ಇರಲಿಕ್ಕಿಲ್ಲವೆಂದು ಕೆಲವರು ಅಂದರಾದರೂ ಅಂಥವರು ವಸ್ತುಸ್ಥಿತಿಯ ಅರಿವಿಲ್ಲದವರು ಎಂದು ಹೇಳಬೇಕು. ಯಾಕೆಂದರೆ ಸಾರ್ತ್ರ್ ಮಧ್ಯಮ ವರ್ಗದ, ಉಪಜೀವನಕ್ಕಾಗಿ ಲೇಖನಿಯನ್ನೇ ಅವಲಂಬಿಸಿದ, ದಿನಕ್ಕೆ ಎಂಟರಿಂದ ಹತ್ತು ತಾಸುಗಳಷ್ಟಾದರೂ ಬರವಣಿಗೆಯಲ್ಲೇ ತೊಡಗಿರುತ್ತಿದ್ದ ವ್ಯಕ್ತಿ. ಸಾರ್ತ್ರ್‌ರಿಗಿಂತ ಕನಿಷ್ಠ ದರ್ಜೆಯ ಕೆಲವು ಲೇಖಕರಿಗೆ ಆ ಮೊದಲೇ ನೋಬೆಲ್ ಬಹುಮಾನ ಸಿಕ್ಕಿತ್ತಾದ್ದರಿಂದ ಈಗ ಅದನ್ನು ತಾವು ಸ್ವೀಕರಿಸುವುದು ತವಗ್ಮ ಗೌರವಕ್ಕೆ ಕುಂದೆಂದು ಭಾವಿಸಿರಬೇಕೆಂದು ಆಡಿಕೊಂಡವರೂ ಇದ್ದಾರೆ. ಸಾರ್ತ್ರ್‌ರ ಶಿಷ್ಯ ಕಾಮುವಿಗೆ ಸಹ ಆ ಮುನ್ನವೇ ಈ ಬಹುಮಾನದ ಬಂದಿತ್ತಾದ್ದರಿಂದ ಸಾರ್ತ್ರ್ ನೊಂದುಕೊಂಡಿದ್ದರೆಂದೂ ಹಲವರು ಪಿಸುಗುಟ್ಟಿದ್ದರು. ಆದರೆ ಸ್ವತಃ ಅವರಿಗೆ ಇದಾವುದರ ಲೆಕ್ಕವೂ ಇಲ್ಲ. ತಮಗೆ ಈ ಬಹುಮಾನ ಕೊಡಮಾಡಿರುವ ಸ್ವೀಡಿಶ್ ಅಕ್ಯಾಡಮಿಯ ಘೋಷಣೆಯನ್ನು ಕೇಳಿದೊಡನೆಯೇ ಅವರು, "ನನಗಿಂತಲೂ ಹಿರಿಯ ಸಾಹಿತಿಗಳು ಇನ್ನೂ ಎಷ್ಟೋ ಜನಗಳಿದ್ದಾರೆ. ಒಂದು ಉದಾಹರಣೆಯನ್ನೇ ಕೊಡುವುದಾದರೆ 'ಕ್ವಾಯಿಟ್ ಫ್ಲೋಜ್ ದಿ ಡಾನ್' ಬರೆದ ಮಿಖಾಯಿಲ್ ಶೋಲೋಖೋವ್ ಅವರಿಗೆ ಇದುವರೆಗೂ ಯಾವ ಬಹುಮಾನವೂ ಬಂದಿಲ್ಲ" ಎಂದುದ್ಗರಿಸಿದರು. ಅವರು ನೋಬೆಲ್ ಬಹುಮಾನ ತಮಗೆ ಘೋಷಿಸುವ ಮುಂಚೆಯೇ, ಗೊಂಕೂರ್ ಫ್ರೆಂಚ್ ಪಾರಿತೋಷಕವನ್ನು, ಅನಂತರ ರಷ್ಯಾ ಕೊಡಮಾಡಿದ್ದ ಲೆನಿನ್ ಸಾಹಿತ್ಯ ಪಾರಿತೋಷಕವನ್ನು ನಿರಾಕರಿಸಿದ್ದರು. ಇಂತು ತತ್ತ್ವನಿಷ್ಠೆಯಿಂದ ಮಹಾ ಗೌರವವನ್ನು ನಿರಾಕರಿಸುವವರೆಂದರೆ ಬಹುಶಃ ಸಾರ್ತ್ರ್ ಒಬ್ಬರೇ.

ಇದೆಲ್ಲವನ್ನೂ ನೋಡಿದಾಗ ನೋಬೆಲ್ ಬಹುಮಾನವನ್ನು ನಿರಾಕರಿಸಿದಂತಹ ಪ್ರಕರಣಗಳು ನಡೆದುದು, ಅಂತಾರಾಷ್ಟ್ರೀಯ ವಿವಾದಗಳಿಗೇ ಎಡೆಗೊಟ್ಟ ಪ್ರಸಂಗಗಳು ಮಾತ್ರವೆಂದು ಇಷ್ಟು ನಿಂತುದು ನೋಬೆಲ್ ಸಾಹಿತ್ಯ ಪಾರಿತೋಷಕಗಳ ವಿಷಯದಲ್ಲಿ ಮಾತ್ರ ಎಂಬುದು ಎದ್ದು ಕಾಣುವಂತಿದೆಯಲ್ಲವೆ? ✡

(ಕೃಪೆ: 'ಪುಸ್ತಕ ಪ್ರಪಂಚ')




ನಾಲಂದಾ ಎಂಬ ಪ್ರಾಚೀನ ವಿದ್ಯಾಪೀಠದಲ್ಲಿ (ಏಳನೆಯ ಶತಮಾನ) ವಿದ್ಯಾರ್ಥಿಗಳ ವೈಯಕ್ತಿಕ ಜೀವನವು ಕಟ್ಟುನಿಟ್ಟಿನದಾಗಿತ್ತು. ಬೌದ್ಧ ಭಿಕ್ಷುಣಿಯರಿಗೂ ಅಲ್ಲಿ ಪ್ರವೇಶವಿತ್ತು. ಆದರೆ ಸ್ತ್ರೀಯರನ್ನು ಕಣ್ಣೆತ್ತಿ ನೋಡುವುದೂ ಪಾಪ ಎಂದು ಅಲ್ಲಿ ಪರಿಗಣಿಸಲಾಗುತ್ತಿತ್ತು. ಅಂಥ ಅಪರಾಧ ಮಾಡಿದ ವಿದ್ಯಾರ್ಥಿ ಒಂದು ವರ್ಷಕಾಲ ಬಾಲ ತೂಗಾಡುತ್ತಿರುವ ಕತ್ತೆಯ ಚರ್ಮ ಹೊದೆದು, ತನ್ನ ಪಾಪ ವಿಮೋಚನೆಮಾಡಿಕೊಳ್ಳುತ್ತ ಭಿಕ್ಷೆ ಬೇಡಬೇಕಾಗಿತ್ತು.

ಸೆಕೆಯು ನಿಮ್ಮ
ಶಕ್ತಿಯನ್ನು ಅಪಹರಿಸಿದಾಗ—



ಗ್ಲೂಕೋಸ್-ಡಿ* ತೆಗೆದುಕೊಳ್ಳಿರಿ.

ಅದು ನಿಮಗೆ ಆರಾಮವನ್ನೂ
ತಂಪನ್ನೂ ನೀಡುತ್ತದೆ.
ಕೆಲಸವನ್ನು ಮುಂದುವರಿಸಲು
ನಿಮಗೆ ತಕ್ಷಣ
ಶಕ್ತಿಯನ್ನೀಯುತ್ತದೆ.



ಸೆಕೆಯಷ್ಟು ಆಯಾಸವನ್ನುಂಟುಮಾಡುವಂತಹದು ಬೇರಾವುದೂ ಇಲ್ಲ. ಇಂತಹ ಆಯಾಸದಲ್ಲಿ ಕಳೆದ ಸಾಮಾನ್ಯ ಶಕ್ತಿಯೆಲ್ಲ ಬರಿದಾಗುತ್ತದೆ. ಗ್ಲೂಕೋಸ್-ಡಿ ತಕ್ಷಣ ಶಕ್ತಿಕೊಡುತ್ತದೆ.

ಗ್ಲೂಕೋಸ್-ಡಿಯನ್ನು ಹಣ್ಣುಗಳ ರಸ, ಹಾಲು, ಚಹಾ, ಕಾಫಿ, ನೀರು ಮೊದಲಾದ ಯಾವುದೇ ಪೇಯಕ್ಕೆ ಸೇರಿಸಿ ಕುಡಿಯಿರಿ ಅಥವಾ ಅದೊಂದನ್ನೇ ಸೇವಿಸಿರಿ. ನಿಮ್ಮ ಮನೆಜನರಿಗೆಲ್ಲ ಗ್ಲೂಕೋಸ್-ಡಿ ಕೊಡಿರಿ, ಮತ್ತು ಅವರಲ್ಲಿ ಕೂಡಲೇ ಶಕ್ತಿ ಮರುಕಳಿಸುವುದನ್ನು ನೋಡಿರಿ. ತಕ್ಷಣ ದೊರೆಯುವ ಆ ಶಕ್ತಿ ಅವರು ತಮ್ಮ ತಮ್ಮ ಕೆಲಸಗಳಲ್ಲಿ, ಆಟಪಾಟಗಳಲ್ಲಿ ಪುನಃ ನಿರತರಾಗುವಂತೆ ಮಾಡಲು ನೆರವಾಗುವುದು.




ಗ್ಲೂಕೋಸ್-ಡಿ*

—ಇದೋ ಕುಟುಂಬಕ್ಕೆ ತಕ್ಷಣ ಶಕ್ತಿ

GFP. 8911-KN

ಕನ್ನಡದ ಪುಲ್ಲೆನಗೆ ಪಾವನ ತುಲಸಿ
ಎಂದ ಸಾಲಿ ರಾಮಚಂದ್ರರಾಯರ
ನೆನಪು ಅವರ ಘನತೆಯ ವಿವಿಧ
ಸ್ತರಗಳಿಗೆ ಕನ್ನಡಿ ಹಿಡಿಯುತ್ತದೆ



ಅಜ್ಜಾ! ನಿನಗಿದೊಂದು ಪತ್ರ.......

ಕೆ. ರಾಮಮೋಹನ

ಪ್ರೀತಿಯ ಅಜ್ಜಾ,

ಹಿಂದೊಮ್ಮೆ ಕಾಗದ ಬರೆದಿದ್ದೆ; "ಕಾಲಚಕ್ರ ಓಡುತ್ತಲೇ ಇದೆ. ಹಿಡಿತಕ್ಕೆ, ಸಾಮಾನ್ಯ ಅರಿವಿಗೆ ಸಿಕ್ಕದ ಅದರ ನಾಲ್ಗಾಲೋಟ ವರ್ತಮಾನವನ್ನು ಹಿಂದಕ್ಕೆ ತಳ್ಳಿ, ಅದಕ್ಕೆ ತಾನೆಬ್ಬಿಸಿದ ಧೂಳಿನ ಮೋಡದ ಪೊರೆಯನ್ನು ಮುಸುಕಿ, ಸಮ್ಮಿಂದ ಮರೆ ಮಾಡುತ್ತದೆ. ಭವಿಷ್ಯತ್ತನ್ನೆಲ್ಲಾ ಭೂತವನ್ನಾಗಿ ಮಾಡುವ ಈ ಅದ್ಭುತ ಓಟದ ಮೂಕ ಪ್ರೇಕ್ಷಕರು ಮಾತ್ರ ನಾವು. ಕಾಲರಥ ಮುಂದೆ ಮುಂದೆ ಸರಿದಂತೆ, ಕ್ರಮೇಣ ಈ ಧೂಳು ಅಡಗಿ, ಆ ಕ್ಷಣದ ಎಷ್ಟೋ ರಸನಿಮಿಷಗಳ, ಹಾಗೂ ಕುತೂಹಲಕರ ಸಂಗತಿಗಳ ಮೇಲೆ ಒಂದು ಹಾಸಿಕೆಯಾಗಿ ನೆಲೆಯಾಗುತ್ತದೆ. ಹೀಗೆ ಘಟನೆಗಳು–ಧೂಳು ಪೊರೆ, ಮತ್ತೆ ಘಟನೆಗಳು–ಧೂಳು–ಹಾಸಿಗೆ–ಯಂಗಡಿಯಲ್ಲಿ ಪೇರಿಸಿದ ಹಾಸು ದಿಂಬು ಜಮಖಾನಗಳಂತೆ — ಪದರ ಪದರವಾಗಿ ಮೇಲೇರುತ್ತದೆ. ಆಗಾಗ, ಹಿಮ್ಮುಖವಾಗಿ ನಿಂತು, ನೆನಪಿನಾಳಕ್ಕೆ ನೋಟವನ್ನು ಹರಿಸಿ, ಧೂಳಿನ ಪದರವನ್ನು ಒರೆಸಿ ದೃಷ್ಟಿಸಿದಾಗ, ಅದೊಂದು ಕನಸಿನ ಅನುಭವ– ಮಣ್ಣು ಮರಳಿನ ರಾಶಿಯನ್ನು ಅಗೆದು ಪಕ್ಕಕ್ಕೆ ಸರಿಸಿ, ಹಳೆಯ ದೇಗುಲವನ್ನೋ ಇಟ್ಟಿಗೆಯ ಸಾಲನ್ನೋ ಕಂಡು ಬೆರಗಿನ ತೃಪ್ತಿ ಪಡೆಯುವ ಪ್ರಾಚ್ಯ ಸಂಶೋಧಕನಂತೆ, ಅದು ಅಲ್ಲೇ ಇರಬೇಕು ಎಂದು ನಿರೀಕ್ಷಿಸಿದ್ದರೂ ಕಂಡಾಗ ಒಂದು ಬಗೆಯ ಅಚ್ಚರಿ, ನಿರೀಕ್ಷಣೆಯ ಸಫಲತೆಯಲ್ಲಿ ತೃಪ್ತಿ. ಮೊದಲಿನ ಹೊಳಪನ್ನು ಕಳೆದುಕೊಂಡು ಮಾಸಲಾದರೂ

ಸಂಗತಿ ಅದೇ! ಅದರ ವಿವಿಧ ಸ್ತರಗಳನ್ನು ಗುರುತಿಸುತ್ತಿದ್ದಂತೆ, ಹಳೆಯ ನೆನಪು ಮರುಕಳಿಸುತ್ತದೆ. ಹೊಚ್ಚ ಹೊಸತಿನ ಹೊಳಪಿಲ್ಲ, ಸೂಕ್ಷ್ಮ ವಿವರಗಳು ಸ್ಪಷ್ಟವಾಗಿಲ್ಲ; ಇರಲು ಸಾಧ್ಯವೂ ಇಲ್ಲ, ನಿಜ; ಅದರಂತೆ, ಆ ಘಟನೆ ನಡೆದಾಗಿನ ರಸಾನುಭವದ ಉತ್ಕಟತೆ, ಉಜ್ವಲತೆಯೂ ಕಾಣದು. ಆದರೆ ಈ ನೆನಪಿಗೂ ಒಂದು ವಿಶಿಷ್ಟ ರುಚಿ– ಹಳತಾದಷ್ಟೂ ಹುಳಿ ಮರೆತು ಪಕ್ವವಾದ ಉಪ್ಪಿನಕಾಯಂತೆ, ಇನ್ನೂ ಹಳತಾಗಿ ಉಪ್ಪು ಮರಳಿದರೂ, ಅದೂ ಒಂದು ನಾಲಿಗೆ ಚಪ್ಪರಿಸುವ ರುಚಿಯೇ:

“ಹೀಗೆ, ನೆನಪಿಗೆ ಬರುವ ಬೇಕು—ಬೇಡದ ಘಟನೆಗಳು, ದೃಶ್ಯಗಳು ಎಷ್ಟೋ! ಆದರೂ ಸಿಹಿಯನ್ನುಣ್ಣುವ ಆಸೆಯ ಮನಸ್ಸು ತನಗೆ ಬೇಕಾದಷ್ಟನ್ನು ಆರಿಸುತ್ತದೆ, ಮೆಲುಕು ಹಾಕಲು, ಯಾವುದು ಬೇಕು ಎನ್ನುವುದು ಮನಃಸ್ಥಿತಿ, ಸಂದರ್ಭಕ್ಕನುಗುಣವಷ್ಟೆ.

“ಭವಿಷ್ಯತ್ತಿನ ಸುಖ–ಸಾರಕ್ಕೆ, ಏಳು–ನಡೆಗೆ ಅಡಿಪಾಯವನ್ನು ಹಾಕುವಾಗ. ಜೀವನದ ಮುಖ್ಯ ಮಜಲನ್ನು ದಾಟುವಾಗ, ಸಹಜವಾಗಿ ನೆನೆಯುವುದು ಹಿತೈಷಿಗಳಾದ ಹಿರಿಯರನ್ನು, ಬೇಡುವುದು ಅವರ ವಾತ್ಸಲ್ಯದ ಆಶೀರ್ವಾದದ ರಕ್ಷೆಯನ್ನು. ಕೂಡಲೇ ಕಣ್ಣ ಮುಂದೆ ಬಂತು, ನಿಮ್ಮ ಶಾಂತವಾದ ಮುಖ; ಕೆಲವು ದಿನಗಳು ನಿಮ್ಮ ಮನೆಯ ಕೋಣೆಯೊಂದರಲ್ಲಿ ಪಡೆದ ಆಶ್ರಯದ ನೆನಪು. ಮನಸ್ಸಿಗೆ, ಅದೆಲ್ಲವನ್ನೂ ಮೀರಿ ಹೃದಯದಾಳದಿಂದ ಬಂದದ್ದು ನಿಮ್ಮ ಸೌಜನ್ಯಯುತ ವ್ಯಕ್ತಿತ್ವದ, ಮೃದುವಾದ ಪಕ್ವವಾದ ಚೇತನದ ನವಿರಾದ ಕಂಪು, ವಿಶ್ವಾಸ ವಾತ್ಸಲ್ಯಗಳ ಸವಿ– ಇವೆಲ್ಲಾ ಒಟ್ಟು ಸೇರಿ ಮನಸ್ಸಿಗೆ ಹೃದಯಕ್ಕೆ ನೀಡುವ ವಿಶಿಷ್ಟ ಸಮಾಧಾನ, ಇದೆಲ್ಲವನ್ನೂ ನೆನೆಯುತ್ತಾ, ಅನುಭವಿಸುತ್ತಾ ಈ ಪತ್ರ ಬರೆಯಲು ಹೊರಟಿದ್ದೇನೆ...”

ಅವತ್ತು ಹೀಗೇ ಏನೇನೋ ಬರೆದೆ, ಅದು ಕೂಡ ೧೨–೧೩ ವರ್ಷಗಳು ಆಗಿರಬೇಕು. ಆಗಿನಿಂದ ವರ್ಷ, ಎರಡು ವರ್ಷಕ್ಕೊಮ್ಮೆ ನಿಮಗೆ ಪತ್ರ ಬರೆಯುವುದರಲ್ಲಿ ಸಮಾಧಾನ. ಆಗೆಲ್ಲಾ ನೆನಪಿನ ಸುರುಳಿ ಬಿಚ್ಚುತ್ತಲೇ ಇರುತ್ತದೆ. ಅಂತಹುದೇ ಸ್ಮರಣೆಗಾಗಿ ಈ ಪತ್ರ.

ಹೌದು, ನಿಮ್ಮ – ನನ್ನ ಬಾಂಧವ್ಯವೇ ಒಂದು ತೆರನಾದುದು; ಹಾಗೆ ನೋಡಿದರೆ, ನಿಮ್ಮ ಮನೆಯಲ್ಲಿ ನಾನಿದ್ದುದು ಕೆಲವೇ ತಿಂಗಳು ಮಾತ್ರ, ಅದರಲ್ಲಿ ನಿಮ್ಮ ಜೊತೆ ಮಾತನಾಡಿ ಕಾಲ ಕಳೆದ ದಿನಗಳನ್ನು, ನಿಮಿಷಗಳನ್ನು ಬಹುಶಃ ಸುಲಭವಾಗಿ ಎಣಿಸಬಹುದು; ಆದರೆ, ಅಷ್ಟೇ ಸುಲಭವಾಗಿ ಹೇಳಲಾದೀತೇ ಅಥವಾ ಅಳೆಯಲಾದೀತೇ, ಆ ವಿಶ್ವಾಸದ ಅನುಭವವನ್ನು? ನಿಧಾನವಾಗಿ ಝುಳು ಝುಳು ನಾದದಿಂದ ಹರಿಯುವ ತಿಳಿಯಾದ ತಂಪಾದ ತೊರೆಯಲ್ಲಿ ಮುಳುಗಿ ಸ್ನಾನಮಾಡಿ, ದಣಿವಾರಿಸಿಕೊಂಡು ಉಲ್ಲಸಿತನಾದವನು ತನ್ನ ಅನುಭವವನ್ನು ಎಷ್ಟು ಮಾತುಗಳಲ್ಲಿ ಹೇಳಿ ತೂಗಲಾದೀತು!

ಇಪ್ಪತ್ತು – ಇಪ್ಪತ್ನಾಲ್ಕು ವರ್ಷಗಳಷ್ಟು ಹಿಂದಕ್ಕೆ ಹಾರಿದರೆ, ಧಾರವಾಡದ ಎರಡು ಮೂರು ವರ್ಷಗಳ ವಾಸ್ತವ್ಯ–ಹಸಿರು ಪೈರಿನ ನಡುವೆ ಸಾಲುಮರಗಳ ದಾರಿಯಲ್ಲಿ ನಡೆಯುವ ಪಯಣಿಗನ ಅನುಭವ; ಆದರಲ್ಲೂ ನಿಮ್ಮ ಜೊತೆಯಲ್ಲಿ ಕಳೆದ ಕೆಲವು ಸಮಯವಂತೂ ಹೂದೋಟದಲ್ಲಿ ಹಣ್ಣಿನ ಮರದ ಕೆಳಗೆ ಕುಳಿತಂತೆ. ಮೊದಲ ಬಾರಿಗೆ ಆ ಪ್ರಾಂತಕ್ಕೆ ಬರುವಾಗ, ಊರ ಮಡಿಲಲ್ಲಿ ರೈಲಿಗೆ ಕುಳಿತಿದ್ದು ಇಳಿಮಧ್ಯಾಹ್ನದಲ್ಲಿ, ಹರಿಹರವನ್ನು ದಾಟಿ ಮುಂದೆ ನಡೆದಾಗ ಬಹುಪಾಲು ನಿದ್ದೆಯೇ. ಹುಬ್ಬಳ್ಳಿಯಲ್ಲಿ ಕಣ್ಣುಬಿಟ್ಟದ್ದು ತೀರ ಹೊಸತೆನಿಸುವ ಸನ್ನಿವೇಶಕ್ಕೆ. ಮುಂದವರೆದಿದ್ದರೂ ಪ್ರಯಾಣಿಸದ ಬೇಕು. ಉದ್ದಕ್ಕೆ ಚಾಚಿನಿಂತ ಪ್ಲಾಟ್‌ಫಾರಂನ ಮೇಲೆ ಹಳದಿ, ಕೆಂಪು, ವರ್ಣಗಳ ನಾನಾ ಬಗೆಯ ಇಳಿಬಿದ್ದ ರುಮಾಲುಗಳು; ಮಣ್ಣಿನ ಬಣ್ಣಕ್ಕೆ ತಿರುಗಿದ ಕಚ್ಚೆ ಪಂಚೆಗಳು, ಉದ್ದನೆಯ ಶರಟುಗಳು. ಗರ್ಕಿ ಚಪಾಪ್ ಮಾದರಿಯ ಸಪ್ಪಳದ ಚಪ್ಪಲಿಗಳು. ಇವರ ಜೊತೆಯಲ್ಲಿ ಹೊಳೆಯುವ ಪೆಟ್ರೊಮ್ಯಾಕ್ಸ್ ದೀಪವನ್ನು ಹೊತ್ತು

ಕಟ್‌ಕಟ್ ಶಬ್ದ ಮಾಡುತ್ತಾ ಹೋಗುವ ತಿಂಡಿಯ ಗಾಡಿ, ಎಲ್ಲವೂ ಹೊಸ ವಾತಾ-ವರಣ, ಹೊಸ ಪ್ರಪಂಚವೇ ಅನಿಸುವಷ್ಟು ಬೆರಗಾಗಿ ನೋಡುತ್ತ ಕುಳಿತದ್ದು; ಅನಂತರ ಧಾರವಾಡ– 'ದೀಡ್ ರೂಪಾಯಿ, ಸವಾ ರೂಪಾಯಿ– ಆತು ಪಾವಣೆ, ಕಡಿಮೆ ಕೊಡ್ರಿ' ಎನ್ನುವ ಟಾಂಗಾ, 'ಹೋಳಾಗೋ ಏ ಮಂಗ್ಯಾ, ಐಐ' ಎಂದು ಸಾಗುವ ವೈಖರಿ, ಬಂದ ಮರುದಿನವೇ 'ನಳ ಬಂದೈತ್ರಿ' ಅನ್ನುವ ಹಾಸ್ಟೆಲಿನ ದುಂಡ್ಯಾ, 'ತೊಗೋರಿ ಮತ್ತೊಂದು ಭಕ್ರಿ, ಹಸೀ ಚಟ್ಣಿ ಬೇಕೇನ್ರಿ?' ಎನ್ನುವ ತಿರುಕಪ್ಪ, ಮರೆಯಲಾರದ ಸವಿಯ ಕೆನೆ ಮೊಸರು, ಅಂಚೆ ಕಛೇರಿಯ ಕ್ಯಾಂಟೀನ್‌ನಲ್ಲಿ ಚಾ–ಕಟಿ, ಶಂಕರಪೋಳಿ, 'ರಾಮಣಿಗೆ ಉಪ್ಪಿಟ್ಟು ಚಟ್ನಿ ಕೊಡಪ್ಪ–ವ್ವಾ, ಇವತ್ತು ರಾತ್ರಿ ಜೇವಣ್ಯಾನ [illegible] ಇದೆ. [illegible]' ಎನ್ನುವ ಧಾರವಾಡ ರೆಸ್ಟೋರೆಂಟಿನ ಸಪ್ಲಾಯರು. 'ಅಜ್ಜಮಾಸ್ತರು ಅರವತ್ತು ವರ್ಷಾತು, ಆದ್ರೂ ಹ್ಯಾಂಗೆ ಓಡ್ತಾ ಬರ್‍ತದೆ ನೋಡ್ರಿ, ನೀವೆಂಥಾ ಹುಡುಗ್ರಿದ್ದೀರಿ' ಎಂದು ಮೂಗು ಸವರಿ ಬೆನ್ನು ತೋರಿಸುವ ಬಿಳಿ ತಲೆಯ ಕಂದು ಕಣ್ಣಿನ ಮುದುಕರು, 'ಓ ನೋಡಿ, ಅಲ್ಲೊಂದು ಪೋಲಿ ಇದೆ, ಮಾತಾಡಿ ನೋಡೋಣ, ನಾನೂ ಒಂದು ಕಲ್ಲು ಹಾಕ್ತೇನೆ' ಎನ್ನುವ ಬಲರಾಮನ (ಕೊನೆಗೆ ಆ ಪೋಲಿ ಆದದ್ದು ಬಲರಾಮನ ಗೋಮೇ!) ಚೆಲೋತ್ನಾಗಿ ಮಾತಾಡ್ತಾನಪ್ಪಾ, ಅಗ್ದೀ ಭಯಂಕರ ಬೆರಿಕೆ ಇದ್ದಾನ್ರಿ, ನಿಮ್ಮಂಥ ಶಾಣ್ಯಾರು ಹೆದರೂಕ್ಕೆ ಕಾರಣೆಲ್ಲ. ಈಗ ಇಳೀಲಿಕ್ಕೆ ಹತ್ಯಾನ್ರೀ' ಎನ್ನುವ ಹೊಸ ಭಾಷೆಯ ಸಂಭಾಷಣೆ, 'ಯಾಕ್ರಿ, ಕೋಳಿ ಮಾಸ್ತರೇನು, ನೀವ್ ಬದರಿದ್ರೇನ್ರಿ' ಎಂದು ಪ್ರಾರಂಭಿಸಿ ಮಾತು ವಿನಿಮಯ ಮಾಡುವ ಗಟ್ರೇಕಾ ಹಾಸ್ಟೆಲ್‌ವಾಸಿಗಳು, ಮೀಸೆ ಗಡ್ಡ ಇನ್ನೂ ಮೂಡುತ್ತಿರುವಾಗಲೇ 'ಸಾಹೇಬ್ರೇ, ಸಾಯುಬ್ರೇ' ಎಂದು ಕರೆಸಿಕೊಳ್ಳುವ ವಿಶೇಷ (ಅದೇ ತಂದೆಯವರ ಸ್ನೇಹಿತರೊಬ್ಬರು ವಿಧಾನ ಸಭಾ ಸದಸ್ಯರು 'ಏ ಹುಡ್ಗಾ ಬಾರೋ ಇಲ್ಲಿ' ಎಂದದ್ದು ನೆನಪಿದೆ) ಕಾಲೇಜಿನಲ್ಲಿ ಪಾಠ ಕಲಿಸುವ ಎಲ್ಲರೂ ಪ್ರೊಫೆಸರೇ ಆಗಿರುವ ಹೆಚ್ಚಳ, ದಿನವೂ ಘುಬ್ಬಳ್ಳಿ ರೇಲ್ವೆ ಗೇಟಿನವರೆಗೆ ನಡಿಗೆ, ಅನಂತರ ಸ್ಪೇಷಲ್ ಸ್ಟ್ರಾಂಗ್ ಕಾಫಿ, ಕಹಿ ವಿಷ, ಶ್ರೀ ಮುರುಘಾಮಠದಲ್ಲಿ ಮನ್ಸೂರರ ಸಂಗೀತ ಇನ್ನೂ ಎಷ್ಟೆಷ್ಟೋ ಎಲ್ಲ, ಈಗ ಲೈನ್ ಬಜಾರದ ಪೇಢೆಯಂತೆ ಸವಿಯಾಗಿ ತೋರುತ್ತಿದೆ.

ಆದರೆ ಇದೆಲ್ಲವನ್ನೂ ಮೀರಿನಿಂತದ್ದು ನಿಮ್ಮೊಡನೆ ಮಾತು, ನಂದಾದೀಪದ ಕುಡಿಯಂತೆ ಮಂದವಾಗಿ ಹೊಳೆಯುವ ಅನುಕಂಪವನ್ನು ಚೆಲ್ಲುವ ಕಣ್ಣುಗಳು, ಶಾಂತಿಯನ್ನು ಸೂಸುವ ಮುಖ, ಗಂಭೀರ ವಾತ್ಸಲ್ಯದ ವ್ಯಕ್ತಿತ್ವ. ಬಂದ ಎಷ್ಟೋ ದಿನಗಳು ಉಳಿಯಲು ಸರಿಯಾದ ಜಾಗ ಸಿಗಲಿಲ್ಲ. ಹಾಸ್ಟೆಲಿನಲ್ಲಿ ಇದ್ದ ಕೋಣೆಗಳೆಲ್ಲ ಭರ್ತಿ. ಆಗ ಸಹಪಾಠಿಯೊಬ್ಬರು ಕರೆದರು ತಮ್ಮ ಖೋಲಿಗೆ. ಅವರಿದ್ದದ್ದು ನಿಮ್ಮಲ್ಲಿ. ಪ್ರೈಮರಿ ಶಾಲೆಯಲ್ಲಿ ಪದ್ಯವನ್ನು ಓದುವಾಗ ಕಂಡದ್ದು ನಿಮ್ಮ ಹೆಸರನ್ನು. ಎರಡನೆಯ ಬಾರಿಗೆ ಕೇಳಿದ್ದು ಈಗ– ಎಲ್ಲಪ್ಪಾ ನಿಮ್ಮ ರೂಮು ಎನ್ನುವಾಗ. 'ಸಾಲಿಮಾಸ್ತರ ಮನೆಯಲ್ಲಿರ್ತೀನ್ರೀ.' ಮನೆಯಲ್ಲಿ ಎರಡು ಮೂರು ಕೋಣೆಗಳಲ್ಲಿ ಐದಾರು ವಿದ್ಯಾರ್ಥಿಗಳಿದ್ದಿರಬಹುದು. ಅವರೆಲ್ಲರಿಗೂ ನೀವು 'ಅಜ್ಜಾವ್ರು.'


ಅಲ್ಲಿ ಬಂದ ಮೇಲೂ ಬಹಳ ದಿನ ನಿಮ್ಮನ್ನು ಕಾಣಲಿಲ್ಲ. ಒಮ್ಮೆ ಮೇಲಿನ ಕೋಣೆಯವರು ಹೇಳಿದರು,' ಅಜ್ಜಾವ್ರು ಬಹುತೇಕವ ಮುಂಬಯಿಕ್ಕ–ಹೋಗ್ಯಾರ್ರಿ, ಅಲ್ಲಿ ಮಗಳ ಮನೆ ಇದೆ. ಇಷ್ಟ್ರಾಗ ಇನ್ನೇನು ಬರಬೇಕ್ರಿ.' ಕೆಲವು ದಿನಗಳ ನಂತರ ಮುಖ ತೊಳೆಯಲು ಮುಂಜಾವಿನಲ್ಲಿ ಹೋದಾಗ, ಗುಂಡು ಮುಖದ, ಬಟ್ಟ ತಲೆಯ, ಕನ್ನಡಕದ ಮುದುಕ, [illegible] ನಿಧಾನ [illegible]. ಕುತೂಹಲದಿಂದ ಅವರನ್ನೇ ಒಂದೆರಡು ಸಾರಿ ನೋಡಿದರೂ ಸೌಜನ್ಯಕ್ಕಾಗಿ ನೋಡುತ್ತಲೇ ನಿಲ್ಲಲಾಗಲಿಲ್ಲ. ಅವರೂ [illegible] ವಿಶೇಷವಾ ಇಲ್ಲದಂತೆ ತಮ್ಮ ಪಾಡಿಗೆ ತಾವು ಕೆಲಸದಲ್ಲಿ ನಿರತರು. ಒಮ್ಮೆಯಾದರೂ ಕತ್ತೆತ್ತಿ ನೋಡಿದರೋ ಇಲ್ಲವೋ. ಸಂಜೆ, ಸ್ನೇಹಿತರು ಹೇಳಿದರು, 'ಹೌದ್ರೀ, ಅವರೇ ಅಜ್ಜಾವ್ರು, ನಿನ್ನೆ

ಸಂಜೆ ಕಡೇಕ ಬಂದರ್‍ರಿ.'

ಬಹುಶಃ ಪುರುದಿನವೇ ಇರಬೇಕು, ನಾನಾಗಿ ಬಂದು ಸಮಯ ಕಾದು ನಿಮ್ಮನ್ನು ಮಾತ ನಾಡಿಸಿದೆ; ನೀವು ಆಗ ಕೇಳಿದಿರಿ, ಹೇಳಿ ದಿರಿ– ಮೆಲುದನಿಯಲ್ಲಿ ಗಂಭೀರವಾದ ಮಾತು– ಆ ನಿನ್ನ ಪೋಗುತ್ತದೇ ಇದೆ. ಅವರಲ್ಲೂ ಈಚೆಗೆ ತಂದೆಯವರು ತುಂಬು ಜೀವನದ ನಂತರ ಸ್ವರ್ಗಕ್ಕೆ ನಡೆದಾಗ ನಿಮ್ಮ ಮಾತಿನ ಸತ್ಯ ಮನವರಿಕೆಯಾಗುತ್ತದೆ. 'ನಿಮ್ಮ ತಾಯಿ ತಂದೆ ಇಬ್ಬರೂ ಇದ್ದಾರಲ್ಲಾ. ಬಹಳ ಸಂತೋಷ. ನೀವು ಪುಣ್ಯವಂತರು. ನಮ್ಮನ್ನು ಮುಂದೆ ತರಲು. ಯೋಗಕ್ಷೇಮವನ್ನು ಪಾಲಿ ಸಲು ತಾಯಿ ತಂದೆಗಳಿರುವುದು ಭಾಗ್ಯ.' ಅವರ ಮೇಲೆ ಭಕ್ತಿಯಿರಬೇಕಾಗ. ಎರಡು ಮೂರು ಬಾರಿ, ಹೇಳಿದಿರಿ 'ಧರ್ಮಸ್ಥಳಕ್ಕೆ ಒಂದು ಬಾರಿ ಹೋಗೋಣ ಎಂಬ ಮನಸ್ಸಿದೆ. ಆಗ ನಿಮ್ಮಲ್ಲಿಗೆ ಬರ್‍ತೇನೆ. ನಿಮ್ಮ ತಾಯಿ ತಂದೆಗಳನ್ನು ನೋಡಬೇಕು'– ಅದು ಕೊನೆಗೂ ಆಗಲೇ ಇಲ್ಲ.

ಆದರೆ ಅಲ್ಲಿರುವವರೆಗೂ ನನ್ನನ್ನು ಅಷ್ಟೇ ಪ್ರೀತಿಯಿಂದ ಕಂಡಿರಿ. ನೆನಪಿದೆ, ಒಂದು ರಾತ್ರಿ, ಒಂಭತ್ತೂವರೆ ಇರಬೇಕು. ಸ್ನೇಹಿತರಲ್ಲಿ ಹರಟೆ ಹೊಡೆದು, ಊಟದ ಸಮಯ ಮೀರಿ, ಊಟ ಸಿಗದೆ. ಹಾಗೆಯೇ ಮನೆಗೆ ಬಂದೆ. ಬಾಗಿಲನ್ನು ತೆರೆದವರೇ ಊಟವಾಯಿತೇ ಎಂದು ವಿಚಾರಿಸಿದಿರಿ. ಆಗಿದೆ ಎಂದು ನಿಮ್ಮೊಡನೆ ಸುಳ್ಳು ಹೇಳಲಾಗದುದಕ್ಕೆ, "ಹಸಿವಿಲ್ಲ, ಹಾಗೇ ಬಂದೆ' ಎಂದೆ. ಮಾತನಾಡದೆ ಒಳಗೆ ಹೋದಿರಿ, ಬರುವಾಗ ಬಟ್ಟಲು ಹಾಲು ಕೈಯಲ್ಲಿ. ನನ ಗಂತೂ ತುಂಬಾ ಸಂಕೋಚವಾಯಿತು. ಮನೆ ಯಲ್ಲಿ ನೀವಿಬ್ಬರೇ ಇದ್ದದ್ದು; ಇದ್ದ ಹಾಲನ್ನೂ ನಾನು ಕುಡಿದರೆ ನಿಮಗೆ ತೊಂದರೆ ಎನಿಸಿತು. ಆದರೆ ನೀವು ಬಿಡಬೇಕಲ್ಲ– "ರಾತ್ರಿ, ಹಾಗೆಲ್ಲಾ ಬರಿ ಹೊಟ್ಟೆಯಲ್ಲಿ ಮಲಗಬಾರದು. ಅನ್ನವನ್ನೇ ಬಡಿಸಬಹುದಿತ್ತು. ನನಗೆ ರಾತ್ರಿ ಊಟವಿಲ್ಲ ನೋಡಿ. ಸ್ವಲ್ಪ ಹಾಲು ತೆಗೆದುಕೊಳ್ಳಲೇ ಬೇಕು, ನನಗೇನೂ ತೊಂದರೆಯಿಲ್ಲ. ನೀವು ಕುಡಿಯದಿದ್ದರೆ ಮಾತ್ರ ಸಮಾಧಾನವಾಗು ವುದಿಲ್ಲ." ಆ ವಾತ್ಸಲ್ಯದ ಅಮೃತ ಎಷ್ಟು ಅಪರೂಪದ ಅಮೂಲ್ಯ ವಸ್ತು !

ಕೋಣೆಯ ಗೋಡೆ ಬೀರುವಿನಲ್ಲಿ ಪುಸ್ತಕ ಗಳ ಕಟ್ಟು ಕಂಡು, ಕುತೂಹಲದಿಂದ ನೋಡಿದೆ. 'ಯದುಪತಿಯ ಕಥೆ' ಎಂದಿರಬೇಕು. ಅದು ನಿಮ್ಮದೇ ಆತ್ಮಕಥೆ ಎಂದು ಮನೆಯಲ್ಲಿದ್ದ ವಿದ್ಯಾರ್ಥಿಯೊಬ್ಬರು ಹೇಳುತ್ತಿದ್ದರು. ಪುಸ್ತಕ ಗಳಿಗೆಲ್ಲಾ ಗೆದ್ದಲು ಹತ್ತುತ್ತಿತ್ತು. ಕೆಲವೆಲ್ಲಾ ಕೊಡವಿ ಸರಿಮಾಡಿದೆ. ಒಮ್ಮೆ ನಿಮಗೂ ಹೇಳಿದೆ. 'ಹೌದು, ಬಹಳ ಪುಸ್ತಕ ಉಳಿದಿದೆ. ಇರಲಿ ಬಿಡ್ರಿ" ಎಂದಿರಿ. ಅದೆಲ್ಲಾ ಖರ್ಚಾ ಗಿದ್ದರೆ ನಿಮಗೆ ಹಣದ ನೆರವು ಸಿಕ್ಕುತ್ತಿತ್ತು, ಸಮಾಧಾನವೂ ಇರುತ್ತಿತ್ತು ಎಂದು ನನಗನಿ ಸಿತ್ತು. ಆದರೆ, ಅದನ್ನೂ ನೀವು ನಿಮ್ಮ ನಡಿಗೆ



"ಸಭೆಯಲ್ಲಿ ನನಗೆ ಅಧ್ಯಕ್ಷ ಸ್ಥಾನ ನೀಡಿದ್ದ ರಿಂದ ನನಗೆ ಬಹಳಷ್ಟು ಸಂತೋಷವಾಗಿದೆ!"

ಯಲ್ಲೇ ತೆಗೆದುಕೊಂಡಿರಿ. ಸದ್ಯ ನನಗೆ ತೊಂದರೆ ಯಾಗದಿದ್ದರೆ ಸಾಕು ಎಂದು ನಿಮ್ಮ ಅನಿಸಿಕೆ.

ನೀವು ಮನೆಯಲ್ಲಿದ್ದುದೇ ನಮಗೆ ತಿಳಿಯು ತ್ತಿರಲಿಲ್ಲ. ಯಾವುದಕ್ಕೂ ನಮ್ಮ ನೆರವು ಬೇಡಿ ದವರಲ್ಲ. ಒಂದು ಬೆಳಿಗ್ಗೆ ಕೋಣೆಗೆ ಬಂದು ನನ್ನನ್ನು ಕರೆದಿರಿ. "ಕ್ಷೌರ ಮಾಡಿಸಿಕೊಂಡು ಬಂದಿದ್ದೇನೆ. ಸ್ನಾನಕ್ಕೆ ಸ್ವಲ್ಪ ನೀರು ಕೊಡ್ತೀರಾ? ಎಲ್ಲ, ಸಿದ್ಧಮಾಡಿಟ್ಟೇ ಹೋಗಿದ್ದೇನೆ. ಎರಡು ಚೆಂಬು ನೀರು ತಲೆಗೆ ಸುರಿದರೆ ಸಾಕು." ನೀರು ಹಾಕಲು ಬಿಟ್ಟಿದ್ದೂ ಅಷ್ಟಕ್ಕೆ ಮಾತ್ರ. ಅಷ್ಟರಲ್ಲೇ ನನಗೆ ತೊಂದರೆಯಾಯಿತೇನೋ ಎಂದು ಸಂಕೋಚ.

ಮನೆಯಲ್ಲಿ ಒಬ್ಬನೇ ಇದ್ದಾಗ ನನ್ನದೇ ಸ್ವಲ್ಪ ಗದ್ದಲ. ಯಾವುದಾದರೂ ಕೀರ್ತನೆಯ ಗೊತ್ತಿದ್ದ ಒಂದೆರಡು ಸಾಲುಗಳನ್ನೋ ಅಥವಾ ಬಾಯಿಗೆ ಬರುತ್ತಿದ್ದ ಎರಡೇ ದಾಸರ ಪದಗಳನ್ನೋ, ಹೀಗೆ ಹಾಗೆ ತಿರುಗಿಸಿ ಹಾಡಿಕೊಂಡು ಕೂರು ತ್ತಿದ್ದೆ. ಒಂದು ದಿನ ರಾತ್ರಿ ನಿಮ್ಮ ಕೋಣೆ ಯಿಂದ ರೇಡಿಯೋದಲ್ಲಿ ಸಂಗೀತ ಬಂದಾಗ ಮೆಲ್ಲಗೆ ಹೊರಗೆ ಬಂದೆ. ನನ್ನನ್ನು ಕಂಡವರೇ ಎದ್ದು ಬಂದು, ಒಳಗೆ ಕರೆದುಕೊಂಡು ಹೋಗಿ ಕೂರಿಸಿದಿರಿ. "ಇದು ಮಾಲಕೌಂಸ್ ರಾಗ, ನಿಮ್ಮಲ್ಲಿ ಹಿಂದೋಳ ಅನ್ನಾರೆ–" ಕೆಲವೊಂದು ಪರಿಚಯ ಹೇಳಿದಿರಿ. "ನೀವೂ ಆಗಾಗ ಹಾಡುವುದನ್ನು ಕೇಳಿದೀನಿ, ನನಗೆ ಸಂತೋಷ" ಎನ್ನುವಾಗ ನನಗೆ ನಾಚಿಕೆ, ಜುಗುಪ್ಸ. ಅಜ್ಜಾ, ಅಲ್ಲಿಂದಿಲ್ಲಿಗೆ ನನ್ನ ಹಾಡನ್ನು (ಸ್ನಾನದ ಮನೆ ಸಂಗೀತ) ಮೆಚ್ಚಿದವರು ನೀವೊಬ್ಬರೇ ಇರಬೇಕು, ಅದಿರಲಿ, ಮಾತು ಮುಂದುವರಿಸಿದಿರಿ–"ನಿಮ್ಮ ಮೈಸೂರು ಮದ್ರಾಸ್ ಕಡೆಯಲ್ಲಿ ಹೆಣ್ಣು ಮಕ್ಕಳು ಚೆನ್ನಾಗಿ ಹಾಡ್ತಾರೆ, ಒಮ್ಮೆ ನಮ್ಮ ಸ್ನೇಹಿತರ ಮನೆ ಯಲ್ಲಿ ಉಳಿದಿದ್ದೆ. ಅವರು ನನಗಾಗಿ ಮಹಡಿ ಯಲ್ಲಿ ಸ್ಥಳ ಮಾಡಿದ್ದರು. ಸಂಜೆ ಬೇಗ ಮನೆಗೆ ಬಂದವನು, ಸದ್ದು ಮಾಡದಂತೆ ಮೇಲೆ ಹೋಗಿ ನನ್ನ ಕೆಲಸಮಾಡಿಕೊಂಡು ಕುಳಿತಿದ್ದೇನೆ. ಕೆಳಗೆ ಸ್ನೇಹಿತರ ಹೆಂಡತಿ ತಂಬೂರಿ ಮೀಟಿಕೊಂಡು ಹಾಡುತ್ತಿದ್ದಾರೆ. ಎಷ್ಟು ಚಂದವಾಗಿ ಹಾಡಿ ದರು, ಆ ಹೆಣ್ಣು ಮಗಳು, ಅನ್ನೀಲಿ, ನಾನಂತೂ ಕೆಲಸ ಬಿಟ್ಟು ಕೇಳುತ್ತಾ ಕುಳಿತೆ. ಕೆಳಗೇ ಹೋಗಿ ಕೇಳೋಣ ಎಂದು ಮನಸ್ಸು. ಆದರೆ, ಆಗ ಇದ್ದವರು, ಅವರೊಬ್ಬರೇ, ಸ್ನೇಹಿತರು ಬಂದಿರಲಿಲ್ಲ. ಅಲ್ಲದೆ, ನಾನು ಮನೆಗೆ ಬಂದಿರು ವುದೂ ಅವರಿಗೆ ಬಹುಶಃ ತಿಳಿದಿರಲಿಲ್ಲ, ಹಾಗೆಂದೇ ನಿರಾಳವಾಗಿ ಹಾಡುತ್ತಿದ್ದಳಾಕೆ. ಇನ್ನು ನಾನು ಕಾಣಿಸಿಕೊಂಡರೆ, ಇರುವುದು ಗೊತ್ತಾದರೆ, ಸಂಕೋಚಗೊಂಡು ಎಲ್ಲಿ ನಿಲ್ಲಿಸಿ ಬಿಡುವರೋ ಎನಿಸಿತು. ಆ ಹಾಡಿಕೆ ನನ್ನ ಮನಸ್ಸಿಗೆ ತುಂಬಾ ಹಿಡಿಸಿತು. ಸ್ನೇಹಿತರು ಬಂದು. ಅವರ ಮಾತೆಲ್ಲಾ ಆದ ಮೇಲೆ, ಕೆಳಗೆ ಹೋಗಿ ನನ್ನ ಮೆಚ್ಚುಗೆಯನ್ನು ತಿಳಿಸಿದೆ" ಹೂವಿನಂತಹ ಮನಸು– ಹೃದಯವಂತಿಕೆ, ಪಕ್ವ ಚೇತನ.

ಇಷ್ಟೆಲ್ಲಾ ನೆನಪು ಮಾಡಿಕೊಂಡಾಗ, ಇದರ ನಂತರದ ಎಷ್ಟೋ ಸಂಗತಿಗಳನ್ನು, ಮಾತು ಗಳನ್ನು ಮೆಲುಕು ಹಾಕಿದ ಮೇಲೆ, ಕೈಗೆ ಸಿಕ್ಕ ಮಾಣಿಕ್ಯವನ್ನು ಮೂರ್ಖನಂತೆ ಪಕ್ಕಕ್ಕಿಟ್ಟು, ಗಾಜಿನ ಹರಳನ್ನು ಜೋಪಾನ ಮಾಡಿದ ಮಂಕ ನಂತೆ, ಮಂಗನಂತೆ ನಾನು, ಎನಿಸುತ್ತದೆ. ನಿಮ್ಮ ಮನೆಯಲ್ಲಿ, ನಿಮ್ಮ ಆಶ್ರಯದಲ್ಲಿ ಮೂರು ನಾಲ್ಕು ತಿಂಗಳಿದ್ದವನು, ಉಳಿದ ಮೂರು ಅರ್ಧ ವರ್ಷಗಳೂ ಅಲ್ಲೇ ಇರದೆ ಹಾಸ್ಟೆಲಿಗೆ ಹೋಗಿದ್ದು ಮೂರ್ಖತನವಲ್ಲದೆ ಮತ್ತೇನು?

ತಪ್ಪಿದ್ದೇನೋ ಆಯಿತು. ಆದರೆ, ಆ ವರ್ಷ ಎರಡರಲ್ಲಿ, ಯಾವಾಗಲೂ ಅದರಲ್ಲೂ ಹಬ್ಬ ಹರಿದಿನದಂದು ನಿಮ್ಮಲ್ಲಿ ಒಂದು ನಮಸ್ಕಾರ ಮಾಡಿ ಆಶೀರ್ವಾದ ಪಡೆಯುವ ಹಂಬಲ. ಒಂದು ಯುಗಾದಿ, ಅಥವಾ ಅದರ ಮರು ದಿನವಿರಬೇಕು, ಸಂಜೆ ಸ್ನೇಹಿತರ ಜೊತೆ ನಿಮ್ಮಲ್ಲಿ ಬಂದೆ. ಎಂದಿನಂತೆ ವಿಶ್ವಾಸದಲ್ಲಿ ಮಾತನಾಡಿ ಸಿದಿರಿ. "ಬಹಳ ದಿನಗಳಿಂದ ಕೈಗೆ ಸಿಗದೆ ಜಾರುತ್ತಿದ್ದ metre– ಛಂದಸ್ಸು– ಇವತ್ತು ಬಂತು" ಎಂದು ಹೇಳಿ, ಆ ದಿನ ಹೊಸತಾಗಿ ಬರೆದ ಸಂಸ್ಕೃತ ಕವನವನ್ನೋ ಶ್ಲೋಕವನ್ನೋ ಅವರದ್ದೇ ಒಂದೋ. ಎರಡೋ ಪದ್ಯ ಓದಿದಿರಿ. ಸಂಸ್ಕೃತವೇ ಬಾರದ ಗೊಡ್ಡು ನಾನು, ಇನ್ನು ವ್ಯಾಕರಣ, ಛಂದಸ್ಸು (ಕನ್ನಡದಲ್ಲೂ ಅವರ ಪರಿ

ಚೆಯ ಸೊನ್ನೆಯೋ), ಎಲ್ಲಿ ತಿಳಿಯಬೇಕು? ಎರಡನೆಯ ಪದ್ಯ ಮುಗಿಯುವುದರೊಳಗೆ ನಿಮಗೆ ಅದರ ಅರಿವಾಗಿರಬೇಕು. ಓದು ನಿಲ್ಲಿಸಿ ಕೇಳಿದಿರಿ. "ಏಕೆ, ಸಂಸ್ಕೃತ ಬರುವುದಿಲ್ಲವೇ?" ಸಂಕೋಚದಿಂದ ಮುದುರಿ ಇಲ್ಲವೆಂದು ಹೇಳಿದೆ. ಒಂದು ನಿಮಿಷ ಏನೂ ಮಾತನಾಡಲಿಲ್ಲ. ಆದರೆ ಮುಖದಲ್ಲಿ ಹಾದು ಹೋದ ವಿಷಾದದ ಛಾಯೆ ಕಾಣಿಸಿದಂತಾಯಿತು. ಒಳಗೆ ಹೋಗಿ ಪುಸ್ತಕವಿಟ್ಟು ಬಂದಿರಿ. ನಿಮ್ಮದೇ ಆದ ಮೆದುತನದಲ್ಲಿ ಹೇಳಿದಿರಿ– "ಭಾರತೀಯನಾಗಿ, ಸಂಸ್ಕೃತ ಬರದಿದ್ದರೆ ಎಂತಹ ನಷ್ಟ. ನಮ್ಮ ಸಂಸ್ಕೃತಿ, ಜ್ಞಾನಕ್ಕೆ ಆ ಭಾಷೆ ಬೇಕು. ಅದರಲ್ಲೂ ಬ್ರಾಹ್ಮಣ, ಸಂಸ್ಕೃತ ಕಲಿಯದೆ ಇರಬಾರದು." ಅದರ ವಿಷಯ ಮತ್ತೇನೂ ಹೇಳದೆ, ಮಾತು ಬದಲಿಸಿದಿರಿ.

ಆಯಿತು, ಧಾರವಾಡ ಬಿಟ್ಟಮೇಲೆ ಇಂತಹ ಅಪೂರ್ವ ದರ್ಶನವೂ ಕಡಿಮೆಯಾಯಿತು. ಬಹುಶಃ ಊರು ಬಿಟ್ಟಾಗ ಪತ್ರ ಬರೆದಿದ್ದಷ್ಟೇ ಇರಬೇಕು. ಅಥವಾ ಅದನ್ನೂ ಬರೆಯಲಿಲ್ಲವೋ ಹೇಗೋ ಎಂಟು, ಒಂಭತ್ತು ವರ್ಷ ಸಂಪರ್ಕ ತಪ್ಪಿಹೋಯಿತು. ಅನಂತರ ಜೀವನದ ಮುಖ್ಯ ಘಟ್ಟ ಬಂದಾಗ ನಿಮ್ಮ ಪ್ರೀತಿಯ ಆಶೀರ್ವಾದಕ್ಕೆಂದು ಬರೆದೆ. ನನ್ನನ್ನು ಮರೆತಿರಬಹುದೆಂದು ಕೆಲವಾರು ಸಂಗತಿಗಳನ್ನೂ ನೆನಪಿಗಾಗಿ ಬರೆದೆ. ನಿಮಗೆ ನೆನಪು ಬರದಿದ್ದುದು ಸಹಜವೇ. ವರ್ಷದಲ್ಲಿ ಐದಾರು ವಿದ್ಯಾರ್ಥಿಗಳಂತೆ, ನಿಮ್ಮಲ್ಲಿ ಬಂದು ಹೋದ ಹಲವರಲ್ಲಿ ಕೆಲವು ತಿಂಗಳು ಮಾತ್ರ ಇದ್ದವನು ನಾನೊಬ್ಬ. ಆದರೆ ನಾನು ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ವಿದ್ಯಾರ್ಥಿ ಎಂದು ನನ್ನ ಪತ್ರದಿಂದಲೋ ಅಥವಾ ಸ್ನೇಹಿತರು ನನ್ನ ಪರವಾಗಿ ಕಳಿಸಿದ ಆಹ್ವಾನ ಪತ್ರಿಕೆಯಿಂದಲೋ ತಿಳಿದು, ನಡು ಮಧ್ಯಾಹ್ನದ ಬಿಸಿಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಹೋದಿರಂತೆ; ಸ್ನೇಹಿತರನ್ನು ಹುಡುಕಿ ಪರಿಚಯಮಾಡಿಸಿಕೊಂಡಿರಂತೆ. "ಇವರು ನನ್ನ ಮನೆಯಲ್ಲಿದ್ದವರು– ಎಂಟು ಒಂಭತ್ತು ವರ್ಷದ ಹಿಂದೆ. ಏನಾದರೂ ನೆನಪು ಬರಲಿಲ್ಲ. ಅವರು ಹೇಗಿದ್ದರು ಹೇಳಿ, ಅವರ ಚಿತ್ರ ನಿಮ್ಮಲ್ಲಿದೆಯೇ?" ಎಂದೆಲ್ಲಾ ಕೇಳಿದಿರಂತೆ. ಆ ವಾತ್ಸಲ್ಯದ ಬಲ ಎಷ್ಟು!

ಅಂತೂ ಅದಾದನಂತರ ನಾನು ಒಂದೆರಡು ಪತ್ರ ಬರೆದಿರಬೇಕು. ಹಸಿರಿನ ನೆನಪಾದರೂ ಉಳಿಯಿತು. ೭೧ರಲ್ಲಿ ಅನಿರೀಕ್ಷಿತವಾಗಿ ನಿಮ್ಮಲ್ಲಿ ಬರುವ ಸದವಕಾಶ ಸಿಕ್ಕಿತು. ಈ ಭೇಟಿ ಮಾತ್ರ ತುಂಬಾ ಆನಂದದಾಯಕವಾಗಿತ್ತು. ಬಾಗಿಲಿಗೆ ಬಂದಾಗ ನಾನಿರುತ್ತಿದ್ದ ಕೋಣೆಯಿಂದ ೫೦–೬೦ರ ಹರೆಯದ ಹಿರಿಯರು ಬಂದರು. ನೀವು ಮುಂದೆಯೇ ಗಿಡಗಳ ಕೆಲಸದಲ್ಲಿರಬೇಕೆಂದರು. ಹೊರಗೆ ಬಂದರೆ, ಗಿಡದ ಪಾತಿ ಮಾಡುತ್ತಾ ಕುಳಿತಿದ್ದಿರಿ. ಅದು ನೀವೇ? ಎಂದು ಶಂಕೆಪಡುವಷ್ಟರ ಮಟ್ಟಿಗೆ, ವಯೋಗುಣಕ್ಕನುಗುಣವಾಗಿ ಕೃಶವಾಗಿದ್ದಿರಿ. ದುಂಡು ಮುಖ ಈಗ ಬತ್ತಿತ್ತು, ಚರ್ಮ ಅಲ್ಲಲ್ಲಿ ಸುಕ್ಕುಗಟ್ಟಿತ್ತು. ಬಟ್ಟತಲೆಗೆ ಉಣ್ಣೆಯ ಟೋಪಿ ಏರಿತ್ತು. "ಅಜ್ಜಾ, ನಾನು ಬಂದಿದ್ದೇನೆ" ಎಂದಾಗ, ಯಾರು? ಎಂದು ಕೇಳುತ್ತಾ ಎದ್ದಿರಿ. ಮುಖದ ಹತ್ತಿರ ಬಂದು ಕಣ್ಣರಳಿಸಿ ನೋಡಿದಿರಿ. "ನೋಡಿ, ನೀವಿದ್ದದ್ದೇ ನೆನಪಾಗುತ್ತಿಲ್ಲ. ಆದರೇನು, ನೀವು ಬಂದದ್ದು ಸಂತೋಷ." ಅದು ಮಾತಿನಲ್ಲಿ ಮಾತ್ರವಲ್ಲ: ಹೃದಯದಲ್ಲಿ ಮೂಡಿದ್ದು ಮುಖಕ್ಕೆ ಚಿಮ್ಮಿ ಬಾಯಲ್ಲಿ ಬಂದಿತು ಎನಿಸಿತು. ಕೈ ತೊಳೆಯಲೂ ಸಡಗರವೇ– "ಬನ್ನಿ, ಬನ್ನಿ, ಒಳಗೆ ಕುಳಿತುಕೊಳ್ಳೋಣ, ಬಹಳ ವರ್ಷವಾಯಿತು, ಬಹಳ ಮಾಡನಾಡಬೇಕು" ಎಂದು ಒಳಗೆ ಕರೆದು, ಪಕ್ಕದಲ್ಲೇ ಕೂಡಿಸಿಕೊಂಡಿರಿ. ಮಗಳಿರಬೇಕು, ಅವರನ್ನು ಕರೆದು, "ನನ್ನ ಕಿರಿಯ ಸ್ನೇಹಿತರು ಬಂದಿದ್ದಾರೆ. ಅವರ, ಜೊತೆ ನಾನು ಚಹಾ ಕುಡಿಯಬೇಕು. ಒಳ್ಳೆ ಚಹಾ ತಾ," ಎಂದಿರಿ.

ನಾನು ಬಂದಾಗ ೪.೩೦–೫ ಗಂಟೆಯಿರಬಹುದು. ಹೊರಟಾಗ ೭.೩೦–೮ ಆದರೂ ಆಗಿರಬೇಕು. ಅಂತೂ ಎರಡು ಮೂರು ಗಂಟೆಯೂ ಬಹುಪಾಲು ನಿಮ್ಮದೇ ಮಾತು, ಮಧ್ಯೆ ಎಲ್ಲಾದರೂ ಒಂದು ನನ್ನ ಮಾತು, ಸ್ನೇಹಿತರದಂತೂ ಪೂರ್ಣ ಮೌನ. "ಬೆಳಗಿನಿಂದ ಮನಸ್ಸಿಗೆ ಏನೋ ಉಲ್ಲಾಸ. ಕಾರಣ

ತಿಳಿಯುದಲ್ಲಾ ಅಂದುಕೊಳ್ಳುತ್ತಿದ್ದೆ. ಈಗ ಗೊತ್ತಾಯಿತು, ನೀವು ಬರುತ್ತೀರೆಂದೇ ನನ್ನ ಮನಸ್ಸಿಗೆ ಉಲ್ಲಾಸವಾಗಿರಬೇಕು. ಹೀಗೇ ಹಿಂದೊಮ್ಮೆ ಆಗಿತ್ತು. ಆಗೆಲ್ಲಾ ಮನಸ್ಸಿಗೆ ಬಹಳ ಬೇಸರ, ಶಾಂತಿಯೇ ಇರಲಿಲ್ಲ. ಒಂದು ದಿನ ಮಾತ್ರ ಮನಸ್ಸಿಗೆ ಇಷ್ಟೇ ಹರ್ಷವಾಯಿತು; ದಿನ-ವೆಲ್ಲಾ. ಆದರೂ ಕಾರಣ ಹೊಳೆಯಲಿಲ್ಲ. ರಾತ್ರಿಗೋ, ಬೆಳಿಗ್ಗೆಯೋ ದೂರದ ಗುಲ್ಬರ್ಗದಿಂದ ಮಗುವಿನ ಜನನದ ಟೆಲಿಗ್ರಾಂ ಬಂತು. ಮೊದಲ ಬಾರಿಗೆ ಹರ್ಷವನ್ನು ತಂದು ಕೊಟ್ಟನಲ್ಲ ಅಂತ ಈ ಮೊಮ್ಮಗನನ್ನು ನೋಡಲು ಹೋಗಿದ್ದೆ."– ಆ ಪ್ರಸಂಗವೇನೋ



"ಮಗಳಿಗೆ, 'ವರ ಬೇಕಾಗಿದೆ' ಅಂತ ಪೇಪರ್‌ನಲ್ಲಿ ಜಾಹಿರಾತು ಹಾಕಿ ನೋಡುಬಿಟ್ಟು ಹೋಯಿಸ್ರೆ......"

ಸರಿ, ಆದರೆ ನಾನೆಷ್ಟರವನು? ಚಪಲದಿಂದ ಹಲವು ಹತ್ತು ಕಡೆ ಹರಿದು ಓಡುವ ಮನಸ್ಸಿನ ನನಗೆ ಹೇಗೆ ಅನಿಸಿತೋ, ಆದರೆ ನೀವು ನನ್ನನ್ನು ಕಂಡು ಅನುಭವಿಸಿದ ವಾತ್ಸಲ್ಯ ಪೂರಿತ ಸಂತೋಷ, ಅಭಿವ್ಯಕ್ತವಾದ ಮನಸ್ಸಿನ ಸಮಾಧಾನ ಇಂದಿಗೂ ನನಗೆ ಮಹತ್ವದ ಆಸ್ತಿ. ಆ ದಿನ ಎರಡು ಮೂರು ಬಾರಿಯಾದರೂ ಈ ಸಂತೋಷವನ್ನು ಬಿಚ್ಚು ಮನಸ್ಸಿನಿಂದ, ತುಂಬಿದ ಬಾಯಿಂದ ಹೇಳಿದಿರಿ.

ಮಾತಿನ ಮಧ್ಯೆ ರಾಮಗೋಪಾಲ್ ಎಂದು ಕರೆದಿರಿ. 'ಅಲ್ಲ, ನನ್ನ ಹೆಸರು...'ಎಂದು ಸರಿಪಡಿಸುವಷ್ಟರಲ್ಲಿ, "ಆಗಲಿ ಬಿಡಿ, ನಿಮ್ಮ ಹೆಸರಿನ ಒಂದಂಶ ಹೇಗೂ ಕೃಷ್ಣ ಗೋಪಾಲನೇ ತಾನೇ" ಎಂದು ಒಟ್ಟಿನಲ್ಲಿ ಮಾತು ಬದಲಿಸಲಾರದಂತೆ ಉದ್ದಕ್ಕೂ ಮಾತನಾಡಿದಿರಿ. ನನಗೋ ನೀವೆಲ್ಲಿ ಬಳಲುವಿರೋ, ನನ್ನಿಂದೆಲ್ಲಿ ತೊಂದರೆಯಾದೀತೋ ಎಂದು ಶಂಕೆ. ನನ್ನ ಸ್ವಂತ ಅಜ್ಜ ಇದ್ದಾಗ ಅವರು ನಮ್ಮಲ್ಲಿ ಬಂದಾಗ ನಾವಿಬ್ಬರೂ ಹೀಗೇ ಹರಟೆ ಹೊಡೆಯುವುದು, ರಾತ್ರಿ ೯–೧೦ಕ್ಕೆ ಶುರುವಾದದ್ದು ಒಂದು ಘಂಟೆಯಾದರೂ ಮುಗಿಯುವುದಿಲ್ಲ. ಅಮ್ಮ ಬಂದು ಎಚ್ಚರಿಸಬೇಕು, ಅವರಿಗೆ ನಿದ್ರೆ ಕಡಿಮೆಯಾದರೆ ತೊಂದರೆಯಾಗುತ್ತೆ, ಅಂತ. ಆಗ ಅವರು ನನ್ನ ಪರವಾಗಿ, "ಇರಲಿ ಬಿಡಮ್ಮ, ಏನೋ ಚೆನ್ನಾಗಿದೆ, ಇನ್ನು ನಾಳೆ ನಾಡದು ಊರಿಗೆ ಹೊರಟೆ, ಇನ್ನೆಲ್ಲಿ ಮಾತು," ಎನ್ನುವರು. ನಿಮ್ಮೊಡನೆ ಮಾತಾಡುವಾಗ ಅವರದೇ ನೆನಪು. ಅಂತೂ ಮಾತನಾಡಿ, ಆಡಿ, ಮೊದಲೇ ಮೆದುವಾದ ಧ್ವನಿ, ಇನ್ನೂ ಮೆತ್ತಗಾಯಿತು – ಗಂಟಲು ಒಡೆದಿದೆ, ಬಳಲಿದೆ ಎಂದು ತೀರಾ ಗೊತ್ತಾಗುವಷ್ಟು. "ಅಜ್ಜಾ, ಶ್ರಮವಾಗಿರಬೇಕು, ನಿಮಗೆ ನಾನು ಕುಳಿತಷ್ಟೂ ನೀವು ಮಾತನಾಡುತ್ತೀರಿ. ಬಳಲುತ್ತೀರಿ, ಇಗೋ ಹೊರಟೆ, ನೀವು ಅಪ್ಪಣೆ ಕೊಟ್ಟರೆ" ಎಂದೆ. "ಹಾಗೇನಿಲ್ಲ– ನೀವು ಬಂದಾಗ ಎಷ್ಟೊಂದಿದೆ ಮಾತನಾಡಲು, ಇನ್ನಷ್ಟು ಮಾತಾಡೋಣ, ಕೂಡಿ" ಎಂದಿರಿ. ಆಡಿದ್ದು ಎಷ್ಟೆಷ್ಟೋ. ಆದರೆ ನೆನಪಿಗೆ ಉಳಿದದ್ದು ಕೆಲವೇ – ನನ್ನ ಸ್ವಾರ್ಥ

ಒಣ ಜಂಭಕ್ಕೆ ಸಿಗುವಷ್ಟು, ಪೋಷಕವಾದಷ್ಟು ಮಾತ್ರ .

ಅದರಲ್ಲಿ ಒಂದೆರಡನ್ನು ನೆನಪು ಮಾಡಿಕೊಂಡು ಪತ್ರ ಮುಗಿಸುತ್ತೇನೆ. ಮಾತಿನ ಮಧ್ಯದಲ್ಲಿ ನನ್ನ ಪರಿಚಯಕ್ಕಾಗಿ ನೀವು ವಿಶ್ವವಿದ್ಯಾಲಯಕ್ಕೆ ಹೋದುದನ್ನು ಸ್ನೇಹಿತರು ಹೇಳಿದರು. "ನೀವು ಪತ್ರ ಬರೆದಿರಿ, ಎಷ್ಟಾದರೂ ನಿಮ್ಮ ನೆನಪಾಗಲೊಲ್ಲದು. ಆದರೆ ಪತ್ರದ ಆತ್ಮೀಯತೆ ನನಗೆ ಬಹಳವಾಗಿ ಸೇರಿತು, ಓದುತ್ತಾ ಕಣ್ಣಲ್ಲಿ ಹಾಗೇ ನೀರು ಬಂತು. ಆಗ ನನ್ನೊಡನೆ ಸ್ನೇಹಿತರೊಬ್ಬರು ಕುಳಿತಿದ್ದರು, 'ಯಾಕೆ, ಪತ್ರದಲ್ಲಿ ವಿಶೇಷ ಏನು' ಎಂದು ಕೇಳಿದರು. ಇದು ಕಿರಿಯ ಸ್ನೇಹಿತರ ಪತ್ರ. ಆತ್ಮೀಯವಾಗಿ ಕಂಡಿತು ಎಂದೆ. 'ನಾನು ನೋಡಬಹುದೇ' ಎಂದು ಅವರು ಕೇಳಿ ತೆಗೆದುಕೊಂಡರು. ಓದಿದವರೇ 'ಇದನ್ನು ನಾನೇ ಇಟ್ಟುಕೊಳ್ಳುತ್ತೇನೆ — ನೀವು ಒಪ್ಪಿದರೆ' ಎಂದು. ಹೇಗೆ ಬೇಡ ಎನ್ನಲಿ ? ಅಂತೂ ನೋಡಿ, ಆ ಪತ್ರವೂ ನನ್ನಲ್ಲಿ ಉಳಿಯಲಿಲ್ಲ." ಪತ್ರದ ಗುಣ(?) ನನಗೆ ಗೊತ್ತಿದ್ದರೂ ಅದು ನಿಮ್ಮ ಹೃದಯ ಮುಟ್ಟಿತೆಂಬುದರಿಂದ ನನಗಂತೂ ಧನ್ಯತೆಯ ಭಾವನೆ ಬಂತು. ಪುರುಷಮಣಿ ಕಬ್ಬಿಣವನ್ನು ಚಿನ್ನ ಮಾಡುತ್ತದಂತೆ. ಆದರೆ ನೀವು ಕೇವಲ ಕಾಗದದ ಚೂರಿಗೆ ಚಿನ್ನದ ಮೆರುಗು, ಹೂವಿನ ಕಂಪು ಕೊಟ್ಟಿರಿ, ಅಜ್ಜಾ, ಇದಕ್ಕಿಂತ ಇನ್ನೇನು ಬೇಕು?

ಜೀವನದುದ್ದಕ್ಕೂ ಕಹಿಯನ್ನುಂಡು, ಜೀವನವೆಂದರೆ ಇಷ್ಟೇ ಎಂಬ ಕೊರಗು, ಕುಗ್ಗು ಬಂದದ್ದು, ಆ ಹೊತ್ತಿನಲ್ಲಿ ಪೂಜ್ಯ ಮಾಸ್ತಿಯವರು 'ನಾವು ಎಷ್ಟೇ ಕೆಳಗೆ ಜಾರಿದರೂ, ಅದರ ಕೆಳಗೆ ಅವನ ಅಮೃತ ಹಸ್ತದ ಆಸರೆ ಎಂದಿಗೂ ಇರುತ್ತದೆ' ಎಂದು ಸಮಾಧಾನ ಹೇಳಿದ್ದು ನಿಮಗೆ ಅದು ಮನಸ್ಸಿಗೆ ಬಂದು, ಅಲ್ಲಿಂದ ಮುಂದೆ ಕ್ರಮ ಮೇಲ್ಮುಖನಾದ ಮನಸ್ಸಿಗೆ ನಿಮ್ಮ ಮೊಮ್ಮಗನ ಮಗು (ಸರಿ ತಾನೇ) ಜನನವಾದ ದಿನ ಸಿಕ್ಕ ಸಮಾಧಾನದ ವೇಳೆ, ಇದನ್ನೆಲ್ಲಾ ವಿವರವಾಗಿ ಹೇಳಿದಿರಿ. ಇದು ಕೇವಲ ಒಂದು ಪ್ರಸಂಗವಲ್ಲ. ಜೀವನದ ಜಂಜಾಟ, ಕಹಿಗಳ ಅಟ್ಟಹಾಸದ ಅಲೆ ಸುಳಿಗಳ ವಿರುದ್ಧ ಹೋರಾಡಿ, ಈಸಿ ಅದನ್ನು ಗೆದ್ದು, ಸಮತ್ವವನ್ನು ಸಾಧಿಸಿದ ಹಿರಿಯ ಚೇತನದ ಮನಸ್ಸಿನ ಚರಿತ್ರೆ. ಎಂತಹ ದುರ್ಧರವಾದ ಶೋಕದ ಪ್ರಚಂಡ ಅಲೆಯು ಮೇಲೆರಗಿದ್ದರೂ ಅದನ್ನೆಲ್ಲಾ ನುಂಗಿ ಸಮತೆಯನ್ನು ಕಾಯ್ದುಕೊಂಡು, ಸಂಯಮವನ್ನು ಕಳೆದುಕೊಳ್ಳದ ಮಹರ್ಷಿ ವಸಿಷ್ಠರಂತೆ. ಹೀಗೆ ಅವಿರತ ಹೋರಾಟ. ಪ್ರಯತ್ನದಿಂದ ಗಳಿಸಿದ ಸುಲಭಸಾಧ್ಯವಲ್ಲದ ಶಾಂತಿಯ ಅಭಿವ್ಯಕ್ತತೆ; ಇದೇ ವ್ಯಕ್ತಿತ್ವದ ನರನರಗಳಲ್ಲೂ ಹರಿಯುವ ಮಾರ್ದವತೆ— ಇವುಗಳಿಂದಾಗಿ ವ್ಯಕ್ತಿತ್ವಕ್ಕೆ ಒದಗಿದ ಮೆರಗು ಮುತ್ತಿನ ಮಂದಹಾಸದ ಪ್ರಕಾಶ, ಕೋಮಲತೆ, ಹೂವಿನಂಥ ವಿಕಸನ ಒಟ್ಟಿನಲ್ಲಿ ಋಷಿಗಳ ವ್ಯಕ್ತಿತ್ವ. ಗೊನೆಯಲ್ಲೆ ನಿಂತು ಎಲ್ಲ ಹುಳಿಯನ್ನೂ ಮುರಿದು, ಪೂರ್ಣವಾಗಿ ಪಕ್ವವಾಗಿ ಜೇನಿನ ಮಧುರತೆಯನ್ನು ಗಳಿಸಿದ ಹಣ್ಣಿನಂತೆ.

ಇಂತಹ ಸಜ್ಜನ ಸಂಗದ ಹೆಜ್ಜೇನು ಸವಿಯಲೂ ಭಾಗ್ಯ ಬೇಕಲ್ಲವೇ! ಆದರೆ ಅದನ್ನು ಕಾಣಲು, ಸ್ವಲ್ಪವಾದರೂ ರುಚಿ ನೋಡಲು ಸಿಕ್ಕಿದುದಷ್ಟೇ ನನ್ನ ಪುಣ್ಯ. ಎರಡು ಮೂರು ವರ್ಷಗಳಲ್ಲಿ, (ಕಸ್ತೂರಿ ಅಕ್ಟೋಬರ್ ೭೬), ಇತರ ಒಂದೆರಡು ಪತ್ರಿಕೆಗಳಲ್ಲಿ ನಿಮ್ಮ ಪರಿಚಯದ ಲೇಖನಗಳು ಬಂದವು. ಅವುಗಳಲ್ಲಿ ಎರಡಾದರೂ ಮುಖ್ಯ ಅಂಶ ಬಿಟ್ಟು ಹೋಯಿತೇನೋ ಎನಿಸಿತು. ಒಂದು, ನೀವು ಸಾಧಿಸಿದ ಶಾಂತಿ, ಎರಡು ನಿಮ್ಮ ವ್ಯಕ್ತಿತ್ವದ ಕೋಮಲತೆ— ಸಾಯಂಕಾಲೇವನಾಂತೇ ಕುಸುಮಿತ ಸಮಯೇ ಸುಳಿದಾಡುವ ಮಂದಮಾರುತದಂತಹ ದಿವ್ಯ ಚೇತನ.

ವ್ಯಕ್ತಿತ್ವದ ವಿಷಯವೇನೋ ಒಂದು ಕ್ರಮದಲ್ಲಿ ಬಂದಿದೆ. ಆದರೆ ಇದರ ಬಗ್ಗೆ ಎಷ್ಟು ಹೇಳಿದರೂ ಸ್ವಲ್ಪವೇ ಎಂಬ ಭಾವವೆ ನನಗೆ. ಒಂದು ದೃಷ್ಟಿಯಲ್ಲಿ ನಿಮ್ಮ ಶಾಂತಿ ವಿಜಯ. ದುಃಖದ ಹುಳಿ ಮುರಿದು ಮಧುರತೆಯನ್ನು ಊಡಿಸಿಕೊಂಡದ್ದನ್ನು ಯಾರೂ ಬರೆಯದುದು ನನಗೆ ಸಮಾಧಾನ (ಇದಕ್ಕೇ ನಮ್ಮನ್ನು ಸಣ್ಣವ

ರೆನ್ನುವುದು!). ಏಕೆಂದರೆ ನೀವು ಹೇಳಿದಾಗಿನಿಂದ ಇದು ನನಗೆ ಪವಿತ್ರ ಮಂತ್ರಾಕ್ಷತೆಯಾಗಿದೆ. ಅದನ್ನು ಮನಸ್ಸಿನ ಹಾಳೆಯಲ್ಲಿ ಜೋಪಾನವಾಗಿಟ್ಟು ನನ್ನದೇ ಎಂಬಂತೆ ಕಾದಿದ್ದೇನೆ. ಹಾಗೆ ಯಾರಿಗಾದರೂ ಹೇಳುವುದಾದರೂ, ಅದು ನನ್ನದೇ ಒಡವೆ ಎಂಬ ಬಾಲಿಶ ಮೌಢ್ಯ: ಏನೋ ಒಂದು ಸಂತೃಪ್ತಿ. ಶ್ರೀ ತ್ಯಾಗರಾಜರ ತಂಬೂರಿಯನ್ನೋ ಶ್ರೀ ತುಕಾರಾಮರ ತಾಳವನ್ನೋ ತೋರಿಸಿ, ಒಮ್ಮೆ ನವಿರಾಗಿ ಸವರಿ, ಅಷ್ಟೇ ಶೀಘ್ರವಾಗಿ ಅದನ್ನು ಒಳಗಿಟ್ಟು ಭದ್ರಪಡಿಸಿ ಬೀಗುವ ರಕ್ಷಕನಂತೆ!

ಪ್ರಚಾರದ ಪ್ರಖರವಾಗಲಿ ಪ್ರಶಂಸೆಯ ಪರಿವಾರವಾಗಲಿ ಅದರಿಂದ ದೂರದಲ್ಲಿ ಎಲೆಮರೆಯ ಹಣ್ಣಿನಂತೆ ಇದ್ದುದು ಮತ್ತೊಂದು ಮುಖ್ಯ ಅಂಶ. ಕಳಿತ ಹಣ್ಣು ಗೊನೆಯಿಂದ ಶ್ರಮವಿಲ್ಲದೆ ಸದ್ದಿಲ್ಲದೆ ಜಾರುವಂತೆ. ನೀವು ಕೂಡ ನಿಮ್ಮದೇ ಆದ ರೀತಿಯಲ್ಲಿ ಸದ್ದಿಲ್ಲದಂತೆ ಮರಳಿಬಾರದ ಲೋಕಕ್ಕೆ ಏರಿದಿರಿ. ಆಗ ದೇಶದಲ್ಲೆಲ್ಲಾ ಚಿಕ್ಕಮಗಳೂರಿನ ಚುನಾವಣೆಯ ಶುಷ್ಕ ಗದ್ದಲ, ಅರ್ಥವಿಲ್ಲದ ಗೊಂದಲ. ಎಲ್ಲರ ಗಮನವೂ ಮನಸ್ಸೂ ಪ್ರಯತ್ನವೂ ಹೀಗೆ ಬೇರೆಡೆಯಿದ್ದಾಗ, ನಿಮ್ಮ ಸ್ವರ್ಗಾರೋಹಣದ ವಿಷಯ ಮುಖಪುಟದಲ್ಲಿ ಬಂದದ್ದಾದರೂ ಎಷ್ಟು ಜನರಿಗೆ ತಟ್ಟಿತೋ! 'ತ್ರ್ಯಂಬಕಂ ಯಜಾಮಹೇ' ಮಂತ್ರದಲ್ಲಿ ಹೇಳಿದಂತೆ ಪರಮಾತ್ಮನನ್ನು ಸಾಧಿಸಿದಿರಿ.

ಹಿಂದೆಲ್ಲಾ ನಿಮ್ಮನ್ನು ನೋಡುವ, ಮಾತನಾಡಿಸುವ ಮನಸ್ಸಾದರೂ, ಅವಕಾಶವಾಗಲಿಲ್ಲ ಈಗಿನ್ನೇನು! ಆದರೆ ಏನೋ ಬರೆದು, ಗೀಚಿ ನಿಮಗೆ ಓದಿ ಹೇಳುವ ಮತ್ತೊಬ್ಬರಿಗೂ. ಓದಿಸಿಕೊಳುವ ನಿಮಗೂ ಎಲ್ಲಿ ಬೇಸರವನ್ನುಂಟು ಮಾಡುವೆನೋ ಎಂಬ ಸಂಕೋಚದಿಂದ ಹಿಂಜರಿಯುವಂತಾಗುತ್ತಿತ್ತು. ಹೇಗೆ ಬರೆದರೂ ನಿಮ್ಮ ವಾತ್ಸಲ್ಯದ ಝರಿಯಲ್ಲಿ ಅದರ ಧೂಳು. ಮನಸ್ಸಿನ ಸುಕ್ಕು ತೊಳೆದು ಹೋಗುವ ಭರವಸೆಯೇನೋ ಇತ್ತು. ಆದರೆ ನಿಮಗೆ ಓದಿಸಿ ಹೇಳುವವರಿಗೆ ಬೇಸರವಾಗಬಾರದಲ್ಲ ಈಗ ನಿಮಗೆ ಓದಿ ಹೇಳುವವರಾರು? ನೀವು ಓದಿಸಿ ಕೇಳುವುದಾದರೂ ಹೇಗೆ? ಹಾಗೂ, ಈ ಪತ್ರದಿಂದೇನು ? ಆದರೆ ಪೂಜ್ಯ ಅಜ್ಜಾ, ನೀವಿರುವ ಪುಣ್ಯಲೋಕದಿಂದಲೇ, ನಿಮ್ಮ ಎಂದಿನ ವಾತ್ಸಲ್ಯದಿಂದ, ಪ್ರೀತಿಯಿಂದ, ನಮ್ಮ ಶ್ರೇಯಸ್ಸನ್ನು ಹರಸಿ, ಬಾಳು ಹಸನಾಗಲೆಂದು ಅನುಗ್ರಹಿಸುವಿರೆಂದು ನನಗೆ ನಂಬಿಕೆ ಇದೆ. ಶಿವಂ, ಶುಭಂ, ಮಂಗಳಂ.

ಇಂತು ಸಾಷ್ಟಾಂಗ ನಮಸ್ಕಾರಗಳು,
ನಿಮ್ಮ ಪ್ರೀತಿಯ ಕಿರಿಯಬಂಧು.

"ಐನ್‌ಸ್ಟೈನನ ಸಿದ್ಧಾಂತದ ಪ್ರಕಾರ ಒಂದು ಕ್ಷಣಕ್ಕೂ ಅನಂತಕಾಲಕ್ಕೂ ಇರುವ ಸಂಬಂಧವನ್ನು ವಿವರಿಸುತ್ತೀರಾ?" ಎಂದು ಒಬ್ಬಾತ ವಿಜ್ಞಾನಿಯೊಬ್ಬನನ್ನು ಪ್ರಶ್ನಿಸಿದಾಗ ಆ ವಿಜ್ಞಾನಿ, "ಸ್ವಾಮಿ, ಆ ಸಿದ್ಧಾಂತದ ಪ್ರಕಾರ ಒಂದು ಕ್ಷಣ ಅಂದರೆ ಏನು ಎಂಬುದನ್ನು ವಿವರಿಸಿದ್ದರೆ ನೀವು ಆ ಬಗ್ಗೆ ಅನಂತಕಾಲದ ವರೆಗೂ ಕೇಳಬೇಕಾಗುತ್ತದೆ," ಎಂದು ಉತ್ತರಿಸಿದರಂತೆ.

* * *

ಎಲ್ಲ ಮಹಿಳಾಮಣಿಗಳೂ ಸುಂದರಿಯರೇ ಆಗಿರುತ್ತಾರೆ; ಆದರೆ ಅವರು ಎಲ್ಲ ಪುರುಷಶಿಖಾಮಣಿಗಳೂ ಹಾಗೆ ಕಾಣುವದಿಲ್ಲವಷ್ಟೆ. — 'ಸ್ಲವೃಹಾ'ದಿಂದ

ಒಂದಾನೆಯಿತ್ತು

ಶಶಿಧರ ವಿಶ್ವಾಮಿತ್ರ

ಆನೆಗಳಿವೆ ಎಂದು ಹೆಸರಾದ ಕಾಡಿನಲ್ಲಿ ಗಜ ಗಣವೊಂದು ವಾಸವಾಗಿತ್ತು. ಆ ಗಣದಲ್ಲಿ ಗಣದೊಡೆಯನಾಗಿರದಿದ್ದರೂ ಒಡೆಯನಷ್ಟೇ ದಷ್ಟಪುಷ್ಟವಾದ ಆನೆಯೊಂದಿತ್ತು.

ಈ ಆನೆ ಗಣದ ಎಲ್ಲ ಆನೆಗಳಂತೆ ಕಾಡಿನಲ್ಲೇ ಜನಿಸಿ ತಾಯ ಆರೈಕೆಯಲ್ಲಿ ಬಾಲ್ಯ ಕಳೆದಿತ್ತು. ತಾಯ ಆರಕೆ ಬಿಟ್ಟಾಗ ಸ್ನೇಹಿತರ ಪಟಾಲಂ ಕಟ್ಟಿಕೊಂಡು ಕಾಡಿನಂಕಣದಲ್ಲಿ ಹುಡುಗಾಟದ ಗುಡುಗಾಡಿತ್ತು. ಯೌವನ ತನ್ನ ಅಹಮಹಮಿಕೆಯನ್ನು ತಲೆಯಲ್ಲಿ ಹೂಗಿಸಿದಾಗ ಒಂದು ಕಣ್ಣನ್ನು ಅಂಕೆಯ ಆಕರವಾದ ಗಣದೊಡೆಯ, ಹಿರಿಯರತ್ತ ಮತ್ತೊಂದು ಕಣ್ಣನ್ನು ಅಂಗಾಂಗಗಳಲ್ಲಿ ಬಿನಪು ಚೆಲ್ಲಿಸೂಸುವ ಅಂಗನೆಯತ್ತ ಹಾಯಿಸುತ್ತ ಸುಂದರ ಕನಸುಗಳನ್ನು ಹೆಣೆಯುತ್ತಿತ್ತು. ಓಹ್! ತನ್ನದೀ ಕಾಡು. ತಾನೀ ಒಡ್ಡೋಲಗದ ಇಂದ್ರ. ಈ ಗಣ ತನ್ನಂಕೆಗೆ ಕಾದು ನಿಂತ ಇಷ್ಟ ವೃಂದ. ಗಣಾಂಗನೆಯರು ತನ್ನ ಅಪ್ಸರೆಯರು. ಆಹಾ, ಇದೀಗ ಜೀವನ, ತನಗಿನ್ನೇನು ಬೇಕು?!

ಕನಸು ನನಸಾಗುವಂಥ ಅಪರೂಪದ ಒಮ್ಮೊಮ್ಮೆ ಗಣದೊಡೆಯನ, ಹಿರಿಯರ ಅಸ್ತು ಇದೆ ಎಂದ ಕ್ಷಣ ಇಷ್ಟಾಂಗನೆಯನ್ನು ಗಣದಿಂದ ದೂರದೇಶಾಂತಕ್ಕೆ ಕೊಂಡೊಯ್ದು ಕ್ರೀಡಿಸುತ್ತಿತ್ತು. ಗಣದೊಡೆಯ ಇಲ್ಲ ಹಿರಿಯರ ಹೊರತು ತನ್ನ ಇಂಥ ಕಾಂತಾರದೇಶಾಂತಕ್ಕೆ ಅಡ್ಡ ಬರುವ ಸಂಗಾತಿ ಪ್ರತಿಕಾಮಿ ಯಾರೇ ಆಗಲಿ, ಕಾಡೇ ಘಡ್ಡಘಡಲ್ಲೆನ್ನುವಂತೆ ಹಣೆಗೆ ಹಣೆ ಘಟ್ಟಿಸಿ ಎದೆ ಝಲ್ಲೆನ್ನುವಂತೆ ಕೊಂಬು ಮಸೆದು ಮೈ ತೂತಾಗಿ ಮನ ಬೆದರುವವರೆಗೂ ಸೊಕ್ಕಿನ ಕಾಳಗ ಕೊಡುತ್ತಿತ್ತು. ಕಾಳಗದಲ್ಲಿ ಪ್ರತಿಕಾಮಿ ಸೋತು ಓಡಿದರಷ್ಟೂ ಸರಿಯೇ, ಕಾಂತೆಯೊಡನಿನ ಒಡನಾಟ ಆಹಾ, ಎಂಥ ಕಾಳಗವನ್ನೂ ಮರೆಯಿಸುವಂಥಾದ್ದು. ಜೊತೆಗೆ ಕಾಳಗದಲ್ಲಿ ಗೆದ್ದ ಗಂಡೆದೆಯ ಹೆಮ್ಮೆ. ಅಮಲಿನೋಕುಳಿಯೇ ಎಲ್ಲೆಲ್ಲೂ ಚೆಲ್ಲಿ ಸೂಸುತ್ತಿತ್ತು.

ಎಲ್ಲ ಸಮಯದಲ್ಲೂ ಕಾಳಗದಲ್ಲಿ ಗೆಲ್ಲಲೂ ಸಾಧ್ಯವಾಗುವುದಿಲ್ಲ. ದುರ್ವಿಧಿಯಿಂದ ಪ್ರತಿಕಾಮಿ ಬಲಿಷ್ಠನಾಗಿ ಮೈ ಅತಿಯಾಗಿ ತೂತಾಗಿ ಮನ ಬೆದರಿ ಕಾಳಗದಿಂದ ಹಿಮ್ಮೆಟ್ಟದಿದ್ದರೆ ಸಾವೇ ಗತಿ ಎಂಬ ಭಯ ಉಂಟಾದಾಗ ಆನೆ ಕಾಳಗದ ಕಣ ಬಿಟ್ಟು ಹಳು ನುಗ್ಗಿ ಪಲಾಯನ ಮಾಡಿ ಬಿಡುತ್ತಿತ್ತು. ಹೆಣ್ಣು ಕೈತಪ್ಪಿ ಮೈ ತೂತಾಗಿ ಕಾಳಗದಲ್ಲಿ ಸೋಲಾದಂಥ ಅಪಮಾನವನ್ನು ಮರೆಯಲು ಆನೆ ಗಣ ಬಿಟ್ಟು ದೂರ ಹೋಗಿ ಕಾಡಿನೆಡೆಯಲ್ಲಿ ಮೈಯನ್ನು ಹೊಗಿಸಿ ಮೌನವಾಗಿದ್ದು ಬಿಡುತ್ತಿತ್ತು. ಕಾಲನ ಲೇಪ ಮೈಯ ಮನದ ಘಾಯಗಳನ್ನು ಮಾಯಿಸಲು ಆನೆ ಗಣವನ್ನು ಸೇರಲು ತವಕಿಸುತ್ತಿತ್ತು. ಆಗ ಆನೆ ಸೌಮ್ಯದ ಮೂರ್ತಿಯಾಗಿ ಗಣದ ಬಳಿಸಾರಿ ದೂರ



ನಿಂತು ನಾನು ಗಣದೊಳಗೆ ಸೇರಲೇ ಎಂಬ ಸಂಜ್ಞೆಯನ್ನು ಮೈಯಿಂದಲೇ ಹೊರಡಿಸಿ ಆಸೆಯಿಂದ ನೋಡುತ್ತಿತ್ತು.

ಯೌವನ ಮೂಡಿಸುವಂಥ ಇಂಥ ಆಟಕ್ಕೆ ತಾನೇ ಬಲಿಬಿದ್ದುದಲ್ಲದೆ ನೂರು ಇತರ ಇಂಥ ಆಟಗಳನ್ನು ಕಂಡಿದ್ದ ಗಣದೊಡೆಯ ತಿರುಗಿ ಗಣ ಸೇರುವ ಇಚ್ಛೆಯನ್ನು ಪ್ರಕಟಿಸುತ್ತಿದ್ದ ತಂಟೆಕೋರನತ್ತ ಕತ್ತು ಕೊಂಕಿಸಿ ನೋಡಿ ಕಿವಿಯಾಡಿಸಿ ಸೊಂಡಿಲಾಡಿಸಿ ಇದಕ್ಯಾಕಪ್ಪ ಇಷ್ಟು ಚಿಂತೆ ಹಚ್ಚಿಕೊಂಡು ದೂರ ನಿಂತಿದ್ದೀ ಎನ್ನುವಂತೆ ಮೂಗು ಮುರಿಯುತ್ತಿದ್ದ. ಗಣದ ಹಿರಿಯಾನೆಗಳೂ ಹೆಣ್ಣಾನೆಗಳೂ ಯೌವನಕ್ಕೂ ಕಾಮಕ್ಕೂ ಕಾಮಕ್ಕೂ ತಂಟೆಗೂ ನಂಟು; ಇದಕ್ಯಾಕೆ ಇಷ್ಟು ಪೇಚಿಗೆದ್ದಿದ್ದೀಯೆ ಹತ್ತಿರ ಬಾ ಎಂದಿದ್ದುವು. ಗಣದೊಡೆಯನ, ಹಿರಿಯರ ಅಸ್ತುವನ್ನು ಕಂಡ ಆನೆ ತನಗೆ ಕಾಳಗ ಕೊಟ್ಟೋಡಿಗದ್ದ ಪ್ರತಿಕಾಮಿಯತ್ತ ಕಣ್ಣು ಹಾಯಿಸುತ್ತಿತ್ತು. ಪ್ರತಿಕಾಮಿ ಹೇಗೂ ಕಾಳಗದಲ್ಲಿ ವಿಜಯಿ. ತನ್ನ ವಿಜಯೋತ್ಸವವನ್ನು ಹೆಣ್ಣೊಡನೆ ಕೂಡಿ ಕ್ರೀಡಿಸಿ ಮೆರೆದವ. ಅದಂತೂ ಓ, ಆ ಕಾಳಗವಾ; ಅದೊಂದು ಹಳೆಯ ಕಥೆ ಎನ್ನುವ ಭಂಗಿ ತಳೆಯುತ್ತಿತ್ತು. ಆ ಹೆಣ್ಣು, ಈ ಹೆಣ್ಣಿಗೇ ತಾನು ಕಾಳಗ ಕೊಟ್ಟಿದ್ದುದು ಎಂಬ ಅಚ್ಚರಿ ಬರಿಸುವಂತೆ – ಹೋದೆಯಾ ಎಂದರೆ ಬಂದೆಯಾ ಬಾಗಿಲ ಕಿಂಡೀಲಿ – ಎನ್ನುವಂಥ ತುಂಟತನ ಬೆರೆತ ಅಣಕನೋಟ ಹಾಯಿಸಿ ಸುಮ್ಮನಿದ್ದು – ಬಿಡುತ್ತಿತ್ತು.

ಇವುಗಳನ್ನು ಕಂಡ ಆನೆಯ ಮನ ಹಗುರವಾಗಿ ಬಿಡುತ್ತಿತ್ತು. ಮೈಯಲ್ಲಿ ಮುದ ಬೆರೆಯಿಸಿಕೊಂಡು ಸಕ್ಕರೆ ಹಾಲಿನೊಡನೆ ಬೆರೆಯುವಂತೆ ಆನೆ ಗಣದೊಡನೆ ಸೇರಿಕೊಂಡು ಬಿಡುತ್ತಿತ್ತು.

■

ಯೌವನ ಕಳೆದ ಮೇಲೆ ದೇಹಧರ್ಮ ವಿಧಿಯಂತೆ ಆಗ ಈಗ ಮಸ್ತಿ ಒಸರತೊಡಗಿದ್ದಿತು. ಪ್ರಾರಂಭದ ದಿನಗಳಲ್ಲಿ ಆನೆಯ ದೈನಿಕ

ಚರ್ಮೆಯಲ್ಲಿ ಹೆಚ್ಚು ಬದಲಾವಣೆ ತೋರಿ ಕೊಂಡಿರದಿದ್ದರೂ ತಿಂಗಳೊಪ್ಪತ್ತು ದಿನ ಕಣ್ಣು ಕಿವಿಗಳ ನಡುವಣ ಗ್ರಂಥಿಯಿಂದ ಸೋರಿಳಿಯುವ ಕಟುವಾದ ಮದರಸ ಆನೆಯ ದೇಹಾಂತರಾಳ ಕ್ಕಿಳಿದು ನೆತ್ತಿಗೇರಿ ಮನವನ್ನು ತನ್ನ ಹಂಗಿ ನಲ್ಲಿರಿಸಿಕೊಂಡು ಆನೆಯ ಮನಸ್ಸೆಲ್ಲವನ್ನೂ ಮಸ್ತಿಯ ಪೊಂಡದಲ್ಲಿ ಓಲಾಡಿಸುವಂತೆ ಪ್ರೇರೇ ಪಿಸಿಬಿಡುತ್ತಿತ್ತು. ಆಗ ಆನೆಯ ಯೌವನದ ಹಮ್ಮು ಬಿಮ್ಮು ಗಂಡುತನಗಳೆಲ್ಲವನ್ನೂ ಮದರಸ ಕಾದೆಣ್ಣೆ ಹಪ್ಪಳವನ್ನು ಅರಳಿಸುವಂತೆ ಅರಳಿಸಿಬಿಡುತ್ತಿತ್ತು. ಒಂದು ಕ್ಷಣ ಕಾಡೆಲ್ಲ ನಂದನವನವಾಗಿ ತಾನದರ ಇಂದ್ರನಾಗಿ ಗಣದ ಗಂಡಾನೆಗಳೆಲ್ಲ ತನ್ನ ಅನುಚರರಾಗಿ ಹೆಣ್ಣಾನೆ ಗಳೆಲ್ಲ ತನ್ನಣತಿ ಕಾದುನಿಂತ ರಂಭಾಪ್ಸರೆಯ ರಾಗಿ ತೋರಿ ಆನೆ ಸುಕೋಮಲ ದರ್ಪದಿಂದ ನಡೆಯುತ್ತಿದ್ದಿತು. ಮರುಕ್ಷಣ ಕಾಡಿನ ಉಬ್ಬು ತಗ್ಗು ಪೊದೆ ಬಳ್ಳಿಗಳಲೆಲ್ಲ ತನ್ನ ವೈರಿಗಳನ್ನೆಲ್ಲ ಕಂಡು ಗಣದ ಗಂಡುಗಳೆಲ್ಲ ತನ್ನ ರಂಭಾಪ್ಸರೆ-ಯರನ್ನು ಲಂಪಟಿಸಲೆಳಸುವ ಧೂರ್ತರಂತೆ ಕಂಡು ಆನೆ ರೋಷಾಂಧವಾಗಿಬಿಡುತ್ತಿತ್ತು. ಇನ್ನೊಂದು ಕ್ಷಣ ತನ್ನಂಥ ಧೀಮಂತ ಗಂಡರ ಗಂಡು ಈ ಕಾಡಿನಲ್ಲಿ ಈ ಗಣದೊಡನೆ ಏನು ಸತ್ತ್ವವಿದೆ ಎಂದು ಬಾಳಬೇಕು, ಈ ಕಾಡನ್ನೇ ಬಿಟ್ಟು ದೂರ ಹೋಗಿ ದೇಶವಿಶಾಲವಾದ ಸ್ವಂತ ಕಾಡನ್ನು ಕಂಡುಕೊಂಡು ತಾನದರ ಚಕ್ರವರ್ತಿಯಾಗಿ ಮೆರೆಯಬೇಕು ಎಂಬ ಭಾವನೆ ಯಲ್ಲಿ ಓಲಾಡುತ್ತಿತ್ತು.

ಹೀಗೆ ಆನೆಯ ಮದದತ್ತ ಮನದಲ್ಲಿ ಭಾವನೆಗಳು ಪುಂಖಾನುಪುಂಖವಾಗಿ ಏಳುತ್ತಿ ದ್ದುವು. ಒಮ್ಮೊಮ್ಮೆ ತನ್ನ ಮನ ನಡೆಯಿಸಿ ದಂತೆ ಆನೆ ನಡೆಯಲೂ ತೊಡಗಿಬಿಡು ತ್ತಿತ್ತು. ಆಗೆಲ್ಲ ಆನೆ ಮೇಯಬೇಕಾದುದ ಕ್ಕಿಂತ ಹೆಚ್ಚಾಗಿ ಮೆಯ್ದು ಕ್ರೀಡಿಸಬೇಕಾದು ದಕ್ಕಿಂತ ಹೆಚ್ಚಾಗಿ ಕ್ರೀಡಿಸಿ ಇಲ್ಲ ಗಣ



ಹೊಕ್ಕಂತೆ ನಿಂತಲ್ಲೇ ನಿಂತಿರುತ್ತ ಇಲ್ಲ ಸುತ್ತಲಿನ ವನಪ್ರದೇಶದಲ್ಲೆಲ್ಲ ಕಂಡುಕಾಣದ ವೈರಿಗಳಿಗಾಗಿ ತಡಕುವ ರೋಷದಲ್ಲಿ ಗಿಡ ಮರ ಪೊದೆಗಳಲ್ಲಿ ಸರಭರ ಗುಡುಗಾಡಿ ಕಾಲಿಂದ ಗೋರಿ ಕೊಂಬಿಂದ ಗೀಸಿ ಸೊಂಡಿಲಿಂದ ಕಿತ್ತು ಹಣೆಯಿಂದ ಮರದ ಸೊಂಟಗಳಿಗೆ ಘಟ್ಟಿಸುತ್ತಿತ್ತು. ಮುಂಬಾಗಿ ಕೊಂಬಿಂದ ಮಣ್ಣ ಪೆಕ್ಕಳಿಕೆಯನ್ನೆಬ್ಬಿಸಿ ಕಾಲಿಂದ ಅಪ್ಪಚ್ಚಿಮಾಡುತ್ತಿತ್ತು. ಮೈ ಮೇಲೆ ಮಣ್ಣನ್ನು ಎರಚಿಕೊಂಡು ಧೂಳಿಧೂಸರವಾಗಿ ಗಣದಿಂದ ದೂರ ಒಂಟಿ ನಿಲ್ಲುತ್ತಿತ್ತು.

ಒಮ್ಮೊಮ್ಮೆ ವಿನಾಕಾರಣ ಗಣದ ಸ್ನೇಹಿತರ ಮೇಲೆ ಫಕ್ಕನೆ ಏರಿ ಹೋಗುವ ದುಃಸಾಹಸ ತೋರಿಸಹೋಗಿ ಸಾಮಾನ್ಯವಾಗಿ ಕಾಲು ಕೆದಕಿದರೆ ಕಾಳಗ ಕೊಡುವ ದಾಷ್ಟಿಕವಿದ್ದ ಆ ಗಂಡುಗಳೀಗ ವಿಚಿತ್ರವಾಗಿ ಹೇಡಿತನಾರೂಢವಾದ ಪಲಾಯನದಲ್ಲಿ ತೊಡಗುವುದನ್ನು ಕಂಡು ಆನೆ ಜುಗುಪ್ಸೆಯಿಂದ ಸುಮ್ಮನಾಗಿ ಬಿಡುತ್ತಿತ್ತು. ಮಗುದೊಮ್ಮೆ ಈ ಕಾಡು ಈ ಗಣ ಎಲ್ಲ ಬೇಡಾಗಿಬಿಡುತ್ತಿತ್ತು. ಆಗ ಆನೆ ನಿರಿಚ್ಛೆಯಿಂದ ಕಾಲು ಕೊಂಡೊಯ್ದಲ್ಲಿಗೆ ನಡೆದುಬಿಡುತ್ತಿತ್ತು. ಎಲ್ಲೋ ಒಂದೆಡೆ ನಿಂತು ಕಾಡಿನ ನಿರ್ಜನ ನೀರವತೆಯಲ್ಲಿ ಶಾಂತತೆಯನ್ನು ತಂದುಕೊಳ್ಳುವ ವ್ಯರ್ಥ ಯತ್ನ ಮಾಡುತ್ತಿತ್ತು. ಈ ಯತ್ನ ಬೇಸರ ತರಿಸಿದ ಕ್ಷಣ ಮರಿಕುರಿ ಮುಂದೆ ಸೇರುವಂತೆ ಆನೆ ಗಣದ ಬಳಿ ನಡೆದುಬಿಡುತ್ತಿತ್ತು.

ಗಣಕನಾಯನಿಗೆ, ಗಣಕ್ಕೆ ಆನೆಯ ಮದಮತ್ತ ಸ್ಥಿತಿ, ಆ ಸ್ಥಿತಿ ಏರ್ಪಡಿಸುತ್ತಿದ್ದ ಮನೋವಿಭ್ರಮಗಳು ಅನುಭವವೇದ್ಯವಾಗಿತ್ತು. ಕುಡುಕನೊಬ್ಬ ಅಮಲಿನಲ್ಲಿ ಗುಡುಗಾಡುವುದನ್ನು ಕುಡುಕರ ಕೇರಿ ಸಂಭಾಳಿಸುವಂತೆ ಆನೆಯ ಪೈಲಾಟವನ್ನು ಗಣ ಸಂಭಾಳಿಸಿಕೊಂಡು ಹೋಗುತ್ತಿತ್ತು. ಇಷ್ಟಕ್ಕೂ ಸಂಜೆಯ ಕುಡುಕ ಬೆಳಗಾಗಿ ಸಂಭಾವಿತ ಅಲ್ಲವೆ? ಆನೆಯ ಹೈಲಾಟ ಕೆಲವು ವಾರಗಳದ್ದು ಎಂದು ಗಣಕ್ಕೆ ಗೊತ್ತು. ಅದಕ್ಕೇಕೆ ರಂಪಾಟ?

ಆದರೆ ವರ್ಷಗಳುರುಳಿ ಗಂಡುತನ ಕುಣಿದಂತೆ ಆನೆ ಗಣದೊಡೆಯನತ್ತ ಕೊಂಕುನೋಟ ಬೀರುತ್ತಿತ್ತು. ನಿನಗಿಂತ ನಾನೇನು ಕಡಿಮೆಯೆಂಬ ಹಮ್ಮು ನಾಯಕತ್ವಕ್ಕೆ ಸೆಣಸಹೊರಡುವ ಇಂಬನ್ನು ಆಗೀಗ ಹತ್ತಿಸುತ್ತಿದ್ದರೂ ಗಣದೊಡೆಯನ ಕಲ್ಲುಕೋಟೆಯಂಥ ಕಾಯವನ್ನು ನೋಡಿದಾಗಲೆಲ್ಲ ಆನೆ ಹತತೇಜವಾಗಿ ಉಗುಳು ನುಂಗುತ್ತಿತ್ತು. ಆದರೂ ಮನಸ್ಸನ್ನು ಈ ಚೇಷ್ಟೆ ಬಲವಾಗಿ ಹಿಡಿದಾಗ ಆನೆ ಬೇಕೆಂದೇ ನಾಯಕನನ್ನು ಅನುಸರಿಸುವ ಹೆಣ್ಣನ್ನು ಒಲಿಸಿಕೊಳ್ಳುವ ಜಾರಕಾರ್ಯಕ್ಕಿಳಿಯುತ್ತಿತ್ತು. ಆಗ ಗಣದೊಡೆಯ ಅಬ್ಬರಿಸಿ ಬೊಬ್ಬಿರಿದು ಮೇಲ್ವಾಯ್ದು ಬಂದಾಗ ಅಳ್ಳೆದೆಯಾದರೆ ಆನೆ ಹಳುನುಗ್ಗಿ ಪಲಾಯನಪರವಾಗಿಬಿಡುತ್ತಿತ್ತು. ಅಳ್ಳೆದೆ ಆಗದೆ ಹೋದಾಗಲೊಮ್ಮೊಮ್ಮೆ ಆನೆ ತಾನೂ ನೆಲಕ್ಕೆ ಬೃಹತ್ಪಾದಗಳನ್ನೂರಿ ಕತ್ತು ಝುಂಕಿಸಿ ಕಿವಿಯಾನಿಸಿ ಸೊಂಡಿಲೆತ್ತಿ ಕಾಳಗದ ಕಹಳೆಯೂದುತ್ತಿತ್ತು. ಆಗ ಗಣನಾಯಕ ಸಿಡಿಯುವ ಬೆಟ್ಟದಂತೆ ಮೇಲೇರಿ ಫಡಾಲನೆ ಗುದ್ದುತ್ತಿದ್ದ. ಆ ಅಸದಳ ತಾಡನೆಯ ರಭಸ ಮೈಯೂರಿ ನಿಂತಿದ್ದ ಆನೆಯನ್ನು ಝಲ್ಲನೆ ಗಡಗಡ ನಡುಗಿಸಿಬಿಡುತ್ತಿತ್ತು. ಈ ಘಟನೆಯನ್ನು ಹೇಗೋ ಸಂಭಾಳಿಸಿಕೊಂಡು ಯುದ್ಧಕ್ಕೆ ಅಣಿಯಾಗುತ್ತಿದ್ದ ಗಣದೊಡೆಯನನ್ನು ಆನೆ ಮುನ್ನುಗ್ಗಿ ಘಟ್ಟಿಸುತ್ತಿತ್ತು. ನೂರು ಕಾಳಗಗಳ ವೀರನಾದ ಗಣನಾಯಕ ತನ್ನ ಘಟ್ಟನೆಯನ್ನು ಕೇವಲ ಮೈ ಝುಂಕಿಸಿ ತಾಳಿಕೊಳ್ಳುವುದಲ್ಲದೆ ಕ್ಷಣಕ್ಷಿಪ್ರದಲ್ಲಿ ಮೈ ತಿರುಗಿಸಿ ಈಗ ಹಣೆಗೆ ಘಟ್ಟಿಸುವ ಬದಲಿಗೆ ಮೈಯನ್ನು ಗೋರಲು ಕೋರೆಗಳನ್ನು ವಾಲಿಸಿಕೊಂಡು ಬರುವುದನ್ನು ಕಂಡದ್ದೇ ಆನೆಯ ಮೈ ನಡುಗಿಬಿಡುತ್ತಿತ್ತು. ಹೇಗೋ ಈ ಆಘಾತದಿಂದ ಪಾರಾದರೆ ಸಾಕೆಂಬ ಬುದ್ಧಿ ಬಂದು ಆನೆ ಕದನಕ್ಕೆ ವಿದಾಯ ಹೇಳಿ ಹಳುನುಗ್ಗಿ ಓಡಿಬಿಡುತ್ತಿತ್ತು.

ನಾಯಕನೊಡನಿನ ಗಂಭೀರ ಕಾಳಗ ಆನೆಯ ತಳಮಳವನ್ನು ಹೆಚ್ಚಿಸುತ್ತಿತ್ತು. ಬಹು ದಿನ ಗಣದಿಂದ ದೂರ ಇದ್ದರೆ ನಾಯಕ ತನ್ನ ತಪ್ಪನ್ನು ಮರೆತಾನು ಎಂಬ ಭಾವನೆಯಿಂದ ಆನೆ ಕೆಲವು ಕಾಲ ಗಣದಿಂದ ದೂರ ಇದ್ದುಬಿಡುತ್ತಿತ್ತು.

ಹೀಗೆ ಆನೆ ಗಣದ ಎಲ್ಲ ಆನೆಗಳಂತೆ ತಾನು ಜನಿಸಿ ಬಾಲ್ಯ ಕಳೆದು ಯೌವನವನ್ನೂ ಕಳೆದು ಗಂಡಾಗಿ ಗಣದೊಡನಿದ್ದಾಗ ನಾಯಕನ ಅಂಕೆಯಲ್ಲಿ ಬಾಳುತ್ತಾ ಗಣದ ಒಂದು ಬಲವಾದ ಗಂಡು ದಿಕ್ಕಾಗಿ ಆಗಾಗ ಗಣದಿಂದ ದೂರ ಹೋದಾಗಲೂ ಗಣದ ಬಗೆಗೆ ಚಿಂತಿಸುತ್ತಾ ತನ್ನದೆಂಬ ಬಾಳನ್ನು ಬಾಳುತ್ತಿತ್ತು.

*

ಒಮ್ಮೆ ಏಕೋ ಗಣ್ಣವರನ್ನು ಬಿಟ್ಟು ದೂರ ಹೋಗುವ ಇಚ್ಛೆ ಉಂಟಾಗಿ ಆನೆ ಕಾಡನ್ನು ಬಿಟ್ಟು ಸರಭರ ನಡೆದಿತ್ತು. ಮನಸ್ಸು ಎಲ್ಲಿಯೋ ತಾನು ಕಾಣದ ಒಂದು ನಂದನವನ ಇದೆ; ಅಲ್ಲಿ ತಮ್ಮೆಲ್ಲರ ದೈಹಿಕ ಮಾನಸಿಕ ಇಚ್ಛೆಗಳು ಪೂರ್ತಿಯಾಗುತ್ತವೆ ಎಂಬ ಇಂಬನ್ನು ಕೊಡುತ್ತಿತ್ತು. ಹಾಗಾಗಿ ಕಂಡ ಕಾಡನ್ನು ಬಿಟ್ಟು ಕಾಣದ ಮನುಷ್ಯರ ಬೀಡಿಗೆ ಬಂದಾಗಲೂ ಆನೆ ಗಾಬರಿಗೊಂಡಿರಲಿಲ್ಲ. ತನ್ನ ನಂದನವನ ದೂರ ಗಗನದಂಚಿನಲ್ಲಿ ಇದೆ; ಅದರತ್ತ ನಡೆಯಬೇಕು ಎಂಬ ಆಶೆ ಆನೆಯ ಮನವನ್ನು ಬಲವಾಗಿ ಭ್ರಮಿಸಿತು. ಹೀಗಾಗಿ ಆನೆ ತನ್ನ ಕಾಡನ್ನು ಹಿಮ್ಮೆಟ್ಟಿಸುವುದೇ ಏಕೋದ್ದೇಶವಾದಂತೆ ಮನುಷ್ಯನ ಬೀದಿಗಳಲ್ಲಿ ಸಿಕ್ಕದ್ದು ತಿಂದು ಸರಸರ ಮುನ್ನಡೆದಿತ್ತು. ಯಾವುದೋ ಗುರಿ ಮುಟ್ಟುವ ಆತುರ ಹೊಸ ಪರಿಸರಗಳು ಊಡಿಸುವ ಕಾತರಗಳು ಆನೆಯ ಮನಸ್ಸೆಂಬ ಹೊಂಡವನ್ನು ಕದಡತೊಡಗಿದ್ದವು. ಕಾಡಲ್ಲಿನ ಮೆತ್ತನ್ನು ನೆಲದಲ್ಲಿ ಗಣದೊಡನೆ ಬೆರೆತು ಅಲ್ಲಲ್ಲಿ ನಿಂತು ಬೀಡು ಬಿಟ್ಟು ಸಾವಧಾನ ಉಂಡು ಹೊಂಡದಲ್ಲಿ ಕ್ರೀಡಿಸುತ್ತ ಸ್ವೇಚ್ಛಾ ಅಂಡಲೆಯುತ್ತಿದ್ದ ಆನೆಯ ಉಂಡಾಡಿ ಪರ್ಯಟನ ಚರ್ಯೆ ಈಗ ತೀರ ಬದಲಾಗಿತ್ತು. ಎಲ್ಲಿ ನೋಡಿದರೂ ಎತ್ತ ನಡೆದರೂ ಮನುಷ್ಯ ಇಲ್ಲವೆ ಅವನ ಹಸ್ತಕ್ಷೇಪ ಕಂಡುಬರುತ್ತಿತ್ತು. ಭಾಗ ವಿಭಾಗವಾದ ಹೊಲಗದ್ದೆಗಳು, ಇದು ತೀರ ತನ್ನ ರಾಜ್ಯ ಎಂದು ಗಾರಾಗಿ ತೋರಿಸಿಕೊಳ್ಳುತ್ತಿದ್ದ ಹಳ್ಳಿ ಕೇರಿ ಊರುಗಳು, ಕಾಡನ್ನೆಲ್ಲ ಬೈತಲೆ ತೆಗೆದ ರಸ್ತೆಗಳು, ಕಡೆಗೆ ಅಲ್ಲಿ ಇಲ್ಲಿ ಮೇಯುತ್ತಿದ್ದ ದನ ಕುರಿ ಆಡು ಎಮ್ಮೆಗಳು. ಅಪರೂಪಕ್ಕೆ ನಿಂತಿದ್ದ ಮರಗಳು ಕೂಡ ಮನುಷ್ಯನ ಸಾರ್ವಭೌಮತ್ವವನ್ನು ಹಾಡುತ್ತಿದ್ದುವು.

ಇದೇನಿದು, ಶಾಂತಿಯಿಂದ ತಾನು ಬಾಳುತ್ತಾ ಪರರನ್ನು ಬಾಳಗೊಡುತ್ತಿದ್ದ ತನ್ನ ಶಾಂತವಾದ ಜೀವನವೆಲ್ಲಿ: ಎಲ್ಲೆಲ್ಲೂ ಎಲ್ಲೆ ಕಟ್ಟು ಬೇಲಿ ಕಟ್ಟು ರಸ್ತೆ ಗಾರೆ ಗಿಡ್ಡುಗಳ ಈ ಮನುಷ್ಯ ಮಾಯಾ ಗೊಂದಲದ ಜೀವನವೆಲ್ಲಿ? ಅಕಸ್ಮಾತ್ ಮರಗಳ ಗುಂಪು ಸಿಕ್ಕಿದ್ದರೂ ಅವು ಮನುಷ್ಯತನಗಾಗಿ ಬೆಳೆಸಿಕೊಂಡಂಥ ಮರಗಳು: ಲೈನು ಲೈನಾಗಿ ನಿಂತ ಒಂದೇ ಜಾತಿಯ ಮರಗಳು; ತೆಂಗು ಕಂಗು ಇಲ್ಲ ಯೂಕಲಿಪ್ಟಸ್ ಸರ್ವೆ ಮರಗಳು. ತನ್ನಂಥ ಧಡೂತಿ ಪ್ರಾಣಿ ಇರಲಿ ಪಶು ಪಕ್ಷಿಗಳಾದಿ ಕಿರು ಪ್ರಾಣಿಗಳನ್ನೂ ಬಾಳಿಸಲಾರದಂಥವು. ಓ, ಅಲ್ಲಿ ಇಲ್ಲಿ ಮನಸ್ಸನ್ನು ಇಂದ್ರಲೋಕಕ್ಕೆ ಬಂದೆ ಎನ್ನಿಸುವಂಥ ಕಬ್ಬಿನ



"ಈಗಿನ ರಾಜಕೀಯ ತುಂಬಾ ಹೊಲಸಾಗೋಗಿದೆ. ರಾಜಕಾರಣಿಗಳಲ್ಲಿ ದುರಾಸೆ ಹೆಚ್ಚಿದೆ. ಆದ್ರಿಂದ ಈ ಸರ್ತಿ ಟಿಕೆಟ್ ಸಿಕ್ಕಿದ್ರೆ ಇದೇ ಕೊನೆ ಸಲಾ ಚುನಾವಣೆಗೆ ನಿಂತ್ಕೊಳ್ಳೋದು ನಾನು. ಆಮೇಲೆ ರಾಜಕೀಯದಿಂದ ನಿವೃತ್ತಿ ಆಗ್ತೀನಿ."

ಬಾಳೆಯ ಲೈನುಗಳೂ ಉಂಟು. ಆದರೆ ಅವುಗಳಿಗೆ ಬೇಲಿ ಉಂಟು. ಬಹಳಷ್ಟು ವೇಳೆ ಕಾವಲೂ ಉಂಟು. ತಾನು ಕಾಲಿಟ್ಟರೆ ಸಾಕು ಎಲ್ಲಿರುತ್ತಾನೋ ಮನುಷ್ಯ, ಕೂಗಿ ಬೊಬ್ಬಿರಿದು ಇರುವೆಗಳ ಹಾಗೆ ಒಟ್ಟು ಸೇರಿ ರಣಾರಂಪವೆಬ್ಬಿಸುತ್ತಾನೆ. ತಾನಾಗ ಇಂದ್ರಭೋಗ ಬಿಟ್ಟು ಪಲಾಯನ ಮಾಡಬೇಕಾಗುತ್ತದೆ. ಆದರೆ ಪಲಾಯನ ಮಾಡುವುದಾದರೂ ಎಲ್ಲಿಗೆ? ತಿರುಗಿ ಮನುಷ್ಯ ಸಾಲಾಗಿ ನೆಟ್ಟ ಮರಗಳ ಗುಂಪಿಗೆ. ಮರಗಳು ತನ್ನ ಜೀವನದ ಸಂಗಾತಿಗಳು. ಅವುಗಳ ಮರೆ ನಿಂತು ತನ್ನ ಕಷ್ಟಸುಖಗಳನ್ನು ತೋಡಿಕೊಳ್ಳಬಹುದು. ಆದರೂ ಇಲ್ಲೇಕೆ ಬಂದೆ? ತಲೆಯಲ್ಲಿ ಹೊರಳಾಡುತ್ತಿರುವ ನಂದನವನದ ಕಾಮನೆ ನಿಜವೋ ಮೈ ಈಗ ಅನುಭವಿಸುತ್ತಿರುವ ನರಕವಾಸದ ಅನುಭವ ನಿಜವೋ?

ಹಾಯಾಗಿ ತಿಂದುಂಡು ಸುಖವಾಗಿ ಯೋಚಿಸುವ ವ್ಯವಧಾನವಿಲ್ಲದ ಆನೆ ದಿಕ್ಕೆಟ್ಟ ಭಿಕಾರಿಯಂತೆ ಅಲ್ಲಿ ಇಲ್ಲಿ ಅಲೆಯತೊಡಗಿತು. ಕಂಡಲ್ಲಿ ಕಂಡದ್ದು ತಿಂದ ಬೆದರಿದಾಗ ಓಡುತ್ತಾ ಕ್ಷೇಮ ಎಂದ ಕಡೆ ತಂಗತೊಡಗಿತು. ಸಾವಧಾನ ಉಣ್ಣದೆ ಮೈ ಹಗುರಾಗುವಂತೆ ವಿರಮಿಸುವ ಕಾಮಸಂಭ್ರಮವನ್ನು ನೀಗಿಕೊಂಡ ಆನೆಯ ಮನಸ್ಸು ಸೂಚಿಕೆಟ್ಟ ದಿಕ್ಸೂಚಿಯಂತೆ ನಾನಾ ಮುಖವಾಗಿ ತನ್ನ ಹಿತ ಎತ್ತ ಇದೆ ಎಂಬ ನಿರ್ಧಾರ ನೆಲೆಗೆ ಬರುವಂಥ ತ್ರಾಣವನ್ನೂ ಕಳೆದುಕೊಂಡಿತು.

*

ಕಾಡಿನಿಂದ ಹೊರಗೆ ಅಡಿ ಇಟ್ಟೊಡನೆಯೇ ಮನುಷ್ಯನಿಗೆ ಆನೆಯೊಂದು ಅವರ ನೆಲೆ ಬಿಟ್ಟು ತನ್ನ ನೆಲದ ಮೇಲೆ ಅತಿಕ್ರಮಿಸಿದೆ ಎಂದು ಗೊತ್ತಾಗಿಬಿಟ್ಟಿತ್ತು. ಹಗಲಿನಲ್ಲಿ ಯಾವುದೋ ಕಾಡಿನ ಇಲ್ಲ ಬೆಟ್ಟದ ತಪ್ಪಲಿನಲ್ಲಿ ಇರುತ್ತಾ ಇಳಿಸಂಜೆ ನಿಂತಲ್ಲಿ ನಿಲ್ಲದೆ ಇಲ್ಲಿ ಗದ್ದೆ ಅಲ್ಲಿ ತೋಟ ಮತ್ತೊಂದೆಡೆ ಹುಲ್ಲು ಮೆದೆಯ ಕಣವನ್ನು ಗೂರಾಡಿ ಮೈಲಿಗಟ್ಟಲೆ ಚಲಿಸುತ್ತಿದ್ದ ಆನೆಯ ಗೊತ್ತು ಗುರಿಗಳನ್ನು ಕ್ಷಿಪ್ರವಾಗಿ ಕಂಡುಕೊಳ್ಳಲು ಮನುಷ್ಯನಿಗೆ ಆಗಲಿಲ್ಲ. ಈ ಪುಂಡು ಸಲಗದ ಆಟ ಒಂದೆರಡು ದಿನದ್ದು. ಈಗಲೋ ಆಗಲೋ ತಂತಾನೆ ಕಾಡಿಗೆ ಹಿಂದಿರುಗುತ್ತದೆ ಎಂದು ತಿಳಿದ ಮನುಷ್ಯ ಸ್ವಸ್ಥನಿದ್ದ. ಆದರೆ ಆನೆ ಹಾಗೆ ಹಿಂದಿರುಗದೆ ತನ್ನ ತೋಟ ಪೈರು ಹುಲ್ಲು ಮೆದೆಗಳನ್ನು ತುಡುಗುವುದನ್ನು ವ್ಯವಸ್ಥಿತವಾಗಿ ಮಾಡುವುದನ್ನು ಕಂಡು ಮನುಷ್ಯ ಗುಂಪು ಕಟ್ಟಿದ. ಗುಂಪು ಕಟ್ಟಿದ ಮನುಷ್ಯ ಸರ್ವಾಂತರ್ಯಾಮಿ. ಇಂಥಿಂಥ ಕಡೆಯಿಂದ ಇಂಥಿಂಥ ಕಡೆ ಆನೆ ಚಲಿಸುತ್ತಿದೆ ಎಂದು ಕಂಡುಕೊಂಡ. ನಕ್ಷತ್ರಿಕನಂತೆ ಆನೆಯ ಬೆಂಬತ್ತಿದ. ಗುಂಪು ಸೇರಿಕೊಂಡು ಬೊಬ್ಬಿರಿದ. ಡಬ್ಬ ಬಡಿದು ಬೆಂಕಿಯ ಹುಯಿಲೆಬ್ಬಿಸಿದ. ಆನೆ ಮಾಡಿದ್ದ ಪೈರು ನಷ್ಟವನ್ನು ಬೆಟ್ಟು ಮಾಡಿ ಅರಣ್ಯ ಖಾತೆಗೆ ಪೋಲೀಸರಿಗೆ ದೂರಿತ್ತ. ಖಾತೆಗಳಿಗೆ ಪಾಪ ಕಾಗದದ ಕಟ್ಟುಕಟ್ಟಳೆ ಬಲು ಮುಖ್ಯ. ಅಲ್ಲಿ ಇಲ್ಲಿ ಪುಂಡು ಚಲಿಸುವ ಆನೆಯ ತುಡುಗು ಚರಿತೆಯ ತುರಿಸನ್ನು ಕಾಗದ ಪತ್ರಗಳಲ್ಲಿ ಅರಸತೊಡಗಿತು.

*

ಮೊದಲೇ ಕದಡಿದ ಹೊಂಡವಾಗಿದ್ದ ಆನೆಯ ಮನಸ್ಸು ಪರಿಚಯವಿರದ ಪರಿಸರದಲ್ಲಿ ಶೋಷಿತಪ್ರಾಣಿಯಾಗಿ ಸಿಕ್ಕಿಕೊಂಡ ನಂತರ ತೀರ ವಿಹ್ವಲವಾಯಿತು. ಎತ್ತ ಹೋದರೂ ಜನ ಗದ್ದಲ ಬೆಂಕಿ ಭಯಗಳನ್ನು ಎದುರಿಸಬೇಕಾಗಿ ಬಂದು ಆನೆ ನಿರಂತರ ಭೀತಿಕೂಪಕ್ಕೆ ಬಿದ್ದು ತನ್ನ ಕಾಡಿನತ್ತ ಹೆಜ್ಜೆ ಹಾಕುವುದನ್ನೂ ಮರೆತುಬಿಟ್ಟಿತು. ಹಗಲಿಡೀ ಯಾವುದೋ ಕಾಲಗರ್ಭದಲ್ಲಿ ನಿಂತಿರುತ್ತಾ ಮನುಷ್ಯ ಸಂಚಾರ ಇರದ ರಾತ್ರೆ ಕಳ್ಳನಂತೆ ಕುಡಿನೀರು ಉಣಿಸಿಗಾಗಿ ಹೊರಹೊರಡುತ್ತಿತ್ತು.

ಇದನ್ನು ಕಂಡುಕೊಂಡ ಮನುಷ್ಯ ಪೈರಿದ್ದ ಕಡೆಯೆಲ್ಲ ಗುಂಪು ಕಟ್ಟಿ ಬೆಂಕಿ ಒಡ್ಡಿಕೊಂಡು ಕಾಯತೊಡಗಿದ. ಅರಣ್ಯ ಪೋಲೀಸ್ ಖಾತೆಗಳ ಮುಲಾಮೆಗಳನ್ನು ಛೇಡಿಸಿದ. ಆನೆ ಮಾಡುತ್ತಿದ್ದ ಪೈರು ನಷ್ಟವನ್ನು ಪೇಪರು ಸುದ್ದಿ ಮಾಡಿದ.

ಪಾಪ, ಖಾತೆಗಳು ತಾನೇ ಏನು ಮಾಡಿಯಾವು? ಸಲಗ ಪುಂಡಾಗಿರಬಹುದು. ಅದನ್ನು ಗುಂಡಿಟ್ಟು ಹೊಡೆಯುವುದು ಸುಲಭ. ಆದರೆ

ಏನು ಕಾರಣವೋ ಅರಣ್ಯ ಬಿಟ್ಟು ಮಂಡ-ಳಿಯುವ ದುರ್ದೈವಿ ಆನೆಯೊಂದನ್ನು ಅರಣ್ಯಕ್ಕೇ ಹಿಂದಿರುಗಿಸುವ ಯತ್ನ ಮಾಡದೆ ಅಂಥ ಪ್ರಾಣಗಳನ್ನು ಕಾಯುವ ಕಾಯದೆ ಹೊತ್ತ ತಂತಾನೇ ಗುಂಡಿಟ್ಟು ಕೊಂದಿತು ಎಂಬ ಕ್ರೂರ ಅಪವಾದ ಎದ್ದರೆ ತುಂಬ ಪೇಚು. ಆನೆಯಂಥ ಪ್ರಾಣಿಯನ್ನು ಓಡಿಸುವುದು ಸುಲಭವಲ್ಲ. ಹೇಗೋ ಅಂತೂ ಈ ಮುಂಡುಸಲಗವನ್ನು ಆ ಜಾಗದಿಂದೆಬ್ಬಿಸಿ ಅರಣ್ಯದತ್ತ ದೂಡುವಂತೆ ಖಾತೆ ಸಿಬ್ಬಂದಿಯನ್ನು ಕಳಿಸಿತ್ತು. ಆದರೆ ನೂರು ಜನ ಎದುರು ಬಂದರೂ ಸದೆಯಬಲ್ಲ ಆನೆಯ ಮುಂದೆ ಸಿಬ್ಬಂದಿ ತಾನೇ ಏನು ಮಾಡೀತು? ಅದೂ ರೈತರಂತೆ ಶಬ್ದ ಬೆಂಕಿಗಳಿಂದ ಆನೆಯನ್ನು ಓಡಿಸುವ ವ್ಯರ್ಥಯತ್ನಮಾಡಿತ್ತು.

ಈ ನಿರಂತರ ಕೋಟಲೆಯಿಂದ ತುಡುಗು ಮೇವುಣ್ಣುವ ದಾರಿಯೂ ನಪ್ಪಿಹೋಗಿ ಆನೆ ಶೀರ ಸೋತಿತು. ಹೀಗೆ ಭಯ ಭೀತಿಯಿಂದ ತ್ರಾಸಿತವಾದ ಆನೆ ಒಂದು ದಿನ ರಾತ್ರಿ ಹುಲ್ಲು ಮೆದೆ ಒಟ್ಟಿದ್ದ ಕಣ ಒಂದಕ್ಕೆ ನಿಶ್ಶಬ್ದ ನುಗ್ಗಿದ್ದಿತು. ಕಣ ಕಾದಿದ್ದ ರೈತ ಮುಂದೆ ಕಂಬಳಿಯ ಗೂಡಾಗಿ ಕೂತಿದ್ದ. ತನ್ನ ಶೋಷಣೆಯ ಪ್ರತೀಕವಾಗಿ ಕಂಡರೂ ಕಾಣದಂತೆ ಇರಬಲ್ಲ ಈ ಅದೃಶ್ಯವೀರ ಬೆಳಕಿನ ಮುಂದೆ ಮುಸುಕು ಕವಿದು ಕೂತಿರುವುದು ಕಂಡದ್ದೇ ಆನೆ ರೋಷಾಂಧವಾಯಿತು. ಘೀಂಕಟ್ಟಿದ್ದೇ ಕ್ಷಣಕ್ಷಿಪ್ತದಲ್ಲಿ ಅವನನ್ನು ಅಪ್ಪಚ್ಚಿ ಮಾಡಿಹಾಕಿದ್ದಿತು. ಏಕೋ ಅಲ್ಲಿ ಒಂದೆಸಳು ಹುಲ್ಲನ್ನೂ ತಿನ್ನುವ ಮನಸ್ಸಾಗದೆ ಆನೆ ಕಣವನ್ನೆಲ್ಲ ಗೂರಾಡಿ ಹೊರಟುಹೋಗಿತ್ತು.

ಆ ನಿಮಿಷದಿಂದ ಆನೆಯ ಬೆನ್ನು ಹತ್ತಿದ್ದ ಮನುಷ್ಯ ಸರ್ವಾಂತರ್ಯಾಮಿ ಕರಾಳವಸ್ತ್ರವನ್ನು ಧರಿಸಿದ್ದ. ಬರಿದೆ ಪೈರು ನಷ್ಟಮಾಡುವ ಆನೆಯ ವಿಷಯ ಬೇರೆ, ಮನುಷ್ಯನನ್ನು ಕೊಲ್ಲುವ ಆನೆಯ ವಿಷಯ ಬೇರೆ. ಸುತ್ತೆತ್ತಲ ಕಣ್ಣುಗಳ ಕರಾಳದೃಷ್ಟಿ ತನ್ನ ಮೇಲೆ ಬಿದ್ದಿದೆ ಎಂದರಿತ ಕೂಡಲೆ ಖಾತೆ ಕಾಗದ ಪತ್ರಗಳ ಧೂಳು ಕೊಡವಿ ಮೇಲೆದ್ದಿತು. ಆನೆಯನ್ನು ಬಟ್ಟೆಗೆ ಹಾಕಿಕೊಳ್ಳಬಲ್ಲ ಪರಿಣತರನ್ನು ರಂಗಕ್ಕೆ ಅಟ್ಟಿತು.

ಮೋಹಿನಿಯ ಮುಂದೆ ಎಂಥ ಗಂಡು ಎಂಬ ಅನುಭವ ಇದ್ದ ಪರಿಣತ ಸಿಬ್ಬಂದಿ ಈ ಗಂಡಾನೆಯನ್ನು ಬಟ್ಟೆಗೆ ಹಾಕಿಕೊಳ್ಳಲು ಎರಡು ಹೆಣ್ಣಾನೆಗಳನ್ನು ಕರೆತಂದು ಆನೆ ಸಾಧಾರಣವಾಗಿ ವಿರಮಿಸುತ್ತಿದ್ದ ಕಾಡಿನ ಬಳಿ ಓಡಿಯಾಡಿಸಿ ಒಕ್ಕಡೆ ಕಟ್ಟಿತು.

ಏನು ಎತ್ತ ಎಂಬ ದಿಕ್ಕುಗಳನ್ನು ಸುಟ್ಟುಕೊಂಡು ಶ್ರಾಂತವಾದ ಬಾಳನ್ನು ಬಾಳುತ್ತಿದ್ದ ಆನೆ ಈ ಹೆಣ್ಣುಗಳನ್ನು ಕಂಡಿತು. ಮನುಷ್ಯನ ಸಂಗ ಬಾಳುತ್ತಾ ಮೈಯೆಲ್ಲ ಅವನ ನಾತವನ್ನೇ ಹೊಮ್ಮಿಸುತ್ತಿದ್ದರೂ ಈ ಕುಲಭಗಿನಿಯರಲ್ಲಿ ಆನೆ ಶಾಂತಿ ಸಖ್ಯಗಳ ಆಕರವನ್ನು ಕಂಡಿತು. ಹೆಣ್ಣಾನೆಗಳ ಕತ್ತನ್ನು ಬಳಸಿದ್ದ ಕೊರಳ ಗಂಟೆಗಳು ಆನೆಯಲ್ಲಿ ಅನುಮಾನದ ಒತ್ತಡವನ್ನು ತಂದಿದ್ದರೂ ಹಿಂದೊದೋ ಎನ್ನುವಂತಿದ್ದ ತನ್ನ ಗಣದ ಅಂಗನೆಯರೊಡನೆ ಆಡಿದ್ದ ಒಡನಾಟದ ಸವಿಗನಸುಗಳು ಆನೆಯಲ್ಲಿ ಉಲ್ಲಾಸದ ತೆರೆಯನ್ನೆಬ್ಬಿಸುತ್ತಿದ್ದುವು. ಒಂದು ರಾತ್ರೆ ಇಂಥ ಉಲ್ಲಾಸದರೆಯಲ್ಲೇ ತೇಲುತ್ತಾ ಆನೆ ಆ ಹೆಣ್ಣುಗಳನ್ನು ಸಮೀಪಿಸಿತು.

ತನ್ನನ್ನು ತೊಗಲೆ ತಬ್ಬುವಂತೆ ತಬ್ಬಿದ್ದ ಶ್ರಾಂತತೆಯನ್ನೂ ಸುಲಿದು ಆನೆ ಎದೆಯು-ಬ್ಬಿಸಿ ಮೈ ರಘುಂಕಿಸಿ ಬಿಸಿಯುಸಿರೊತ್ತುತ್ತಾ ಸೊಂಡಿಲು ಕಿವಿಗಳಲ್ಲಿ ಒಲುಮೆಯಾಟವಾಡಿಸುತ್ತಾ ಬಳಿಸಾರಲು ಆ ಹೆಣ್ಣುಗಳು ತಮ್ಮೆಡೆಗೈ-ತಂದಿದ್ದ ಕಾಡಕರಿಘನವನ್ನು ಆಶ್ಚರ್ಯ ಬೆರೆತ ಸಂಭ್ರಮಗಳಿಂದ ಸ್ವಾಗತಿಸಿದ್ದುವು. ಸ್ವಾಗತ ಕಂಡದ್ದೇ ಆನೆ ತಟ್ಟನೆ ಆ ಹೆಣ್ಣುಗಳ ನಡುವೆ ಬಂದಿತು. ಎರಡೂ ಹೆಣ್ಣುಗಳೊಡನೆ ಏಕಕಾಲದಲ್ಲಿ ಮೈ ಉಜ್ಜುವಂತಹ ಸಂಭ್ರಮಯತ್ನ ಮಾಡುತ್ತಾ ತಾನು ಬಿಟ್ಟು ಬಂದ ಕಾಂತಾರವನ್ನು ಆ ಕಾಂತಾರದಲ್ಲಿ ತನಗಾಗಿ ತಪಿಸಿ ಕಾಯ್ದ ಗಜಗಣವನ್ನು ತನ್ನ ಒಂಟಿತನವನ್ನು ಕುರಿತು ರಾತ್ರಿಯಿಡೀ ಗಳುಪಿತು. ಆ ಹೆಣ್ಣುಗಳೊ ಕಾಂತಾರಧೀರನಿಂದ ದೊರಕಿದ್ದ ಅನಿರೀಕ್ಷಿತ ಸಖ್ಯವನ್ನು ಪೈಪೋಟಿಯಿಂದ ಸ್ವೀಕರಿಸಿದ್ದುವು.

ಬೆಳಗಿನ ಸೂಚನೆ ಆದೊಡನೆಯೇ ಆನೆಗೆ ಮನುಷ್ಯ ವೈರಿಯ ನೆನಪಾಗಿದ್ದಿತು. ಆ ನೆನಪಿನೊಡನೆಯೇ ಭಯ, ಇಷ್ಟು ಬೇಗ ಪ್ರಾಣ

ಪ್ರೀತಿಗಳಾಗಿ ಪೋಷಿಸಿದ್ದ ಹೆಣ್ಣುಗಳನ್ನು ವೈರಿ ಮನುಷ್ಯನ ಒಡನಿರಲು ಬಿಟ್ಟುಹೋಗಬೇಕೆಂಬ ಸಂಕಟ ಆನೆಯನ್ನು ಕಾಡಿದ್ದಿತು. ತನ್ನೊಡನೆ ಹೆಣ್ಣುಗಳನ್ನು ಕೊಂಡೊಯ್ಯದಾತೆ ವೈರಿ ಮನುಷ್ಯ ಹೆಣ್ಣುಗಳನ್ನು ಬಂಧಿಸಿದ್ದ ಶೃಂಖಲೆಗಳತ್ತ ಆನೆ ಬಹು ಖೇದದಿಂದ ನೋಡಿದ್ದಿತು. ಕಡೆಗೆ ಒಲ್ಲದ ಮನಸ್ಸಿನಿಂದ ಆನೆ ಮೈಯನ್ನು ಕಿತ್ತು ತಾನಿದ್ದ ಕಾಡನ್ನು ಸೇರಿತು.

ಕಾಂತ–ಕಾಂತೆಯರ ನಡುವೆ ಏರ್ಪಡುವ ಆಕರ್ಷಣೆಯ ಮಧು ಬಹು ಸಾಂದ್ರವಾದದ್ದು. ಮೈಯನ್ನು ಮನಸ್ಸನ್ನು ಇಡಿಯಾಗಿ ಬಿಡಿಯಾಗಿ ಹೊಕ್ಕು ತಾನೇ ತಾನಾಗಿ ತನ್ನದೇ ರಾಜ್ಯವನ್ನು ಮೆರೆಯಿಸುವಂಥಾದ್ದು. ರಾತ್ರಿಯಾದೀತೆಂದು ಕಾದಿದ್ದ ಆನೆ ಉಣಿಸುವುದನ್ನು ಬಿಟ್ಟು ಪುನಃ ಅಂಗನೆಯರತ್ತ ಬಳಿಸಾರಿತು. ಮೈಗೆ ಮೈ ಆನಿಸಿ ನಿಂತು ಸೊಂಡಿಗಳ ಜಡೆ ಹೆಣೆದು ಆನೆಗಳು ರಾತ್ರಿಯಿಡೀ ಮೋದಿಸಿದುವು.

*

ಮನುಷ್ಯನ ರೀತಿ ನೀತಿ ಚರ್ಯೆಗಳು ವಿಚಿತ್ರ. ಎಲ್ಲರಿಗೂ ಉಪದ್ರವ ಕೊಡುತ್ತಿದೆ, ಒಬ್ಬನನ್ನು ಕೊಂದು ಸಹ ಇದೆ ಎಂಬಂಥ ಈ ಆನೆಯನ್ನು

(ಪುಟ ೧೧೪ಕ್ಕೆ)



“ತಾವು ಇದು ತೊಗೊಳ್ಳಕ್ಕೆ ಶುರು ಮಾಡಿದ್ಮೇಲೆ ತಮ್ಮ ಆರೋಗ್ಯ ಸುಧಾರಿಸಿರ್ಬೇಕಲ್ವೆ!”


ತ್ವಚೆಯ ಉರಿತ,
ತುರಿತದ
ಯಾತನೆಯನ್ನು
ಮರೆತುಬಿಡಿ!
ನೈಸಿಲ್
ಬಳಸಿರಿ.
ತ್ವಚೆ ಉರಿತದ ಶೀಘ್ರ
ಉಪಶಮನಕ್ಕಾಗಿ
ಇರುವ ಪೌಡರ್
2
ಪ್ಯಾಕ್‌ಗಳಲ್ಲಿ—
'ಬ್ಲೂ' ಮತ್ತು
ಸ್ಯಾಂಡಲ್‌ವುಡ್
ನೈಸಿಲ್ ತನ್ನಿರಿ.
ತ್ವಚೆಉರಿತವನ್ನು
ಮರೆಯಿರಿ. ಬೆಲೆ,
ಕೇವಲ ರೂ.6 63.*
* ಅತ್ಯಧಿಕ ರಿಟೇಲ್ ದರ,
ಸ್ಥಳೀಯ ತೆರಿಗೆಗಳು ಪ್ರತ್ಯೇಕ.
ಔಷಧಿಯುಕ್ತ ನೈಸಿಲ್
ತ್ವಚೆಯುರಿತವನ್ನು
ಪ್ರತಿ-ಘಟ್ಟದಲ್ಲಿಯೂ
ನಿರ್ಬಂಧಿಸುತ್ತದೆ:
1. ಹೆಚ್ಚಿನ ಬಿಸಿಯುಸಿ
ರನ್ನು ತಡೆಯುತ್ತದೆ.
2. ಬೆವರನ್ನು
ಹೀರಿಕೊಳ್ಳುತ್ತದೆ.
3. ದುರ್ವಾಸನೆ
ಕೊಡುವ
ಕ್ರಿಮಿಗಳನ್ನು
ನಾಶಮಾಡುತ್ತದೆ.
4. ತ್ವಚೆಯನ್ನು
ಸಂತವಿಸುತ್ತದೆ.

ಹೊಸ ವರುಷ

ಹೊಸ ವರುಷದ ಹೊಸ ದಿನವೆ ಬೇಕೆ
ಖುಷಿ ಪಡಲು,
ಹುಸಿ ಹಿಗ್ಗಿನ
ಎಲುವು ಕಡಿಯಲು,
ಎಲುವು ಹರಿಸುವ
ಒಸಡಿನ ಕೆನ್ನೀರ ಕುಡಿಯಲು ?

ಹೊಸ ವರುಷದ ಹಬ್ಬವೆ ಬೇಕೆ
ಕೃತಕ ಉಲ್ಲಾಸದೊಡನೆ
ಕಣ್ಣುಮುಚ್ಚಾಲೆಯಾಡಲು ?
ಬಿಸಿಲು ನೆಳಲಿನ
ಮುಟ್ಟಾಟವಾಡಿ ಓಡಲು ?

ಯಾಕೆ ಇಂದೇ
ಈ ಆಶಾವನ ವಿಹಾರ,
ಅದೇನೋ ಅಂತಾರಲ್ಲ ಆ ಇಚಾರ ?

ಹೊಸ ವರುಷ
ಹೊಸ ಹರುಷ
ತರುವುದೆಂಬ ವಿಶ್ವಾಸ
ತರಲೆಂಬ ಆಶಾವಿಲಾಸ
ಎಷ್ಟು ಸಲ ಹುಸಿಬಿದ್ದಿಲ್ಲ ಇದುವರೆಗೆ ?
ಇಲ್ಲವೆ ಈ ಅಣಕನಾಟಕಕ್ಕೆ ಅಂಕಪರದೆ ?

ಆಡಿದ್ದನ್ನೇ ಆಡುವ
ಹಾಡಿದ್ದನ್ನೇ ಹಾಡುವ
ಕಿಸುಬಾಯಿ ದಾಸರಿಗೆ
ಬುದ್ಧಿಯಿರದಿದ್ದರೆ ಹೋಗಲಿ;
ನಂಬಿ ನಂಬಿ ಮೋಸ ಹೋಗಿಯೂ,
ಮೋಸ ಹೋದಷ್ಟೂ ವಿಶ್ವಾಸ ತಾಳಿ
ನಂಬಿದ್ದನ್ನೇ ನಂಬುವವರಿಗೆ ಬುದ್ಧಿ ಬರಬಾರದೆ ?

ನಿನ್ನೆಯ ಬಣ್ಣದ ಬಸಿರಿನಲ್ಲಿಯೇ
ಬೆಳೆದ ಈ ಬರಡು ದಿನ
ತಂದೀತೆ ತನ್ನಿಂದ ತಾನೆ
ಹಿಗ್ಗಿನ ಹೊಸ ಜನನ ?

ನಮ್ಮ ಪೊಳ್ಳು ಬಯಕೆಗಳ ಜೊಳ್ಳು ಹೊತ್ತ
ಈ ಟೊಳ್ಳು ದಿನ
ಕೊಟ್ಟೀತೆ ನಮಗೆ
ಹೊಸ ವಯಿರಿನ ಸಾಂತ್ವನ ?

ಕೈಲಾಗದವರ ಕನಸುಗಳಿಂದ
ನಪುಂಸಕರ ನನಸುಗಳಿಂದ
ಹೇಡಿಗಳ ಹಾರೈಕೆಗಳಿಂದ
ನರಸತ್ತವರ ಹರಕೆಗಳಿಂದ
ನಾವು ಬೇಡಿದುದನೀವ ವರ್ತಮಾನದ,
ನಾವು ಬಯಸಿದಂತೆ ಮೂಡುವ ಭವಿತವ್ಯದ
ನಿರ್ಮಾಣ ಸಾಧ್ಯವೆ ?

ಷಂಡತನವ ನೀಗಿ ಗಂಡುತನವ ಬಿತ್ತಿರೋ
ಇಂದಿನ ಉರದಲ್ಲಿ;
ಅದೊಂದೇ ಉಪಕಾರಿ, ಸಹಕಾರಿ
ಜೀವನದ ಧುರದಲ್ಲಿ !

— ಸಿದ್ಧಯ್ಯ ಪುರಾಣಿಕ

(ವಸಂತ ಸಂಚಿಕೆಗಾಗಿ ಆಮಂತ್ರಿತವಾದ ಈ ಕವನವನ್ನು ಅನಿವಾರ್ಯ ಕಾರಣಗಳಿಗಾಗಿ ಆ ಸಂಚಿಕೆಯಲ್ಲಿ ಪ್ರಕಟಿಸಲಾಗಲಿಲ್ಲವಾದುದಕ್ಕೆ ವಿಷಾದಿಸುತ್ತೇವೆ. -ಸಂ)

ನಂಬಿದಂತೆ ನಡೆದ
ವಿರಲ ಮನುಷ್ಯ


ಜೀನ್ ಪಾಲ್ ಸಾರ್ತ್ರ್

ಡಾ. ಹಾ. ಮಾ. ನಾಯಕ

ಮನುಷ್ಯನು ಸ್ವತಂತ್ರನಾಗಿರಬೇಕೆಂಬ ಶಿಕ್ಷೆಗೆ ಒಳಗಾಗಿದ್ದಾನೆ. ಏಕೆಂದರೆ ತನ್ನ ಅಸ್ತಿತ್ವವನ್ನು ಅವನು ಆಯ್ದುಕೊಳ್ಳಲಿಲ್ಲ. ಆದರೆ ಒಂದು ಸಲ ಈ ಜಗತ್ತಿಗೆ ಬಂದ ಮೇಲೆ ಅವನು ತನ್ನ ಎಲ್ಲ ನಡವಳಿಕೆಗಳಿಗೂ ತಾನೇ ಜವಾಬ್ದಾರನಾಗುತ್ತಾನೆ...”

ಇದು ಮೊನ್ನೆ ಏಪ್ರಿಲ್ ೧೫ ರಂದು ಪ್ಯಾರಿಸ್ಸಿನ ಆಸ್ಪತ್ರೆಯೊಂದರಲ್ಲಿ ತೀರಿಹೋದ, ಈ ಶತಮಾನದ ಮಹಾದಾರ್ಶನಿಕ, ಸಾಹಿತಿ ಜೀನ್ ಪಾಲ್ ಸಾರ್ತ್ರ್ ಅವರ ಒಂದು ಮಾತು. ಯಾವ ಅಸ್ತಿತ್ವವಾದ ತತ್ವವನ್ನು ಅವರು ಪ್ರತಿಪಾದಿಸಿ, ಅದನ್ನು ಶತಮಾನದ ತತ್ವವನ್ನಾಗಿಸಿದರೋ, ಆ ತತ್ವದ ತಿರುಳೂ ಆಗಿದೆ ಈ ಮಾತು. ಸುಮಾರು ನೂರು ವರ್ಷಗಳ ಇತಿಹಾಸವನ್ನುಳ್ಳ ಈ ತತ್ವಕ್ಕೆ ತಮ್ಮ ಲೇಖನ ಪುಸ್ತಕ ಭಾಷಣಗಳಿಂದ ಸಾರ್ತ್ರ್ ಉಜ್ವಲ ಕಾಂತಿಯನ್ನು ದೊರಕಿಸಿಕೊಟ್ಟರು. ಅದನ್ನು ಅತ್ಯಂತ ಜನಪ್ರಿಯವಾಗಿಸಿದರು. ಸಾರ್ತ್ರ್ ಅವರಿಂದ ಅಸ್ತಿತ್ವವಾದಕ್ಕೆ ಕಣ್ಣು ಕೋರೈಸುವ ಬಣ್ಣ ಬಂತು.

ಅಸ್ತಿತ್ವವಾದ ಎಂದರೇನು? ೧೯೪೫ರ ತಮ್ಮ ಒಂದು ಭಾಷಣದಲ್ಲಿ ಸಾರ್ತ್ರ್ ಇದಕ್ಕೆ ತುಂಬ ಸರಳವಾದ ಉತ್ತರ ಕೊಟ್ಟಿದ್ದಾರೆ. "ಅಸ್ತಿತ್ವ (existance) ಸತ್ವಕ್ಕಿಂತ (essence) ಮೊದಲು ಬರುತ್ತದೆ...ಎಂಬ ನಂಬಿಕೆ ಎಲ್ಲ ಅಸ್ತಿತ್ವವಾದಿಗಳಿಗೂ ಸಮಾನವಾದುದೆಂದು ಅವರು ಹೇಳುತ್ತಾರೆ. ಮನುಷ್ಯ ಮೊದಲು ಇರುತ್ತಾನೆ; ಅವನು ತನ್ನೊಡನೆಯೇ ಮುಖಾಮುಖಿಯಾಗುತ್ತಾನೆ; ಲೋಕದಲ್ಲಿ ಹೊಯ್ದಾಟ ನಡೆಸುತ್ತಾನೆ. ಆಮೇಲೆ ಅವನು ತನ್ನನ್ನು ತಾನೇ ವರ್ಣಿಸಿಕೊಳ್ಳುತ್ತಾನೆ.



ಆರಂಭದಲ್ಲಿ ಅವನು ಏನೂ ಅಲ್ಲ. ಮುಂದೆ ಅವನು ತನ್ನನ್ನು ಏನು ಮಾಡಿಕೊಳ್ಳುತ್ತಾನೋ ಅದು ಆಗುತ್ತಾನೆ. ದೇವರು ಸೃಷ್ಟಿಸುವ ಮನುಷ್ಯ ಸ್ವಭಾವ ಎನ್ನುವುದಿಲ್ಲ. ಮನುಷ್ಯ ಇರುತ್ತಾನೆ. ಅಷ್ಟೇ. ಅವನು ತಾನು **ಮನಸ್ಸು ಮಾಡಿದಂತೆ** ರೂಪುಗೊಳ್ಳುತ್ತಾನೆ. ಮನುಷ್ಯ ಸ್ವಂತ ಸೃಷ್ಟಿಯಲ್ಲದೆ ಬೇರೇನೂ ಅಲ್ಲ. ಇದು ಅಸ್ತಿತ್ವವಾದದ ಮೊದಲ ತತ್ವ ಎಂದು ಸಾರ್ತ್ರ್ ವಿವರಿಸುತ್ತಾರೆ.

ನಿರೀಶ್ವರವಾದಿ ಅಸ್ತಿತ್ವವಾದದ ಆಚಾರ್ಯರಾದ ಅವರು ದೇವರು ಸೃಷ್ಟಿಕರ್ತ ಎಂಬ ಕಲ್ಪನೆಯೊಡನೆ ಕಲಾಸೃಷ್ಟಿಯ ಪ್ರಕ್ರಿಯೆಯನ್ನು ಹೋಲಿಸುತ್ತಾರೆ. ಲೇಖಕನು ಪುಸ್ತಕ ಬರೆದ ಮೇಲೆ ಅವನ ಕೆಲಸ ಮುಗಿಯುತ್ತದೆ. ಅದು ಮುಂದೆ ಲೇಖಕನ ಕೃತಿಯಲ್ಲ. ಅದರಿಂದ ಯಾರು ಏನು ಉಪಯೋಗ ಪಡೆಯುತ್ತಾರೆ, ಯಾರು ಏನು ಅರ್ಥ ಮಾಡುತ್ತಾರೆ. ಇದನ್ನೆಲ್ಲ ಲೇಖಕ ನಿಯಂತ್ರಿಸಲಾರ. ಎಷ್ಟೋ ಸಂದರ್ಭಗಳಲ್ಲಿ ಲೇಖಕನು ಉದ್ದೇಶಿಸಿರದ ಮಾತುಗಳನ್ನು ಯಾರಾದರೂ ಅವನ ಕೃತಿಯಿಂದ ಹೊರಡಿಸಬಹುದು. ದೈವಸೃಷ್ಟಿ ಎಂಬ ಮಾತಾದರೂ ಇಷ್ಟೇ. ಜೀವಿ ಇನ್ನೂ ದೈವವನ್ನೇ ಅವಲಂಬಿಸಿದ್ದರೆ ಅದು ಪ್ರತ್ಯೇಕವಾದುದಲ್ಲ. ಅದಕ್ಕೆ ತನ್ನದೇ ಆದ ಅಸ್ತಿತ್ವವಿಲ್ಲ. ಅದು ದೈವಾವಲಂಬಿಯಾಗಿಲ್ಲದಿದ್ದರೆ ಅದರ ದಾರಿಯೇ ಪ್ರತ್ಯೇಕ. ಅದಕ್ಕೆ ಸೃಷ್ಟಿಕರ್ತನ ಅಗತ್ಯವಿಲ್ಲ. ಮನುಷ್ಯ ಸ್ವತಂತ್ರನಾಗಿರುತ್ತಾನೆ. ಅವನು ತನ್ನ ಅರ್ಥವನ್ನು ದೇವರಿಂದ ಕಂಡುಕೊಳ್ಳುವುದಿಲ್ಲ. ತನ್ನ ಹಡಗಿಗೆ ಅವನೇ ನಾವಿಕ.

ಇದು ಅಸ್ತಿತ್ವವಾದದ ಸ್ವರೂಪ. ಇದನ್ನು ಬಗೆ ಬಗೆಯಾಗಿ ವರ್ಣಿಸಿದ್ದು. ವ್ಯಾಖ್ಯಾನಿಸಿದ್ದು

ಸಾರ್ತ್ರ್ ಅರ್ಧ ಶತಮಾನದ ಉದ್ದಕ್ಕೂ ಮಾಡಿದ ಕೆಲಸ. ಅವರು ಈ ಕೆಲಸದಲ್ಲಿ ಒಬ್ಬ ಕಿಂದರಿ ಜೋಗಿಯಾದರು. ಅವರಿಂದ ಪ್ರಭಾವಿತರಾದವರಿಗೆ, ಅವರನ್ನು ಅನುಸರಿಸಿದವರಿಗೆ, ಆರಾಧಿಸಿದವರಿಗೆ ಲೆಕ್ಕವಿಲ್ಲ.

ಜೀನ್ ಪಾಲ್ ಸಾರ್ತ್ರ್ ೧೯೦೫ರ ಜೂನ್ ೨೧ರಂದು ಪ್ಯಾರಿಸ್ಸಿನಲ್ಲಿ ಮಧ್ಯಮವರ್ಗದ ಕುಟುಂಬ ಒಂದರಲ್ಲಿ ಜನಿಸಿದರು. ಅವರು ಎರಡು ವರ್ಷದ ಮಗುವಾಗಿದ್ದಾಗ ತಮ್ಮ ತಂದೆಯನ್ನು ಕಳೆದುಕೊಂಡರು; ಮೂರನೆಯ ವರ್ಷದಲ್ಲಿ ಅವರ ಒಂದು ಕಣ್ಣಿನ ದೃಷ್ಟಿ ಹೋಯಿತು. ಅವರು ತಮ್ಮ ತಾಯಿಯ ತೌರಿನಲ್ಲಿ ಬೆಳೆದರು. ಅವರ ಬಾಲ್ಯದ ಅನೇಕ ಘಟನೆಗಳು ಅವರ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತವು. ಆ ಕಾಲದ ಜೀವನವನ್ನು ಸಾರ್ತ್ರ್ ತಮ್ಮ ಆತ್ಮಕತೆಯಲ್ಲಿ ಮನೋಜ್ಞವಾಗಿ ನಿರೂಪಿಸಿದ್ದಾರೆ. ಮೊದಮೊದಲು ಅವರು ಅಂಥ ಪ್ರತಿಭಾವಂತ ವಿದ್ಯಾರ್ಥಿ ಎನ್ನಿಸಿಕೊಂಡಿರಲಿಲ್ಲ. ಅವರು ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದುದೂ ಉಂಟು. ೧೯೨೯ರಲ್ಲಿ ಅವರು ತತ್ವಶಾಸ್ತ್ರದಲ್ಲಿ ಅಗ್ರಿಗೇಷನ್ ಪರೀಕ್ಷೆಯನ್ನು ಉನ್ನತ ದರ್ಜೆಯಲ್ಲಿ ದಾಟಿದರು. ಮುಂದೆ ಅವರು ಅನೇಕ ಕಡೆ ತತ್ವಶಾಸ್ತ್ರವನ್ನು ಬೋಧಿಸಿದರು. ಬರ್ಲಿನ್ ನಗರದಲ್ಲಿದ್ದ ಫ್ರೆಂಚ್ ಅಧ್ಯಯನ ಕೇಂದ್ರದಲ್ಲಿ ಅವರು ಒಂದು ವರ್ಷ ತತ್ವಶಾಸ್ತ್ರದ ಉನ್ನತ ಅಧ್ಯಯನ ನಡೆಸಿದರು. ಎರಡನೆಯ ಮಹಾಯುದ್ಧದ ಹೊತ್ತಿನಲ್ಲಿ ಅವರು ಸ್ವಂತ ಇಚ್ಛೆಯಿಂದ ಸೈನ್ಯ ಸೇರಿದರು. ಸೇನೆಯ ಅನುಭವ ಅವರಿಗೆ ಮೊದಲೇ ಇತ್ತು. ಅದರಲ್ಲಿ ಸುಮಾರು ಎರಡು ವರ್ಷ ಸೇವೆ ಸಲ್ಲಿಸಿದ್ದರು. ೧೯೪೦ರ ಜೂನಿನಲ್ಲಿ ಜರ್ಮನ್ನರು ಸಾರ್ತ್ರ್ ಅವರನ್ನು ಬಂಧಿಸಿ, ಒಂಭತ್ತು ತಿಂಗಳು ಸೆರೆಯಲ್ಲಿರಿಸಿದರು. ಆಮೇಲೆ ಅನಾರೋಗ್ಯದ ಕಾರಣದಿಂದ ಅವರ ಬಿಡುಗಡೆಯಾಯಿತು.

ಫ್ರಾನ್ಸಿಗೆ ಹಿಂದಿರುಗಿದ ಮೇಲೆ, ಆಗ ಅಲ್ಬರ್ಟ್ ಕಾಮೂ ಸಂಪಾದಿಸುತ್ತಿದ್ದ 'ಕಮ್‌ಬ್ಯಾಟ್' ಎಂಬ ಭೂಗತ ಪತ್ರಿಕೆಗೆ ಸಾರ್ತ್ರ್ ಬರೆಯತೊಡಗಿದರು. ಅವರು ತಮ್ಮ ಹದಿನೇಳನೆಯ ವಯಸ್ಸಿನಲ್ಲಿಯೇ (೧೯೨೨) ಬರವಣಿಗೆಯನ್ನು ಆರಂಭಿಸಿದ್ದರೂ, 'ಕಮ್‌ಬ್ಯಾಟ್' ಪತ್ರಿಕೆಯ ಮೂಲಕ ಹೆಚ್ಚಿನ ಗಮನ ಸೆಳೆದರು. ಆಕ್ರಮಿತ ಪ್ಯಾರಿಸ್ಸಿನಲ್ಲಿ ಪ್ರದರ್ಶಿತವಾಗಿ ಶತ್ರುಗಳೂ ಮೆಚ್ಚಿ ತಲೆದೂಗಿದ ತಮ್ಮ ಒಂದು ನಾಟಕದಿಂದ ಅವರು ಫ್ರಾನ್ಸಿನ ಬುದ್ಧಿಜೀವಿಗಳ ಮೆಚ್ಚುಗೆಗೂ ಪಾತ್ರರಾದರು. ೧೯೪೪ರ ವರೆಗೂ ಅಧ್ಯಾಪಕ ವೃತ್ತಿಯನ್ನು ಅವಲಂಬಿಸಿದ್ದ ಸಾರ್ತ್ರ್ ಮುಂದೆ ಪೂರ್ಣಕಾಲದ ಲೇಖಕರಾದರು.

ಸಾರ್ತ್ರ್ ಸರಳವ್ಯಕ್ತಿ. ಅವರು ತಮ್ಮ ದೈನಂದಿನ ಕಾರ್ಯಕ್ರಮಗಳಲ್ಲಿ ತುಂಬ ಕಟ್ಟುನಿಟ್ಟಾಗಿದ್ದರು. ದೊಡ್ಡ ಕೆಲಸ ಮಾಡುವ ಯಾರೇ ಆದರೂ ಶಿಸ್ತಿಗೆ ಒಳಗಾಗಿರಬೇಕೆಂದು ಅವರು ಹೇಳುತ್ತಿದ್ದರು. ಪ್ರತಿದಿನ ಮುಂಜಾನೆ ಎಂಟೂವರೆಗೆ ಅವರು ಏಳುತ್ತಿದ್ದರು. ಒಂಭತ್ತೂವರೆ ಹತ್ತು ಘಂಟೆಯಿಂದ ಮಧ್ಯಾಹ್ನ ಒಂದೂವರೆಯ ವರೆಗೆ, ಸಂಜೆ ಐದರಿಂದ ರಾತ್ರಿ ಒಂಬತ್ತರವರೆಗೆ ಅವರು ತಮ್ಮ ಕೆಲಸದಲ್ಲಿ ತೊಡಗಿರುತ್ತಿದ್ದರು. ಪ್ರತಿ ರಾತ್ರಿ ಹನ್ನೆರಡೂವರೆಗೆ ಸರಿಯಾಗಿ ಅವರು ನಿದ್ದೆ ಹೋಗುತ್ತಿದ್ದರು. ಈ ವೇಳಾಪಟ್ಟಿಯನ್ನು ಅವರು ತಾವು ಕೆಲಸ ಮಾಡಲಾಗದಿದ್ದ ಇಳಿವಯಸ್ಸಿನಲ್ಲಿಯೂ ಪರಿಪಾಲಿಸಿದರು. ಆದರೆ ಕೆಲವು ವಿಷಯಗಳಲ್ಲಿ ಅವರ ಜೀವನ ಅವ್ಯವಸ್ಥಿತವಾಗಿತ್ತು. ಹಣಕಾಸಿನ ವ್ಯವಹಾರ, ವಾಸಮಾಡುವ ಮನೆ, ಬರವಣಿಗೆಯ ಜಾಗ ಇಂಥ ವಿಷಯಗಳಲ್ಲಿ ಅವರು ಹೆಚ್ಚಿನ ಗಮನ ತೋರಲಿಲ್ಲ. ಯಾವುದೋ ಹೋಟೆಲಿನಲ್ಲಿ ಬೆಳಗಿನ ಉಪಹಾರ ಸ್ವೀಕರಿಸುತ್ತಿದ್ದರು; ಮತ್ತೊಂದು ಹೋಟೆಲಿನಲ್ಲಿ ಮಧ್ಯಾಹ್ನದ ಊಟ ಮಾಡುತ್ತಿದ್ದರು; ಇನ್ನು ಯಾವುದೋ ಹೋಟೆಲಿನಲ್ಲಿ ತಮ್ಮ ಬರವಣಿಗೆಯ ಕೆಲಸ ನಡೆಸುತ್ತಿದ್ದರು. ಹೊಟೆಲ್ ಮಾಣಿಗಳ ವಿಷಯದಲ್ಲಿ ಸಾರ್ತ್ರ್ ತುಂಬ ಧಾರಾಳಿ. ಅವರು ಕೊಡುತ್ತಿದ್ದ ಭಕ್ಷೀಸನ್ನು ತೆಗೆದುಕೊಳ್ಳಲು ಎಷ್ಟೋ ಸಲ ಮಾಣಿಗಳು ನಾಚುತ್ತಿದ್ದರು. ಅವರ ತಿಂಗಳ ವೆಚ್ಚ ಒಂದೂವರೆ ಮಿಲಿಯನ್ ಫ್ರಾಂಕುಗಳೆಂದು ಅವರೇ ಹೇಳಿಕೊಂಡಿದ್ದಾರೆ. ಇದರ ಜೊತೆಗೆ ಕೇವಲ ಅವರಿಗಾಗಿ ಖರ್ಚಾಗುತ್ತಿದ್ದ ಹಣ ಮೂವತ್ತು ಸಾವಿರ ಫ್ರಾಂಕುಗಳು! ಈ ಹಣವೆಲ್ಲ ಅವರಿಗೆ ಅವರ ಪ್ರಕಾಶಕರಿಂದ, ಲೇಖಕರ ಸಂಘ

ಗಳಿಂದ, ಅಧ್ಯಾಪಕರಾಗಿ ಕೆಲಸ ಮಾಡಿದ್ದಕ್ಕೆ ನಿವೃತ್ತಿವೇತನ ವ್ಯವಸ್ಥೆಯಿಂದ ಬರುತ್ತಿತ್ತು. ತಮ್ಮ ಎಪ್ಪತ್ತನೇ ವಯಸ್ಸಿನಲ್ಲಿ ಅವರು ಇಷ್ಟು ಹಣ ಸಾಲದೆ ಒದ್ದಾಡಿದ್ದುಂಟು. ಇಂಥ ಪ್ರಸಂಗವನ್ನು ಮೊದಲ ಸಲಕ್ಕೆ ಎದುರಿಸುತ್ತಿರುವುದಾಗಿ ಅವರು ಒಂದು ಸಂದರ್ಶನದಲ್ಲಿ ಹೇಳಿದರು.

ಸಾರ್ತ್ರ್ ಮದುವೆಯಾಗಿರಲಿಲ್ಲ. ಮದುವೆಯ ಸಾಂಸ್ಥಿಕ ವ್ಯವಸ್ಥೆಯನ್ನು ಅವರ ಮನಸ್ಸು ಒಪ್ಪಿರಲಿಲ್ಲ. ಆದರೆ ಸೀಮನ್ ದ ಬುವಾ ಎಂಬ ಸುಪ್ರಸಿದ್ಧ ಫ್ರೆಂಚ್ ಲೇಖಕಿ ಅವರ ಬದುಕಿನ ಅರ್ಧ ಶತಮಾನ ಸಂಗಾತಿಯಾಗಿದ್ದಳು. ಅವರಿಬ್ಬರೂ ಒಟ್ಟಿಗೆ ಜೀವನ ಮಾಡಿದರು. ಇದು ಸಾರ್ತ್ರ್ ಮೇಲೆ ಅನೈತಿಕ ಆರೋಪವನ್ನೂ ತಂದಿತು. ತಮಗೆ ಮಕ್ಕಳಾಗಬೇಕೆಂಬುದು ಸಾರ್ತ್ರ್ ಅಪೇಕ್ಷೆಯಾಗಿರಲಿಲ್ಲ. ಆದರೆ ಅವರಿಗೊಬ್ಬ ಸಾಕು ಮಗಳಿದ್ದಳು. ಆಸ್ತಿ ಮಾಡಬೇಕು. ಸಂಪತ್ತನ್ನು ವೃದ್ಧಿಸಬೇಕು ಎಂಬಂಥ ಬಯಕೆಗಳು ಯಾವುವೂ ಅವರಿಗಿರಲಿಲ್ಲ.

ಅವರ ಆತ್ಮ ಕಥೆಯ ಹೆಸರು... 'ಮಾತುಗಳು...' (The Words) ಅದರ ಒಂದು ಭಾಗ, 'ಓದುವುದು' (Reading) ಇನ್ನೊಂದು ಭಾಗ, ಬರೆಯುವುದು. (Writing) ಓದುವುದು ಬರೆಯುವುದು ಸಾರ್ತ್ರ್‌ಗೆ ಉಸಿರಾಟವಾಗಿತ್ತು. ತಮಗೆ ದೃಷ್ಟಿ ನಷ್ಟವಾದಾಗ ಅವರು ದುಃಖದಿಂದ ಹೇಳಿಕೊಂಡರು: "ಓದುವದು ಬರೆಯುವುದು ಸಾಧ್ಯವಾಗದೆ ನನ್ನ ಲೇಖನ ವೃತ್ತಿ ಸಂಪೂರ್ಣ ಹಾಳಾಯಿತು..."

"ಲೇಖಕನು ತನ್ನ ನೆರೆಮನೆಯವರಿಗಾಗಿ ಬರೆಯುತ್ತಾನೆ, ಇಲ್ಲವೆ ದೇವರಿಗಾಗಿ ಬರೆಯುತ್ತಾನೆ. ನಾನು ನನ್ನ ನೆರೆಯವರನ್ನು ಉಳಿಸಬೇಕೆಂದು ದೇವರಿಗಾಗಿ ಬರೆಯತೊಡಗಿದೆ ಎಂದು ಹೇಳುವ ಅವರು ತಮಗೆ ಬೇಕಾದದ್ದು ಕೃತಜ್ಞತೆಯೆಂದೂ ಓದುಗರಲ್ಲ" ಎಂದು ಘೋಷಿಸುತ್ತಾರೆ. ಲೇಖಕನನ್ನು ಗೌರವಿಸುವ ಅತ್ಯುತ್ತಮ ಮಾರ್ಗ ಎಂದರೆ ಅವನನ್ನು ಓದುವದು ಎಂಬುದು ಅವರ ಅಭಿಪ್ರಾಯ.

ಮನುಷ್ಯನ ಸ್ವಾತಂತ್ರ್ಯವನ್ನು ಅತ್ಯುನ್ನತ ಮಟ್ಟದಲ್ಲಿ ತೀವ್ರವಾಗಿ ಪ್ರತಿಪಾದಿಸಿದ ಸಾರ್ತ್ರ್ ತಾವು ಯಾವುದೇ ಕಟ್ಟಿಗೆ ಸಿಕ್ಕಿಕೊಳ್ಳಲು ಇಚ್ಛಿಸಲಿಲ್ಲ. ೧೯೬೪ರಲ್ಲಿ ಅವರಿಗೆ ಸಾಹಿತ್ಯದ ನೋಬೆಲ್ ಪ್ರಶಸ್ತಿಯನ್ನು ಪ್ರಕಟಿಸಲಾಯಿತು. 'ಸಾರ್ತ್ರ್ ಫ್ರೆಂಚ್ ಸಾಹಿತ್ಯ ಪರಂಪರೆಯ ಅತ್ಯುತ್ತಮ ಪ್ರತಿನಿಧಿಯೆಂದು ಭಾವಿಸಿದ ನೋಬೆಲ್ ಪ್ರತಿಷ್ಠಾನ ಅವರ ಸಾಹಿತ್ಯದಲ್ಲಿ ಹೊಮ್ಮಿದ ಸತ್ಯಾನ್ವೇಷಣ ಮತ್ತು ಸ್ವಾತಂತ್ರ್ಯ ಚೇತನಗಳಿಗಾಗಿ ತನ್ನ ಬಹುಮಾನ ಸಲ್ಲುತ್ತದೆಂದು ಹೇಳಿತು. ಸಾರ್ತ್ರ್ ಅವರ ಸ್ವತಂತ್ರ ಜೀವನ ಈ ಲೋಕವಿಖ್ಯಾತ ಬಹುಮಾನವನ್ನು ಪಡೆಯಲು ನಿರಾಕರಿಸಿತು.... ತಾನು ಸಂಸ್ಥೆಯಾಗಿ ಮಾರ್ಪಡುವುದನ್ನು ಲೇಖಕ ಒಪ್ಪಬಾರದು...ಎಂದು ಸಾರ್ತ್ರ್ ಈ ಸಂದರ್ಭದಲ್ಲಿ ಹೇಳಿದರು.

ಸಾರ್ತ್ರ್ ಹಲವು ಗ್ರಂಥಗಳ ಲೇಖಕರು. ಅವರ ಸೃಷ್ಟಿ ಸಾಹಿತ್ಯ ಅವರ ತತ್ವಶಾಸ್ತ್ರಕ್ಕೆ ಜೀವಂತವಾದ ವ್ಯಾಖ್ಯಾನ. ಅವರು ಕತೆ, ಕಾದಂಬರಿ, ನಾಟಕಗಳನ್ನು ಬರೆದಿದ್ದಾರೆ. 'ಇಂಟಿಮಸಿ' ಸಂಕಲನದ ಕತೆಗಳು, 'ನಾಸಿಯ' ಕಾದಂಬರಿ, 'ನೊಣಗಳು' ನಾಟಕ ತುಂಬ ಪ್ರಸಿದ್ಧವಾಗಿವೆ. 'ಅಸ್ತಿತ್ವ ಮತ್ತು ಶೂನ್ಯತೆ' ಎನ್ನುವುದು ಸಾರ್ತ್ರ್ ಅವರ ಆಚಾರ್ಯ ಕೃತಿ. ಅದರಲ್ಲಿ ಅವರು ತಮ್ಮ ಸಿದ್ಧಾಂತವನ್ನು ಸುದೀರ್ಘವಾಗಿ ಪ್ರತಿಪಾದಿಸಿದ್ದಾನೆ. 'ಕ್ರಿಟಿಕ್ ಆಫ್ ಡೈಲಾಕ್ಟಿಕಲ್ ರೀಸನ್' ಎಂಬುದು ಅವರ ಮಹತ್ವದ ಮತ್ತೊಂದು ಗ್ರಂಥ. ಈ ಗ್ರಂಥವನ್ನು ಬರೆದು ನಿಮ್ಮ ಆರೋಗ್ಯವನ್ನು ಹಾಳುಮಾಡಿಕೊಂಡಿರಿ ಎಂದು ಯಾರೋ ಹೇಳಿದ್ದಕ್ಕೆ, ಆರೋಗ್ಯವನ್ನು ಕಾಯ್ದಿಟ್ಟುಕೊಳ್ಳುವುದಕ್ಕಿಂತ ಇಂಥ ಪುಸ್ತಕ ಬರೆಯುವುದು ಮೇಲು, ಎಂದು ಸಾರ್ತ್ರ್ ಉತ್ತರ ಕೊಟ್ಟರು. ಜೊತೆಗೆ ಸೇರಿಸಿದರು. 'ದಯವಿಟ್ಟು ಇದನ್ನು ಜಂಬದ ಮಾತೆಂದು ಭಾವಿಸಬೇಡಿ' ಎಂದು. ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ ವಿವಿಧ ಲೇಖಕರನ್ನು ಕುರಿತು ಸಾರ್ತ್ರ್ ಪ್ರಬಂಧಗಳು ಹಲವು ಸಂಪುಟಗಳಲ್ಲಿ ಪ್ರಕಟವಾಗಿವೆ.

ಸಾರ್ತ್ರ್ ಒಳ್ಳೆಯ ಶೈಲಿವಿದರು. ಶೈಲಿಗೆ ಅವರು ಹೆಚ್ಚಿನ ಮಹತ್ವ ನೀಡುತ್ತಾರೆ. ಸಾಹಿತ್ಯಕಲೆ ಸಿದ್ಧಗೊಳ್ಳುವುದೇ ಶೈಲಿಯಿಂದ ಎಂಬುದು ಅವರ

ಅಭಿಪ್ರಾಯ. ಇಂದಿನ ತರುಣ ಲೇಖಕರು ಶೈಲಿಯ ಬಗ್ಗೆ ಗಮನ ಹರಿಸದಿರುವುದಕ್ಕಾಗಿ ಅವರು ವಿಷಾದಿಸುತ್ತಾರೆ. ಸರಳತೆಯ ಶೈಲಿ ಎಂಬುದನ್ನು ಅವರು ಪೂರ್ಣವಾಗಿ ಒಪ್ಪುವುದಿಲ್ಲ. ಸರಳತೆಯನ್ನು ಒಳಗೊಂಡಿದ್ದರೂ ಶೈಲಿ ಏಕಕಾಲದಲ್ಲಿ ಮೂರು ನಾಲ್ಕು ವಿಚಾರಗಳನ್ನು ಹೇಳುವಂಥದಾಗಿರಬೇಕು. ಸರಳ ವಾಕ್ಯ ಇರುತ್ತದೆ. ಅದಕ್ಕೆ ಸಮೀಪದ ಒಂದು ಅರ್ಥವಿರುತ್ತದೆ. ಈ ಸಮಿಪ ಅರ್ಥದ ಮಡಲಿನಲ್ಲಿ ಅನೇಕ ಅರ್ಥಗಳ ವ್ಯವಸ್ಥೆ ಇರುತ್ತದೆ. ಭಾಷೆಗೆ ಈ ಬಹುತ್ವವನ್ನು ತರಲಾಗದಿದ್ದರೆ ಯಾರೂ ಬರೆಯುವ ಸಾಹಸಕ್ಕೆ ಹೋಗಬಾರದೆಂದು ಸಾರ್ತ್ರ್ ಹೇಳುತ್ತಾರೆ. ಶಾಸ್ತ್ರೀಯ ಬರವಣಿಗೆಯಲ್ಲಿ. ಉದಾಹರಣೆಗೆ ತತ್ವಶಾಸ್ತ್ರದಲ್ಲಿ. ಇದರ ಅಗತ್ಯವಿಲ್ಲ. ಅಲ್ಲಿ ಪ್ರತಿವಾಕ್ಯಕ್ಕೆ ಒಂದೇ ಅರ್ಥ ಇರಬೇಕು. ಮಾತುಗಳನ್ನು ಬಳಸುವ ಕಲಾವಿದ ಮಾತ್ರ ಅವುಗಳಿಂದ ಅರ್ಥದ ಪದರುಗಳನ್ನು ಬಿಚ್ಚುತ್ತ ಹೋಗಬೇಕು. ತಮ್ಮ ಆತ್ಮಕತೆಯಲ್ಲಿ ತಾವು ಇದನ್ನು ಮಾಡಿರುವುದಾಗಿ ಸಾರ್ತ್ರ್ ಹೇಳಿಕೊಳ್ಳುತ್ತಾರೆ.

ಪ್ರತಿಯೊಬ್ಬ ಲೇಖಕನೂ ತನ್ನ ವಿಷಯವನ್ನೇ ಹೇಳಿಕೊಳ್ಳುತ್ತಾನೆ. ಆದರೆ ಹೀಗೆ ಹೇಳಿಕೊಳ್ಳುವುದರ ಮೂಲಕ ಅವನು ಇಡೀ ಲೋಕದ ವಿಷಯವನ್ನೇ ಹೇಳಬೇಕು. ಇದನ್ನು ಎಷ್ಟರ ಮಟ್ಟಿಗೆ ಮಾಡಲು ಅವನು ಸಮರ್ಥನಾಗುತ್ತಾನೋ, ಅಷ್ಟರ ಮಟ್ಟಿಗೆ ಯಶಸ್ಸು ಗಳಿಸುತ್ತಾನೆ. ಸಾರ್ತ್ರ್ ಇಂಥ ದಿಟ್ಟ ಯಶಸ್ವಿಯಾದ ಲೇಖಕರು.

ರಾಜಕೀಯ ಸಿದ್ಧಾಂತದಲ್ಲಿಯೂ ಅವರು ತುಂಬ ಆಸಕ್ತರಾಗಿದ್ದರು. ಮಾರ್ಕ್ಸ್‌ವಾದ ಅವರಿಗೆ ಪ್ರಿಯವಾಗಿತ್ತು. ಒಂದು ಸಲ ಅವರು ಮಾರ್ಕ್ಸ್‌ವಾದ ನಮ್ಮ ಕಾಲದ ಅಂತಿಮ ಸಿದ್ಧಾಂತ ಎಂದು ಹೇಳುವ ಮಟ್ಟಿಗೂ ಹೋಗಿದ್ದರು. ಮುಂದೆ ಅವರು ಭ್ರಮನಿರಸನಕ್ಕೆ ಒಳಗಾದರು. ಮಾರ್ಕ್ಸ್‌ವಾದವನ್ನು ಅನುಷ್ಠಾನಕ್ಕೆ ತರುವವರು ಅದರ ಅಧಿಕಾರ ಅಂಶವನ್ನು ಮಾತ್ರ ಉಳಿಸಿಕೊಂಡಿದ್ದಾರೆಂದು ಕೂರಗಿದರು. ವರ್ಗಸಂಘರ್ಷಣೆ ಮಿಗುತಾಯ ಮೌಲ್ಯ ಮುಂತಾದ ವಿಚಾರಗಳು ಈಗಲೂ ಸುಸಂಗತ ಎಂದು ಅವರು ಒಪ್ಪಿದರು. ಆದರೆ ಇಂದು ನಾವು ಮಾರ್ಕ್ಸ್‌ವಾದವನ್ನು ದಾಟಿ ಮುಂದೆ ಹೋಗಬೇಕಾದ ಅಗತ್ಯವನ್ನು ಪ್ರತಿಪಾದಿಸಿದರು. ಅದು ಸಾಧ್ಯ ಎಂದೂ ವಾದಿಸಿದರು.

ನಮ್ಮ ಕಾಲದ ಅಂತಸ್ಸಾಕ್ಷಿಯ ವಿರಳ ಮಹಾ ಕಾವಲುಗಾರರಲ್ಲಿ ಜೀನ್ ಪಾಲ್ ಸಾರ್ತ್ರ್ ಒಬ್ಬರು. ಅವರು ಎಲ್ಲ ಸಂದರ್ಭಗಳಲ್ಲಿಯೂ ಅನ್ಯಾಯವನ್ನು ಪ್ರತಿಭಟಿಸಿದರು. ಎದುರು ಪಕ್ಷದವರು ಯಾರು ಎಂಬುದನ್ನು ಅವರು ಗಮನಕ್ಕೇ ತೆಗೆದುಕೊಳ್ಳುತ್ತಿರಲಿಲ್ಲ. ಅವರ ಧೋರಣೆಗಳನ್ನು ಒಪ್ಪದ ಕೆಲವರು ಅವರನ್ನು ಬಂಧನಕ್ಕೆ ಒಳಪಡಿಸಬೇಕೆಂದು ಫ್ರಾನ್ಸಿನ ಅಧ್ಯಕ್ಷ ಚಾರ್ಲ್ಸ್ ಡಿಗಾಲೆಯವರನು ಒತ್ತಾಯಪಡಿಸಿದರಂತೆ. ಅವರಿಗೆ ಡಿಗಾಲೆ ಕೊಟ್ಟ ಉತ್ತರದ ವರದಿಗಳು ಎರಡು ಬಗೆಯಾಗಿವೆ. "ವಾಲ್ಟೇರನ ಮೇಲೆ ಮೊಕದ್ದಮೆ ಹೂಡುವದು ಹೇಗೆ ಸಾಧ್ಯ?" ಎಂದು ಡಿಗಾಲೆ ಕೇಳಿದರೆಂದು ಒಂದು ವರದಿ ಹೇಳುತ್ತದೆ. "ಇಡೀ ಫ್ರಾನ್ಸನ್ನೇ ಜೈಲಿಗೆ ಹಾಕುವದು ಹೇಗೆ?" ಎಂದು ಕೇಳಿದರೆಂದು ಮತ್ತೊಂದು ವರದಿ ಹೇಳುತ್ತದೆ. ಇದರಲ್ಲಿ ಯಾವುದೇ ನಿಜವಾಗಿದ್ದರೂ ಅದು ಸಾರ್ತ್ರ್ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಒಬ್ಬ ವ್ಯಕ್ತಿ ಒಂದು ಕಾಲದ ಒಂದು ದೇಶದ ಆತ್ಮವಾಗಿ ಮಾರ್ಪಡುವುದು ಸಾಧ್ಯವಿಲ್ಲ. ಜೀನ್ ಪಾಲ್ ಸಾರ್ತ್ರ್ ತಾವು ಬದುಕಿದ್ದಾಗಲೆ ಇವೆರಡನ್ನೂ ಸಾಧಿಸಿ ಐತಿಹ್ಯವಾಗಿ ಹೋದರು. ✿

ಕ್ರಿ. ಪೂ. ೬ನೆಯ ಶತಮಾನದಲ್ಲಿಯ ಭಾರತದ ವಾಣಿಜ್ಯ ವಸ್ತುಗಳ ಪೈಕಿ 'ಕಸೂತಿ' ಮಾಡಿದ ವಸ್ತ್ರಗಳೂ ವಿದೇಶಗಳಲ್ಲಿ ಜನಪ್ರಿಯವಾಗಿದ್ದವು. ಮೆಗಾಸ್ತನೀಸ್ (ಕ್ರಿ. ಪೂ. ೩೦೦) ಭಾರತದ ಕಸೂತಿಯ ಬಗ್ಗೆ ಬರೆದಿದ್ದಾನೆ.

ಸಂಸ್ಕೃತ ಪದವ್ಯಾಸಂಗ

— ೧೭ —

ಒಂದು ಭಾಷೆಯಲ್ಲಿ ಸಂಬಂಧವಾಚಕ ಶಬ್ದಗಳು ಬಹಳ ಆದಿಕಾಲದವಾಗಿರುತ್ತವೆ. ಆ ಭಾಷೆ ಎಷ್ಟು ಕವಲೊಡೆದು ಎಷ್ಟು ದೂರದೂರ ಚದುರಿಹೋದರೂ ಸಂಬಂಧವಾಚಕಗಳು ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಹಾಗೆಯೆ ಉಳಿದುಬಿಡುತ್ತವೆ. ದ್ರಾವಿಡದ ತಂದೆ, ತಾಯಿ, ಅಣ್ಣ, ಅಕ್ಕ, ತಂಗಿ, ಮಕ್ಕಳು — ಮೊದಲಾದವು ಆ ವರ್ಗದ ಹೆಚ್ಚಿನ ಭಾಷೆಗಳಲ್ಲಿ ಹಾಗೆಯೆ ಉಳಿದುದು ಕಾಣುತ್ತದೆ. "ಆರ್ಯ" ಭಾಷೆಗಳಲ್ಲಿ **ಪಿತೃ, ಮಾತೃ, ಭ್ರಾತೃ** ಮೊದಲಾದವು ಅಟ್ಲಾಂಟಿಕ್ ತೀರದಿಂದ ಇರಾಣ, ಭಾರತದ ವರೆಗೆ ಸ್ವಲ್ಪ ಉಚ್ಚಾರಭೇದದೊಡನೆ ಉಳಿದುಕೊಂಡಿವೆ.

ಈ ಮೂಲ ಸಂಬಂಧವಾಚಿಗಳ ದೀರ್ಘಾಯುಷ್ಯ ಆಶ್ಚರ್ಯಕರವಲ್ಲ. ಆದರೆ ಅಷ್ಟು ಮೂಲಭೂತವಲ್ಲದ ಸಂಬಂಧವಾಚಿಗಳ ವ್ಯಾಪಕತೆ ಕೆಲವೊಮ್ಮೆ ಆಶ್ಚರ್ಯಕರವಾಗಿರುತ್ತದೆ. ಉದಾಹರಣೆಗೆ ಗಂಡ ಸತ್ತವಳನ್ನು ಸಂಸ್ಕೃತದಲ್ಲಿ **ವಿಧವಾ** ಎಂದು ಕರೆಯುತ್ತಾರಲ್ಲ. ಇದೇನು ಅಷ್ಟು ಮೂಲಭೂತ ಪದವಲ್ಲ. ಆದರೆ ಅದು ಇಂಗ್ಲೀಷಿನಲ್ಲಿ **ವಿಡೋ**, ಜರ್ಮನ್ ಭಾಷೆಯಲ್ಲಿ **ವಿತ್ವೇ**, ಪ್ರಾಚೀನ ಇಂಗ್ಲೀಷಿನಲ್ಲಿ **ವಿದೇವೇ**, ಪ್ರಾಚೀನ ಪಾರಸೀಕದಲ್ಲಿ **ವಿದುವಾ**, ಆಧುನಿಕ ಇರಾಣಿಯಲ್ಲಿ **ಬೇವಾ**, ಲ್ಯಾಟಿನ್ನಿನಲ್ಲಿ **ವಿದುವಾ**, ಇತ್ಯಾದಿಯಾಗಿ ಕಾಣಿಸಿಕೊಳ್ಳುತ್ತದೆ. ಆಯಾ ಭಾಷೆಯ ನಿರುಕ್ತಿಕಾರರು ಈ ಶಬ್ದದ ನಿಷ್ಪತ್ತಿಯನ್ನು ಸ್ವಲ್ಪ ಬೇರೆಬೇರೆಯಾಗಿ ಹೇಳುತ್ತಾರಷ್ಟೇ. ಸಂಸ್ಕೃತದವರು **ವಿಧವಾ** ಶಬ್ದಕ್ಕೆ **ವಿ** (= ಇಲ್ಲ) **ಧವ** (= ಗಂಡ, ಒಡೆಯ) ಎಂದು ನಿರುಕ್ತಿ ಹೇಳಿದರೆ ಲ್ಯಾಟಿನ್ನಿನವರು **ವಿದ್** = ಬೇರ್ಪಟ್ಟ ಎಂದಷ್ಟೇ ಹೇಳುತ್ತಾರೆ. ಸಂಸ್ಕೃತದ ದೃಷ್ಟಿಯಲ್ಲಿ ಕೂಡ ಈ ಬಗೆಯ ನಿರುಕ್ತಿ ಸಾಧ್ಯವಿದೆ. **ವಿ** (= ವಿಶೇಷವಾಗಿ) **ಧೂ** (= ನಾಶಹೊಂದು ತಪ್ಪಿಹೋಗು ಅರ್ಥಾತ್ ಬೇರ್ಪಟ್ಟು ಹೋಗು) ಎಂದೂ ವಿವರಿಸಬಹುದು.

ಸಂಬಂಧವಾಚಿಗಳ ದೀರ್ಘಾಯುಷ್ಯಕ್ಕೆ ನಾವು ಬೊಟ್ಟು ಕಚ್ಚುವಂತೆ ಕೆಲವೊಮ್ಮೆ ಅವು ಒಂದು ಭಾಷೆಯಿಂದ ಲೋಪವಾಗಿ ಬಿಡುವುದಕ್ಕೂ ಸೋಜಿಗ ಪಡಬೇಕಾಗುತ್ತದೆ. ಸಂಸ್ಕೃತದಲ್ಲಿ **ಮಗ**, **ಮಗಳು** ಎನ್ನುವುದಕ್ಕೆ **ಪುತ್ರ**, **ಪುತ್ರಿ** ಎಂಬ ಶಬ್ದಗಳು ಬಹಳ ಕಾಲದಿಂದ ಬಳಕೆಯಲ್ಲಿವೆ. ಆದರೆ ಭಾಷಾಶಾಸ್ತ್ರಿಗಳ ಪ್ರಕಾರ ಇದು ಮೂಲತಃ ಸಂಸ್ಕೃತವಲ್ಲ, ಬಹುತರವಾಗಿ ದ್ರಾವಿಡದಿಂದ ಬಂದು ಸೇರಿಕೊಂಡ ಶಬ್ದ. ಮೂಲತಃ **ಸೂನು** ಮತ್ತು **ದುಹಿತೃ** ಎಂಬ ಪದಗಳು ಪುತ್ರ, ಪುತ್ರಿಗಳನ್ನು ಸೂಚಿಸುತ್ತಿದ್ದವು. ವೇದದಲ್ಲೇ ಕಾಣಿಸುವ **ಸೂನು** ಶಬ್ದಕ್ಕೆ ಇಂಗ್ಲೀಷಿನಲ್ಲಿ **ಸನ್** (Son), ಹಳೆ ಇಂಗ್ಲೀಷಿನಲ್ಲಿ **ಸುನು** (Sunu), ಡಚ್ ಭಾಷೆಯಲ್ಲಿ **ಝೂನ್** (Zoon), ಜರ್ಮನ್ನಿನಲ್ಲಿ **ಸೋಹ್ನ್** (Sohn) ಇತ್ಯಾದಿ ಪದಗಳು ಸಂವಾದಿಯಾಗಿವೆ. ಹಾಗೆಯೇ **ಮಗಳು** ಎಂಬರ್ಥದ ಸಂಸ್ಕೃತ **ದುಹಿತೃ**ವಿಗೆ ಇಂಗ್ಲೀಷಿನ ಡಾಟರ್ (daughter), ಜರ್ಮನ್ನಿನ ತೋಖ್ತರ್ (tochter), ಗ್ರೀಕಿನ ತ್ಯೈಗತೀರ್ (thygather) ಇತ್ಯಾದಿಗಳಿವೆ. ಪುರಾತನ **ಸೂನು, ದುಹಿತೃ**ಗಳಿಗಿಂತ ಪರಭಾಷೆಯ **ಪುತ್ರ**, **ಪುತ್ರಿ** ಯಾಕೆ ಹೆಚ್ಚು ಬಳಕೆಗೆ ಬಂದವೆಂದು ಹೇಳುವುದು ಕಷ್ಟ.

ಇಷ್ಟೇ ಆಶ್ಚರ್ಯಕರವೆಂದರೆ ಒಂದಕ್ಕೊಂದು ಸಂಪರ್ಕವೇ ಇಲ್ಲದ ದೂರಸ್ಥ ಭಾಷೆಗಳಲ್ಲಿ ಕೆಲ ಸಂಬಂಧವಾಚಕಗಳು ಇದ್ದುಬಿಡುವುದು. ದ್ರಾವಿಡ ಭಾಷೆಗಳಲ್ಲಿ **ಮಕ್** ಎಂಬುದು ಸಂತಾನಾರ್ಥಕ ಪದ. ಅದರಿಂದಲೇ **ಮಗ, ಮಗಳು, ಮಕ್ಕಳು** ಇತ್ಯಾದಿಗಳು ಬಂದಿವೆ. ಆದರೆ ದ್ರಾವಿಡಕ್ಕೆ ಸಂಬಂಧವಿರದ ಆರ್ಯ ಗುಂಪಿನ ಪುರಾತನ ಕೆಲ್ಟಿಕ್ ಮತ್ತು ಅದರ ಇಂದಿನ ಉತ್ತರಾಧಿಕಾರಿಗಳಲ್ಲಿಯೂ ಸಂಬಂಧವಿರದ Mac ಎಂಬ ಪದ ಸಂತಾನಾರ್ಥಕವಾಗಿದೆ. Macdonald, Mackintosh ಇತ್ಯಾದಿ ಸ್ಕಾಟಿಶ್ ಅಡ್ಡ ಹೆಸರುಗಳಲ್ಲಿ ಅದು ತನ್ನ ಅಸ್ತಿತ್ವ ತೋರಿಸುತ್ತದೆ. — ಸಾವೆಂ

286-7

ಇಳಿಜಾರು

ನನಗಿನ್ನೂ ಇಪ್ಪತ್ತೈದೇ ವಯಸ್ಸು
ಎನ್ನುತ್ತ ಎನ್ನುತ್ತ ಮುವತ್ತೈದೂ ಆಗುತ್ತ
ಬಂತು.
ಕಾಲರಾಯನ ಕಾಲು(ರು) ಹೀಗೇ ನಡೆದರೆ
(ಓಡಿಧರೆ) ನಲವತ್ತು ಆಗುವುದು ಬೇಗ.
ಮುವತ್ತರ ನಂತರ ಜೀವನವುಂಟೆ?
ಎನ್ನುತ್ತಿದ್ದ ನನಗೆ–
ವಯಸ್ಸಾದರೇನು? ಅನುಭವ ಶೇಖರಣೆಯಾದೀತು
ಎನ್ನುವಂತಾಗಿದೆ ಈಗ
ಜಾರಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ
(ಮೀಸೆ ಎಂದಾಗ ನೆನಪಾಯ್ತು,
ತಲೆಗೂದಲಿರಲಿ, ಮೀಸೆಯಲೂ
ಒಂದೊಂದು ಬಿಳಿಗೂದಲುಂಟು).

*

ದೊಡ್ಡ ಹುದ್ದೆಗೆ ನೀ ಕಿರಿಯ ಎನ್ನುವರು,
ಛಲವಿರುವ ಮುಂದಾಳ್ತನಕೆ
ವಯಸ್ಸು ಮೀರಿ, ಹುಮ್ಮಸ್ಸು ಸಾಲದೆನ್ನುವರು.
ಬಿಳಿಗೂದಲಿಲ್ಲದೇ ಮನ್ನಣೆ ಇಲ್ಲವೆನ್ನುವರು
ನರೆತವನ ಕಂಡೊಡನೆ ಮರುಕ ತೋರುವರು.
ಅಗ್ರೇಸರನಾಗುವೆನೆಂದು,
ಬಲು ಬಯಸಿ, ಬವಣೆ ಪಟ್ಟಾಗ,
'ಅಗ್ರೆಸಿವ್' ಆದಲ್ಲದೇ
ಅಗ್ರೇಸರನಾಗಲಾರೆ ಎನ್ನುವರು.
ಅಗ್ರೆಸಿವ್ ಆದಾಗ
'ಅಬ್‌ನಾಕ್ಷಸ್' ಎನ್ನುವರು!
ಅಂತು ಒಟ್ಟನಲಿ
ಹುದ್ದೆಯಲಿ ಗೆದ್ದೆನೆನುವಂತಿಲ್ಲ,
ಬಿದ್ದೆನೆನುವಂತಿಲ್ಲ,
ಬಿದ್ದರೂ ಎದ್ದು ನಿಲುವಂತಿಲ್ಲ,
ಕೋಪದಲಿ ಕುದ್ದರೂ, ಮೇಜು ಗುದ್ದುವಂತಿಲ್ಲ
ಹದ್ದು ಮೀರುವಂತಿಲ್ಲ, ಸದ್ದು ಮಾಡುವಂತಿಲ್ಲ,
ಕದ್ದು ಓಡುವಂತಿಲ್ಲ,
ಮದ್ದಿಲ್ಲದಾ ರೋಗ ಮಧ್ಯ ವಯಸ್ಸು.
ಆಸೆಗಳ ಬಿಟ್ಟು, ಕಾಮಗಳ ಸುಟ್ಟು,
ವೃಕ್ಷ ಒಂದರ ಕೆಳಗೆ
ಬುದ್ಧನಾಗಿ ಬಿದ್ದುಕೊಳುವುದೇ ಲೇಸು!
ಆದರೆ...
ಮುಮ್ಮುಗ್ಗಲೇಬೇಕೆಂಬ ಮೋಹ ಒಳಗೆ,
ಜಗ್ಗುತಿರುವಾ ದೇಹ ಹೊರಗೆ
ಕುಗ್ಗಲಾರೆನು, ಬಗ್ಗಲಾರೆನು
ಎಂಬ ಕೆಟ್ಟ ಛಲದಲಿ
ಮುಗ್ಗರಿಸುತಿರುವೆ–ನಾ ಗುಗ್ಗು.

*

ನಿಜವನೆದುರಿಸುವುದೂ ಒಂದೆ,
ಬೆಂಕಿಯಲಿ ಧುಮ್ಮಿಕ್ಕುವುದೂ ಒಂದೆ,
ಇದನರಿತು, ಸತ್ಯಕೆ ಬೆದರಿ,
ಮಿಥ್ಯೆಯ ಜಗತ್ತೇ ಮೇಲು,
ಸತ್ಯವನು ಮುಂದೂಡುವುದೇ ಬಾಳು,
ಎಂದೆಲ್ಲ ಬಗೆದು
ಮನೆ ಬೇಡ, ಮಠ ಬೇಡ,
ಸಂಸಾರ ಸಮರವು ಬೇಡ,
ಕೂಟ–ಕೋಟಲೆ ಬೇಡ,
ಕಾಟ ಕೀಟಲೆ ಬೇಡ,
ಎನ್ನುತ್ತ,
ಜ್ಞಾನಾರ್ಜನೆ ಮಾಡುವೆನೆಂದು
ಭ್ರಮಿಸುತ್ತ,
ಜ್ಞಾನಪೀಠ(?)ಗಳಲ್ಲಿ ಕಳೆದ (ಕಳೆದುಕೊಂಡ)
ದಿನಗಳನು (ಯುಗಗಳನು)
ನೆನೆಸಿದರೆ–ಎಣಿಸಿದರೆ
ತಲೆ ನರೆತರೇನಂತೆ?

ಕೇಶರಾಶಿ ಉದುರದೇ ಉಳಿದದ್ದು
ಪೂರ್ವಾರ್ಜಿತ ಪುಣ್ಯಫಲ.
(ಮೂವತ್ತೇನು ನಲವತ್ತೇನು
ಮಿಥ್ಯೆಯ ಜೀವನಕೆ?)

*

ಪಿತ್ತ–ವಾತ–ಆರ್ತರೈಟಿಸ್ಸುಗಳು
ಬಂದು ಬಡಿಯುವ ಮುನ್ನ
ಏನಾದರೊಂದು ಸಾಧಿಸುವಾಸೆ.
ಕಾಲರಾಯನ ಕಾಲಿ(ರಿ)ಗೆ
ಬೇಕು ಬ್ರೇಕು.
ಅವನ ಗತಿಗೊಂದು ಮಿತಿ ಬೇಕು.
ಗತಿಗೆ ಮಿತಿಯಿಲ್ಲ, ಮತಿಗೇಕೆ ಮಿತಿ ಬಂತು?
ಇಳಿಜಾರಿನಲಿ ಗತಿಗೆ ಮಿತಿ ಇಲ್ಲ–
ಮಿತಿಗೂ ಮತಿ ಇಲ್ಲ!

*

ನಾನು ಏನೂ ಸಾಧಿಸಲಿಲ್ಲ,
ಎಂದು ಕಣ್ಣೀರಿಲ್ಲ.
ಮುಂದೆ ಸಾಧಿಸಲಾರೆನೋ
ಭವಿಷ್ಯ ನುಡಿದವರಿಲ್ಲ.
ಸಾಧಿಸದಿದ್ದರೆ ತಾನೆ ಕೇಡೇನು ಇಲ್ಲ.
ಅಳಿದ ಅನಂತ ಜೀವಿಗಳಲ್ಲಿ
ಸಾಧಿಸಿದವರೆಷ್ಟು?
ಗೆದ್ದು ಉಳಿದವರೆಷ್ಟು?
ಉಳಿದ ಕೋಟಿಗಳಲ್ಲಿ
ಉಳಿದು ಗೆಲುವವರೆಷ್ಟು?
ಉಳಿಯದೇ ಅಳಿದ ಅನಂತಕ್ಕೆ
ನಾನೂ ಒಬ್ಬ ಸೇರಿದರೆ
ಅನಂತದ ಬೆಲೆಗೇನೂ ಕುಂದಿಲ್ಲ!
ಹಿಂದಂತೂ ಕಿಸಿಯಲಿಲ್ಲ
ಎಂಬೊಂದು ಕಸಿವಿಸಿ.
ಮುಂದೂ ಕಿಸಿಯದಿದ್ದರೆ
ಎಂಬೊಂದು ರೀತಿಯ ಭೀತಿ.
ಭೀತಿಯ ಅರಿವು, ಅರಿವಿನ ಭೀತಿ.
ಭೀತಿಯ ನೋವು, ನೋವಿನ ಭೀತಿ.
ಮಿತಿ ಇಲ್ಲದ ಭೀತಿ, ಮಿತಿ ಇರುವ ಮತಿ.
ಮತಿಯು ಮಿತಿ, ಮಿತಿಯು ಅರಿವು,
ಅರಿವಿನ ನೋವು, ನೋವಿನ ಅರಿವು
ಅರಿವಿನ ಅರಿವು... ಇದೋ
ಇದೊಂದು ಅನಂತ ಪಂಕ್ತಿ.

*

ಅತಿ ಸಾಮಾನ್ಯ ನಾನು, ಕಾಳಜಿ ಇಲ್ಲ.
ಅತಿ ಸಾಮಾನ್ಯ ನಾನೆಂಬುದನು
ಅರಿಯಲಾರದ ಮತಿಹೀನ ನಾನಲ್ಲ.
ಪರಿಣತಮತಿಯ ಅತಿರಥ ಮಹಾರಥ
ನಾನೆಂದು ಭ್ರಮಿಸುವ ಭ್ರಾಂತಿ ಎನಗಿಲ್ಲ.
ಮಿತ ಮತಿಯ ಗತಿಹೀನನಾದರೂ,
ಏನಾದರೊಂದು ಸಾಧಿಸುವಾಸೆ.
(ಈ ಮಧ್ಯೆ ಬಿಳಿಗೂದಲ ಮೀಸೆ!)
ಮುವತ್ತು ಮೀರಿದ ಮೂರುತಿ
ಮಧ್ಯವಯಸಿನ ಕೋತಿ
ಇಳಿಜಾರಿನಲಿರುವ ಗುಂಡು
ತುದಿಯ ದಾಟಿದ ಗಂಡು
ಎಂದೆಲ್ಲ ಅನ್ನುವರು, ಆಡುವರು.
ಮುವತ್ತೇ ತುದಿ ಎಂದೆಣಿಸುವವರು.
ಏರು ಜಾರುಗಳೆಲ್ಲ ಮನಸ್ಸಿನ ಕಾರುಬಾರು.
ತುದಿಯ ಮುಂದೂಡಿ
ಚಲನೆಯ ದಿಕ್ಕನ್ನೇ ಬದಲಿಸುವವ
ನಾನು.
ಅಧೋಮುಖವನೆತ್ತಿ
ಊರ್ಧ್ವಮುಖಿಯಾಗುವವ
ನಾನು.
ನಾ ಬಲು ಭಂಡ.
ನನಗಿನ್ನೂ ಮುವತ್ತೇ
ಎನ್ನುತ್ತ ಎನ್ನುತ್ತ
ಮತ್ತೊಂದು ದಶಕ ದಾಟುವವ
ನಾನು!

–ವೈ. ಶ್ರೀ. ನ.

(ಅಮೇರಿಕದಲ್ಲಿ ನೆಲಸಿದ ಕನ್ನಡಿಗರ ಆತ್ಮನಿರೀಕ್ಷಣೆ)

ಗೂರಲೊಂದಿಗೆ ಸಹಬಾಳ್ವೆ

ಡಾ. ಡಿ. ಎಸ್. ಶಿವಪ್ಪ

ಗೂರಲನ್ನು ಅನುಭವಿಸುವುದು ಕಷ್ಟ. ಶಾಶ್ವತವಾಗಿ ಗುಣಪಡಿಸುವ ಮದ್ದುಗಳಿಲ್ಲ. ಆದರೆ, ರೋಗಿ ಪರಿಸರವನ್ನೂ ತನ್ನನ್ನೂ ತಾನು ಅರಿತು ಹೊಂದಿಕೊಳ್ಳುವುದರಿಂದ ಎಂದಾದರೂ ಗೂರಲೇ ಅನುಭವಿಸಿಲ್ಲವೇನೋ ಎನ್ನುವಂತಿರಲು ಈಗ ಸಾಧ್ಯ.

ಗೂರಲಿನ ಉಬ್ಬಸ(ದಮ್ಮು) ಎಳೆಯುತ್ತಿರುವಾಗ ರೋಗಿಯ ಸಂಕಟವನ್ನು ನೋಡುವುದಕ್ಕಾಗುವುದಿಲ್ಲ. ಅನುಭವಿಸುವುದಂತೂ ಇನ್ನೂ ಪ್ರಯಾಸಕರ. ಉಸಿರಾಡುವುದೇ ಕಷ್ಟವಾಗುವ ರೋಗವಿದು. ಉಸಿರೆಳೆದುಕೊಳ್ಳುವುದು ಕಷ್ಟ. ಉಸಿರುಬಿಡುವುದು ಇನ್ನೂ ಕಷ್ಟ. ಇದು ಕೆಲವೇಳೆ ಎಷ್ಟೊಂದು ಕಷ್ಟವಾಗುವುದೆಂದರೆ ಒಳಗಿರುವ ಉಸಿರನ್ನು ಹೊರಬಿಟ್ಟರೆ ಸಾಕು, ನಾನು ಮತ್ತೆಂದಿಗೂ ಉಸಿರೆಳೆದುಕೊಳ್ಳಬಯಸುವುದಿಲ್ಲ, ಎನ್ನುವನು ರೋಗಿ. ದಮ್ಮು ಎಳೆಯುತ್ತಿರುವಾಗ ರೋಗಿಯ ಎದೆಗೂಡು ಅತಿಯಾಗಿ ಉಬ್ಬಿ ಗುಡಾಣದಂತಾಗಿರುತ್ತದೆ. ಉಬ್ಬಸ ಎಳೆಯಲು ಕಾರಣ, ಕೆಲವು ಕಿರಿಯ ಸ್ನಾಯುಗಳ ಎಳೆಗಳ ಸೆಟೆತ. ಪುಪ್ಪುಸಗಳ ಬಲು ಸಣ್ಣಗಾಳಿನಾಳಗಳ (ನವಿರುಸಿರ್ನಾಳಗಳ) ಸುತ್ತಲೂ ಈ ಸ್ನಾಯು ಎಳೆಗಳಿರುವುವು.

ಗೂರಲಿನಲ್ಲಿ ಎರಡು ಬಗೆಗಳನ್ನು ಗುರುತಿಸಬಹುದು. ಎಳೆಯರಲ್ಲಿ ಬೇರೆಲ್ಲ ರೀತಿಯಿಂದಲೂ ಆರೋಗ್ಯವಂತರಾಗಿ ತೋರುವವರಲ್ಲಿ ಬರುವುದೊಂದು. ಎದೆಗೆಮ್ಮು (ಬ್ರಾಂಕೈಟಿಸ್) ಮೇಲಿಂದ ಮೇಲೆ ಬಾಧಿಸಿ ಎದೆಗೂಡು ಮೊದಲೇ ಇನ್ನೂ ಹಿಗ್ಗಿ ಕುಗ್ಗದಂತಾಗಿರುವವರದು ಮತ್ತೊಂದು. ಎಳೆಯರ ಗೂರಲನ್ನು ಸುಲಭವಾಗಿ ಹತೋಟಿಯಲ್ಲಿಡಬಹುದು. ಎರಡನೆಯದು ಅಷ್ಟು ಸಲೀಸಾಗಿ

ಸಿಗ್ಗುವುದಿಲ್ಲ. ರೋಗಿ ತನ್ನ ಮುಖ್ಯ ರೋಗ ಲಕ್ಷಣಗಳ ಕಾರಣಗಳನ್ನು ಅರಿತರೆ ವೈದ್ಯನಿಗೆ ಅಲ್ಲದೆ ತನಗೂ ಹೆಚ್ಚಿನ ನೆರವು ನೀಡಬಲ್ಲ.

ತಲೆಮಾರು–ಗುಣ, ಒಗ್ಗದಿಕೆ (ಅಲರ್ಜಿ) ಸೋಂಕು, ಮನೋದ್ವೇಗ ಹೀಗೆ ಗೂರಲಿಗೆ ನಾಲ್ಕು ಕಾರಣಗಳನ್ನು ಹೇಳುವುದುಂಟು. ಒಂದೇ ಕಾರಣದಿಂದ ಗೂರಲಿನ ಉಬ್ಬಸ ತಲೆದೋರಬಹುದು. ಬಹುವೇಳೆ ಉಬ್ಬಸ ಕೆರಳಿದೆಯೋ ಇವುಗಳಲ್ಲಿ ಎರಡೋ ಮೂರೋ ಕಾರಣಗಳು ಇದ್ದೇ ಇರಬಹುದು. ಕೊನೆಗೆ ಮತ್ತೊಂದು ಏನೋ ಸಣ್ಣ ಸಂಗತಿಯಿಂದ ಉಬ್ಬಸ ಕೆರಳುತ್ತದೆ. ಒಂದು ಸೆಗಡಿ ಇಲ್ಲದೆ ಹೊಗೆ ತುಂಬಿದ ಪರಿಸರದಲ್ಲಿ ಒಂದು ಸಂಜೆ ಕೊಂಚ ಹೊತ್ತು ಕಳೆದುದರಿಂದ ದಮ್ಮು ಎಳೆಯುತ್ತದೆ.

ತಲೆಮಾರು ಗುಣವೆಂದರೆ, ನೀಳವಾದ ಮೂಗು, ಅಗಲವಾದ ಕಿವಿಗಳಂತಹ ಕೇವಲ ದೈಹಿಕ ಅಂಶವಲ್ಲ. ನಮ್ಮ ಮೈ ಪ್ರಕೃತಿಯ ಜೊತೆಗೆ ಬಾಳ್ವೆಯ ಮೇಲಿನ ಒಂದು ರೀತಿಯ ನಮ್ಮ ಮನೋಭಾವವನ್ನು ತಲೆಮಾರಿನ ಗುಣವಾಗಿ ಪಡೆದು ಕ್ರಮೇಣ ಅದನ್ನೇ ರೂಢಿಸಿಕೊಳ್ಳುತ್ತೇವೆ. ಲಾಟರಿಯಲ್ಲಿ ಭಾರಿ ಬಹುಮಾನವನ್ನು ಗಿಟ್ಟಿಸಿದ ಹಾಗೆ, ನಮ್ಮ ನೆರೆಹೊರೆಯೂ ಪರಿಸರವೂ ಬದಲಾದರೆ ನಮ್ಮ ಮನೋಧರ್ಮವೂ ವ್ಯತ್ಯಾಸವಾಗುತ್ತದೆ. ಗೂರಲಿನ ತಂದೆತಾಯಂದಿರಿರುವ ಮಗುವಿಗೆ ಎಳೆತನದಲ್ಲೇ ಗೂರಲು ಬಂದರೆ, ಸಾಯುವ ತನಕವೂ ಅದಕ್ಕೆ ಉಬ್ಬಸ ಎಳೆಯಬೇಕಿಲ್ಲ. ಎಷ್ಟೋ ವೇಳೆ, ಅದರ ಪರಿಸರದಲ್ಲಿ ಒಂದು ಸಣ್ಣ ಬದಲಾವಣೆಯಾದರೂ, ಅದರ ಗೂರಲಿನಲ್ಲಿ ಅಪಾರ ವ್ಯತ್ಯಾಸವಾಗುತ್ತದೆ.

ತನ್ನ ಎದೆಗೂಡನ್ನು ಸಹಜವಾಗಿ ಬೆಳೆಸಿಕೊಳ್ಳುವಂತೆ ಗೂರಲಿನ ಮಗುವಿಗೆ ಬಲು ಚುರುಕಾದ ಚಿಕಿತ್ಸೆ, ಶುಶ್ರೂಷೆ ನೀಡಬೇಕು.

ಗೂರಲು ಮಗುವಿಗೆ ನೀಡಲು ಎಷ್ಟೋ ಮದ್ದುಗಳಿವೆ. ಆದರೆ ಉಸಿರಾಟದ ವ್ಯಾಯಾಮ ಇನ್ನೂ ಮುಖ್ಯ. ಮಗುವಿನ ತಾಯಿ ಹೆರಿಗೆ ಮುಂಚಿನ ವ್ಯಾಯಾಮಗಳನ್ನು ಇಷ್ಟಪಡದ ಹಾಗೆಯೇ ಮಗುವಿಗೂ ನಿಯೋಜಿತ ವ್ಯಾಯಾಮ ಸರಿಬೀಳುವುದಿಲ್ಲ.

ಗೂರಲು ರೋಗಿಯ ವ್ಯಾಯಾಮಕ್ಕೆ ಯಾವಾಗಲೂ ಆಸ್ಪತ್ರೆಯ ಭೌತರೋಗ ಚಿಕಿತ್ಸೆಯ (ಫಿಸಿಯೋ ತೆರಪಿ) ವಿಭಾಗಕ್ಕೆ ಹೋಗಿ ಬರುವುದು ಶ್ರಮಸಾಧ್ಯ. ಉಸಿರಾಟದ ಆಟವೆಂದರೆ ಮಕ್ಕಳಿಗೆ ಇಷ್ಟವಾಗುತ್ತದೆ. ಮಗುವಿಗೆ ಗೂರಲೂ ಮರೆತು ಹೋಗುವುದು. ಮಗುವಿಗೆ ಇಷ್ಟವಾಗುವ ಆಟಗಳನ್ನೇ ಆರಿಸಬೇಕು. ಮಗುವಿಗೆ ಈಜಾಟ ಇಷ್ಟವೆನಿಸಿದರೆ ಮದ್ದುಗಳ ಮೇಲೆ ಸುರಿಯುವುದಕ್ಕಿಂತಲೂ ಈಜುವ ಕೊಳದ ಟಿಕೆಟ್ಟಿಗೆ ಹಣವನ್ನು ಕಟ್ಟುವುದರಿಂದ ಹೆತ್ತವರಿಗೆ ಲಾಭ ಗಿಟ್ಟುವುದು. ಎಲ್ಲಕ್ಕಿಂತಲೂ ಮಿಗಿಲಾಗಿ ಖರ್ಚಿಲ್ಲದ ಚಿಕಿತ್ಸಾ ಕ್ರಮವೆಂದರೆ ಪ್ರಾಣಾಯಾಮ. ಮಗು ಪ್ರಾಣಾಯಾಮ ಆಚರಿಸಲು ದೊಡ್ಡವರು ಮಾದರಿಯಾಗಬೇಕು.

ಪುಪ್ಪುಸಗಳಲ್ಲಿರುವ ನವಿರು ಸಿರ್ನಾಳಗಳ ಒಳಪರಿಯಾಗಿರುವ ಜೀವಕಣಗಳು ಪರಾಗಕಣ, ಹೊಗೆ, ಧೂಳು, ಕೊನೆಗೆ ತಂಗಾಳಿಯಿಂದ ಕೆರಳಿದರೆ, ತುರುಚೆ ಸೊಪ್ಪು ಚರ್ಮಕ್ಕೆ ತಾಕಿದಾಗ ಊದಿಕೊಳ್ಳುವ ಹಾಗೆ, ಒಳಗೇ ಊದಿಕೊಳ್ಳುತ್ತವೆ. ಒಳಪರಿಯಾದ ಜೀವಕಣಗಳ ಈ ಊತದಿಂದ ಉಸಿರ್ನಾಳ ಕಿರಿಯದಾಗಿ ಉಸಿರಾಡಲು ಕಷ್ಟವಾಗುವುದು. ಕೆರಳಿಸುವ ಈ ವಸ್ತುಗಳಿಗೆ ಕೆಲವರಂತೂ ಬಲು 'ಸೂಕ್ಷ್ಮವಾಗಿದ್ದು ಸುಲಭವಾಗಿ ಈಡಾಗುತ್ತಾರೆ. ಅಂಥವರೇ ಗೂರಲು ರೋಗಿಗಳು.

ತಂಗಾಳಿ, ಧೂಳುಗಳಿಂದ ದೂರವಿದ್ದರೆ ಗೂರಲು ರೋಗಿ ಎಷ್ಟೋ ಹಾಯಾಗಿರಬಹುದು. ದಿನವೆಲ್ಲ ಬೆಚ್ಚನೆಯ ಕೋಣೆಯಲ್ಲಿದ್ದು ಆ ಮೇಲೆ ಸಂಜೆಯ ತಂಗಾಳಿಗೆ ಮೈಯೊಡ್ಡಿದರೆ ಗೂರಲು ರೋಗಿಯನ್ನು ಕೆರಳಿಸುತ್ತದೆ. ಹಗಲು–ರಾತ್ರಿಗಳ ನಡುವಣ ಸಂಗಮದ ಹೊತ್ತಿನಲ್ಲಿ ಹವೆಯ ಬದಲಾವಣೆ, ಬೆಂಗಳೂರಿನಲ್ಲಿ ಆಗುವಂತೆ, ಸರಕ್ಕನೆ ಆಗುವ ಹೊತ್ತಿನಲ್ಲಿ ಹೊರಗೆಲ್ಲೂ ತಲೆಹಾಕದೆ ಮನೆಯೊಳಗೇ ಇರುವುದಾದರೆ ಗೂರಲನ್ನು ಮರೆತು ಬಿಡಬಹುದು. ಅಂದರೆ ಗೂರಲಿನವ ಮುಂಬೆಳಗಿನಲ್ಲೂ ಸಂಜೆಯಲ್ಲೂ ಹೊರಗೆ ಕಾಲಿಡಬಾರದು. ಹಕ್ಕಿಗರಿಗಳಿರುವ ಮೆತ್ತನೆಯ ತಲೆದಿಂಬಿಗಿಂತಲೂ ಬುರುಗರಬ್ಬರಿನದು ಗೂರಲು ರೋಗಿಗೆ ಲೇಸು. ಬೆಚ್ಚನೆಯ ಮಲಗುವ ಕೋಣೆಯಂತೂ ಎಂಥ

ಗೂರಲು ರೋಗಿಗಾದರೂ ಆರಾಮಕರ, ಸುಖದಾಯಕ.

ಚರ್ಮದ ಪರೀಕ್ಷೆಗಳು

ಯಾವುದಾದರೂ ವಸ್ತುವಿಗೆ ರೋಗಿ ಸೂಕ್ಷ್ಮವಾಗಿರುವುದನ್ನು ಇಲ್ಲವೇ ರೋಗಿಗೆ ಒಗ್ಗದಿರುವುದನ್ನು ಪತ್ತೆ ಹಚ್ಚಲು, ರೋಗಿಯ ಮುಂದೋಳಿನ ಚರ್ಮದೊಳಕ್ಕೆ ವೈದ್ಯ ಕೆಲವು ವಸ್ತುಗಳ ದ್ರಾವಣಗಳನ್ನು ಚುಚ್ಚಿ ನೋಡುವನು. ಹಾಗೇನಾದರೂ, ಯಾವುದಕ್ಕಾದರೂ ರೋಗಿ ಸೂಕ್ಷ್ಮವಾಗಿದ್ದರೆ, ಏನಾದರೂ ಒಗ್ಗದಂತಿದ್ದರೆ, ಅದಕ್ಕೆ ರೋಗಿ ಒಗ್ಗಿಕೊಳ್ಳುವಂತೆ ಮಾಡಲು ಅದೇ ವಸ್ತುವನ್ನು ಅತಿ ಸೂಕ್ಷ್ಮ ಪ್ರಮಾಣದಲ್ಲಿ ಚುಚ್ಚುತ್ತಾ ಹೋಗುವನು. ಇಷ್ಟಾದರೂ, ವಾಸ್ತವಿಕವಾಗಿ ಎಲ್ಲರಿಗೂ ಇದರಿಂದ ಗುಣ ಕಾಣುವುದಿಲ್ಲ. ಲಾಟರಿ ಇದ್ದ ಹಾಗೆ, ಇದರಿಂದ ಕೆಲವರಿಗೆ ಸಂಪೂರ್ಣ ಗುಣ ಕಂಡರೆ, ಬೇರೆಯವರಿಗೆ ಏನೇನೂ



"ಕರ್ಣನ ಪಾತ್ರ ವಹಿಸೋದಕ್ಕೆ ಟೈಮಿಗೆ ಸರಿಯಾಗಿ ಬರ್ಲಿಕ್ಕಾಗ್ಲಿಲ್ಲ ಸಾರ್... ದಾರಿಯಲ್ಲಿ ನನ್ನ ಕಾರಿನ ಚಕ್ರ ಹೂತುಹೋಯಿತು."

ಗುಣ ಕಾಣದಿರಬಹುದು. ಒಂದು ವಿಷಯ ಮಾತ್ರ ನಿರ್ಧಾರವಾಗುತ್ತದೆ; ಆ ರೋಗಿಯ ಉಬ್ಬಸಕ್ಕೆ ಒಗ್ಗದಿಕೆ ಕಾರಣವಾಗಿರುವುದಿಲ್ಲ.

ಹುಳುಕು ಹಲ್ಲು ಇಲ್ಲವೆ ಮೆಂಕೆಯುರಿತ ದಂತಪ (ಟಾನ್ಸಿಲೈಟಿಸ್) ಸಣ್ಣ ಸೋಂಕಿನಿಂದಲೇ ಗೂರಲಿನ ಉಬ್ಬಸ ಕೆರಳಬಹುದು. ಇನ್ನೊಂದೆಡೆಯಲ್ಲಿ, ನ್ಯೂಮೋನಿಯಾ ಆದರೂ ಗೂರಲುಬ್ಬಸ ಕೆರಳದಿರಬಹುದು. ಆ ಹೊತ್ತಿನಲ್ಲಿ ಬೇರೆ ಅಂಶಗಳಲ್ಲಿ ಯಾವವು ಇವೆ ಎನ್ನುವುದನ್ನು ಅನುಸರಿಸುತ್ತದೆ. ಆದರೂ ಆಗಾಗ್ಗೆ ಹಲ್ಲಿನ ಆರೋಗ್ಯದ ಕಡೆ ಗಮನ ಕೊಡುವುದರಿಂದ ಅನುಕೂಲವಿದೆ. ಹಾಗೆಯೇ ಯಾವ ಸಣ್ಣ ಸೋಂಕು ಹತ್ತಿದರೂ ಕೂಡಲೇ ಚಿಕಿತ್ಸೆಯಿಂದ ಅಡಗಿಸುವುದರಿಂದ ಲೇಸಾಗುತ್ತದೆ.

ಹಿಂದಿನ ಕಾಲದ ಒಬ್ಬ ವೈದ್ಯ ಪರಿಣತ ಹೇಳಿದಂತೆ, 'ನವಿರುಸಿನಾಳಗಳನ್ನು ಸುತ್ತುವರಿದಿರುವ ಸ್ನಾಯು ಎಳೆಗಳು ಸೆಡೆತುಕೊಳ್ಳುವುದರಿಂದೇಳುವ ಒಂದು ನರಬೇನೆ ಗೂರಲು ಎನ್ನುವುದು ಇಂದಿಗೂ ನಿಜ. ಗೂರಲು ಒಂದು ನರಬೇನೆಯೇ. ಮನೆಯಲ್ಲಿ ಮನಸ್ತಾಪ, ದುಡ್ಡಿನ ತಾಪತ್ರಯ, ಲೈಂಗಿಕ ತೊಂದರೆಗಳು, ಶಾಲೆ ಪರೀಕ್ಷೆಗಳೇ ಮುಂತಾದವಕ್ಕೂ ಗೂರಲುಬ್ಬಸ ಕೆರಳುವುದಕ್ಕೂ ನಿಕಟ ಸಂಬಂಧವಿದೆ. ಹೇಳಿಕೊಳ್ಳದ ದಿಗಿಲು, ಅಸಮಾಧಾನ, ಮುನಿಸುಗಳಿಂದ ಇದಕ್ಕೂ ಹೆಚ್ಚಿನ ತೊಂದರೆಯಾಗುವುದು.

ಸರಸ್ವತಮ್ಮನಿಗೆ ಉಬ್ಬಸವೇಳುವುದು ಇಡೀ ದಿನದ ದುಡಿಮೆಯಿಂದಲ್ಲ. ಆದರೆ, ಪಕ್ಕದ ಮನೆಯ ಜಾನಕಮ್ಮ ಏನೆಂದುಕೊಳ್ಳುವಳೋ ಎಂಬ ದಿಗಿಲಿನಿಂದ. ಬಿರಬಿರನೆ ಪೇಟೆಗೆ ಓಡಿ, ಅಡಿಗೆ ಮನೆಯಲ್ಲಿ ತರಾತುರಿಯಲ್ಲಿ ಅಡ್ಡಾಡಿ, ತುಂಟಲು ಮಕ್ಕಳ ಮೇಲೆ ಸಿಡಿಗುಟ್ಟುವಳು. ಮನೆಯಲ್ಲಿ ಯಾರೋ ತಮ್ಮ ಪಾಲಿನ ಕೆಲಸವನ್ನು ಮಾಡದಿರುವಾಗ ಏಳುವ ಮುನಿಸಿಂದಲೂ ಒಬ್ಬರ ಗೂರಲು ಕೆರಳುತ್ತದೆ. ಅದರಿಂದ ಯಾವಾಗಲೂ ಸರಸ್ವತಮ್ಮನಿಗೆ ಬಾರದ ಗೂರಲು ಇನ್ನಾರಿಗಾದರೂ ಬರಬಹುದು.

ಮನೆಯಲ್ಲಿ ಒಂದು ಮಗುವಿಗೆ ಗೂರಲಿನ

ಉಬ್ಬಸ ಏಳಿಯುತ್ತಿದ್ದರೆ, ಯಾರಿಗೋ ಮನೋದ್ವೇಗದ ಕಿಡಿ ಬಿದ್ದಿರುವ ಸೂಚನೆ ಅದೆಂದು ಭಾವಿಸಬೇಕು. ಗೂರಲಿನ ವಿಚಾರವಾಗಿ ತಾನು ವಹಿಸಿರುವ ಮುನ್ನೆಚ್ಚರಿಕೆಗಳನ್ನೂ ಈಗಾಗಲೇ ಬೇರೆಡೆಗಳಲ್ಲಿ ಅವಳು ಕಂಡಿರುವ ವೈದ್ಯರ ಹೆಸರುಗಳನ್ನೂ ಒಬ್ಬ ತಾಯಿ ಹೇಳಿದರೆ, ಮುಂಬರುವ ಬಹಳ ಕಷ್ಟಕಾಲದ ಸೂಚನೆ ಅದು. ಅದೆಲ್ಲ ನಿಜವಾಗೂ ಅಗತ್ಯವೆನಿಸಬಹುದು. ಆದರೆ ಅನೇಕ ವೇಳೆ ಗೂರಲುಬ್ಬಸ ಅನುಭವಿಸುತ್ತಿರುವವರ ಹಿನ್ನಲೆಯಲ್ಲಿ ಸರಿಯಾಗಿ ಹೊಂದಿಕೊಳ್ಳದಿರುವ ಅಪ್ಪನೋ ಅಮ್ಮನೋ ಮತ್ತಾರೋ ಇರುವರು.

ಇಲ್ಲಿ ಮುಖ್ಯವಾಗಿ ರೋಗಿ ತನ್ನ ವೈದ್ಯನೊಂದಿಗೆ ಚೆನ್ನಾಗಿ ಹೊಂದಿಕೊಳ್ಳಬೇಕು. ಇನ್ನು ಬೇರೆ ದಾರಿ ಇಲ್ಲವೇ ಇಲ್ಲ ಎನಿಸಿದಿದ್ದರೆ ಅವನನ್ನು ರಾತ್ರಿ ಸರಿಹೊತ್ತಿನಲ್ಲಿ ಹೊರಗೆಳೆಯಬಾರದು. ರಾತ್ರಿ ಒಂದು ಹೊತ್ತಿನಲ್ಲಿ ಉಬ್ಬಸ ಕೆರಳಿದರೆ ಏನು ಮಾಡಬೇಕೆಂದು ಮೊದಲೇ ಸೂಚನೆ ಕೊಡುವನು. ಗೂರಲಿನ ಬುದ್ಧಿವಂತಿಕೆಯ ಚಿಕಿತ್ಸೆಯಲ್ಲಿ ಕೇವಲ ರೋಗಿಯ ಪುಪ್ಪುಸಗಳು ಮಾತ್ರವಲ್ಲದೆ, ರೋಗಿಯೊಂದಿಗೆ ಇಡೀ ಕುಟುಂಬವೂ ಸೇರಬೇಕು. ರೋಗಿಗೆ ಹೆಚ್ಚಿನ ಅನುಕೂಲವಾಗುವಂತೆ ಹೇಗೆ ವರ್ತಿಸಬೇಕೆಂದು ಮನೆಯವರೆಲ್ಲರಿಗೂ ತಿಳಿಸಿ ಕೊಡಬೇಕು. ಬೇರೆಯವರೆಲ್ಲರೂ ಐಸ್‌ಕ್ರೀಂ ತಿನ್ನುತ್ತಿದ್ದರೆ, ರೋಗಿಯೊಬ್ಬ ಸುಮ್ಮನಿರುವಂತಿಲ್ಲ. ಊಟ, ತಿಂಡಿಗಳ ಹೆಸರಿನಲ್ಲಿ ಆಹಾರವನ್ನು ತುರುಕುತ್ತಿದ್ದರೆ, ರೋಗಿಯ ಬೊಜ್ಜು ಕರಗುವಂತಿಲ್ಲ.

ಗೂರಲು ರೋಗಿಗಳಿಗೆ ಮೈ ಕೊಬ್ಬು ಶತ್ರು. ಬೊಜ್ಜು ಬೆಳೆಸಿದ ಗೂರಲು ಇನ್ನೊಂದು ರೋಗಿಯೊಬ್ಬ ಹಾಸಿಗೆಯಲ್ಲಿ ಮಲಗಿ ಒಂದೊಂದು ಸಲ ಉಸಿರೆಳೆದುಕೊಂಡು ಬಿಡುವಾಗಲೂ ತನ್ನ ಬೊಜ್ಜು ಹೊಟ್ಟೆಯ ಏರಿಳಿತವನ್ನು ನೋಡುವುದೇ ಒಂದು ದುರಂತ. ಹೊಟ್ಟೆಯ ಮೇಲಿನ ಕೊಬ್ಬೇ ೫-೬ ಕಿಲೋ ಭಾರವಿರಬಹುದು. ಒಂದೊಂದು ಬಾರಿ ಉಸಿರೆಳೆದಾಗಲೂ ಸುಮಾರು ಅರ್ಧಂಗುಲ ಚಲಿಸುತ್ತದೆ. ಅಂದರೆ ಕೇವಲ ಉಸಿರಾಟ ಒಂದರಿಂದಲೇ ಶ್ರಮಿಸುತ್ತಿರುವನು. ಅಂಥವನಿಗೆ ಯಾವುದಾದರೂ ಮದ್ದನ್ನು ನೀಡುವುದಕ್ಕಿಂತಲೂ ಆಹಾರ ಪಥ್ಯದಿಂದ ಎಷ್ಟೋ ಅನುಕೂಲವಿದೆ.

ಮದ್ದುಗಳು

ಅನೇಕ ರೋಗಗಳಲ್ಲಿ ಇರುವಂತೆ ಗೂರಲಿನ ಚಿಕಿತ್ಸೆಯಲ್ಲೂ ಷೋಕಿ ಬದಲಾಗುತ್ತಾ ಹೋಗುತ್ತದೆ. ಕಂಡಂತೆಯೇ, ಗೂರಲು ಕೆರಳಲು ಹಲವು ಕಾರಣಗಳಿರುವುದರಿಂದ, ಒಬ್ಬರಿಗೆ ಹಿಡಿದ ಮದ್ದು ಮತ್ತೊಬ್ಬನಿಗೆ ಗುಣ ಕಾಣದಿರಬಹುದು. ಸೊಂಕನ್ನು ಹತೋಟಿಗೊಳಿಸುವ, ಇಲ್ಲವೇ ಕುಗ್ಗಿರುವ ಉಸಿರ್ನಾಳಗಳನ್ನು ಹಿಗ್ಗಿಸುವ ಹಲವು ಬಗೆಗಳ ಮದ್ದುಗಳನ್ನು ವೈದ್ಯರು ಸೂಚಿಸುವರು. ಇಷ್ಟಾದರೂ ಎಲ್ಲ ಗೂರಲು ರೋಗಿಗಳಲ್ಲೂ ಒಂದೇ ಏಟಿಗೆ ದಮ್ಮನ್ನು ಅಣಗಿಸುವ ಒಂದೇ ಒಂದು ಮಾತ್ರೆ ಇನ್ನೂ ಕನಸಾಗಿದೆಯೇ ಇದೆ.

ಉಬ್ಬಸ ಕೆರಳುವುದನ್ನು ಮಾತ್ರ, ಮದ್ದುಗಳು ಹತೋಟಿಗೆ ತರುವುದಾದರೂ, ಗೂರಲನ್ನು ನಿವಾರಿಸಬೇಕಾದರೆ ಇನ್ನೂ ಹೆಚ್ಚಿನ ಶ್ರಮ, ಯೋಜನೆ ಅಗತ್ಯ. ✡



ಲಂಚವ ಸುಲಿವೋನು ಸೂಳೆಯ ಬಿಡದೋನು
ಹೆಂಡವ ಕುಡಿವೋನು ಅರಸಲ್ಲ ಲಂಡ
ನಾಡಿಗೆ ಕೇಡನೆ ತರುವೋನು

— ಜಾನಪದ

ಇದುವೇ ಜೀವ ಜೀವನ

ಡ್ಯೂಟಿಯ ಮೇಲೆ ಬಂದಿದ್ದ ನಾನು ಮರಳಿ ಊರಿಗೆ ಹೊರಡುವ ದಿವಸ. ಗಾಡಿ ಬಿಡುವುದು ರಾತ್ರಿ ಒಂಭತ್ತಕ್ಕೆ ಎಂದಾಗ ವೇಳೆ ಕಳೆಯಲು ಸಿನೆಮಾ ನೋಡುವುದಾಗಿ ನಿರ್ಧರಿಸಿದೆ. ತೆಲಗು ಸಿನೆಮಾ ಸ್ವಾರಸ್ಯಕರವಾಗಿ ಮುಂದುವರಿದಿತ್ತು. ದರೋಡೆಖೋರನೊಬ್ಬನಿಗೆ ಮಾಡಿದ್ದುಣ್ಣೋ ಮಾರಾಯ ಎನ್ನುವಂತಹ ಪ್ರಸಂಗ. ಈತನ ಗುಂಡಿನೇಟಿನಿಂದ ತಂದೆ ತೀರಿಕೊಂಡಿದ್ದಾನೆ: ಅವನ ಸಾವನ್ನು ನೋಡಲಾರದೆ ತಾಯಿಯೂ ಕಣ್ಣು ಮುಚ್ಚಿದ್ದಾಳೆ. ಮಗು ಕರುಣಾಜನಕವಾಗಿ ಅಳುತ್ತಿದೆ. ಇದನ್ನೆಲ್ಲಾ ನೋಡಿದ ದರೋಡೆಖೋರನ ಮನಃಪರಿವರ್ತನೆಯಾಗಿ ತಾನಾಗಿಯೆ ಪೋಲಿಸರಿಗೆ ಶರಣಾಗತನಾಗುತ್ತಾನೆ. ನ್ಯಾಯಾಧೀಶರು ಅಜೀವ ಕಾರಾಗೃಹವಾಸದ ಶಿಕ್ಷೆ ವಿಧಿಸುತ್ತಾರೆ. ಆದರೆ ಆತ ತನ್ನ ಸದ್ವರ್ತನೆಯಿಂದ ಅವಧಿಗಿಂತ ಮೊದಲೆ ಬಿಡುಗಡೆಗೊಳಿಸಲ್ಪಟ್ಟು ಮನೆಗೆ ಮರಳಿದಾಗ ಮಗ ದೊಡ್ಡವನಾಗಿ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಯಾಗಿರುತ್ತಾನೆ. ಮಗಳು ಮದುವೆಗೆ ಬೆಳೆದು ನಿಂತಿರುತ್ತಾಳೆ. ಹೀಗೆಯೆ ಚಿತ್ರ ಮುಂದುವರಿಯುತ್ತಿದೆ.

ಇದ್ದಕ್ಕಿದ್ದಂತೆಯೆ ಕಾಲ ಮೇಲೆ ಏನೋ ಹರಿದಾಡಿದ ಹಾಗಾಯಿತು. ಇರುವೆಯಿರಬಹುದೆ? ಸುತರಾಂ ಸಾಧ್ಯವಿಲ್ಲ. ಹಾಗಾದರೆ ಜಿರಲೆಯೇನಾದರೂ ಇದ್ದೀತೆ? ಊಹುಂ. ಮುಳ್ಳುಗಾಲಿನ ಸ್ಪರ್ಶವಿಲ್ಲ ಎಂದಮೇಲೆ ಅದು ಜಿರಲೆ ಹೇಗಾದೀತು? ಕಾಲಮೇಲೆ ಹರಿದುಹೋದದ್ದು ಯಾವುದೋ ನುಣುಪಾದ ತಣ್ಣಗಿನ ವಸ್ತು. ಎದೆ ಝಲ್ಲೆಂದಿತು. ಚಳಿಗಾಲದ ಚಳಿಯಲ್ಲೂ ಮುಖದ ಮೇಲೆ ಬೆವರ ಹನಿಗಳು ಮೂಡಿದವು. 'ಧೈರ್ಯ ತಂದುಕೋ' ಎಂದು ಹೇಳಿತು ಮನಸ್ಸು. ಎದುರಿಗೆ ಹಾವು ಹೆಡೆಯಾಡಿಸುತ್ತಿದ್ದರೂ ಧ್ಯಾನದಿಂದ ವಿಚಲಿತರಾಗದ ವಿವೇಕಾನಂದರೂ ದನಗಾಹಿಗಳು ತಲೆಯ ಮೇಲೆ ಬೆಂಕಿಯನ್ನು ಸುರಿದರೂ ದೇವರ ನಾಮಸ್ಮರಣೆಯನ್ನು ಬಿಡದ ಸಿದ್ಧಾರೂಢರೂ ಕ್ಷಣಕಾಲ ಮನಸ್ಸಿನ ಪರದೆಯ ಮೇಲೆ ಸುಳಿದುಹೋದರು. ಆದರೆ ನಾನು ವಿವೇಕಾನಂದರಾಗಲಿ ಸಿದ್ಧಾರೂಢರಾಗಲಿ ಅಲ್ಲವಲ್ಲ.

ಆದರೂ ಧೈರ್ಯ ತಂದುಕೊಂಡು ಸಿನೇಮಾದ ಪರದೆಯ ಮೇಲಿನಿಂದ ದೃಷ್ಟಿಯನ್ನು ಕೀಲಿಸದೆ ಕುಳಿತುಕೊಂಡೆ. ರಜತ ಪರದೆಯ ಮೇಲೆ ತೆರಿಗೆಗಳ್ಳರು ಹಾಗೂ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳ ನಡುವೆ ಕರಾಟಿ ಸ್ಟಂಟ್ ನಡೆದು ತೆರಿಗೆಗಳ್ಳರು ಅಧಿಕಾರಿಯ ವಶವಾಗುವ ದೃಶ್ಯ. ಪ್ರೇಕ್ಷಕರು ಚಪ್ಪಾಳೆ ಹೊಡೆಯುತ್ತಾರೆ. ಅಷ್ಟರಲ್ಲಿ ಕಾಲಿನ ಮೇಲೆ ಮತ್ತೇನೋ ಹರಿದಾಡಿದ ಹಾಗಾಗಿ ಪ್ರಾಣಸಂಕಟವಾಗುತ್ತದೆ. ಸುದೈವದಿಂದ ಸಿನೆಮಾ ಮುಗಿದು ಫಕ್ಕನೆ ದೀಪ ಹತ್ತಿಕೊಳ್ಳುತ್ತದೆ. ಕೆಳಗೆ ನೋಡಿದರೆ ಕಾಲ ಮೇಲೆ ಹರಿದಾಡಿದ್ದು ಮತ್ತೇನೂ ಅಲ್ಲ, ಕಡಲೆಕಾಯಿ ತಿಂದು ಬಿಸಾಕಿದ ಹಾಳೆ ಎನ್ನುವುದು ಗೊತ್ತಾಗುತ್ತದೆ. ಬದುಕಿದೆಯಾ ಬಡಜೀವವೇ ಎಂದು ಒಳ ಮನಸ್ಸು ತನಗೆ ತಾನೆ ಸಮಾಧಾನ ಮಾಡಿಕೊಳ್ಳುತ್ತದೆ.

—ವ್ಹಿ. ಸಿ. ಐರಸಂಗ

ಹೈಸ್ಕೂಲು ಓದುತ್ತಿದ್ದಾಗ ನಡೆದ ಘಟನೆ. ನಮ್ಮೂರಿನ ಕನ್ನಡ ವಿದ್ವಾಂಸರನ್ನು ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ್ದ ವಚನಗಾಯನ ಸ್ಪರ್ಧೆಯ ನಿರ್ಣಾಯಕರನ್ನಾಗಿ ನಿಯಮಿಸಲಾಗಿತ್ತು. ಅವರೋ ಸ್ಥೂಲಕಾಯರು. ತಲೆಯ ಮೇಲೊಂದು ಭಾರೀ ಗಾತ್ರದ ಪಟಗಾ. ನಿಂತ ಸ್ಥಳದಲ್ಲಿಯೇ ಯಾವ ವಿಷಯವಾದರೂ ಘಂಟಾಘೋಷವಾಗಿ ಮಾತನಾಡಬಲ್ಲ ವಿದ್ವತ್ತು; ಜೊತೆಗೆ ಕಂಚಿನ ಕಂಠ ಬೇರೆ. ಹಾಗೆಯೇ ಅವರು ನನಗೆ ಪರಿಚಿತರೂ ಆಗಿದ್ದರು.

ಅಂದಿನ ಸ್ಪರ್ಧೆಯಲ್ಲಿ ನಾನೂ ಸ್ಪರ್ಧಾಳು. ನನ್ನ ಸರದಿ ಬಂದಾಗ ಅಕ್ಕಮಹಾದೇವಿಯ 'ಬೆಟ್ಟದಾ ಮೇಲೊಂದು' ವಚನವನ್ನು ನನ್ನದೇ ಆದ ಧಾಟಿಯಲ್ಲಿ ಶುರು ಮಾಡಿ ಕೊನೆಯಲ್ಲಿ ಬರುವ.. 'ಲೋಕದಲ್ಲಿ ಹುಟ್ಟಿದ ಬಳಿಕ...' ಸಾಲುಗಳನ್ನು ಹಾಡುವುದಕ್ಕೆ ತೊಂದರೆಯಾಗುವುದೆಂದುಕೊಂಡು ಬಿಟ್ಟುಕೊಟ್ಟೆ. ಹಾಗೆಯೇ ಮುಂದುವರಿದಾಗ ನಮ್ಮ ವಿದ್ವಾಂಸರು ಮಧ್ಯದಲ್ಲಿಯೇ ತಡೆದು ನಿಲ್ಲಿಸಿ, ನಡೆದ ಸಭೆಯಲ್ಲಿ ಕೆರಳಿದ ಸರ್ಪದಂತೆ ಎದ್ದು ನಿಂತು, ಮಹತ್ವದ ಸಾಲನ್ನೋ ಇಲ್ಲಾ ವಚನಕಾರರ ಅಂಕಿತವನ್ನೋ ಬಿಟ್ಟು ಹಾಡಿದರೆ ಎಂಥ ಅಪಚಾರವಾಗುತ್ತದೆಂಬುದರ ಬಗ್ಗೆ ಹತ್ತು ನಿಮಿಷದ ಸಣ್ಣ ಭಾಷಣವನ್ನೇ ಕುಟ್ಟಿದಾಗ, ನಾನು ನಾಚಿಕೆ ಅವಮಾನ ಸಹಿಸದೆ ಹೇಗೋ ಮುಗಿಸಿ ನನ್ನ ಸ್ಥಾನಕ್ಕೆ ಬಂದು ಕುಳಿತಿದ್ದೆ.

ಕೊನೆಯಲ್ಲಿ, ನಿರ್ಣಾಯಕರ ಪರವಾಗಿ ಸಮಾರೋಪ ಭಾಷಣ ಮಾಡಲು ಮತ್ತೆ ಅದೇ ವಿದ್ವಾಂಸರನ್ನು ಕೇಳಿಕೊಳ್ಳಲಾಯಿತು. ವಚನ ಸಾಹಿತ್ಯ, ಅದರ ವೈಶಿಷ್ಟ್ಯ, ಹಾಡಲು ಬರುವಂತೆ ವಚನಗಳಲ್ಲಿರುವ ಪ್ರಾಸ - ಗೇಯ ಮೊದಲಾದವುಗಳನ್ನು ಸೋದಾಹರಣವಾಗಿ ವಿವರಿಸುತ್ತಿದ್ದಂತೆ ಮಧ್ಯೆ, ಅದಾವುದೋ ಸಂದರ್ಭ ತಂದು, ಮುಂದೆ ಕುಳಿತಿದ್ದ ವಿದ್ಯಾರ್ಥಿ - ವಿದ್ಯಾರ್ಥಿನಿಯರನ್ನುದ್ದೇಶಿಸಿ, "ಆಕಾಶ ಎಲ್ಲಿದೆ? ಯಾರು ಹೇಳ್ತಿರಿ...?" ಎಂದು ಪ್ರಶ್ನಿಸಿ ಉತ್ತರಕ್ಕೆ ಕಾದಾಗ; ಥೂ, ಇಂಥ ಸಣ್ಣ ಪ್ರಶ್ನೆಗೆ ಏನು ಉತ್ತರಿಸಬೇಕೆಂದು ಹೊಳೆಯದೇ ಎಲ್ಲರೂ ಕಕ್ಕಾಬಿಕ್ಕಿಯಾಗಿ ನೋಡಹತ್ತಿದರು. ನಾನು, ಹಾಡಿನ ಮಧ್ಯದಲ್ಲಿಯೇ ತಡೆದು ಅವಮಾನ ಮಾಡಿದ್ದಕ್ಕೆ ಮನದಲ್ಲಿಯೇ ಅವರನ್ನು ನಿಂದಿಸುತ್ತ ಕುಳಿತಿದ್ದೆ. "ಆಕಾಶ ಎಲ್ಲಿದೆ?" ಎಂಬ ಅವರ ಪ್ರಶ್ನೆ ಕಿವಿಗೆ ಬೀಳುತ್ತಿದ್ದಂತೆ ನನ್ನ ತಲೆ ತೀವ್ರವಾಗಿ ಕೆಲಸ ಮಾಡಲಾರಂಭಿಸಿತು. ತಟ್ಟನೇ ಏನೋ ಹೊಳೆದಂತಾಗಿ, ಒಂದು ಬಗೆಯ ಮುಜುಗರ. ಕುಚೇಷ್ಟೆಗಾಗಿ ಇದೇ ಸದಾವಕಾಶವೆಂದು ಭಾವಿಸಿ, ಹಿಂದಿನ ಸೀಟಿನಲ್ಲಿ ಕುಳಿತಿದ್ದ ನಾನು, ಸ್ವಲ್ಪ ತಲೆಮರಿಸಿ, "ನಿಮ್ಮ ತಲೀ ಮ್ಯಾಗ" ಎಂದು ಕೂಗಿಯೇ ಬಿಟ್ಟೆ. ನೆರೆದ ವಿದ್ಯಾರ್ಥಿಗಳೆಲ್ಲ ಗೊಳ್ಳನೆ ನಕ್ಕರು. ನಿರ್ಣಾಯಕರನ್ನು ಅವಮಾನಗೊಳಿಸಿ ಸೇಡು ತೀರಿಸಿಕೊಂಡ ಸಮಾಧಾನ ನನಗೆ. ಆದರೆ ಅವರು ಒಂದಿಷ್ಟೂ ವಿಚಲಿತರಾಗದೇ ಅದೇ ಅಗ್ರಹದ ಧ್ವನಿಯಲ್ಲಿ, "ಹೌದು ಬರೋಬರಿ. ಯಾಕ್ ನಗ್ತೀರಿ? ಆಕಾಶ ನಮ್ಮ ತಲೀ ಮ್ಯಾಗ ಅದ, ನಿಮ್ಮ ತಲಿಮ್ಯಾಗೂ ಅದ, ಎಲ್ಲಾರ ತಲೀ ಮ್ಯಾಗು..." ಎಂದು ಶುರು ಮಾಡಿದಾಗ ಕುಚೇಷ್ಟೆಗಾಗಿ ಕೂಗಿದ್ದರೂ ನನ್ನ ಉತ್ತರ ಸರಿಯಾಗೇ ಇದ್ದದ್ದು ನನ್ನನ್ನು ಆಶ್ಚರ್ಯಗೊಳಿಸಿತ್ತು. ಕಳೆದ ಮಗು ತಾನಾಗೇ ಮನೆಗೆ ಬಂದ ಸಂತೋಷ ಒಂದು ಕಡೆ!

ಮಾಸ್ತಿಯವರ ಕಾದಂಬರಿಯೊಂದರಲ್ಲಿ ಬರುವ 'ಶ್ರುತಿ ಮಾಡಿಟ್ಟ ವಾದ್ಯವನ್ನು ಕುಚೇಷ್ಟೆಗಾಗಿ ಮುಟ್ಟಿದರೂ ಅದು ಶ್ರುತಿಬದ್ಧವಾಗೇ ನುಡಿಯುತ್ತದೆ' ಎಂಬ ಮಾತು ಓದುವಾಗ, ತಕ್ಷಣ ಹಿಂದೆ ನಡೆದ ಈ ಘಟನೆ ನೆನಪಿಗೆ ಬಂತು.

—ಯಲಬುರ್ಗಿ ಈರಪ್ಪ

ಹಿಂದಿ ಮೂಲ :

ಅಮೃತ ರಾಯ್

ಅನುವಾದ :

ಶಾಂತಾ ಮಂಜುನಾಥ



ರಾತ್ರಿ ಒಂದು ಗಂಟೆ ಸಮಯ. ಚತುರ್ಥಿಯ ಚಂದ್ರ ಆಕಾಶದ ಅಸೀಮ ಮೌನದಲ್ಲಿ, ಅಗಮ್ಯ ನೀಲಾಕಾಶದಲ್ಲಿ ತನ್ನ ನಾವೆಯನ್ನು ನಡೆಸುತ್ತಿದ್ದಾನೆ. ಫಾಲ್ಗುಣ ಮಾಸದ ಶೀತಲವಾಯು ಮಾವಿನ ಹೂವಿನ ಸುವಾಸನೆಯ ಮದಿರೆಯನ್ನು ಕುಡಿದು ನಿಧಾನವಾಗಿ ಬೀಸುತ್ತಿದೆ. ಹತ್ತಿರದಲ್ಲೆ ಮಂಚದ ಮೇಲೆ ಸುನಂದಾಳ ಅಣ್ಣನ ಮಗಳು ರೇವಾ ತನ್ನ ಕಿಶೋರಾವಸ್ಥೆಯಲ್ಲಿ ಎಚ್ಚರವಿಲ್ಲದಂತೆ ನಿದ್ರಿಸುತ್ತಿದ್ದಾಳೆ. ಆದರೆ ಸುನಂದಾಳ ಕಣ್ಣಿಗೆ ಮಾತ್ರ ನಿದ್ದೆ ಹತ್ತಿಲ್ಲ.

ಹಗಲು ಹೇಗೋ ಕಳೆದುಹೋಗುತ್ತದೆ – ಈ ಬಾಲಭವನದಲ್ಲಿ, ಆ ವನಿತಾ ಸದನದಲ್ಲಿ, ಈ ಸಭೆಯಲ್ಲಿ, ಆ ಕಮಿಟಿ ಮೀಟಿಂಗ್‌ನಲ್ಲಿ– ಆದರೆ ರಾತ್ರಿ? ಪ್ರತಿಯೊಂದು ರಾತ್ರಿಯೂ ಅವಳಿಗೆ ವೇದನೆಯಾಗಿ ಪರಿಣಮಿಸುತ್ತದೆ. ಮನಸ್ಸನ್ನು ಬಿಗಿ ಹಿಡಿಯಲು ಸುನಂದಾ ಏನು ತಾನೇ ಮಾಡಿಲ್ಲ! ಊರಿನ ಯಾವ ಕೆಲಸ, ಯಾವ ಸಮಾರಂಭದಲ್ಲಿ ತಾನೆ ಸುನಂದಾ ಭಾಗವಹಿಸಿಲ್ಲ! ಬೆಳಗಿನ ಜಾವದಿಂದ ಹಿಡಿದು ರಾತ್ರಿ ಹನ್ನೊಂದು ಹನ್ನೆರಡು ಗಂಟೆಯವರೆಗೂ ಒಂದಲ್ಲ ಒಂದು ಕಾರಣಕ್ಕಾಗಿ ಅವಳು ತಿರುಗಾಡಬೇಕಾಗುತ್ತಿತ್ತು. ಯಾವುದಾದರೂ ಒಂದು ಸಮಾರಂಭದಲ್ಲಿ ಮಗ್ನಳಾಗಿರುತ್ತಾಳೆ... ಎಲ್ಲರನ್ನೂ ನಗ್ನರನ್ನಾಗಿಸುವ ರಾತ್ರಿ ರಾತ್ರಿಯಾಗಿಯೇ ಉಳಿಯುತ್ತಿತ್ತು.

ಹಿಂದೆ ಎಂದೋ, ಯಾವ ಜನ್ಮದಲ್ಲೋ ಅವಳು ಸಹ ಒಬ್ಬ ವ್ಯಕ್ತಿಯೊಡನೆ ಅಗ್ನಿಪ್ರದಕ್ಷಿಣೆ ಮಾಡಿದಂತಿದೆ. ಯಾರೋ ಒಂದು ಬೊಟ್ಟು ಕುಂಕುಮವನ್ನು ಹಣೆಗಿಟ್ಟಿದ್ದರು. ಅದೃಶ್ಯ ಕೈಗಳು ಅದರ ಸುತ್ತಲೂ ತೆಳುವಾದ ಗುಲಾಬಿ ಪರದೆಯನ್ನು ಎಳೆದವು. ಆ ಮುಸುಕಿನೊಳಗೆ ಅನುಭವಿಸಿದ ಪುಳಕ ಗುಲಾಬಿ ಮುಳ್ಳುಗಳಂತೆ ಇನ್ನೂ ನೆನಪಿಸುದೇನೋ ಎನ್ನುವಂತೆ ಮನಸ್ಸಿಗೆ ಚುಚ್ಚುತ್ತಿದೆ....ಆದರೆ...ಇಲ್ಲ...ಎಲ್ಲವೂ ಸುಳ್ಳು. ಆ ದಿನ ಕಳೆದುಹೋಯಿತು. ಆ ಗೂಡು ಈಗಿಲ್ಲ. ಇದನ್ನು ಸುನಂದಾಳಿಗೆ ಯಾರೂ ಹೇಳಬೇಕಾಗಿಲ್ಲ. ಅದು ಅವಳಿಗೆ ಗೊತ್ತು. ಈ ಪರಿಜ್ಞಾನ ಅವಳಿಗೆ ಆಗಾಗ್ಗೆ ಆಗುತ್ತಿದ್ದರೂ ಆದಂತಿರುವುದಿಲ್ಲ. ಇದೇ ವಿಷಯ ಹಳತಾದರೂ ಹೊಸ ನೋವುಂಟುಮಾಡುತ್ತದೆ.

ಸುನಂದಾಳ ಕುಂಕುಮ ಅಳಿಸಿ ಎಂಟು ವರ್ಷಕ್ಕೂ ಹೆಚ್ಚಾದವು. ಮೂರು ಸಾವಿರ ಸ್ಮಶಾನ ದಂತಹ ಶೂನ್ಯ ರಾತ್ರಿಗಳು ರಸ್ತೆ ರಿಪೇರಿ ಮಾಡುವ ಎಂಜಿನ್ನುಗಳಂತೆ ಸರಿದು ಹೋಗಿವೆ. ತನ್ನ ಯೌವನ ತನ್ನ ರಸವತ್ತಾದ ಶರೀರದ ಕಣಕಣದಲ್ಲೂ ಬೆಂಕಿ ಹಬ್ಬಿಸುತ್ತಿದೆ ಎಂದೂ ಅವಳಿಗೆ ಗೊತ್ತು. ಈ ಬಾಹುಗಳು ಯಾವಾಗಲೂ ಶೂನ್ಯವಾಗಿರುತ್ತವೆ. ಸ್ಪರ್ಶಮಾತ್ರದಿಂದ ಅರಳುವ ಈ ತುಟಿಗಳು ಸದಾ ಹೀಗೇ ಉರಿಯುತ್ತಿರುತ್ತವೆ. ಅಂಥ ಸ್ಪರ್ಶಕ್ಕಾಗಿ ಚಡಪಡಿಸುತ್ತಿವೆ ಎಂದೂ ಅವಳಿಗೆ ಗೊತ್ತು. ಆದರೆ ಈ ನಿರ್ಲಜ್ಜ ದೇಹ ಇದೆಲ್ಲವನ್ನೂ ತಿಳಿದೂ ತಿಳಿಯದಂತೆ ವರ್ತಿಸುತ್ತದೆ. ತನ್ನ ಶರೀರದಿಂದ ಆ ದಿನವನ್ನು ತೊಡೆದು ಹಾಕಬೇಕು. ಹೆಂಡದಂಗಡಿಯಿಂದ ಓಡಿಸಿದರೂ ಬಾರಿ ಬಾರಿಗೂ ಓಡಿ ಬರುವ ಕುಡುಕನಂತೆ ಯಾರ ಕಣ್ಣಿನಲ್ಲೋ, ಯಾರ ಬಾಹುಬಂಧನದಲ್ಲೋ ಯಾರ ಮಡಿಲಲ್ಲೋ, ತನ್ನ ಶೂನ್ಯ ಮೃದು ಏಕಾಂತದಲ್ಲಿ ಕೆಲವು ಗಂಟೆಗಳವರೆಗಾದರೂ, ಹುದುಗಿಕೊಳ್ಳಬೇಕೆನಿಸುತ್ತದೆ. ದಿನವೆಲ್ಲ ಧೂಳಿನಲ್ಲಿ ಅಲೆದಾಡಿ ಬಂದ ಸುನಂದೆಗೆ ತನ್ನ ಹಸಿವು ಎಂದೂ ಶಮನವಾಗಲಾರದೆಂದು ಗೊತ್ತು.

ಆದರೆ ಆಕೆಗೆ ಯಾವ ಆಶ್ರಯವೂ ಇಲ್ಲ. ಇಂದ್ರನಾಥನಿಂದ ಒಂದು ಮಗುವಾದರೂ ಇದ್ದಿದ್ದರೆ ಅವಳು ಇಷ್ಟು ನಿರಾಶಳಾಗುತ್ತಿರಲಿಲ್ಲ. ಆದರೆ ಎಲ್ಲಿ? ಮದುವೆಯಾದ ವರ್ಷದೊಳಗೆ ಇಂದ್ರನಾಥ ಹೊರಟುಹೋದ. ಕನಸು ಮುರಿಯಿತು.

ಕನಸು? ನಿಜ. ಕನಸೆ. ಏಕೆಂದರೆ ಇದಕ್ಕೆ ಬೇರೆ ಯಾವ ಹೆಸರು ಕೊಡಲೂ ಸಾಧ್ಯವಿಲ್ಲ.





ಉಸಿರಿನ ದುರ್ವಾಸನೆಯನ್ನು ನಿವಾರಿಸಿರಿ...
ದಂತಕ್ಷಯವನ್ನು ಎದುರಿಸಿರಿ

ಪ್ರತಿ ಸಲ ಊಟವಾದ ಮೇಲೆ ಕೋಲ್ಗೇಟ್‌ನಿಂದ ಹಲ್ಲುಜ್ಜಿರಿ. ಅದು ಜಗತ್ತಿನಾದ್ಯಂತ ದಂತವೈದ್ಯರು ಶಿಫಾರಸು ಮಾಡುವ ರೀತಿಯಲ್ಲಿ ನಿಮ್ಮ ಹಲ್ಲುಗಳಿಗೆ ರಕ್ಷಣೆ ನೀಡುತ್ತದೆ.

ಹಲ್ಲುಗಳೆಡೆಯಲ್ಲಿ ಉಳಿಯುವ ಆಹಾರ ಕಣಗಳಲ್ಲಿ ರೋಗಾಣುಗಳು ಬೆಳೆಯುತ್ತವೆ. ಇವು ಉಸಿರಿನ ದುರ್ವಾಸನೆಗೆ ಕಾರಣವಾಗುತ್ತವೆ —ಆಮೇಲೆ ಇವು ನೋಯುವ ದಂತ ಕ್ಷಯವನ್ನು ಉಂಟುಮಾಡುತ್ತವೆ.

ಆದುದರಿಂದ ಯಾವಾಗಲೂ ಆಹಾರವನ್ನು ಸೇವಿಸಿದ ನಂತರ ಕೂಡಲೇ ಕೋಲ್ಗೇಟ್ ರೀತಿಯಲ್ಲಿ ಹಲ್ಲುಜ್ಜಿರಿ. ನಿಮ್ಮ ಶ್ವಾಸವನ್ನು ಶುಚಿಗೊಳಿಸಲು, ಹಲ್ಲುಗಳನ್ನು ಬಿಳುಪಾಗಿಸಲು ಮತ್ತು ದಂತಕ್ಷಯವನ್ನು ಎದುರಿಸಲು ಅದು ಅತ್ಯಂತ ಪರಿಣಾಮಕಾರಿ ಎಂದು ಪ್ರಮಾಣಿತವಾಗಿದೆ

ಕೋಲ್ಗೇಟ್‌ನ ವಿಶ್ವಸನೀಯ ಸೂತ್ರವು ಕೆಲಸ ಮಾಡುವ ರೀತಿ :



ಉಸಿರಿನ ದುರ್ವಾಸನೆಯನ್ನು ಮತ್ತು ದಂತ ಕ್ಷಯವನ್ನು ಉಂಟುಮಾಡುವ ರೋಗಾಣುಗಳು ನಿಮ್ಮ ಹಲ್ಲುಗಳೆಡೆಯಲ್ಲಿ ಸಿಕ್ಕಿಕೊಂಡ ಆಹಾರ ಕಣಗಳಲ್ಲಿ ಬೆಳೆಯುತ್ತವೆ.




ಕೋಲ್ಗೇಟ್‌ನ ಅಪೂರ್ವವಾದ ಕಾರ್ಯಶೀಲ ನೊರೆ ಹಲ್ಲುಗಳೆಡೆಯನ್ನು ಆಳವಾಗಿ ಪ್ರವೇಶಿಸುತ್ತದೆ ಮತ್ತು ಅಪಾಯಕರವಾದ ಆಹಾರ ಕಣಗಳನ್ನೂ, ರೋಗಾಣುಗಳನ್ನೂ ಹೋಗಲಾಡಿಸುತ್ತದೆ.



ಪರಿಣಾಂಶ : ಆಕರ್ಷಕವಾದ, ಬಿಳುಪಾದ ಹಲ್ಲುಗಳು, ಆತ್ಮವಿಶ್ವಾಸವನ್ನುಂಟುಮಾಡುವ ಶುಚಿಯಾದ ಉಸಿರು ಮತ್ತು ದಂತಕ್ಷಯದ ವಿರುದ್ಧ ರಕ್ಷಣೆ.

ಅಧಿಕ ಶುಚಿಯಾದ, ದುರ್ವಾಸನೆ ರಹಿತವಾದ ಉಸಿರಿಗಾಗಿ ಮತ್ತು ಅಧಿಕ ಬಿಳುಪಾದ ಹಲ್ಲುಗಳಿಗಾಗಿ ಹೆಚ್ಚು ಜನರು ಜಗತ್ತಿನಲ್ಲಿ ಬೇರೆ ಯಾವುದೇ ಟೂಥ್‌ಪೇಸ್ಟ್‌ಗಿಂತ ಅಧಿಕವಾಗಿ ಕೋಲ್ಗೇಟನ್ನು ಕೊಳ್ಳುತ್ತಾರೆ.



ದಂತವೈದ್ಯರು ಮಾತ್ರ ನಿಮಗೆ
ಉತ್ತಮತರ ದಂತರಕ್ಷಣೆಯನ್ನು ನೀಡಬಲ್ಲರು

ಹಲ್ಲುಗಳ ಸಂಪೂರ್ಣ ರಕ್ಷಣೆಗಾಗಿ ಕೋಲ್ಗೇಟ್ [illegible]

DC.G.64 KN

ಮನೆಯಲ್ಲಿ ಹಣಕ್ಕೆ ಕೊರತೆ ಇಲ್ಲ. ಸನ್ನೆಯಿಂದಲೇ ಓಡಿ ಬರುವ ಆಳುಗಳಿಗೂ ಕಡಿಮೆ ಇರಲಿಲ್ಲ. ಸುಖವೇ ಸುಖ. ಇವತ್ತು ಸಿನಿಮಾ, ನಾಳೆ ಥಿಯೇಟರ್. ಒಂದು ಕಡೆ ಸಂಗೀತ ಕಛೇರಿ, ಇನ್ನೊಂದು ಕಡೆ ಪಿಕನಿಕ್ ಪ್ರೋಗ್ರಾಂ. ಮತ್ತೊಂದು ಕಡೆ ಜಾತ್ರೆ. ಅದೂ ಇಲ್ಲದಿದ್ದರೆ ಅವರಿಬ್ಬರೂ ಯಾವುದಾದರೂ ಬೆಟ್ಟ ಗುಡ್ಡದ ಕಡೆಗೆ ಟ್ರಿಪ್ ಹೋಗುವುದು.

ಸುನಂದಾಳ ಸ್ನೇಹಿತೆಯರೂ ಇಂದ್ರ–ನಾಥನ ಸ್ನೇಹಿತರೂ ಆಕೆಗೆ ಸೂಚ್ಯವಾಗಿ ಹೇಳಿ ನೋಡಿದರು. ಮಾತುಕತೆಯನ್ನೂ ಆಡಿ ಯಾಯಿತು. ಆದರೆ ಯಾರು ಕೇಳುತ್ತಾರೆ! ಯಾರಿಗೆ ಇಷ್ಟು ಪ್ರಜ್ಞೆ ಉಳಿದಿದೆ! ಯಾವಾಗ ವರ್ಷ ಬಂತೋ, ಕಳೆದುಹೋಯಿತೋ ಸಿಡಿಲು ಬಡಿದಾಗಲೇ ತಿಳಿಯುತ್ತಿತ್ತು.

ಸುಬಂಧಿಕರು, ಕೇರಿಯ ಹಿರಿಯ ಹೆಂಗ–ಸರು ತತ್ಪರತೆಯಿಂದ ಚಟಪಟನೆ ಕೈಯ ಬಳೆಗಳನ್ನು ಒಡೆದರು, ಹಣೆಯ ಕುಂಕುಮ ಅಳಿಸಿದರು. ಆದರೂ ಉಸಿರು ನಿಂತರೂ ಶರೀರದ ಒಳಗೆ ಮಿಡಿಯುತ್ತಿ ನಿಂತಿದ್ದ ಆ ಸೌಭಾಗ್ಯ ಮಾತ್ರ ಸಾಯಲಿಲ್ಲ. ಆ ಸೌಭಾಗ್ಯವನ್ನು ಸುನಂದಾ ಗಹನವಾದ ಏಕಾಂತದಲ್ಲಿ ತನ್ನ ನಗ್ನ ಸುಂದರ ಶರೀರದ ಮೇಲೆ ಮೇಲಿಂದ ಕೆಳಗಿನವರೆಗೂ ರಕ್ತದ ಒಂದು ಕೆಂಪು ಗೆರೆಯಂತೆ ವೇದನೆ–ಯನ್ನುಂಟುಮಾಡಿದ ಅನುಭವವನ್ನು ಪಡೆ–ಯುತ್ತಿದ್ದಳು.

*

ಈ ದಿನವೂ ಎಂದಿನಂತೆಯೇ ಪ್ರಾರಂಭ ವಾಗಿತ್ತು. ಸುನಂದಾ ಬೆಳಿಗ್ಗೆ ಎದ್ದು ಸ್ನಾನ ಮಾಡಿದಳು. ದೇವರ ಮನೆಗೆ ಹೋಗಿ ಕುಳಿತಳು. ದೇವರ ಮನೆ ಸುಗಂಧ ದ್ರವ್ಯ ದೀಪ ಗಳಿಂದ ಸುವಾಸನೆ ಬೀರುತ್ತಿತ್ತು. ದೇವರ ಪ್ರತಿಮೆಯ ಸ್ಥಾನದಲ್ಲಿ ಇಂದ್ರನಾಥನ ಮುಗು–ಳ್ನಗುತ್ತಿರುವ ಸೌಮ್ಯ ಮುಖಮಂಡಲ ರಾರಾ–ಜಿಸುತ್ತಿತ್ತು. ಏಕಾಂತದಲ್ಲಿ ಏಕಚಿತ್ತದಿಂದ, ಶ್ರದ್ಧೆಯಿಂದ ಕುಳಿತ ಸುನಂದಾ ಅರ್ಧಗಂಟೆಯ ವರೆಗೂ ಆ ಚಿತ್ರವನ್ನು ಆರಾಧಿಸಿದಳು. ಆ ಮೇಲೆ ಸ್ವಲ್ಪ ಮನೆಯ ಕೆಲಸ ಮಾಡಿದಳು. ಅಷ್ಟು ಹೊತ್ತಿಗೆ ಒಬ್ಬೊಬ್ಬರಾಗಿ ಜನ ಸೇರ ತೊಡಗಿದರು. ಆಕೆ ತನ್ನ ನೀಲಿಯ ಸೀರೆ ಯನ್ನುಟ್ಟು ಎಲ್ಲರಿಗೂ ಮುಗುಳ್ನಗೆ ಬೀರು ತ್ತಿದ್ದಳು. ಅವಳು ಮಂಜಿನಿಂದ ತೊಯ್ದ ಹೂವಿ ನಂತೆ ಲವಲವಿಕೆಯಿಂದ ನಿಷ್ಕಲ್ಮಷಳಾಗಿ ಕಾಣಿಸುತ್ತಿದ್ದಳು. ಯಾರಾದರೂ ತಮ್ಮದೇ ಆದ ದುಃಖವನ್ನು ಹೇಳಿಕೊಳ್ಳಲು ಬರುತ್ತಿ ದ್ದರು. ಸುನಂದಾಳಿಗೂ ಒಂದು ದುಃಖ ಇದೆ ಎಂದು ಅವರಿಗೆ ಹೇಗೆ ಅರಿವಾಗ–ಬೇಕು? ಅವಳ ಮುಖದ ಮೇಲಿ–ರುವ ನೋವಿನ ಒಂದು ಗುರುತನ್ನು ಹುಡು ಕಲು ನೋಡುವವರ ಕಣ್ಣಿಗೆ ಆಳವಾದ ದೃಷ್ಟಿ ಬೇಕಾಗುತ್ತಿತ್ತು. ಆದರೆ ಬರುವವರಿಗೆ ತಮ್ಮದೇ ಆದ ತುರ್ತು ಕೆಲಸ ಇರುತ್ತಿದ್ದುದರಿಂದ ಅವರಿಗೆ ಅಷ್ಟು ಆಳವಾದ ದೃಷ್ಟಿ ಇರುತ್ತಿರಲಿಲ್ಲ.

ದಿನದ ಕಾರ್ಯಕ್ರಮ ಅವಳ ಡೈರಿಯಲ್ಲಿ ಬರೆದುಕೊಂಡಿರುತ್ತಿದ್ದಳು. ಅದರಲ್ಲಿ ಕೆಲವು ಹೊಸ ಹೊಸ ಕೆಲಸಗಳೂ ಸೇರಿಕೊಂಡಿದ್ದವು. ಇದು ದಿನನಿತ್ಯದ ಕಾರ್ಯಕ್ರಮ. ಸಾರ್ವ–ಜನಿಕ ಕೆಲಸಗಳಲ್ಲಿ ತನ್ನ ಸ್ವಂತ ಕೆಲಸಗಳಿಗೆ ಸಮಯ ಸಿಗದಿರುವುದೇ ಒಳ್ಳೆಯದು.

ಇಂದಾದರೂ ಸುನಂದಾಳಿಗೆ ಬಿಡುವಿಲ್ಲದಂತಹ ಕೆಲಸ. ನಾಳೆ ಬೆಳಿಗ್ಗೆ ಒಬ್ಬ ಸ್ವಾಮಿಗಳು ಬರು ವವರಿದ್ದಾರೆ. ಅವರಿಗೆ ಎಲ್ಲ ಏರ್ಪಾಟು–ಗಳನ್ನೂ ತಾನೇ ಮಾಡಬೇಕು. ನಾಲ್ಕೈದು ದಿನ ಇರುತ್ತಾರೆ. ಅನೇಕ ಕಡೆಗಳಲ್ಲಿ ಅವರು ಪ್ರವಚನ ಮಾಡುವರು. ಸ್ವಾಮೀಜಿ ಯನ್ನು ಎಲ್ಲಾದರೂ ಇಳಿಸಬಹುದಾಗಿತ್ತು. ಆದರೆ ಏಕೆ? ತನ್ನದೇ ಒಂದು ಗೆಸ್ಟ್‌ಹೌಸ್ ಖಾಲಿ ಇರುವಾಗ ಬೇರೆ ಎಲ್ಲಿಯಾದರೂ ಏಕೆ ಇಳಿಸಬೇಕು? ಇದರಲ್ಲಿ ತನ್ನದೂ ಒಂದು ಸ್ವಾರ್ಥ ಇದೆ. ತನ್ನ ದುಃಖವನ್ನು ಅವರೊಂದಿಗೆ ಹೇಳಿ ಕೊಳ್ಳಬಹುದು. ಆ ಸಾಧುವಿಗೆ ಕೀರ್ತಿ ಇದೆ. ಉನ್ನತ ಮಟ್ಟದ ವ್ಯಕ್ತಿ–ಸಾಧನೆ ಮತ್ತು ಜ್ಞಾನ ದಲ್ಲಿ ಪಕ್ವವಾಗಿರುವರು. ಜೀವ ಹಿಂಡುತ್ತಿರುವ ಈ ನೋವಿನಿಂದ ಬಿಡುಗಡೆಯಾಗುವುದು

ಹೇಗೆ? ಈ ಗಾಯ ಯಾವಾಗಲೂ ಹೀಗೇ ಹಸಿಯಾಗಿರುವುದೆ? ಶ್ರೋತೃಗಳ ಗುಂಪಿನಲ್ಲಿ ಈ ವಿಷಯವನ್ನು ಅವಳು ಅವರಿಗೆ ಹೇಗೆ ತಿಳಿಸ ಬಲ್ಲಳು? ಏಕಾಂತದಲ್ಲಿ ಸ್ವಲ್ಪವಾದರೂ ಅವ ರಿಗೆ ಸಮಯ ಸಿಗಬಹುದು. ಯಾರಿಗೆ ಗೊತ್ತು! ಈ ವಯೋವೃದ್ಧ ಸ್ವಾಮಿಗಳ ಕೈಯಿಂದಲೇ ತನಗೆ ಮುಕ್ತಿ ದೊರೆಯಬಹುದು.

ಗೆಸ್ಟ್‌ಹೌಸ್ ಬಹಳ ದಿನಗಳಿಂದಲೂ ಖಾಲಿ ಬಿದ್ದಿತ್ತು. ಸುನಂದಾ ಅದರ ಬಾಗಿಲು ತೆಗಿಸಿ ಸ್ವಚ್ಛ ಮಾಡಿಸಿದಳು. ಇನ್ನೊಂದು ಕೋಣೆಯಿಂದ ಒಂದು ದೊಡ್ಡ ಮೆತ್ತೆಯನ್ನು ತರಿಸಿ ಹಾಕಿದಳು. ಚಾಪೆ ಒಂದು ಮೂಲೆ ಯಲ್ಲಿ. ನೀರಿನ ಕಲಶ ಇಡಿಸಿದಳು. ಅಲ್ಲಿ-ಇಲ್ಲಿ ಸ್ವಲ್ಪ ಊದುಬತ್ತಿ ಹಚ್ಚಿದಳು. ಒಂದು ಹೂದಾ ನಿಯಲ್ಲಿ ಹೂವನ್ನಿಟ್ಟು ಅಲಂಕರಿಸಿದಳು. ಯಾವ ಸಮಯದಲ್ಲಾದರೂ ಅವಳು ಸ್ವಾಮೀಜಿ



"ತೆಗೀಪ್ಪಾ ತೆಗಿ, ಒಂದು ಕ್ಷಣ ಹಿಂದಾದರೂ ನನಗೊಂದು ಕಾರಿತ್ತು ಎಂದು ಮುಂದಿನವರು ನಂಬಿಯಾರು."

ಯನ್ನು ಸ್ವಾಗತಿಸಲು ಸಿದ್ಧವಾಗಿದ್ದಳು.

ದಿನನಿತ್ಯದ ಕೆಲಸಗಳು ಇನ್ನೂ ಬಿದ್ದಿ ದ್ದವು... ಬಾಲಭವನದ ಆಟದ ಸಾಮಗ್ರಿ ಗಳನ್ನು ನಿನ್ನೆ ಕೊಂಡು ತಂದರೋ ಇಲ್ಲವೋ... ವನಿತಾಶ್ರಮದ ಕೆಲವು ಸೋದರಿಯರಿಗೆ ಹೊಸ ಬಟ್ಟೆ ತರಬೇಕಾಗಿತ್ತು. ಹೊಲಿಗೆ ಕ್ಲಾಸಿಗೆ ಒಬ್ಬರು ಮೇಡಂ ಬೇಕಾಗಿತ್ತು. ಸತ್ಯಳ ಮಗುವಿಗೆ ಟಾಯಿಫಾಯಿಡ್ ಆಗಿದೆ...

ಆದರೆ ಇಂದು ಅವಳ ಮನಸ್ಸಿನಲ್ಲಿ ಸ್ವಾಮೀ-ಜಿಯವರ ಹತ್ತಿರ ಕೇಳಬೇಕಾದ ಎಲ್ಲ ಪ್ರಶ್ನೆ ಗಳ ಮಂಥನವಾಗುತ್ತಿತ್ತು. ಯಾರು ದೊಡ್ಡ-ವರು? ಶಾಸ್ತ್ರವೇ ಅಥವಾ ಪ್ರಕೃತಿಯೇ? ನನ್ನ ಸ್ವಭಾವವನ್ನು ಚಂಚಲ ಎಂದು ಹೇಳು ವಂಥವರು ಈ ಊರಿನಲ್ಲಿ ಯಾರೂ ಸಿಗಲಾ ರರು. ನಾನು ಮನ್ಮಸನ್ನು ಪ್ರಚೋದಿಸಿಲ್ಲ ಎಂಬುದು ನನ್ನ ಆತ್ಮಕ್ಕೆ ಗೊತ್ತು. ಇಷ್ಟೊಂದು ಕೆಲಸಗಳನ್ನು ನಾನಾಗಿಯೇ ನನ್ನ ಮೇಲೆ ಹಾಕಿ ಕೊಂಡಿರುವುದು ನನ್ನ ಮನಸ್ಸನ್ನು ಅದರಲ್ಲಿ ತೊಡಗಿಸುವುದಕ್ಕೆ ಮಾತ್ರವಷ್ಟೆ. ಬೆಳಗಿನಿಂದ ಸಂಜೆಯವರೆಗೂ ಕೆಲಸಗಳಲ್ಲಿ ಮುಳುಗಿದ್ದರೂ ರಾತ್ರಿಯಾಗುತ್ತಿದ್ದ ಹಾಗೇ ಏನೋ ಒಂದು ಶೂನ್ಯ ಆವರಿಸುತ್ತದೆ. ಅದನ್ನು ಯಾರಿಂದಲೂ ತುಂಬಿಸಲು ಸಾಧ್ಯವಿಲ್ಲ. ಅದು ಏನು? ಏಕಾಗು-ತ್ತದೆ? ಈ ತರಹದ ಚಿತ್ರಹಿಂಸೆಯಿಂದ ನರಳುವ ಬದಲು ಹಳೆಯ ಕಾಲದ 'ಸತಿ ಪದ್ಧತಿ'ಯೇ ಚೆನ್ನಾಗಿತ್ತು... ನಿಜ, ಮನುಷ್ಯ ಕೆಲಸದಲ್ಲಿ ಎಲ್ಲವನ್ನೂ ಮರೆಯುತ್ತಾನೆ... ಅಂದರೆ ಯಾವುದನ್ನು ಮರೆಸಲು ಸಾಧ್ಯವೋ ಅದನ್ನು ಮಾತ್ರ. ಆದರೆ ದೇಹದ ಬೇಡಿಕೆ ಯನ್ನು ಹೇಗೆ ಮರೆಸಬಲ್ಲನು? ನೀವಾದರೂ ಮಹಾತ್ಮರು, ಜ್ಞಾನಿಗಳು, ಸಿದ್ಧರು, ಈ ಶರೀ ರದಿಂದ ಮೇಲೇಳುವ [illegible] ಉಪಾಯವನ್ನು ಹೇಳಿ... ದೇವರಿಗೇ ಗೊತ್ತು... ಆಕೆಯ ಕಣ್ಣುಗಳಿಂದ ನೀರು ಚಿಮ್ಮಿ ಬಂತು.

ಅವಳಿಗೆ ಹಾಸಿಗೆಯ ಮೇಲೆ ಮಲಗಲಾಗ ಲಿಲ್ಲ. ಎದ್ದು ತಿರುಗಾಡಲಾರಂಭಿಸಿದಳು. ಹತ್ತಿರ ದಲ್ಲಿದ್ದ ಗಡಿಯಾರದಲ್ಲಿ ಠಣ್ ಠಣ್ ಎಂದು

ಮೂಡು ಸೇಟೆ ಹೊಡೆಯಿತು. ಸುನಂದಾಳ ಕಣ್ಣಿಗೆ ನಿದ್ದೆ ಹತ್ತಲಿಲ್ಲ. ಅವಳು ಸ್ವಾಮೀಜಿಯ ಯೋಚನೆಯಲ್ಲಿಯೇ ಮುಳುಗಿದ್ದಳು... ಅವರು ಬರುತ್ತಾರೆ... ನಾನು ಹೇಗೆ ಸ್ವಾಗತಿಸಲಿ?... ಎಲ್ಲೆಲ್ಲಿ ಭಾಷಣ ಮಾಡುತ್ತಾರೋ...ನನ್ನ ವಿಷಯ ಹೇಳಿದಾಗ ಅವರು ಏನು ಹೇಳುತ್ತಾರೋ... ನಾನು ಏನು ಹೇಳುತ್ತೇನೋ. ಅಮೇಲೆ ಅವರು ಏನು ಹೇಳುತ್ತಾರೋ... ಇದೇ ಯೋಚನೆಯಲ್ಲಿ ಬೆಳಗಾಗಲೋ ಅವಳಿಗೆ ನಿದ್ದೆ ಹತ್ತಿತ್ತು.

ಕಣ್ಣು ಬಿಟ್ಟಾಗ ಚೆನ್ನಾಗಿ ಬೆಳಗಾಗಿತ್ತು. ಸ್ವಾಮೀಜಿ ಬರುವ ಟ್ರೇನ್ ಬರುವ ಹೊತ್ತಾಗಿತ್ತು. ಸ್ಟೇಷನ್ನಿಗೆ ಹೋಗಲು ಸಮಯವಿರಲಿಲ್ಲ. ಅದರೂ ಪರವಾಗಿಲ್ಲ. ಸ್ವಾಮೀಜಿಯನ್ನು ಕರೆತರಲು ಬಹಳ ಜನ ಅಲ್ಲಿರುವರು.

ಅವಳು ಬೇಗ ಬೇಗ ಮುಖ ತೊಳೆದುಕೊಂಡಳು. ಸ್ನಾನವನ್ನೂ ಮಾಡಿದಳು. ಬಿಳಿಯ ತೆಳುವಾದ ಸೀರೆ ಧರಿಸಿದಳು. ಬೇಗ ಬೇಗ ಗುಲಾಬಿ ಹೂಗಳನ್ನು ತಂದು ಹೂವಿನ ಗುಚ್ಛ ಮಾಡಿದಳು. ಸದ್ದಾಯಿತೆಂದು ಬಾಗಿಲ ಕಡೆ ನೋಡಿದಾಗ ಮಾಣಿಕಚಂದರ ದೊಡ್ಡದಾದ ನೀಲಿ ಕಾರು ಒಳಕ್ಕೆ ಬರುತ್ತಿತ್ತು. ಕಾರು ಬಂದು ನಿಲ್ಲುತ್ತಿರುವಂತೆಯೇ ಸುನಂದಾ ಅಂಗಳ ಮೆಟ್ಟಲಿಳಿದು ಕೆಳಗೆ ಬಂದಿದ್ದಳು.

ಸ್ವಾಮೀಜಿ ಕಾರಿನಿಂದ ಇಳಿಯುತ್ತಿದ್ದಂತೆಯೇ ಅವರನ್ನು ನೋಡಿ ಸುನಂದಾ ಬೆಚ್ಚಿದಳು. ಸುಂದರ. ದಷ್ಟಪುಷ್ಟವಾದ ತಾರುಣ್ಯಪೂರ್ಣ ದೇಹ, ಮುಖಮಂಡಲ ಅಪರೂಪ ಕಾಂತಿಪೂರ್ಣವಾಗಿತ್ತು.

ಸುನಂದಾ ನಡುಗುತ್ತಾ ದೃಷ್ಟಿ ತಗ್ಗಿಸಿಯೇ ಹೂಗುಚ್ಛವನ್ನು ಸ್ವಾಮೀಜಿಯ ಮುಂದೆ ಹಿಡಿದಾಗ ಅವಳ ಕೈ ಕಂಪಿಸುತ್ತಿತ್ತು.

ಸ್ವಾಮೀಜಿ ಮುಗುಳ್ನಗುತ್ತಾ ಹೂಗುಚ್ಛವನ್ನು ತೆಗೆದುಕೊಂಡರು. ಮತ್ತೆ ಹೇಳಿದರು– "ತಾಯಿ... ನೀನು [illegible].. ನೀನು ಈ [illegible] [illegible] ತೋರಿಸಬೇಕಿಲ್ಲ."

ಜೊತೆಯಲ್ಲಿದ್ದ ಜನಗಳಲ್ಲಿ ಕೆಲವರು ಏನೋ ಹೇಳಬೇಕೆಂದು ಬಯಸಿದರು. ಸ್ವಾಮೀಜಿ ತಮ್ಮ ನವಿರಾದ ಅದೇ ಮುಗುಳ್ನಗೆಯಲ್ಲಿ ಹೇಳಿದರು, "ನಾನು ಎಲ್ಲಿ... ನಾನು ಇನ್ನೂ ಎಲ್ಲಿ. ಆತ್ಮಿಕ ಸತ್ಯ ದೈಹಿಕ ಸತ್ಯದಿಂದ ಬೇರೆ ಇಲ್ಲ. ಮತ್ತು ಹೀಗೆ ಬೇರೆ ಮಾಡಿದಾಗ ಅದು ಸುಳ್ಳೆನಿಸುತ್ತದೆ..."

ಬೇರೆಯವರು ಏನು ಅರ್ಥಮಾಡಿಕೊಂಡರೋ ತಿಳಿಯದು. ಸುನಂದಾಳ ಕಣ್ಣಿಂದ ನೀರು ಧಾರಾಕಾರವಾಗಿ ಸುರಿಯಲಾರಂಭಿಸಿತು.

✡

ಹಲವು ತಿಂಗಳುಗಳಿಂದ ಕೂಡಿಟ್ಟಿದ್ದ ಹಳೆಯ ಪತ್ರಿಕೆಗಳನ್ನೆಲ್ಲ ರದ್ದಿ ಹಾಕಿಬಿಡುವ ಮನಸ್ಸು ಆ ಯುವಕನಿಗಾಯಿತು. ಗಂಟು ಕಟ್ಟಿಕೊಂಡು ಸೈಕಲ್ ಮೇಲಿಟ್ಟುಕೊಂಡು ಶೆಟ್ಟರ ಅಂಗಡಿಗೆ ನಡೆದ. ತುಸು ಚೌಕಾಸಿಯ ನಂತರ ದರ ಹೊಂದಿ ಶೆಟ್ಟರು ಪತ್ರಿಕೆಗಳನ್ನು ತಕ್ಕಡಿಗೇರಿಸಿ ತೂಗತೊಡಗಿದರು. ಅವರಿನ್ನೂ ತೂಗುತ್ತಿದ್ದಾಗ ಅವನ ಗಮನ ಬದಿಗಿದ್ದ ಶೆಟ್ಟರ ಹೆಂಡತಿಯೆಡೆಗೆ ಹರಿಯಿತು. ಅವಳ ಕಣ್ಣುಗಳಲ್ಲೇನೋ ಆಕರ್ಷಣೆಯನ್ನು ಗುರುತಿಸಿದ ಅವನು ಸರ್ರನೆ ಹೋಗಿ ಆಕೆಯ ತುಟಿಗೆ ಮುತ್ತಿಟ್ಟುಬಿಟ್ಟ.

ಯುವಕನು ಶೆಟ್ಟರಿಂದ ತನ್ನ ರದ್ದಿ ಕಾಗದಕ್ಕಾಗಿ ಹಣ ಪಡೆದು ಹೋದ ಮೇಲೆ ಅವರ ಹೆಂಡತಿ ಮುನಿಸಿನಿಂದ ಗಂಡನನ್ನು, "ಛಿ, ಎಂಥಾ ಗಂಡಸ್ರು ನೀವು! ಆ ಹುಡುಗ ನಿಮ್ಮ ಕಣ್ಣೆದುರಿಗೇ ಹೀಗೆ ಮಾಡುತ್ತಿದ್ದಾಗಲೂ ನೀವು ತೆಪ್ಪಗೆ ಕೂತಿದ್ದಿರಲ್ರೀ!" ಎಂದು ಕೇಳಿದಳು.

"ಛೆ ಛೆ, ನಾನೆಲ್ಲಿ ತೆಪ್ಪಗೆ ಕೂತಿದ್ದೆ? ಅವನ ರದ್ದೀ ಕಾಗದ ಏಳು ಕಿಲೋ ಆಗಿದ್ದರೂ ಎರಡೇ ಕಿಲೋ ಅಂತ ಹೇಳಿ ರೊಕ್ಕಾ ಕೊಟ್ಟು ಕಳಿಸಿದೆ!" ಎಂದುತ್ತರಿಸಿದರು ಶೆಟ್ಟರು.

— ಆರ್. ವಿ. ಮುದವೇಡಕರ

ಈ ಅಜ್ಜಿಗೆ ಹದಿನಾಲ್ಕು ಸಾವಿರ ಮೊಮ್ಮಕ್ಕಳು

ಎಸ್. ಸಿ. ದೇಸಾಯಿ

"ಈ ಮದುವೆಯನ್ನು ಕೂಡಲೇ ನಿಲ್ಲಿಸಿ…"

ಪೋಲೀಸ್ ಅಧಿಕಾರಿ ಗುಡುಗು ಹಾಕುತ್ತಾನೆ. ಒಮ್ಮಿಂದೊಮ್ಮೆಲೇ ಆ ವಾತಾವರಣ ಗಲಿಬಿಲಿಗೊಳ್ಳುತ್ತದೆ. ನಗುಮುಖಗಳಲ್ಲಿ ಆತಂಕ ಕಾಣಿಸಿಕೊಳ್ಳುತ್ತದೆ; ಏನು–ಯಾಕೆ–ಯಾರು?

"ಈ ಮದುವೆ ಮಾಡಿಸ್ತಿರೋರು ಯಾರು? ಎಲ್ಲಿದ್ದಾರೆ?" ಪೋಲೀಸ್ ಅಧಿಕಾರಿಯ ಗರ್ಜನೆ.

"ಇಲ್ಲಿಯೇ," ಎನ್ನುತ್ತ ಎತ್ತರದ ವ್ಯಕ್ತಿ ಅಳುಕಿಲ್ಲದೇ ಗಂಭೀರವಾಗಿ ಮುಂಬರುತ್ತಾನೆ.

"ನಾನೂ ಹೌದು" ಎಂದು ಅಧಿಕಾರಿಯ ಪಕ್ಕದಲ್ಲೇ ನಿಂತಿರುವ ಆ ಮಹಿಳೆ ಕೂಡ ಶಾಂತವಾಗಿ ಆ ಎತ್ತರದ ವ್ಯಕ್ತಿಯ ಪಕ್ಕಕ್ಕೆ ಬಂದು ನಿಲ್ಲುತ್ತಾಳೆ.

"ಈ ಮದುವೆ ನಡಿಸ್ತಿರೋರು ನೀವಾ? ಹಾಗಾದರೆ ಕೂಡಲೇ ನಿಲ್ಲಿಸಿ. ಇಲ್ಲದಿದ್ದರೆ…" ಎಂದು ಪೋಲೀಸ್ ಸಬ್ ಇನ್ಸಪೆಕ್ಟರ್ ಹೇಳುತ್ತಿರುವಂತೆಯೇ,

"ಅದು ಮಾತ್ರ ಅಸಾಧ್ಯದ ಮಾತು" ಪಟ್ಟನೇ ಆ ಮಹಿಳೆ ತಮ್ಮ ನಿರ್ಧಾರವನ್ನು ಹೇಳಿಬಿಡುತ್ತಾಳೆ. ಅಧಿಕಾರಿಗೆ ಆಕೆಯ ಅಚಲನಿರ್ಧಾರ ಅನಿರೀಕ್ಷಿತ. ಆತ ದಂಗಾದ. ಆದರೂ,

"ಈ ವಧು ಯಾರೆಂದು ತಿಳಿದಿದ್ದೀರಿ?" ಎನ್ನುತ್ತಾನೆ.

"ಯಾರಾದರೇನು? ನನಗದರ ತಿಳಿವಳಿಕೆ ಅನವಶ್ಯಕ."

"ಆಕೆ ಪೋಲೀಸ್ ಕಮೀಶನರರ ತಮ್ಮನ ಮಗಳು. ಹಿರಿಯರ ಒಪ್ಪಿಗೆ ಇಲ್ಲದೆ…"

"ಆಕೆ ಪ್ರಧಾನಿಯ ಮಗಳಾದರೂ ಸರಿ–ನಾನು ಈ ಮದುವೆಯನ್ನು ಮಾಡಿಯೇತೀರುವೆ. ಕಾಯಿದೇಬದ್ಧವಾಗಿಯೇ ಮದುವೆ ಮಾಡುತ್ತಿದ್ದೇನೆ. ಇಂಥದರಲ್ಲಿ ಪೋಲೀಸರು ಮೂಗು ತೂರಿಸಬೇಕಾಗಿಲ್ಲ."

ಈ ಮಾತಿನಿಂದ ಮುಖಭಂಗವಾದಂತಾಗಿ ಆ ಅಧಿಕಾರಿ, "ನಿಮಗಿನ್ನೂ ಕಾಯಿದೆಯ ಬಿಸಿ ತಟ್ಟಿಲ್ಲವೆನಿಸುತ್ತದೆ," ಎನ್ನುತ್ತಾನೆ.



ನವದಂಪತಿಗಳು ಆಶಾತಾಯಿಯ ಆಶೀರ್ವಾದ ಪಡೆಯುತ್ತಿದ್ದಾರೆ.

"ಭಟ್ಟರೆ, ನೀವೇಕೆ ಸುಮ್ಮನಾದಿರಿ? ಹೆದರಬೇಡಿ. ಮುಹೂರ್ತ ಮೀರುವುದು ಬೇಡ. ಮುಂದುವರಿಸಿ. ಯಾರು ಈ ಮದುವೆಯನ್ನು ತಡೆಯುತ್ತಾರೋ ನೋಡೋಣ" ಎಂಬ ನಿರ್ಧಾರದ ಸ್ವರ ಬಂದತ್ತ ತಿರುಗಿದ ಅಧಿಕಾರಿ. ಅವನಿಗೆ ಇಂಥ ಅವಮಾನ ಇದೇ ಮೊದಲೋ ಏನೋ, ಸ್ವತಃ ವಧುವೇ ಈ ರೀತಿ ಅಂದಿದ್ದಾಳೆ!

"ನಾನು ಸಜ್ಞಾನಿ. ಹದಿನೆಂಟು ವರ್ಷ ಮೀರಿದವಳು. ನನ್ನ ಭವಿಷ್ಯದ ರೂಪರೇಷೆಯ ಬಗ್ಗೆ ನನಗೆ ಎಲ್ಲ ಹಕ್ಕಿದೆ. ಇದರಲ್ಲಿ ಯಾರೂ ಅಡ್ಡಿ ಮಾಡುವ ಹಾಗಿಲ್ಲ. ಕಾನೂನು ಕೂಡ..." ಆಕೆ ಮತ್ತೊಮ್ಮೆ ದೃಢನಿಶ್ಚಯ ವ್ಯಕ್ತಪಡಿಸಿ ಪೋಲೀಸ್ ಸಬ್ ಇನ್ಸಪೆಕ್ಟರನೆಡೆ ನೋಡುತ್ತಾಳೆ. ಆತ ಇನ್ನು ಇಲ್ಲಿ ನಿಲ್ಲುವುದು ಅಪ್ರಯೋಜಕ ಎಂದು ತನ್ನ ಪಟಾಲಂನೊಂದಿಗೆ ಬಂದ ದಾರಿ ಹಿಡಿಯುತ್ತಾನೆ...

ಇದು ಕತೆಯಲ್ಲ, ಸತ್ಯ ಸಂಗತಿ. ನಿತ್ಯ ನಡೆಯುವ ಹಲವು ಘಟನೆಗಳಲ್ಲೊಂದು ಮಾತ್ರ.

ಮುಂಬಯಿಯ ಗಿರ್‌ಗಾಂವ್‌ನಲ್ಲಿನ ಒಂದು ಕಟ್ಟಡದ ಎರಡನೆ ಮಹಡಿಯ ಮೇಲಿರುವ ಶ್ರೀ ಮಂಗಲಕಾರ್ಯಾಲಯ ಎಂಬ ಚಿಕ್ಕ ಕಲ್ಯಾಣ ಮಂಟಪದಲ್ಲಿ ಈಗ ಕೆಲ ತಿಂಗಳು ಹಿಂದಷ್ಟೇ

ನಡೆದದ್ದು. ಈ 'ಕಲ್ಯಾಣ ಮಂಟಪ'ದಲ್ಲಿ ನಡೆದ 'ಹಗರಣದ ಮದುವೆ'ಗಳಲ್ಲೊಂದು ಉದಾಹರಣೆ ಇದು. ಇಂಥ ಮತ್ತು ಇದಕ್ಕಿಂತ ಭಿನ್ನವಾದ ಸಾವಿರಾರು ಘಟನೆಗಳು ಇಲ್ಲಿ ಜರುಗಿವೆ, ಜರುಗುತ್ತಲಿವೆ. ಇಂಥ ಅನುಭವಗಳಿಂದ ಸಾಕಷ್ಟು ಗಟ್ಟಿಯಾಗಿರುವ ಆ ಮಹಿಳೆ ಮತ್ತು ಆಕೆಯ ಪತಿ ಈಗ ಎಂಥ ಬೆದರಿಕೆಗೂ ಬಗ್ಗುವುದಿಲ್ಲ. ಬದಲಾಗಿ ಅವರನ್ನು ಬೆದರಿಸಬಂದವರೇ ಬೆದರಿ ಹೋಗುತ್ತಾರೆ, ಈ ದಂಪತಿಗಳ ಅಪೂರ್ವ ವ್ಯಕ್ತಿತ್ವವನ್ನು ಕಂಡಾಗ.

'ಹಗರಣದ ಮದುವೆ' ಎಂದೆನಲ್ಲವೆ? ಹೌದು, ಒಂದು ರೀತಿಯಿಂದ ಇವು ಹಗರಣದ ಮದುವೆಗಳೇ ಸೈ. ಇದು ಒಲಿದವರ ಹಗರಣವಲ್ಲ–ಅವರ ತಂದೆತಾಯಿಗಳದು. ಒಲಿದ ಹುಡುಗ–ಹುಡುಗಿಯರು ಒಂದಾಗುವದಕ್ಕೆ ಇರುವ ಹಲವಾರು ತೊಂದರೆಗಳಲ್ಲಿ ಮುಖ್ಯವಾದುದೆಂದರೆ ಈ ತಂದೆತಾಯಿಗಳ ವಿರೋಧ. ಜಾತಿಯ ಸಮಸ್ಯೆ, ಅಂತಸ್ತಿನ ಆತಂಕ, ಬಡತನ, ವಿಧವೆಯರ ವಿವಾಹ ಮುಂತಾದವು ನಮ್ಮ ಸಮಾಜದಲ್ಲಿ ಒಲಿದವರು ಒಂದಾಗುವುದಕ್ಕಿರುವ ಅಡ್ಡಿಗಳು. ಒಣ ಅಭಿಮಾನದಿಂದ ಬೀಗುವ ತಂದೆ–ತಾಯಿಯರು ತಮ್ಮ ಮಕ್ಕಳು ಒಲಿದವರೊಂದಿಗೆ ಒಂದಾಗಲು ಒಡ್ಡುವ ಆತಂಕ ಎಂಥ ಪರಿಣಾಮವುಂಟು ಮಾಡೀತೆಂಬುದನ್ನು ಊಹಿಸಲು ಅಸಾಧ್ಯ.

ಒಲಿದವರು ಒಂದಾಗಲು ಉತ್ಸುಕರಾದಾಗ ಅವರಿಗೆ ಪ್ರೋತ್ಸಾಹ ನೀಡಿ ಮದುವೆ ಮಾಡಿ ಅವರ ಸಂಸಾರ ಸುಖಿಯಾಗಲು ಶ್ರಮಿಸುವ ೫೦ರ ಧೀಮಂತ ಮಹಿಳೆಯೇ ಶ್ರೀಮತಿ ಆಶಾತಾಯಿ ಕುಲಕರ್ಣಿ. ಈ ಕಲ್ಯಾಣ ಮಂಟಪದ ಸಂಚಾಲಕಿಯಾಗಿರುವ ಅವರಿಗೆ ಪತಿಯ ಬೆಂಬಲದ ಜತೆಗೆ ಜನಬಲವೂ ಇದೆ. ಈ ಕಾರ್ಯಕ್ಕೆ ಆಶಾತಾಯಿ ತೊಡಗಿ ಹದಿನೆಂಟು ವರ್ಷಗಳಾದವು. ೧೯೬೨ರಲ್ಲಿ ಚರ್ನಿರೋಡ್ [illegible] "ಶ್ರೀ ಮಂಗಲಕಾರ್ಯ" ಎಷ್ಟೋ ದಂಪತಿಗಳ ಶ್ರದ್ಧೆಯ ಸ್ಥಾನವಾಗಿ ರೂಪುಗೊಂಡಿತು. ಈ ಅವಧಿಯಲ್ಲಿ ಆಶಾತಾಯಿ ಇಂಥ ೭ ಸಾವಿರ ಮದುವೆಗಳನ್ನು ನೆರವೇರಿಸಿದ್ದಾರೆ. ಆ ಜೋಡಿಗಳಿಲ್ಲ ಈಗ ಸುಖವಾಗಿ ಮಕ್ಕಳೊಂದಿಗೆ ನಕ್ಕು ನಲಿಯುವುದನ್ನು ನೋಡುವುದೇ ಇವರಿಗೊಂದು ಆನಂದ.

ತಮ್ಮಲ್ಲಿ ನಡೆದ ಮದುವೆಗಳ ಪೂರ್ವದಲ್ಲಿ ಹಾಗೂ ನಂತರದಲ್ಲಿ ಆ ಜೋಡಿಗಳ ಮನೆಯ ಜನರ ವರ್ತನೆಯಲ್ಲಿನ ವ್ಯತ್ಯಾಸವನ್ನು ಗುರುತಿಸುವ ಆಶಾತಾಯಿ, "ಮೊದಲು ಹಾರಾಡುತ್ತಾರೆ–ಏನೇನೋ ಮಾಡಿಬಿಡುವುದಾಗಿ ಹೆದರಿಸುತ್ತಾರೆ. ಕೆಲ ದಿನಗಳಲ್ಲಿ ಮತ್ತೆ ಮೊದಲಿನಂತಾಗುತ್ತಾರೆ. ತಾವೇ ದಾರಿಗೆ ಬರುತ್ತಾರೆ" ಎಂದು ಹೇಳುವಲ್ಲಿ ಅವರ ಸ್ವಾರಸ್ಯಮಯ ಅನುಭವವನ್ನು ಗುರುತಿಸಬಹುದು.

ಆ ಪೋಲೀಸ್ ಕಮೀಶ್ನರರ ತಮ್ಮನ ಮಗಳ ಮದುವೆ ನಡೆಯಿತಲ್ಲ, ನಂತರ ಕೆಲ ದಿನಗಳಾದ ಮೇಲೆ ಮಾವ ತನ್ನಳಿಯನಿಗೆ ೨೫ ಸಾವಿರ ರೂ. ಬೆಲೆಯ ವಸ್ತು–ವಡವೆ ಕೊಡಲು ನಿರ್ಧರಿಸಿ ಅಳಿಯ–ಮಗಳನ್ನು ಮನೆಗೆ ಆಮಂತ್ರಿಸಿದನಂತೆ. ಸ್ವಾಭಿಮಾನಿ ಅಳಿಯ ಹೋಗಲಿಲ್ಲ. ಅಷ್ಟು ಆಸೆಯಿದ್ದರೆ ಅವರು ತನ್ನ ಮನೆಗೇ ಬರಲಿ, ತನ್ನ ತಂದೆಯನ್ನು ಕಂಡು ಮಾತನಾಡಲಿ, ಅವರು ಒಪ್ಪಿದ ಮೇಲೆ ಹೋಗುವುದಾಗಿ ಹೇಳಿಬಿಟ್ಟ.

ಆಶಾತಾಯಿ ಮಾಡುತ್ತಿರುವ ಈ ಕೆಲಸ ನಿಜವಾಗಿಯೂ ದೊಡ್ಡ ಕೆಲಸ. ಅದನ್ನು ಸಮಾಜಸೇವೆ ಎಂದೆನ್ನದೆ ಅದಕ್ಕೂ ದೊಡ್ಡ ಶಬ್ದಗಳಲ್ಲಿ ಹೇಳಬೇಕು. ಇಂಥ ಕೆಲಸಕ್ಕೆ ಅವರು ಕೈ ಹಾಕಿದ್ದು ಅಚಾನಕವಾಗಿ. ಅದಕ್ಕೆ ಪ್ರೇರಣೆ ಅವರು ನಡೆಸುತ್ತಿದ್ದ ಮ್ಯಾರೇಜ್ ಬ್ಯೂರೋ, ವಧೂ–ವರರ ಜೋಡಿಯನ್ನು ನಿಗದಿಗೊಳಿಸಿ ವಿವಾಹಕ್ಕೆ ಅನುಕೂಲವಾಗುವಂತೆ ಮಾಡುವ ಸಂಸ್ಥೆ. ಆಗಲೇ ಇವರ ಲಕ್ಷ್ಯಕ್ಕೆ ಪ್ರೇಮಿಗಳು, ಅವರ ಒಂದಾಗಲು ಬರುವ ಅಡ್ಡಿಗಳು ಬಂದದ್ದು. ಅಲ್ಲದೆ ರಜಿಸ್ಟರ್ ಮದುವೆಯಿಂದ ಇಂಥ ಅಡ್ಡಿಗಳನ್ನು ನಿವಾರಿಸುವುದು ಸಾಧ್ಯವಿದ್ದರೂ ಧಾರ್ಮಿಕ ಆಚರಣೆಯಂತೆಯೇ ಮದುವೆಯಾಗುವ ಜೋಡಿಗಳ ಇಷ್ಟ, ಕೆಲವರಿಗೆ ಬಡತನ, ಆಡಂಬರದಿಂದ ದೂರವಿರುವ ಮನಸ್ಸು, ಆಡಂಬರವನ್ನು ತಾಳಲು ಶಕ್ತರಾಗಿರದಿರುವುದು ಇವೆಲ್ಲ ಆಶಾ–

ತಾಯಿಯಲ್ಲಿ ಒಂದು ಚಿಕ್ಕ ಕಲ್ಯಾಣ ಮಂಟಪ ಕಟ್ಟುವುದಕ್ಕೆ ಕಾರಣವಾದವು. ಈಗ ಇಲ್ಲಿ ಹಗರಣದ ಮದುವೆಗಳ ಜತೆಗೆ ಸಂಭ್ರಮದ ಸರಳ ಮದುವೆಗಳೂ ಜರುಗುತ್ತವೆ. ಬರಿ ಬಡವರಷ್ಟೇ ಅಲ್ಲ, ಆಡುಂಬರ ವಿರೋಧೀ ಶ್ರೀಮಂತರೂ ತಮ್ಮ ಮಕ್ಕಳ ಮದುವೆಯನ್ನು ಇಲ್ಲಿಯೇ ನಡೆಸುತ್ತಾರೆ.

ಪ್ರೇಮಿಗಳು ಒಂದಾಗಲು ತಮ್ಮ ಸಹಾಯ ಅರಸಿ ಬಂದಿದ್ದಾರೆಂದು ಕೂಡಲೆ ಮದುವೆ ನೆರವೇರಿಸಿಬಿಡುವುದಿಲ್ಲ ಆಶಾತಾಯಿ. ಅದಕ್ಕೆ ಪೂರ್ವಭಾವಿ ಕ್ರಮಗಳು ಕೆಲವಿವೆ. ಕೆಲ ವಿಷಯುಗಳನ್ನು ಪಕ್ಕಾ ಮಾಡಿಕೊಳ್ಳಬೇಕಾಗುತ್ತದೆ. ಇವೆಲ್ಲದರ ನಂತರವೇ ಕಾಯಿದೆ ದೃಷ್ಟಿಯಿಂದ, ಸಾಮಾಜಿಕ ದೃಷ್ಟಿಯಿಂದ ಕೆಲ ಪ್ರಶ್ನೆಗಳನ್ನು ಕೇಳುತ್ತಾರೆ. ಮುಖ್ಯವಾಗಿ ಮದುವೆಯ ವಧು ೧೮ ವರ್ಷ ದಾಟಿದ್ದಾಳೆಯೆ ಎಂಬುದು. ಅಂದರೆ ಆಕೆ ಸಜ್ಞಾನಿ. ಸಜ್ಞಾನಿಯಿದ್ದಲ್ಲಿ ಮಾತ್ರ ಮದುವೆ ಸಾಧ್ಯ. ಹದಿನೆಂಟರ ಒಳಗಿದ್ದರೆ ಅಂದರೆ ಹುಡುಗಿ "ಅಜ್ಞಾನಿ" ಯಾಗಿದ್ದರೆ ಮದುವೆ ಸಾಧ್ಯವಿಲ್ಲ.

ಇಷ್ಟೆಲ್ಲ ಜಾಗರೂಕತೆ ವಹಿಸಿದರೂ ಕೆಲವೊಮ್ಮೆ ಆಶಾತಾಯಿಗೆ ಕಹಿ ಅನುಭವಗಳಾಗಿವೆ.



ಮದುವೆಯಾಯಿತು, ವಿವಾಹ ನೋಂದಣಿ ಕಾಗದಕ್ಕೆ ಇಬ್ಬರೂ ಸಹಿ ಹಾಕುತ್ತಿದ್ದಾರೆ.

ಆಶಾತಾಯಿ ನೇರವೇರಿಸಿದ ಮೊದಲ ಮದುವೆ

ಮಹಾರಾಷ್ಟ್ರದ ಖೇರ್ ಮಂತ್ರಿಮಂಡಲದಲ್ಲಿ [೧೯೬೨] 'ದಾರುಬಂದಿ...' ಮಂತ್ರಿಯಾಗಿದ್ದ ಶ್ರೀ ಎಲ್. ಎಂ. ಪಾಟೀಲರಿಗೆ ಆಗ ೫೫ ವರ್ಷ. ವಿಧುರರು. ಇದ್ದ ಒಬ್ಬನೇ ಒಬ್ಬ ಮಗನಿಗೆ ಮತಿಭ್ರಮೆ. ತಮ್ಮ ವಂಶ ವೃದ್ಧಿಯಾಗಬೇಕೆಂಬ ಉತ್ಕಟೇಚ್ಛೆ ಶ್ರೀ ಪಾಟೀಲರಿಗೆ. ಅಂತೆಯೇ ಮತ್ತೊಂದು ಮದುವೆಗೆ ಮನಸ್ಸು ಮಾಡಿದರು: ಆಶಾತಾಯಿ ಅವರ ಮದುವೆಗೆ ಪ್ರಯತ್ನಿಸಿದರಲ್ಲದೆ ಮಾಡಿಯೂಬಿಟ್ಟರು. ಈ ಮದುವೆ ಇಬ್ಬರ ಜೀವನದಲ್ಲೂ ಹೊಸತನ ತಂದಿತು. ಆಶಾತಾಯಿಯ ಸಮಾಜಸೇವೆಗೆ ನಾಂದಿಯಾದದ್ದು ಒಂದು, ಪಾಟೀಲರ ಆಶೆ ನೆರವೇರಿದ್ದು ಇನ್ನೊಂದು. ಈ ಮದುವೆಗೆ ಆಶಾತಾಯಿ ಖರ್ಚಿಗೆ ಎಂದು ಪಾಟೀಲರಿಂದ ಪಡೆದ ಹಣ ಕೇವಲ ೫೧ ರೂಪಾಯಿಗಳು.

ಇಂಥದೊಂದು ಮದುವೆ ನಡೆಯಿತು. ಆಗ ಬೇಕಾದ ಎಲ್ಲ ಕ್ರಮಗಳು ಆಗಿದ್ದವು. ಮದುವೆಯಾಗಿ ಜೋಡಿ ಬೋರಿವಲಿಯಲ್ಲಿ ಮನೆ ಮಾಡಿ, ಸಂಸಾರ ಹೂಡಿತು. ಹುಡುಗಿಯ ತಂದೆ ತಾಯಿಗಳ ಮನಸ್ಸಿನ ವಿರುದ್ಧ ನಡೆದ ಮದುವೆಯದು. ಮಗಳು ಮಾಡಿದ್ದು ತಮ್ಮ ಮುಖಕ್ಕೆ ಮಸಿ ಬಳಿಯುವ ಕೆಲಸ ಎಂದು ಕುದಿಯುತ್ತಲೆ ಇದ್ದರು ಆಕೆಯ ತಂದೆತಾಯಿಗಳು. ತಿಂಗಳ ನಂತರ ಪೋಲೀಸರಲ್ಲಿ ದೂರಿತ್ತರು. ಹುಡುಗಿಯ ವಯಸ್ಸು ಎಷ್ಟು ಎಂದು ಪೋಲೀಸರ ಪ್ರಶ್ನೆ. ಇಪ್ಪತ್ತು ಎಂದ ತಂದೆ. ಹಾಗೆ ನೋಡಿದರೆ ಇದರಲ್ಲಿ ತಮಗೇನೂ ಮಾಡುವುದು ಸಾಧ್ಯವಿಲ್ಲ ಎಂದು ಗೊತ್ತಿದ್ದರೂ ಪೋಲೀಸರು ಲಾಭದಾಸೆಯಿಂದ ದೂರಿತ್ತ ತಂದೆಯನ್ನು ಸತಾಯಿಸತೊಡಗಿದರು. "ನೀವೇ ಏನಾದರೊಂದು ದಾರಿ ಕಂಡುಕೊಂಡು ನಮಗೆ ಅಳಿಯನ ಮೇಲಿನ ಸಿಟ್ಟನ್ನು ತೀರಿಸಿಕೊಳ್ಳಲು ಮಾರ್ಗ ಸೂಚಿಸಿ" ಎಂದ ಮಾವ. ಪೋಲೀಸರಲ್ಲಿ ಹೊಂಚುದಾರಿಗಳಿಗೇನು ಕಮಿ? "ಹುಡುಗಿ ಅಲ್ಪವಯಿಯಿದ್ದಾಳೆ. ೧೮ ಮಿಕ್ಕಿಲ್ಲ. ಅಜ್ಞಾನಿ ಹುಡುಗಿಯೆಂದು ಒಂದು ಅಫಿಡವಿಟ್ (ಪ್ರಮಾಣಪತ್ರ) ತೆಗೆದುಕೊಂಡು ಬನ್ನಿ. ಅಂದರೆ ಅಜ್ಞಾನಿ ಹುಡುಗಿಯನ್ನು ಪುಸಲಾಯಿಸಿಕೊಂಡು ಓಡಿಸಿಕೊಂಡೋಯ್ದಿದ್ದಾನೆ ಎಂದು ಅಳಿಯನನ್ನು ಬಂಧಿಸಲು ಸಾಧ್ಯ" ಎಂದು ಅವರು ದಾರಿ ತೋರಿಸಿದರು.

ತಂದೆ ಇಂಥ ವಿಷಯದಲ್ಲಿ ಪರಿಣಿತನಾಗಿದ್ದ ವಕೀಲರನ್ನು ಹಿಡಿದು ೧೮ರೊಳಗಿನ ಹುಡುಗಿ ಎಂದು ಪ್ರಮಾಣಪತ್ರ ತಂದ. ಪೋಲೀಸು ಜೀಪು ಅಳಿಯನ ಮನೆಗೆ ಹೋಯಿತು. ಅಳಿಯ ದಿಗ್ಭ್ರಮೆಗೊಂಡ. ಆತನನ್ನು ಬಂಧಿಸಿದ ಪೋಲೀಸರು 'ಸುತಸ'ದ ಹೋಜನ್ನು ಕುಡಿಯುತ್ತ "ನಿಮ್ಮ ಮಗಳನ್ನು ಒಪ್ಪಿಸಿಕೊಳ್ಳಿ" ಎಂದರು.

ಪೋಲೀಸರು ಎರಡಲಗಿನ ಕತ್ತಿಯಿದ್ದಂತೆ. ಮಾವನನ್ನು ಕೆತ್ತಿದರು. ಅಳಿಯನಿಂದಲೂ ಕೆತ್ತಿದರು. ಅಳಿಯನಿಗೆ ಮಾತ್ರ 'ಮಾವನ ಮನೆ'ಯಿಂದ ಹೊರಬರಲು ಸಾಧ್ಯವೇ ಆಗಲಿಲ್ಲ. ಹುಡುಗಿಗೊಂದು ಯೋಚನೆ ಬಂತು. ಆಶಾತಾಯಿಯ ಬಳಿಗೋಡಿದಳು. ನಡೆದದ್ದೆಲ್ಲ ತಿಳಿಸಿದಳು. ಆಶಾತಾಯಿ. "ನೀ ಓದಿದ್ದು ಯಾವ ಶಾಲೆಯಲ್ಲಿ?" ಎಂದು ಕೇಳಿದರು. ಆಕೆ ಹೇಳಿದ ಶಾಲೆಗೆ ಹೋಗಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್‌ನ ಪ್ರತಿ ಪಡೆದು ಪತಿಯೊಂದಿಗೆ ಪೋಲೀಸರಲ್ಲಿ ಹೋದರು. ಹುಡುಗಿ ಸಜ್ಞಾನಿ, ಇಪ್ಪತ್ತು ಮೀರಿದ್ದಾಳೆ ಎಂದು ಸಿದ್ಧಮಾಡಿದರು. ಇದನ್ನು ಯೋಚಿಸಿರದಿದ್ದ ಪೋಲೀಸರು ಅನಿವಾರ್ಯವಾಗಿ ಅಳಿಯನನ್ನು ಬಿಡಬೇಕಾಯಿತು.

ಮತ್ತೊಂದು ಘಟನೆ ಇದಕ್ಕೆ ವಿರುದ್ಧ.

ಇಲ್ಲಿಯೇ ನಡೆದೊಂದು ಪ್ರೇಮವಿವಾಹದಲ್ಲಿ ಹುಡುಗಿಯ ತಾಯಿ ತಂದೆಗಳೂ ಹಾಜರಿದ್ದರು. ಯಾವುದೇ ವಿರೋಧ ಮದುವೆಯ ಸಂದರ್ಭದಲ್ಲಿಯಾಗಲಿ ನಂತರ ಕೆಲ ದಿನಗಳಮೇಲಾಗಲಿ ಕಂಡುಬರಲಿಲ್ಲ. ಹೆಚ್ಚು ಖರ್ಚು ಮಾಡಲಾಗದ್ದಕ್ಕೆ ಸರಳವಾಗಿ ಧಾರ್ಮಿಕ ವಿಧಿಯಂತೆ ಮದುವೆ ನಡೆಯ

ಬೇಕೆಂಬ ತನ್ನ ಇಚ್ಛೆಯನ್ನು ತಿಳಿಸಿತ್ತು ವ್ಯಕ್ತ ಪಡಿಸಿದ್ದ. ಆಶಾತಾಯಿ ಮದುವೆ ಮಾಡಿಸಿದ್ದರು. ವಧುವಿಗೆ ಹದಿನೆಂಟು ಮೀರಿದೆ ಎಂದು ಸ್ಪಷ್ಟ ಪಡಿಸಿಯೇ ಹೇಳಿದ್ದ.

ಸರಿಯಾಗಿ ಒಂದು ವಾರ ಕಳೆದ ಬಳಿಕ ತಂದೆ ಬಂದು ಬಿದ್ದಿದ್ದ. ತನ್ನ ಅಪ್ರಾಪ್ತ ಮಗಳನ್ನು ಮೋಸದಿಂದ ಮದುವೆಯಾದಿಕೊಂಡಿದ್ದಾನೆ ಎಂದು ಅಳಿಯನ ಮೇಲೆ ದಾವೆ ಹೂಡಿದ. ಈ ಕಾರಣ ವಾಗಿ ಆಶಾತಾಯಿಗೂ ಪೋಲೀಸರ ಆತಿಥ್ಯ. ಸ್ವತಃ ಕನ್ಯಾಪಿತೃವೇ ತನ್ನ ಮಗಳ ವಯಸ್ಸು ೧೮ ಮೀರಿದೆ ಎಂದು ಬರೆದಿದ್ದರಿಂದ ಈ ಮದುವೆ ನಡೆದಿದ್ದ ಅದರ ಸದುದ್ದೇಶ ಈಗ 'ದುರುದ್ದೇಶ'ವಾಗಿತ್ತು. ತಂದೆಯ ದೃಷ್ಟಿಯಲ್ಲಿ. ಅಳಿಯನಾದವನನ್ನು ಜೈಲಿಗೆ ಹಾಕಿಸುವ ದುರಾಸೆ ಅವನಿಗೆ. ನ್ಯಾಯಾಧೀಶರು ಸೂಕ್ಷ್ಮವಾಗಿ ಈ ಪ್ರಕರಣ ವಿಚಾರಣೆನಡೆಸಿ ಸುಳ್ಳು ಹೇಳಿ ಮಗಳ ಮದುವೆ ಮಾಡಿದ್ದಕ್ಕೆ ಪಾಲಕನಿಗೆ ಛೀಮಾರಿ ಹಾಕಿದರಲ್ಲದೆ ಅಳಿಯ ನಿರ್ದೋಷಿ ಎಂದು ಸಾರಿದರು.

ಕಾಲುಜಾರಿದ ಕಾಲೇಜು ಕನ್ಯೆಯರು ವಿವಾಹ ವಯಸ್ಕರಲ್ಲದ ತರುಣಿಯರು ತಮಗೆ ೧೮ ಮೀರಿದೆ ಎಂದು ಆಶಾತಾಯಿಯ ಬಳಿ ಬರುವದುಂಟು. ಒಮ್ಮೊಮ್ಮೆ ಮಗಳ ಭಾನಗಡಿ ಗೊತ್ತಾದ ತಂದೆ ತಾಯಿಗಳೇ ಹದಿನೆಂಟು ಮೀರಿದೆ ಎಂದು ಸುಳ್ಳು ಹೇಳಲು ಯತ್ನಿಸುವುದೂ ಉಂಟು. ಆಶಾತಾಯಿ ಎಲ್ಲ ಬಲು ಜಾಗರೂಕರಾಗಿರುತ್ತಾರೆ.

ಪ್ರೇಮಿಗಳು ಇಲ್ಲಿ ಮದುವೆಯಾಗಲು ಬರುವಾಗ ಒಮ್ಮೊಮ್ಮೆ ಅವರೊಂದಿಗೆ ಗೆಳೆಯ ಗೆಳತಿಯರೂ ಬರುತ್ತಾರೆ. ಒಮ್ಮೆ ಒಂದು ಸುಂದರ ಪ್ರೇಮಿಗಳ ವಿವಾಹ ಪ್ರಸಂಗ. ಹುಡುಗನೊಂದಿಗೆ ಬಂದವರೆಲ್ಲ ಒಂದೇ ರಹಸ್ಯವಾಗಿ ಕಂಡರು ಆಶಾತಾಯಿಗೆ. ಅದಕ್ಕೆ ಕಾರಣ ಅವರಿಗೆ ಇವರಲ್ಲೇನೋ ಭಾನಗಡಿಯಿದೆ ಎನಿಸಿದ್ದು ಹುಡುಗಿಯ ವರ್ತನೆಯಿಂದಾಗಿ. ಬಂದವರೆಲ್ಲ ಮವಾಲಿಗಳಂತೆ— ವರನೂ ಸೇರಿ— ಕಾಣುತ್ತಿದ್ದರು. ಅಲ್ಲಿ ಅವರು ಗಮನಿಸಿದ ಇನ್ನೊಂದು ಅಂಶವೆಂದರೆ ಆ ಇಪ್ಪತ್ತು ಜನಗಳ ಪೈಕಿ ಹೆಣ್ಣೆಂದರೆ ವಧು ಒಬ್ಬಳೇ. ಆಕೆ ಹೆದರುತ್ತಿದ್ದಳು. ಆಶಾತಾಯಿ ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಬಲಾತ್ಕಾರದ ಮದುವೆ ಎಂಬುದು ಅವರಿಗೆ ಖಾತ್ರಿಯಾಯಿತು. ನಿಜಸಂಗತಿಯನ್ನು ಬಯಲಿಗೆಳೆಯುವ ಪ್ರಯತ್ನದಲ್ಲಿ ಆಶಾತಾಯಿಗೆ ಬಹಳ ತೊಂದರೆಯಾಯಿತು. ಯಾಕೆಂದರೆ ಹುಡುಗಿಯೊಬ್ಬಳನ್ನೇ ಸಂಧಿಸಬೇಕೆಂದರೆ ಯಾವಾಗಲೂ ಆ ಜನ ಆಕೆಯನ್ನು ಸುತ್ತುವರಿದೇ ಇರುತ್ತಿದ್ದರು. ಅಂತೂ ಇಂತೂ ಆಕೆಯೊಂದಿಗೆ ಐದು ನಿಮಿಷ ಏಕಾಂತದಲ್ಲಿ ಮಾತನಾಡಲು ಸಾಧ್ಯವಾದಾಗ ಆಶಾ— ತಾಯಿ, ನಿನಗೆ ಈ ಮದುವೆ ಒಪ್ಪಿಗೆಯಿದೆಯೇ? ಎಂದು ಕೇಳಿದರು. ಕೂಡಲೇ ಹುಡುಗಿಯ ಮೋರೆಯ

ಮುಖ್ಯಸ್ಥರ ಮದುವೆಗಳು

ಈಗ ಪವಾರ ಸರಕಾರದಲ್ಲಿ ಕಾರ್ಮಿಕ ಮಂತ್ರಿಯಾಗಿರುವ ಶ್ರೀ ಸುಶೀಲಕುಮಾರ್ ಸಿಂಧೆ ಮಂತ್ರಿಯಾಗುವ ಮುನ್ನ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿದ್ದರು. ಕೋರ ಸಮಾಜಕ್ಕೆ ಸೇರಿದ್ದ ಅವರ ಮದುವೆ ಅವರ ತಂದೆ-ತಾಯಿಯರ ಮನಸ್ಸಿನ ವಿರುದ್ಧ ಜೇಡೊಂದು ಸಮಾಜದ ಹುಡುಗಿಯೊಂದಿಗೆ ಆಯಿತು. ಅದೂ ಆಶಾತಾಯಿಯ ನೇತೃತ್ವದಲ್ಲಿ.

"ಮಹಾರಾಷ್ಟ್ರ ಟೈಮ್ಸ್" ಪತ್ರಿಕೆಯ ಸಹಸಂಪಾದಕಿ ನೀಲಾ ಪಾಟೀಲ, [ಉಪಾಧ್ಯಾಯರ ಜತೆ] "ಶ್ರೀ" ಮರಾಠಿ ಸಾಪ್ತಾಹಿಕದ ಸಹಸಂಪಾದಕ ಅರುಣ ತಾಪ್ಸುಣಕರ ಮುಂತಾದವರ ಮದುವೆಗಳೂ ಸರಳವಾಗಿ-ಧಾರ್ಮಿಕ ವಿಧಿಯಿಂದ ಆಶಾತಾಯಿಯವರ 'ಶ್ರೀ ಮಂಗಲಕಾರ್ಯಾಲಯ'ದಲ್ಲಿಯೇ ನೆರವೇರಿದವು.

ಕಟ್ಟೆಯೊಡೆದು ಆಕೆಯನ್ನು ಸಂತೈಸುವುದೇ ಕಷ್ಟವಾಯಿತು.

ಆಕೆಗೂ ಆತನಿಗೂ ಪ್ರೇಮವಿದ್ದುದು ನಿಜ. ಆದರೆ ಆತನಿಗೆ ಇನ್ನೊಬ್ಬಳ ಮೇಲೆ ಪ್ರೀತಿ. ಇಬ್ಬರನ್ನೂ ಬಿಡಲಾರದ ಆತನಿಗೆ ಈಕೆಯನ್ನೇ ಮದುವೆಯಾಗುವ ಮನಸ್ಸು. ಈಕೆ ಮದುವೆಗೆ ನಿರಾಕರಿಸಿದಾಗ, "ನನಗೆ ನೀನು ಬರೆದ ಪ್ರೇಮ ಪತ್ರಗಳನ್ನು ನಿನ್ನ ತಂದೆ ತಾಯಿಗೆ ಕಳಿಸಿಬಿಡುವೆ" ಎಂದು ಬೆದರಿಸಿ ಒತ್ತಾಯದಿಂದ ಕರೆತಂದಿದ್ದನಲ್ಲದೆ, "ಏನಾದರೂ ಗಲಾಟೆ ಮಾಡಿದರೆ ನಿನ್ನನ್ನೂ ನಿನ್ನ ತಂದೆ-ತಾಯಿಗಳನ್ನೂ ಥಳಿಸಿ ಇಲ್ಲವೆನ್ನಿಸಲು ಈ ಜನ ಇದ್ದಾರೆ" ಎಂದು ಬೆದರಿಸಿದ್ದನಂತೆ. ಆಶಾತಾಯಿಗೆ ಸಂಗತಿ ಗೊತ್ತಾದ ಕೂಡಲೇ ಈ ಹುಡುಗಿಯನ್ನು ಪಾರು ಮಾಡಬೇಕೆಂಬ ಮನಸ್ಸಾಯಿತು. ಈ ಒತ್ತಾಯದ ಮದುವೆಯನ್ನು ನಡೆಯಗೊಡಬಾರದು ಮತ್ತು ಹುಡುಗನಿಗೂ ಹುಡುಗನ ಕಡೆಯವರಿಗೂ ಚೆನ್ನಾಗಿ ಬುದ್ಧಿ ಕಲಿಸಬೇಕೆಂದುಕೊಂಡರು. ಧೈರ್ಯದಿಂದ "ಈ ಮದುವೆ ನಡೆಯಲಾರದು" ಎಂದು ಆಶಾತಾಯಿಯೂ, "ನಾನು ಈ ಮದುವೆಗೆ ಸಿದ್ಧಳಿಲ್ಲ" ಎಂದು ಆ ಹುಡುಗಿಯೂ ಹೇಳಿಬಿಟ್ಟರು. ಅಷ್ಟರಲ್ಲೇ ಶ್ರೀ ಕುಲಕರ್ಣಿಯವರು, "ಯಾರೂ ಗಲಾಟೆ ಮಾಡತಕ್ಕದ್ದಲ್ಲ. ಯಾರೂ ಸ್ಥಳ ಬಿಟ್ಟು ಕದಲತಕ್ಕದ್ದಲ್ಲ. ಪೋಲೀಸರು ನಿಮಗಾಗಿ ಇಲ್ಲಿಯೇ ಕಾದಿದ್ದಾರೆ" ಎಂದರು. ಹುಡುಗಿ ಆ ಹುಡುಗನಿಗೆ ಬರೆದ ಪತ್ರಗಳನ್ನು ತಮ್ಮ ವಶಮಾಡಿಕೊಂಡರಲ್ಲದೆ, ಹುಡುಗಿ ತನ್ನ ಮನೆಗೆ ಸುರಕ್ಷಿತವಾಗಿ ಸೇರಿದ ನಂತರವೇ ವರಪಕ್ಷದವರ 'ಸೇವೆ'ಯಿಂದ ಮುಕ್ತರಾದರು.

ಆಶಾತಾಯಿಗೆ ಇನ್ನೂ ಅಚ್ಚರಿತಂದ ಕೆಲ ಅನುಭವಗಳುಂಟು. ಒಮ್ಮೆ ಗುಜರಾತಿನಿಂದ ಒಂದು ಜೋಡಿ ಬಂತು. ಇಬ್ಬರೂ ಬಡೋದೆಯವರು. ಹುಡುಗಿ ಸುಂದರಿ. ಬಟ್ಟೆ ಮಿಲ್ ಮಾಲಕನ ಮಗಳು. ಹುಡುಗನೂ ಸ್ಫುರದ್ರೂಪಿ. ಎಂಥದೋ ಬಿಜಿನೆಸ್ಸಿದೆ ಎಂದನಂತೆ. ಆದರೆ ಒಂದು ವಿಷಯ ಆಶಾತಾಯಿಯ ಸೂಕ್ಷ್ಮಮತಿಗೆ ಹೊಳೆಯಿತು: ಹುಡುಗಿಯ ಬುದ್ಧಿ ಅಷ್ಟು ಚುರುಕಾಗಿರಲಿಲ್ಲ. ಮತ್ತು, ಅವರಿಬ್ಬರ ವರ್ತನೆಯಿಂದ ಆಶಾತಾಯಿಗೆ ಇವರಿಬ್ಬರ ಪ್ರೇಮ ಅಷ್ಟು ಹಳೆಯದಲ್ಲ ಅನಿಸಿತು. ಕೇಳಿಯೇ ಬಿಟ್ಟರು, "ಎಷ್ಟು ಹಳೆಯದು ನಿಮ್ಮ ಪ್ರೇಮಪ್ರಕರಣ?"

"ಒಂದು ದಿನದ್ದು" ಹುಡುಗಿ ಉತ್ತರಿಸಿದಳು. "ಮೊನ್ನೆ ಬಡೋದೆಯಿಂದ ಕ್ರಿಕೆಟ್ ಟೆಸ್ಟ್ ನೋಡಲು ಇಲ್ಲಿಗೆ ಬರುತ್ತಿರುವಾಗ ಇವರ ಪರಿಚಯ ಆಯಿತು. ಬಾಂಬೆ ಸೆಂಟ್ರಲ್ಲಿಗೆ ನಿನ್ನೆ ಮಧ್ಯಾಹ್ನ ಬಂದಿಳಿದೆವು. ಜೊತೆಗೇ ಅಡ್ಡಾಡಿ ಒಂದೇ ಲಾಜಿನಲ್ಲಿ ಉಳಿದೆವು. ಕ್ರಿಕೆಟ್ ನೋಡಿದೆವು. ಸಿನೇಮಾ ನೋಡಿದೆವು. ರಾತ್ರಿ ಒಟ್ಟಿಗೆ ಕಳೆದೆವು. ಆಗಲೇ ಪ್ರೇಮಬಂಧನಕ್ಕೊಳಗಾಗಿ ಈಗ ವಿವಾಹ ಬಂಧನಕ್ಕೊಳಗಾಲು ಬಂದಿದ್ದೇವೆ".

ಆಶಾತಾಯಿಗೆ ಆ ಮಾತು ದಂಗುಬಡಿಸಿತು. ಇಂಥ ಮದುವೆಗೆ ತಾವು ಉತ್ತೇಜನ ನೀಡುವದಿಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು.

ಹುಡುಗನ ಆರ್ಥಿಕ ಸ್ಥಿತಿಗತಿಯ ಬಗ್ಗೆಯೂ ಆಶಾತಾಯಿ ಗಮನವೀಯುತ್ತಾರೆ. ಹೀಗೊಂದು ಜೋಡಿ ಬಂದಾಗ ಹುಡುಗನಿಗೆ, "ನೀನೇನು ಮಾಡುತ್ತಿ?" ಎಂದು ಕೇಳಿದರು. "...ನನ್ನ ಅಣ್ಣನದೊಂದು ಅಂಗಡಿಯಿದೆ. ವ್ಯಾಪಾರ ಚೆನ್ನಾಗಿದೆ" ಎಂದ ಹುಡುಗ. "ಅದು ಆತನ ಸ್ವಂತದ್ದೆ?" ಎಂದದ್ದಕ್ಕೆ "ಹೌದು" ಎಂದ. "ನಿಮ್ಮಣ್ಣನದಿದ್ದರೆ ನಿನ್ನದು ಹೇಗಾಯಿತು? ನಿನ್ನದೆಂಬ ಗಳಿಕೆ ಇಲ್ಲದ ಈ ಸ್ಥಿತಿಯಲ್ಲಿ ನಾಳೆ ಮದುವೆಯ ನಂತರ ಹೆಂಡತಿಗೆ ಒಂದು ಸೀರೆ ತರಬೇಕಾದರೂ ನಿನ್ನಣ್ಣನನ್ನೇ ಅವಲಂಬಿಸಬೇಕಲ್ಲವೆ?" ಎಂದು ಕೇಳಿದಾಗ ಹುಡುಗ ಮುಖ ಕೆಳಗೆ ಹಾಕಿದ. "ಹೋಗು, ಒಳ್ಳೆಯ ನೌಕರಿ ಹುಡುಕಿಕೋ. ಸ್ವಂತ ಸಂಪಾದಿಸು. ನಂತರ ಮದುವೆಯಾಗು" ಎಂದು ಬುದ್ಧಿ ಹೇಳಿದರಂತೆ.

ಹೊಸದಾಗಿ ಮದುವೆಯಾಗಲು ಬರುವವರಂತೆಯೇ ಪುನರ್ವಿವಾಹ ಬಯಸಿಯೂ ಕೆಲವರು ಇಲ್ಲಿ ಬರುತ್ತಾರೆ, ವಿಧುರರು-ವಿವಾಹವಿಚ್ಛೇದಿತರು-ವಿಧವೆಯರು. ಯಾರೇ ಬಂದರೂ ಅವರಿಗೆ ಕೆಲ ಪ್ರಶ್ನೆಗಳನ್ನು ಇವರು ಕೇಳಲೇಬೇಕಾಗುತ್ತದೆ. ಒಮ್ಮೆ ಒಬ್ಬ ತರುಣ ಬಂದ, ಜತೆಗೊಬ್ಬ ತರುಣಿ. ಮೊದಲ ಮದುವೆ ಇರಬೇಕೆಂದು ಭಾವಿಸಿ, ಕೇಳು


ವುದನ್ನು ಕೇಳಿ ಒಂದು ಫಾರ್ಮನ್ನು ಕೊಟ್ಟರು. ಅದರಲ್ಲಿ "ಎರಡನೆ ಮದುವೆಯೆ?" ಎಂಬ ಕಾಲಂ ಇರುತ್ತದೆ. ಅಲ್ಲಿ ಆತ "ಹೌದು" ಎಂದು ಬರೆದ. ಅಲ್ಲಿಗೆ ನಿಲ್ಲಿಸಿದರು ಆಶಾತಾಯಿ. ವಿಚ್ಛೇದನ ಕಾಯಿದೆಬದ್ಧವೆ ಅಲ್ಲವೆ ಎಂಬುದನ್ನು ಪರಿಶೀಲಿಸುವದು ಅತ್ಯಗತ್ಯವಾದ್ದರಿಂದ ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ನೋಡಿ ಮದುವೆ ನೆರವೇರಿಸಿದರು.

ಕೆಲವೊಮ್ಮೆ ವಿಚ್ಛೇದನವಿಲ್ಲದೇ ಸುಳ್ಳು ಮಾಹಿತಿ ನೀಡಿ ಮತ್ತೊಂದು ಮದುವೆ ಮಾಡಿಕೊಳ್ಳಲು ಪ್ರಯತ್ನಿಸಿದವರೂ ಇದ್ದಾರೆ. ಇದೆಲ್ಲ ಅನುಭವಿಯಾದ ಆಶಾತಾಯಿಯೆದುರು ನಡೆಯುವುದೇ ಇಲ್ಲ. ಅವರು ಪ್ರಶ್ನಿಸತೊಡಗಿದರೆ ಇಂಥ ಪ್ರಯತ್ನ ಮಾಡುತ್ತಿರುವವರ ಆತ್ಮಸಾಕ್ಷಿ ಅಡ್ಡಬಂದು ಎದೆ ನಡುಗಿಸುತ್ತದೆ. ತಮ್ಮ ಪ್ರಶ್ನೆಗಳಿಗೆ ಪೆದರಿಕೆಯ ಉತ್ತರಗಳು ದೊರೆಯತೊಡಗಿದರೆ, "ಈ ಮದುವೆ ನಾನು ಮಾಡುವುದಿಲ್ಲ" ಎಂದು ಬಿಡುತ್ತಾರೆ ಅವರು.

ತಮ್ಮ ವಿರೋಧವಿದ್ದರೂ ಇವರಲ್ಲಿ ಬಂದು ಮದುವೆ ಮಾಡಿಕೊಂಡ ತಮ್ಮ ಮಗಳ ಮದುವೆಯ ನೋಂದಣಿಯನ್ನು ನಾಶಪಡಿಸಿದರೆ ಸಾವಿರಾರು ರೂಪಾಯಿ ಕೊಡುತ್ತೇನೆಂದು ಅನೇಕರು ಮುಂದೆಬಂದ ಪ್ರಸಂಗಗಳೂ ಇವೆ. ಆದರೆ ಆ ನೋಂದಣಿ ಕಾಯದೇಬದ್ಧವಾಗಿ ವಿವಾಹ ನೋಂದಣಿ ಕಚೇರಿಯಲ್ಲೂ ಆಗಿರುತ್ತದೆಯಲ್ಲವೆ? ಇಂಥವರಲ್ಲಿ ಹೆಚ್ಚಾಗಿ ಗುಜರಾತಿಗಳಿರುತ್ತಾರೆ. ಜೇಬಿನ ತುಂಬ ನೋಟುಗಳನ್ನು ಜತೆಗೆ ಪೋಲೀಸರನ್ನು ಕರೆತಂದಿರುತ್ತಾರಂತೆ ಅವರು.

ಇವರಿಗೆ ತಾವು ನೆರವೇರಿಸಿದ ಮದುವೆಗಳೆಲ್ಲ ಯಶಸ್ವಿಯಾಗಿ ಆ ಜೋಡಿಗಳು ಸುಖದಿಂದ ಸಂಸಾರ ನಡೆಸುತ್ತಿವೆ ಎಂಬುದು ಹೆಮ್ಮೆಯ ಸಂಗತಿಯಾದರೂ ಒಂದು ಪ್ರಸಂಗ ಮಾತ್ರ ಅವರಿಗೆ ಮರೆಯಲಾಗದ ಗಾಯವಾಗಿದೆ. ಘೋರ್ಪಡೆ-ಸಂನೀಸ್ ಎಂಬ ವಧೂವರರ ಮದುವೆ ಇವರಲ್ಲಿ ನಡೆಯಿತು. ಅಂತರ್ಜಾತೀಯ ಪ್ರೇಮವಿವಾಹ. ಹುಡುಗಿಯ ತಂದೆ ಶ್ರೀ ಘೋರ್ಪಡೆಯವರಿಗೆ ಈ ಮದುವೆ ಅಸಮ್ಮತವಾಗಿತ್ತು. ಮದುವೆಯ ನಂತರ ಒಮ್ಮೆ ಅಳಿಯ ಮನೆಯಲ್ಲಿಲ್ಲದ ಸಮಯ ಸಾಧಿಸಿ ಮಗಳನ್ನು ಕರೆದೊಯ್ದರು. ಬರುವಾಗ ತಂದ ತಿಂಡಿಯನ್ನು ಅವಳ ಮನೆಯಲ್ಲೇ ಆಕೆಗೆ ತಿನಿಸಿದ್ದರಂತೆ! ಹುಡುಗಿಗೆ ಬುದ್ಧಿಭ್ರಮೆಯಾಯಿತು. ತವರುಮನೆಗೆ ಹೆಂಡತಿ ಹೋದ ಸುದ್ದಿ ಕೇಳಿದ ಗಂಡ ಆಕೆಯನ್ನು ಕರೆದೊಯ್ಯ ಬಂದರೆ ಆತನ ಗುರುತನ್ನೇ ಆಕೆ ಹಿಡಿಯಲಿಲ್ಲ! ದಂಗುಬಡಿದ ಆತ ಸಹಾಯ ಯಾಚಿಸಿ ಆಶಾತಾಯಿಯಲ್ಲಿಗೆ ಬಂದ. ಅವರೂ ಹೋದರು. ಆಗಲೂ ಅಷ್ಟೇ, ಆಕೆಗೆ ಯಾರ ಗುರುತೂ ಸಿಗಲಿಲ್ಲ. ಮದುವೆಯ ಫೋಟೋ ತೋರಿಸಿದರು. ಆಕೆಗೆ ಇವರಾರು ಎಂಬುದು ನೆನಪಾಗಲಿಲ್ಲ. ಪಾಪ, ೪–೬ ವರ್ಷಗಳ ವರೆಗೆ ಹೆಂಡತಿ ಮೊದಲಿನಂತಾಗಬಹುದೆಂದು ಕಾದ ಆತ ಕೊನೆಗೆ ವಿವಾಹ ವಿಚ್ಛೇದನ ಪಡೆದ. ಸ್ವತಃ ಮಗಳ ಜೀವನದಲ್ಲೇ ಹುಳಿಹಿಂಡಿ ಹಾಳುಮಾಡಿದ ಆ ಕಟುಕ ತಂದೆಗೆಲ್ಲಿಯ ಮರುಕ? ಆಶಾತಾಯಿಗೆ ಮಾತ್ರ ಅದು ಕೊರಗಾಯಿತು.

ವಿವಿಧ ಜಾತಿ–ಧರ್ಮಗಳಿಗೆ ಸಂಬಂಧಿಸಿದ ವಧೂವರರ ಮದುವೆಗಳನ್ನು ಆಯಾ ಧಾರ್ಮಿಕ ವಿಧಿಗಳಿಂದ, ರಿಜಿಸ್ಟರ್ ವಿಧಿಯಿಂದ ನೆರವೇರಿಸಿಸುವ ಈ ಮಿತವ್ಯಯದ ಮದುವೆಯ ಮಂಟಪ 'ಶ್ರೀ ಮಂಗಲ ಕಾರ್ಯಾಲಯ'ದ ಆಶಾತಾಯಿ ಈ ವರೆಗೆ ೭೦೦೦ ಮದುವೆಗಳನ್ನು ಮಾಡಿದ್ದಾರೆ. ಹಬ್ಬ ಹರಿದಿನಗಳಲ್ಲಿ, ದೀಪಾವಳಿಯಂಥ ಸಂದರ್ಭಗಳಲ್ಲಿ ಇವರ ಮಂಗಲ ಕಾರ್ಯಾಲಯದಲ್ಲಿ ಇವರ ಮೊಮ್ಮಕ್ಕಳು ತುಂಬಿರುತ್ತಾರೆ. ೧೪ ಸಾವಿರ ಮೊಮ್ಮಕ್ಕಳು ಈ ಅಜ್ಜಿಗೆ! ತಾವೇ ಮಾಡಿದ ಮದುವೆಯಿಂದ ಸುಖಿಯಾಗಿರುವ ಹುಡುಗ ಹುಡುಗಿಯರಿಗೆ ತಾಯಿಯಾದ ಆಶಾತಾಯಿ ಈ ಮೊಮ್ಮಕ್ಕಳ ಕಿಲಿಬಿಲಿಯಲ್ಲೇ ಸಂತೋಷ ಕಂಡುಕೊಳ್ಳುತ್ತಾರೆ.



"ಅರೆ, ನೀವು ಬಂದೂ ರಜೇನೇ ತಗೊಂಡಿಲ್ವಲ್ಲ ಈ ವರ್ಷದಲ್ಲಿ!" ಸಾಹೇಬರು ಹೆಡ್‌ಕ್ಲರ್ಕ್‌ಗೆ ಕೇಳಿದರು — ಮೆಚ್ಚುಗೆ, ಅಭಿಮಾನದಿಂದ.

"ಹೌದು ಸರ್, ನನಗೆ ವಿಶ್ರಾಂತಿ ಅವಶ್ಯ ಅನಿಸಿದ್ದರಿಂದ ಹಾಗ್ಮಾಡ್ದೆ."

•

ಪತ್ರಿಕಾ ಸುದ್ದಿ: ನಗರದಲ್ಲಿ ನಾಳೆ ನೀರು ಪೂರೈಕೆ ಇಲ್ಲ. ಪತ್ರಿಕೆ ಓದುತ್ತಿದ್ದವ, "ಒಳ್ಳೇದಾಯ್ತು ಪ್ರತಿ ನಲ್ಲಿಯ ಬಳಿ ಒಂದು ದಿನವಾದರೂ 'ಮಾರಾಮಾರಿ' ಇರೋಲ್ಲ" ಎಂದುಕೊಂಡ.

*

ಭಿಕ್ಷುಕ: ಬಹಳ ದಿನದಿಂದ ಹಸಿದಿದ್ದೀನೆ... ತಾಯಿ...

ಮನೆಯಾಕೆ: ಯಾಕ ಹೀಗ್ ತಿರಗ್ತೀ... ಕೆಲವು ಬೇಡಿಕೆ ಮುಂದಿಸಿ ಆಮರಣ ಉಪವಾಸ ಸತ್ಯಾಗ್ರಹಾಂತ ಬೋರ್ಡ್ ಹಾಕ್ಕೊಂಡು ಜಿಲ್ಲಾಧಿಕಾರಿ ಕಚೇರಿ ಮುಂದೆ ಕುತ್ಕೋಬಾರ್ದ?

ಮಗ ವೈಮಾನಿಕ ತರಬೇತಿ ಮುಗಿಸಿ ಮನೆಗೆ ಬಂದ. ತಾಯಿ - ತಂದೆಗಳಿಗೆ ನಮಸ್ಕರಿಸಿದ. "ನಾಳೆ ಮನೆ ಮಂದಿಯನ್ನು ವಿಮಾನದಲ್ಲಿ ಕುಳ್ಳಿರಿಸಿಕೊಂಡು ಹಾರಾಡಲು ಅನುಮತಿ ದೊರೆತಿದೆ" ಅಂದ. ತಾಯಿಗೋ ಬಲು ಸಂತೋಷ.

ಮರುದಿನ ವಿಮಾನವೇರಿದರು. ಮಗನ ಸಾಹಸಕ್ಕೆ ತಂದೆ ಬೆರಗಾಗಿದ್ದರೆ ತಾಯಿಗೆ ಮೇಲಿಂದ ಕೆಳಕ್ಕೆ ಕಾಣುವುದೆಲ್ಲ ಅಚ್ಚರಿಯ ವಿಷಯವೇ. ಬಾಗಿ ನೋಡಿ, 'ಅದು ನೋಡು - ಇದು ನೋಡು . ಅಕೋ ಅಲ್ಲಿ .' ಎಂದೆಲ್ಲ ಮಗನಿಗೆ ಹೇಳತೊಡಗಿದಳು. ಮಗನಿಗೆ ಭಯ - ತನ್ನ ಲಕ್ಷ್ಯ ಬೇರೆಡೆ ಹೋಗಿ ಎಲ್ಲಿ ಅಪಘಡವಾಗತ್ತೊ ಎಂದು. "ಅಮ್ಮಾ, ಸುಮ್ಮನಿರು. ಹಾಗೆಲ್ಲ ಕೂಗಾಡಬೇಡ" ಅಂದ. ತಾಯಿ ಸುಮ್ಮನಾದಳು. ಮಗ ಮೋಡಗಳ ಮೇಲೊಯ್ದು - ಮೋಡಗಳ ಕೆಳ ತಂದ, ಅಂತೂ ಎರಡೂವರೆ ಗಂಟೆ ಗಾಳಿಯಲ್ಲಿ ತನ್ನ ಸಾಹಸ ಪ್ರದರ್ಶಿಸಿ ವಿಮಾನವನ್ನು ಇಳಿಸಿದ. "ಅಮ್ಮಾ ಹೇಗನಿಸಿತು?"

"ನೀನು ಮಾತನಾಡಬೇಡ ಅಂದಿ."

"ಹೌದು. ಅದಕ್ಕೆ?"

"ಮೇಲೆ ಹೋದಾಗ ಮಾತನಾಡಿದೆನಾ?"

"ಇಲ್ಲ."

"ಮೋಡಗಳ ಕೆಳ ಬಂದಾಗ?"

"ಆಗಲೂ ಇಲ್ಲ."

"ನಿಮ್ಮಪ್ಪ ಮೇಲಿನಿಂದ ಬಿದ್ದಾಗಲೂ ಮಾತನಾಡಿದೆನಾ?"

•

ನ್ಯಾಯಾಧೀಶ: ನೀನು ಮತ್ತೆ ನನ್ನೆದುರು ಹಾಜರಾಗದಂತೆ ಎಚ್ಚರಿಕೆ ವಹಿಸು ಅಂತ್ಹೇಳಿದ್ದೆ ಕಳೆದ ವಾರ. ಮತ್ತೇಕೆ ಬಂದೆ?

ಅಪರಾಧಿ: ಇದರಲ್ಲಿ ನನ್ನ ತಪ್ಪೇನೂ ಇಲ್ಲ ಸಾರ್. ಬೇಡ ತಮ್ಮೆದುರು ಹಾಜರಾಗ್ಬೇಡಾಂತ ಸಾಹೇಬ್ರು ಹೇಳಿದಾರೆ ಅಂತ ಎಷ್ಟು ಕೇಳಿಕೊಂಡ್ರೂ, ಪೋಲಿಸರು ಕದ್ದ ಮಾಲು ಸಮೇತ ತಮ್ಮೆದುರು ಎಳೆದು ತಂದಿದ್ದಾರೆ ಸಾರ್...

•

ಪತ್ನಿ: ನಡೀರಿ- ಮುಗೀತು ನನ್ನಲಂಕಾರ, ಇನ್ನು ಹೊತ್ತಾಗತ್ತೆ ಸಿನಿಮಾಕ್ಕೆ.

ಪತಿ: ನಡಿ- ನಾ ರೆಡಿ.

ಪತ್ನಿ: ಏನ್ ರೆಡಿ? ದಾಡಿ ಮಾಡಿಕೊಂಡೇ ಇಲ್ವಲ್ಲ...

ಪತಿ: ನೀನು ಅಲಂಕಾರಕ್ಕೆ ಕೂತ್ಕೊಳ್ಳೋ ಮೊದಲು ಮಾಡಿಕೊಂಡಿದ್ದೆ ಮಹಾರಾಯಿತಿ.

■

ಶಾಲೆಯ ಇನ್‌ಸ್ಪೆಕ್ಷನ್‌ಗೆ ಬಂದಿದ್ದ ಸಾಹೇಬರಿಗೆ ಹೆಡ್‌ಮಾಸ್ತರರು ಮನೆಗೆ ಹೋಗಿರುವ ವಿಷಯ ಸಿಟ್ಟು ತರಿಸಿತು. ಕರೆಕಳಿಸಿದರು. ಸಾಹೇಬರಿಗೆ ಬಲು ಸಿಟ್ಟು ಬಂದಿರಬೇಕೆಂದು ಊಹಿಸಿಯೇ ಬಂದ

ಹೆಡ್‌ಮಾಸ್ಟರ್ ಶುನಕ—ಸೌಜನ್ಯದಿಂದ "ಯಾವಾಗ ಬಂದ್ರಿ ಸಾಹೇಬ್ರ?" ಎಂದು ಕೇಳಿದರು.

"ಬಂದು ೫ ವರ್ಷವಾಯ್ತು." ಸಿಟ್ಟಿನಿಂದ ಸಾಹೇಬರು ಗುಂಡು ಹಾರಿಸಿದರು.

"ಹೌದಾ? ಪಾಪ- ಬಾಳ ದಿನವಾಯಿತು. ಹಂಗಾದ್ರೆ ಯಾವಾಗ ಹೋಗ್ತೀರಿ?" ಎಂದು ಹೆಡ್‌ಮಾಸ್ತರ್ ಅದೇ ಶುನಕ-ಸೌಜನ್ಯದಿಂದಲೇ ಪ್ರಶ್ನಿಸಿದರು.

*

ಮಾಲಿಕ: ಮ್ಯಾನೇಜರು ನಿನ್ನ ಕೆಲಸ ಏನೂಂತ ಹೇಳಿದ್ದಾರಲ್ವೆ?

ಹೊಸ ನೌಕರ: ಹೌದು. ನೀವು ಬರೋದನ್ನ ಕಂಡಕೂಡ್ಲೇ ತಮ್ಮನ್ನ ಎಬ್ಬಿಸಬೇಕಂತೆ.

*

ತನ್ನ ಬಳಿ ಭವಿಷ್ಯ ಕೇಳಬಂದವನ ಹಸ್ತರೇಖೆಗಳನ್ನು ನೋಡಿದ ಜ್ಯೋತಿಷಿ- "ಇಷ್ಟರಲ್ಲೇ ನೀವು ಭಾರೀ ಸಾಹುಕಾರನ ಏಕಮಾತ್ರ ಮಗಳ ಕೈ ಹಿಡಿಯಲಿದ್ದೀರಿ- ತುಂಬಾ ಸುದೈವಿ" ಅಂದ.

"ಹೌದೆ? ಹಾಗಾದ್ರೆ ನನಗೀಗಿರೋ ಹೆಂಡತಿ ಮಕ್ಕಳು ದುರ್ದೈವಿಗಳೇ?"

*

ಪತಿ: ಅಂತೂ ನನ್ನ ಹಲ್ಲು ಕೀಳಲು ದಂತವೈದ್ಯರಿಗೆ ಅರ್ಧಗಂಟೆ ಸಮಯ- ಹದಿನೈದು ರೂಪಾಯಿ ಹಣ ಬೇಕಾಯಿತು.

ಪತ್ನಿ: ತಪ್ಪು ಮಾಡಬೇಡೀಂತ ಎಷ್ಟು ಸಲ ಹೇಳೀದ್ರೂ ಕೇಳಲ್ಲ. ಇನ್ನೊಮ್ಮೆ ಹಲ್ಲು ನೋವು ಬಂದ್ರೆ ನನ್ನ ಹತ್ತಿರ ಬನ್ನಿ- ರೊಕ್ಕ ರುಜಿ ಏನೂ ಕೇಳಲ್ಲ.

*

ಮಾರುಕಟ್ಟೆಗೆ ಹೊರಟಿತ್ತು ಹೊಸಜೋಡಿ. ಹೆಂಡತಿ ಒಮ್ಮೆಲೇ ಕೆಮ್ಮತೊಡಗಿ ಕಣ್ಣಲ್ಲಿ ನೀರು ಬಂತು. ಮುಂದೆ ನಡೆಯಲಾಗಲಿಲ್ಲ. "ಏನೇ- ಬೇಗ ಏನಾದ್ರೂ ತಗೋ ಗಂಟಲಿಗೆ... ನಡಿ ಮನೆಗೆ ಹೋಗೋಣ" ಅಂದ ಗಂಡ.

"ಮನೇಗ್ಹೋದ್ರೆ ವಾಸಿಯಾಗಲ್ಲ" ಅಂತ ಮತ್ತೆ ಕೆಮ್ಮತೊಡಗಿದಳಾಕೆ.

"ಹಾಗಾದ್ರೇನ್ಮಾಡೋಣಂತಿ? ಅಕೋ ಅಲ್ಲಿ ಔಷಧಿ ಅಂಗಡಿ ಕಾಣಿಸ್ತಿದೆ, ಅಲ್ಲಿಗೇ ಹೋಗೋಣ."

"ಬೇಡ- ಅಲ್ಲಿಗ್ಹೋದ್ರೆ ವಾಸಿಯಾಗೋದೇ ಇಲ್ಲ- ಅದರ ಪಕ್ಕಕ್ಕಿದೆ ನೋಡಿ ಅಲ್ಲಿಗೆ ಹೋಗೋಣ" ಅಂದಳು ಹೆಂಡತಿ.

ಅತ ಆಕೆ ತೋರಿಸಿದತ್ತ ನೋಡಿದ. ಜುವೆಲರ್ಸ್ ಶಾಪ್. ಶಟ್ಟನೇ ಮೊನ್ನೆ ಆಕೆ ಕಂಠಾಭರಣ ಬೇಕು ಅಂದದ್ದು ಜ್ಞಾಪಕಕ್ಕೆ ಬಂತು.

*

"ಅಪ್ಪಾ"

"ಏನ್ಮಗು?"

"ಎಲ್ಲಿಯೇ ಕ್ರಾಸ್ ಮಾಡುವಾಗ ಎಡ-ಬಲ ನೋಡಬೇಕೆ?"

"ಹೌದ್ಮಗು- ಈಗೇನಾಯ್ತು?"

"ಮತ್ತೆ ನೀನು ಈಗ ಚೆಕ್‌ಕ್ರಾಸ್ ಮಾಡುವಾಗ್ಲೂ ಹಾಗ್ಯಾಕೆ ನೋಡಿದೆ?"

"ಹೌದ್ಮಗು-ರಸ್ತೇ ಕ್ರಾಸ್‌ಮಾಡುವಾಗ ವಾಹನಗಳ ಹೆದರ್ಕೆ- ಚೆಕ್‌ಕ್ರಾಸ್ ಮಾಡುವಾಗ ನಿಮ್ಮಮ್ಮನದು..."

*

"ಅರೆ, ಇದೇನು? ಕೋಳಿಗಳಿಗೇಕೆ ವಿಸ್ಕಿ ಕುಡಿಸ್ತಿದ್ದೀ...?"

"ಅವು ಸ್ಕಾಚ್— ಎಗ್ ಹಾಕ್ಲಿ ಅಂತ."

"ಅಂದ್ರೆ?"

"ಅಂಥ- ಎಗ್‌ನಿಂದ ಸ್ಕಾಚ್ ಕೋಳಿ ಹುಟ್ಲೀಂತ."

"ಅಂದ್ರೆ?"

"ಅಂಥ ಕೋಳಿ ಚಿಕನ್ ತಂದೂರಿ ಮಾಡಿದರೆ ತಿಂದವನಿಗೆ ಕುಡಿದ ಅನುಭವವೂ ಆಗ್ಲೀಂತ..."

*

ಶತಾಯುಷಿಗೆ ಪತ್ರಕರ್ತನ ಪ್ರಶ್ನೆ: "ನಿಮ್ಮ ದೀರ್ಘಾಯುಷ್ಯದ ಗುಟ್ಟೇನು?"

"೧೮೫೦ರಲ್ಲಿ ಹುಟ್ಟಿದ್ದು......" ಬಂತು ಉತ್ತರ.

ಚಂಬಲ್ ಹುಲಿ

ಎ. ಎಂ. ಶಾಂತರಾಜು

ವಿಂಧ್ಯ ಪರ್ವತಗಳಿಂದು ಚಂಬಲ್ ಕಣಿವೆ ಪ್ರಸಿದ್ಧವಾಗಿವೆ. ಈ ಕಣಿವೆಗಳು ಇಕ್ಕಟ್ಟಾಗಿ ಕಲ್ಲು ಮುಳ್ಳುಗಳಿಂದ ತುಂಬಿವೆ. ಇವು ಆಳವಾದ ಕಣಿವೆಗಳು. ಕಳ್ಳರಿಗೆ, ಡಕಾಯಿತರಿಗೆ, ಕ್ರಾಂತಿಕಾರರಿಗೆ ವಾಸಸ್ಥಾನವಾಗಿವೆ. ಇಲ್ಲಿ ಡಕಾಯಿತರ ದೊಡ್ಡ ಗುಂಪೊಂದು ಇತ್ತು. ಇದರ ನಾಯಕನೇ ಜಸ್ವಂತ್‌ಸಿಂಗ್. ಅದನನ್ನು ಚಂಬಲ್ ಹುಲಿ ಎಂದು ಕರೆದರೂ ತಪ್ಪಿಲ್ಲ. ಅವನನ್ನು ಕಂಡ ಜನ ಹುಲಿಯನ್ನು ಕಂಡಂತೆ ಹೆದರುತ್ತಿದ್ದರು. ಅವನ ಮಾತೆತ್ತಿದರೆ ಪೋಲೀಸರು ಸಹ ಹೆದರುತ್ತಿದ್ದರು. ಶ್ರೀಮಂತರು ಜಮೀನುದಾರರಂತೂ ಹೆದರಿ ನಡುಗುತ್ತಿದ್ದರು. ತಾಯಂದಿರು ತಮ್ಮ ಮಕ್ಕಳನ್ನು ಜಸ್ವಂತ್ ಬಂದನೆಂದು ಹೇಳಿ ಹೆದರಿಸುತ್ತಿದ್ದರು. ಅವನು ಎಂದೂ ಬಡವರ ಮನೆ ದೋಚುತ್ತಿದ್ದಿಲ್ಲ. ಆದರೆ ಶ್ರೀಮಂತರ ಮನೆಯಲ್ಲಿ ದೋಚಿದ್ದ ಮೂರನೇ ಒಂದು ಭಾಗ ಬಡವರಿಗೆ ಹಂಚುತ್ತಿದ್ದ. ಜಸ್ವಂತ್ ತಿಂಗಳಿಗೊಮ್ಮೆ ಬಂದು ಶ್ರೀಮಂತರ ಹತ್ತಿರ ತನ್ನ ಮಾಮೂಲಿ ವಸೂಲು ಮಾಡುತ್ತಿದ್ದ. ಅವನು ದರೋಡೆ ನಡೆಸುತ್ತಿದ್ದಾಗ ಹೆಂಗಸರ ಮಾನಾಪಹರಣಕ್ಕೆ ಪ್ರಯತ್ನಿಸುತ್ತಿದ್ದಿಲ್ಲ. ಅವನ ಸಹಚರರಾರಾದರೂ ಅಂಥ ಕೆಲಸ ಮಾಡಿದ್ದಲ್ಲಿ ಅವರಿಗೆ ಕಠಿಣ ಶಿಕ್ಷೆ ಕಾದಿರುತ್ತಿತ್ತು. ಜಸ್ವಂತ್‌ಸಿಂಗ್ ಜನರಿಗೆ ತುಂಬಾ ಕಿರುಕಳ ಕೊಡುತ್ತಿದ್ದರಿಂದ ಸರಕಾರ ಅವನನ್ನು ಹಿಡಿಯಲು ಬಹಳ ಪ್ರಯತ್ನ ಮಾಡಿತ್ತು. ಕಡೆಗೆ ವಿಫಲವಾದ ಸರಕಾರ ಜಸ್ವಂತನನ್ನು ಹಿಡಿದು ಕೊಟ್ಟವರಿಗೆ ಒಂದೂವರೆ ಲಕ್ಷ ರೂಪಾಯಿ ಬಹುಮಾನ ಕೊಡುವುದಾಗಿ ಘೋಷಿಸಿತ್ತು.

ಜಸ್ವಂತನದು ಸಿಖ್ ಮನೆತನ. ತಂದೆ ಅಜಿತ್‌ಸಿಂಗ್ ರೈತ. ಅವರಿಗೆ ಸುಮಾರು ಆರು ಎಕರೆ ಸ್ವಂತ ಭೂಮಿ ಇತ್ತು. ಬರಡು ಭೂಮಿ, ಏನೂ ಫಲಕಾರಿಯಾಗಿರಲಿಲ್ಲ. ಜಸ್ವಂತನ ತಂದೆ ತಾಯಿಗಳಿಗೆ ದಿನ ಬೆಳಗಾದರೆ ಹೊಲದಲ್ಲಿ ಕೆಲಸ. ಆಗ ಕೋಮುವಾರು ಗಲಭೆಗಳು ನಡೆಯುತ್ತಿದ್ದ ಕಾಲ. ಅವರು ಆಗ ಪಾಕಿಸ್ತಾನದಲ್ಲಿದ್ದರು. ಭಾರತಕ್ಕೆ ಬರಬೇಕೆಂದ ಅವರು ಯೋಚಿಸಿದ್ದರು. ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಹೋಗುವವರು ಆಭರಣಗಳು, ಹಣ ಮಾತ್ರ ಒಯ್ಯಬೇಕಿತ್ತು. ಅದರಂತೆ ಅವರು ಮನೆಯ ಸಾಮಾನು, ಪಾತ್ರೆ ಪಗಡೆಗಳನ್ನು ತಮಗೆ ಗೊತ್ತಿದವರಿಗೆ ಕೊಟ್ಟುಬಿಟ್ಟರು. ಭಾರತಕ್ಕೆ ಬರುವಾಗ ರೈಲಿನಲ್ಲಿ ಇವರನ್ನು ಕೆಲವು ಮುಸಲ್ಮಾನರು ಸುತ್ತುಗಟ್ಟಿದರು. ಆಗ ಜಸ್ವಂತನ ತಾಯಿ, "ಅಪ್ಪಾ, ಜಸ್ವಂತಾ ನಮ್ಮ ಕಥೆ ಮುಗಿಯಿತು. ನೀನು ಅಲ್ಲಿರುವ ಗೋಣಿ ಚೀಲದ ಹಿಂದೆ ಅಡಗಿಕೊ" ಎಂದಳು, ಮಗನೆಂಬ ವಾತ್ಸಲ್ಯದಿಂದ. ಜಸ್ವಂತ್ ಮರುಮಾತಾಡದೇ ಒಪ್ಪಿಕೊಂಡ. ಮುಸಲ್ಮಾನರು ಅವನ ತಂದೆ ತಾಯಿಗಳನ್ನು ಕೊಂದರು. ಜಸ್ವಂತ್ ಮಾತ್ರ ಅವರ ಕಣ್ಣಿಗೆ ಬೀಳಲಿಲ್ಲ. ಹೀಗೆ ಆತ ಬದುಕುಳಿದು ಗ್ವಾಲಿಯರಿಗೆ ಕಳ್ಳತನದಿಂದ

ಪ್ರಯಾಣ ಮಾಡಿದ.

ಗಾಲ್ವಿಯರಿಗೆ ಬಂದಾಗ ಅವನ ಕೈಯಲ್ಲಿ ಏನೂ ಇದ್ದಿಲ್ಲ. ಆದರೆ ಅವನ ಹೊಟ್ಟೆಯ ತಳಮಳ ಕೇಳಬೇಕಲ್ಲ. ಅಲ್ಲಿಯೇ ಇದ್ದ ಒಬ್ಬನ ಪಾಕೆಟ್ ಹಾರಿಸಿದ. ಅದು ಅವನಿಗೆ ಗೊತ್ತಾಯಿತೋ ಏನೋ, "ಗುರುವಿಗೇ ತಿರುಮಂತ್ರ ಕಲಿಸುವಿಲ್ಲಾ–ಯಾರು ನೀನು ?" ಎಂದ. ಆಗ ಅಜಾತ್ಶಾ ಜಸ್ವಂತ್, "ನಾನು ಅನಾಥ. ಹೊಟ್ಟೆ ಹಸಿವು. ಅದಕ್ಕೆ ಕದ್ದೆ." ಎಂದು ನುಡಿದ. ಆಗ ಆತ ತನ್ನ ಮನೆಗೆ ಕರೆದುಕೊಂಡು ಹೋಗಿ ಕಳ್ಳತನ ಮಾಡುವ ವೃತ್ತಿ ಕಲಿಸಿದ. ಕೆಲವೇ ದಿನಗಳಲ್ಲಿ ಜಸ್ವಂತ್ ಕುಪ್ರಸಿದ್ಧ ಕಳ್ಳನಾದ. ಬಲರಾಮ ಸಿಕ್ಕಿದ್ದೂ ಅಲ್ಲೇ. ಮುಂದೆ ಆ ಗುಂಪಿಗೆ ಜಸ್ವಂತನೇ ನಾಯಕನಾಗಿ ಚುಬಲ್ ಕಣಿವೆಗೆ ಬಂದು ನೆಲಸಿದ.

ಬಹುಮಾನದ ಆಶೆಯಿಂದ ಎಷ್ಟೋ ಜನ ಅವನನ್ನು ಹಿಡಿದು ಕೊಡಲು ಮುಂದಾದರು. ಇವರ ಕೈಗೆ ಚುಬಲ್ ಹುಲಿ ಸಿಗುವುದೇ? ಆ ಪ್ರಯತ್ನಕ್ಕೆ ಕೈ ಹಾಕಿ ಪ್ರಾಣ ಕಳೆದುಕೊಂಡವರು ಎಷ್ಟೋ. ಅವರಲ್ಲಿ ಗಾಲ್ವಿಯರಿನ ಸಮೀಪದ ಒಂದು ಗ್ರಾಮದ ಪಟೇಲನೂ ಒಬ್ಬ. ಅವನ ಹೆಸರು ಫತೇಸಿಂಗ್ ಗಾಯಕವಾಡ.

ಒಂದು ದಿನ ಮುಂಜಾನೆ, "ನೋಡಿ, ನಿಮ್ಮ ಗೆಳೆಯನಾದ ಜಸ್ವಂತನನ್ನು ಹಿಡಿದುಕೊಡಿ. ಸರಕಾರದವರು ಅವನನ್ನು ಹಿಡಿದುಕೊಟ್ಟವರಿಗೆ



ಒಂದೂವರೆ ಲಕ್ಷ ರೂಪಾಯಿ ಕೊಡುತ್ತೇವೆಂದು ಘೋಷಿಸಿದ್ದು ನಿಮಗೆ ಗೊತ್ತಿಲ್ಲವೇ ?" ಎಂದಳು ಅವನ ಹೆಂಡತಿ. ಆಗ ಗಾಯಕವಾಡ "ಗೆಳೆಯನನ್ನು ಹಿಡಿದು ಕೊಡುವುದು ಸರಿಯೇ ? ಮಿತ್ರದ್ರೋಹ ಮಾಡಿದಂತಾಗುವದಿಲ್ಲವೇ?" ಎಂದ. ಅದಕ್ಕೆ ಅವನ ಹೆಂಡತಿ, "ಎಲ್ಲಿ ಮಿತ್ರದ್ರೋಹ, ಅವನನ್ನು ಹಿಡಿದು ಕೊಟ್ಟರೆ ನಮ್ಮ ಕಷ್ಟಗಳೆಲ್ಲಾ ತೀರುತ್ತವೆ. ನೀವು ನನ್ನ ಒತ್ತಾಯಕ್ಕಾದರೂ ಹಿಡಿದುಕೊಡಲೇ ಬೇಕು" ಎಂದು ಆಗ್ರಹಪಡಿಸಿದಳು.

ಬಹುವಾಗಿ ಯೋಚಿಸಿ ಕೊನೆಗೊಂದು ಯೋಜನೆ ಹುಡುಕಿದ ಫತೇಸಿಂಗ್ ಗಾಯಕವಾಡ. ಗ್ವಾಲಿಯರಿಗೆ ಹೋಗಿ ಪೋಲೀಸರನ್ನು ಕಂಡ. "ಸಾಹೇಬ್ ಜಸ್ವಂತ್ ಈ ದಿನ ರಾತ್ರಿ ೧೦ ಗಂಟೆಗೆ ನನ್ನ ಮನೆಗೆ ಊಟಕ್ಕೆ ಬರುತ್ತಾನೆ. ಆಗ ನೀವು ಅವನನ್ನು ಬಂಧಿಸಿ," ಎಂದು ಹೇಳಿ ಮನೆಯ ಕಡೆಗೆ ಹೊರಟ. ದಾರಿಯಲ್ಲಿ ಜಸ್ವಂತಸಿಂಗ್ ಸಿಗ ಬೇಕೇ? "ನೋಡು ಭಾಯೀ, ಈ ದಿನ ನಮ್ಮ ಮನೆಯಲ್ಲಿ ಔತಣಕೂಟವಿದೆ. ನೀನು ತಪ್ಪದೆ ಬರಲೇಬೇಕು" ಎಂದು ಒತ್ತಾಯಿಸತೊಡಗಿದ. ಆಗ ಜಸ್ವಂತ್, "ಆಗಲಿ ಬರುತ್ತೇನೆ. ನೀನು ಕರೆದರೆ ಬರುವುದಿಲ್ಲ ಎನ್ನಲೇ?" ಎಂದು ಹೇಳಿದ.

ತನ್ನ ಠಿಕಾಣಿಗೆ ಬಂದ ಜಸ್ವಂತ್ ಸಹಚರರಿಗೆ, "ನೋಡಿ ಈಗಿನ ಕಾಲದಲ್ಲಿ ಬೆಲೆ ಇರುವುದು ನಂಬಿಕೆಗಲ್ಲ, ಹಣಕ್ಕೆ" ಎಂದ. ಆಗ ಗುರುದತ್ ಎಂಬವನು, "ಏನಾಗಿದೆ ಈಗ ಪರಿಸ್ಥಿತಿ? ಹೇಳು ಭಾಯೀ" ಎಂದ. ಗಾಯಕವಾಡನು ತನ್ನನ್ನು ಹಿಡಿದು ಕೊಡಲು ಒಳಸಂಚು ಹೂಡಿ, ಆ ದಿನ ಔತಣಕ್ಕೆ ಕರೆದಿದ್ದು, ಪೋಲೀಸರಿಗೂ ಅದೇ ಹೊತ್ತಿನಲ್ಲಿ ಬಂದು ಬಂಧಿಸಲು ಹೇಳಿದ್ದು ಎಲ್ಲವನ್ನೂ ಹೇಳಿದ ಜಸ್ವಂತ್.

ಅಷ್ಟರಲ್ಲಿ ಸುಖದೇವ್ ಸರಾಯಿ ಮತ್ತು ಸ್ವಲ್ಪ ಚಿಪ್ಸನ್ನು ತಂದ. ಎಲ್ಲರೂ ಕುಡಿದು ತಿಂದು ಮಲಗಿದರು. ಜಸ್ವಂತನಿಗೆ ಮಾತ್ರ ನಿದ್ದೆ ಹತ್ತಲಿಲ್ಲ. ಅವನು ತನ್ನ ಕಳೆದುಹೋದ ದಿನಗಳ ಮೆಲಕು ಹಾಕತೊಡಗಿದ. 'ಗ್ರಂಥ ಸಾಹಿಬ್'ದ ಉಪದೇಶಗಳು ನೆನಪಾಗತೊಡಗಿದವು. ಗುರು ನಾನಕರು ಹೇಳಿದ ಪ್ರಕಾರ ಡಕಾಯಿತಿ ಮಾಡುವುದು ತಪ್ಪು ಎನಿಸಿದರೂ, ತಾನು ಈಗ ಡಕಾಯಿತನಾಗಿದ್ದರಿಂದ ಒಳ್ಳೆಯ ಗೃಹಸ್ಥ ನಾಗಿ, ಸಭ್ಯನಾಗಿ ಬಾಳಲು ಸಾಧ್ಯವಾಗಿದ್ದಿಲ್ಲ. ಅವನು ಡಕಾಯಿತನಾಗಿದ್ದರೂ ತನ್ನ ಧರ್ಮದಲ್ಲಿ ಬಹಳ ಶ್ರದ್ಧೆ ಗೌರವ ನಂಬಿಕೆಯನ್ನಿಟ್ಟಿದ್ದ.

ಹೀಗೇ ಸಮಯ ಒಂಭತ್ತೂವರೆಯಾಯಿತು. ಆಗ ಎಲ್ಲರಿಗೂ ಎಚ್ಚರವಾಗತೊಡಗಿತು. ಪೂರ್ವ ಭಾವಿ ಯೋಜನೆಯಂತೆ ಅವನ ಸಹಚರರು ತಮ್ಮ ಕೆಲಸಕ್ಕೆ ತೆರಳಿದರು.

ಅಷ್ಟು ಹೊತ್ತಿಗೆ ಜಸ್ವಂತ್‌ಸಿಂಗ್ ಗಾಯಕ ವಾಡನ ಮನೆಗೆ ಬಂದ. ಅಲ್ಲಿ ಅವನಿಗೆ ಅದ್ದೂರಿಯ ಭೋಜನವಾಯಿತು. ಮತ್ತೆ ಸುರಾಪಾನ ಶುರುವಾಯಿತು. ಜಸ್ವಂತನಿಗೆ ಮತ್ತೇರತೊಡಗಿತು. ಗಾಯಕವಾಡನು ಒಂದು ಚಪ್ಪಾಳೆಯನ್ನು ತಟ್ಟಿದ. ಕೂಡಲೇ ಪೋಲೀಸರು ಬಂದರು. ಆದರೆ ಅವರು ಬಂಧಿಸಿದ್ದು ಜಸ್ವಂತನನ್ನಲ್ಲ. ಗಾಯಕವಾಡನನ್ನು.

ಮರುದಿನ ಬೆಳಗಾದ ಮೇಲೆ ಹೆಬ್ಬಾಗಿಲ ಮುಂದೆ ಗಾಯಕವಾಡನ ಹೆಣ ನೇತಾಡುತ್ತಿತ್ತು. ಅದರ ಮುಂದೆ ಅವನ ಹೆಂಡತಿ, "ಅಯ್ಯೋ, ಹೋಗಿಬಿಟ್ಟರಲ್ಲಾ. ದೇವಾ ನನ್ನವರೇನು ತಪ್ಪು ಮಾಡಿದ್ದರು," ಎಂದು ಗೋಳಾಡಿ ಅತ್ತಳು.

ಇತ್ತ ಜಸ್ವಂತನ ಮನಸ್ಸು ವಿಚಲಿತಗೊಂಡಿತು. ತಾನಿನ್ನು ಈ ದುಷ್ಟ ವೃತ್ತಿಯನ್ನು ಬಿಟ್ಟು ಬಿಡಬೇಕು, ಸಜ್ಜನನಾಗಿ ಸಭ್ಯನಾಗಿ ಬಾಳಬೇಕು- ಇಲ್ಲದಿದ್ದರೆ ತನ್ನ ಬಾಳಿನಲ್ಲಿ ಶಾಂತಿ ಸಿಗಲು ಸಾಧ್ಯ ವಿಲ್ಲ ಅನಿಸಿತು ಆತನಿಗೆ. ಆಗಷ್ಟೇ ಚಂಬಲ್ ಕಣಿವೆಯ ದುಷ್ಟರ ಮನಃಪರಿವರ್ತನೆಯ ಮಹಾ ಕಾರ್ಯಕ್ಕೆ ಜೆ. ಪಿ. ಕೈ ಹಾಕಿದ್ದರು. ಜಸ್ವಂತ್ ತಾನೂ ಲೋಕನಾಯಕ ಜಯಪ್ರಕಾಶ ನಾರಾಯಣರಿಗೆ ಶರಣಾಗಲು ಯೋಚಿಸಿ ಸಹಚರರೊಂದಿಗೆ ಶರಣಾದ. ✡


Nestlé
NESCAF
ಸದಾ ಲವಲವಿಕೆಯಿಂದಿರಲು
ನೆಸ್‌ಕಾಫೆ
100% ಶುದ್ಧವಾದ ಕಾಫಿಯಿಂದ
ತಯಾರಿಸಲ್ಪಟ್ಟ ಏಕಮಾತ್ರ ಇನ್‌ಸ್ಟಂಟ್ ಕಾಫಿ
NS/CAS 3/79 KAN

ಟಿಪ್ಪು ಸುಲ್ತಾನನೂ ಮಲ್ಲೈಕೊಂಡಿಗರೂ

ರೇಣುಕ

ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ಟಿಪ್ಪು ಸುಲ್ತಾನನು ಮಲಬಾರದ ಮೇಲಿನ ತನ್ನ ದಂಡಯಾತ್ರೆಯೊಂದರಲ್ಲಿ ಮೈಸೂರಿನ ಅರಣ್ಯಗಳಲ್ಲಿ ವಾಸಿಸುತ್ತಿದ್ದ ಮಲ್ಲೈಕೊಂಡಿಗರೆಂಬ ಆದಿವಾಸಿಗಳನ್ನು ಸಂಧಿಸುವ ಉಲ್ಲೇಖ ಫ್ರೆಂಚ್ ಮಿಷನರಿ ಅಬ್ಬೆ ಜಾ. ಡುಬಾಯ್ ಅವರ Hindu Manners Customs and Ceremonies ಎಂಬ ಗ್ರಂಥದಲ್ಲಿ ದೊರೆಯುತ್ತದೆ.

ಟಿಪ್ಪು ಸುಲ್ತಾನನ ಸ್ವಯಂ ನೇತೃತ್ವದಲ್ಲಿ ಮೈಸೂರಿನ ಪದಾತಿದಳ ಮಲಬಾರಿನೆಡೆ-ಮುಖವಾಗಿ ಸಾಗಿತ್ತು. ಶ್ರೀರಂಗಪಟ್ಟಣದಿಂದ ಸಾಲುವಾಗಿ ಬರುತ್ತ ದಿನಗಳ ನಂತರ ಪ್ರಯಾಣ ಮಾಡಿದ ಸೇನೆ ಮೈಸೂರಿನ ದಟ್ಟವಾದ ಅರಣ್ಯವನ್ನು ಪ್ರವೇಶಿಸಿತು. ಪ್ರಯಾಣದುದ್ದಕ್ಕೂ [illegible] [illegible] ಪ್ರವೇಶದಿಂದ ಕಾಡಿನ ಮೌನ ಕಲಕಿತು. ಕಾಡು ಮೃಗಗಳು [illegible] [illegible] [illegible].

ಪ್ರಯಾಣದ [illegible] [illegible] ಸೈನಿಕರು [illegible] [illegible] [illegible] [illegible] [illegible] [illegible].

ಅಲ್ಪಕಾಲದ ವಿರಾಮವಾಗಿ ಅವರು ತಂಗುತ್ತಿರುವ [illegible] ಬೇರಾಗಿ ಕಳೆಗಟ್ಟ ಅವರ ಮುಖಗಳಿಂದ [illegible]. ಆದರೆ ಟಿಪ್ಪು ಸುಲ್ತಾನನು [illegible] [illegible] [illegible] [illegible] [illegible] [illegible] [illegible] [illegible] [illegible] [illegible] ತನ್ನ ಅರಮನೆ [illegible] [illegible] [illegible].

ಗೆಲುವಿನ [illegible] [illegible] ತನ್ನ [illegible] ವನ್ನು [illegible] ಟಿಪ್ಪು. [illegible] [illegible] [illegible] [illegible] [illegible]. [illegible] [illegible] [illegible] [illegible] [illegible] [illegible].

ಸೂರ್ಯಾಸ್ತಕ್ಕೆ ಇನ್ನೂ ಬಹಳ ಹೊತ್ತಿದ್ದ ಕಾರಣ ಆ ರಮಣೀಯವಾದ ವನಪ್ರದೇಶವನ್ನು ಅಷ್ಟಾಗಿಕೊಂಡು ಬರಲು ತನ್ನ ಜೊತೆಯಿಂದ ಟಿಪ್ಪು ಹೊರಟಿದ್ದಾಗ ಅಂಗರಕ್ಷಕ ಭಟರು ಅವನನ್ನು ಹಿಂಬಾಲಿಸಿದರು. ಕಣ್ಣು ಹಾಯುವಷ್ಟು ಚಿಕ್ಕ ಪುಟ್ಟ ಹೊಳೆ ಹಳ್ಳಗಳು ಅಂಕುಡೊಂಕಾಗಿ ಕುಣಿಯುತ್ತ ಜಿಗಿಯುತ್ತ ಬಂಡೆ ದಿಣ್ಣೆಗಳನ್ನು ದಾಟುತ್ತ ಹರಿಯುತ್ತಿದ್ದುವು. ಕಣ್ಣಿಗೆ ತಂಪ ನೀಡುವ ಹಸಿರು ನಾಚ್ಚಿಸುವ ವೃಕ್ಷರಾಜಿಗಳ ಸಾಮ್ರಾಜ್ಯ, ಎಷ್ಟೆಷ್ಟು ಸೋಜಿಗದ! ಮೈಸೂರಿನ ಧೀರ ಸುಲ್ತಾನನನ್ನು ಬರಮಾಡಿಕೊಳ್ಳಲೆಂದೇ ಥಳಥಳಿಸುವ ಹಸಿರುಡಿಯನ್ನುಟ್ಟು ಶೋಭಾಯಮಾನವಾಗಿ ಚಿರಯೌವನೆಯಾದ ವನಶ್ರೀ ಬೀಸಿ ನಿಂತಂತಿತ್ತು ಆ ವನಧಾಮ.

ಟಿಪ್ಪು ಅಂಗರಕ್ಷಕರೊಂದಿಗೆ ಆ ವನಸಿರಿಯ ರುದ್ರ ರಮಣೀಯ ಸೌಂದರ್ಯವನ್ನು ಸವಿಯುತ್ತ ಪಕ್ಷಿ ಸಂಕುಲದ ಇಂಪಾದ ಕಲರವವನ್ನು ಕೇಳುತ್ತ ಉಲ್ಲಾಸದಿಂದ ಬೆಟ್ಟವೊಂದರ ಇಳಿಜಾರನ್ನು ಇಳಿಯತೊಡಗಿದ್ದಾಗ, ಬೆಟ್ಟದ ಬುಡದಲ್ಲಿ ತಲೆ ಎತ್ತಿ ನಿಂತಿದ್ದ ತಾಳೆಯ ಮರವೊಂದರಿಂದ ಅರೆ ಬೆತ್ತಲ ಹುಡುಗಿಯೊಂದು ಸರ್ರನೆ ಮರದಿಂದ ಜಾರಿ ಕೆಳಗಿಳಿದು ಓಡತೊಡಗಿತು. ಆ ನೋಟ ಕಂಡ ಟಿಪ್ಪುವಿಗೆ ವಿಸ್ಮಯವೇ ಆಯಿತು.

ಹುಡುಗಿಯು ಸೊಂಟದ ಸುತ್ತಲು ಬಳ್ಳಿಯ ಒಂದೊಂದನ್ನು ಉಡುದಾರದಂತೆ ಕಟ್ಟಿಕೊಂಡು ಮರ್ಯಾದೆಯನ್ನು ಮರೆಮಾಡಿಕೊಳ್ಳಲು ತೇಗದ ಎಲೆಗಳನ್ನು ಸುತ್ತಲೂ ಸಿಕ್ಕಿಸಿಕೊಂಡಂತಿತ್ತು. ಸೊಂಟದ ಮೇಲ್ಭಾಗವೆಲ್ಲ ಬರಿದೋ ಬರಿದು, ತೆರವೋ ತೆರವು! ಅವಳು ಓಡುವಾಗ ಅವಳ ತುಂಬಿದ ತೋರ ಮೊಲೆಗಳು ತೊನೆದಾಡಿದುವು. ಸ್ತ್ರೀಯನ್ನು ಎಂದೂ ಆ ಸ್ಥಿತಿಯಲ್ಲಿ ನೋಡಲಿಚ್ಚಿಸದ ಟಿಪ್ಪುವಿನ ಮನಸ್ಸಿನ ಮೇಲೆ ಆ ದೃಶ್ಯವನ್ನು ಕಂಡು ಆಘಾತವಾದಂತಾಯಿತು.

ಟಿಪ್ಪು ಸುಲ್ತಾನನು ಬೆಟ್ಟದ ಬುಡವನ್ನು ಸೇರಿ ಮರದ ಕೆಳಗೆ ನಿಂತು ತಲೆ ಎತ್ತಿ ನೋಡಿದ. ತಾಳೆಯ ಮರದ ರಂಬೆಗಳ ಬೊಡ್ಡೆಗೆ ಆತುಕೊಂಡಂತೆ ಒಂದು ಕುಂಬಳಕಾಯಿ ಗಾತ್ರದ ಬುರುಡೆಯನ್ನು ಕಟ್ಟಲಾಗಿತ್ತು. ಹರಿತವಾದ ಆಯುಧವೊಂದರಿಂದ ಮರದ ಬೊಡ್ಡೆಯನ್ನು ಕೆತ್ತಿದ್ದ ಸ್ಥಳದಿಂದ ತಾಳೆಯ ರಸ ಜಿನುಗಿ ಜಿನುಗಿ ಬುರುಡೆಯನ್ನು ಸೇರುತ್ತಿತ್ತು. ಒಸರುತ್ತಿದ್ದ ಸಿಹಿಯಾದ ತಾಳೆಯ ರಸವನ್ನು ಸವಿಯಲು ದುಂಬಿಗಳು, ಇರುವೆಗಳು ಮುಕ್ಕುರಿದ್ದುವು.

ಟಿಪ್ಪು ಅಂಗರಕ್ಷಕರೊಂದಿಗೆ ಆದಿವಾಸಿ ಹುಡುಗಿ ಓಡಿಹೋದ ದಿಕ್ಕಿನಲ್ಲೇ ನಡೆಯತೊಡಗಿದ. ಕಾಲುಹಾದಿಯ ಇಕ್ಕೆಲಗಳಲ್ಲಿ ಬೆಳೆದಿದ್ದ ಬಾಳೆಯ ಹುಲ್ಲನ್ನು ಅತ್ತಿತ್ತ ಸರಿಸಿಕೊಂಡು ಅರ್ಧ ಮೈಲು ದೂರ ನಡೆದಾಗ ಬೆಟ್ಟದ ಕಿಬ್ಬಿಯಿಂದ ಮೇಲಕ್ಕೆ ಹೊಗೆ ಏಳುತ್ತಿರುವುದನ್ನು ಕಂಡ.

ಬೆಟ್ಟದ ಬುಡಕ್ಕೆ ಬಂದಾಗ ಧಗಧಗನೆ ಉರಿಯುತ್ತಿರುವ ಬೆಂಕಿಯ ಬೆಳಕಿನಲ್ಲಿ ಹತ್ತಿಪ್ಪತ್ತು ಚಿಕ್ಕ ಗುಡಿಸಲುಗಳು ಗೋಚರಿಸಿದುವು. ಗುಡಿಸಲುಗಳ ನಾಲ್ಕೂ ಮೂಲೆಯಲ್ಲಿ ಒಣಗಿದ ಸಾಗವಾನಿ. ಬೀಟೆ ಮತ್ತು ಮತ್ತಿ ಮರಗಳ ಸೌದೆಯನ್ನೊಟ್ಟಿ ಬೆಂಕಿ ಮಾಡಿದ್ದರು. ಬೆಂಕಿಯ ಸುತ್ತಲೂ ಅರೆ ಬೆತ್ತಲ ಕಾಡು ಜನರು ಬೆಂಕಿ ಕಾಯಿಸಿಕೊಳ್ಳುತ್ತಾ ಕುಳಿತಿದ್ದರು.

ಬೆಂಕಿಯ ಬೆಳಕಿನಲ್ಲಿ ಕಾಡ ಕತ್ತಲಂತಿದ್ದ ಅವರ ಕಪ್ಪು ಬೆನ್ನುಗಳು ಮಿರಿಮಿರಿ ಹೊಳೆಯುತ್ತಿದ್ದುವು. ಕಪ್ಪು ಬಣ್ಣದ ಮೈಯ್ಯಿಗೂ ಅಂಥ ಹೊಳಪಿರುವುದೆಂದು ಟಿಪ್ಪುವಿಗೆ ಅದುವರೆಗೆ ತಿಳಿದಿರಲಿಲ್ಲ.

ಆಗಂತುಕರ ಹಠಾತ್ ಆಗಮನದಿಂದ ಗಾಬರಿಗೊಂಡ ಆ ಕಾಡು ಜನರಲ್ಲಿ ಹಲವರು ಪಕ್ಕದ ಕಾಡಿಗೆ ನುಸುಳಿ ಪಲಾಯನ ಮಾಡಿದರು. ಮಿಕ್ಕವರು ದಿಙ್ಮೂಢರಾಗಿ ಇವರನ್ನೇ ನೋಡುತ್ತಾ ನಿಂತುಬಿಟ್ಟರು. ಆನೆ ಹುಲಿ ಕರಡಿಗಳಂಥ ಕಾಡಿನ ಕ್ರೂರ ಮೃಗಗಳೊಂದಿಗೆ ದಿನ ನಿತ್ಯ ಸಹಬಾಳ್ವೆ ಮಾಡುವ ಆ ಆದಿವಾಸಿಗಳು ಬೆಡಗಿನ ವೇಷ ಭೂಷಣಗಳಿಂದ ಶೋಭಿಸುವ ಅಪರಿಚಿತರನ್ನು ಕಂಡು ಭಯ ವಿಹ್ವಲಗೊಂಡಿದ್ದಂತೆ ತೋರುತ್ತಿತ್ತು.

ತನ್ನ ಮುಂದೆ ಪ್ರಾಣಿಗಳಂತೆ ಪಿಳಿಪಿಳಿ ಕಣ್ಣು

ಬಿಡುತ್ತ ನಿಂತಿದ್ದ ಕಾಡು ಜನರನ್ನು ನೋಡಿದ ಟಿಪ್ಪು. ಭುಜದವರೆಗೂ ಇಳಿಬಿದ್ದಿರುವ ಜಡೆ ಕಟ್ಟಿದ ಕೆಂಗೂದಲು ಕಾಡು ಕಲ್ಲಿನಲ್ಲಿ ಕಡೆದಂತಹ ಕಟ್ಟುಮಸ್ತಾದ ಕಪ್ಪು ದೇಹ. ನಡುವಿಗೆ ಉಡುದಾರದಂತೆ ಅಂಬೊಂದನ್ನು ಕಟ್ಟಿಕೊಂಡು ತೇಗದ ಅಗಲವಾದ ಎಲೆಗಳನ್ನು ಸುತ್ತಲೂ ಸಿಕ್ಕಿಸಿಕೊಂಡಿದ್ದಾರೆ. ಹೆಂಗಸರದೂ ಅದೇ ಸ್ಥಿತಿ. ನಡುವಿಗೆ ಸಿಕ್ಕಿಸಿಕೊಂಡಿರುವ ತೇಗದ ಎಲೆಗಳು ಸೊಂಟದ ಕೆಳಗಿನ ಮಾನವನ್ನು ಮರೆ ಮಾಡಲು ಹೆಣಗಾಡುತ್ತಿವೆ. ಅವರ ಸೊಂಟದ ಮೇಲ್ಭಾಗವೆಲ್ಲ ತೆರವೋ ಕೆಲವು. ಹೆಂಗಸರ ಮುಖದಲ್ಲಿ ಮುಗ್ಧತೆಯನ್ನು ಬಿಟ್ಟರೆ ತಮ್ಮ ನಗ್ನತೆಯ ಬಗೆಗೆ ಅವರಿಗೆ ಅರಿವಿದ್ದಂತೆ ಕಾಣುತ್ತಿರಲಿಲ್ಲ.

ಕಟ್ಟಾ ಇಸ್ಲಾಂ ಧರ್ಮಾವಲಂಬಿಯಾದ ಟಿಪ್ಪುವಿಗೆ ಅರೆನಗ್ನರಾದ ಹೆಂಗಸರನ್ನು ಕಂಡು ಮನಸ್ಸಿನಲ್ಲಿ ಬಹಳ ಕಡುಕೆನಿಸಿತು. ಟಿಪ್ಪು "ನೀವು ಯಾರು?" ಎಂದು ಪ್ರಶ್ನಿಸಿದಾಗ ಅವರ ಯಜಮಾನ ಉತ್ತರಿಸಿದ :

"ನಾವು ಮಲೈಕೊಂಡಿಗರು ಸ್ವಾಮಿ." ಕನ್ನಡ ಮಾಳಯಾಳಿ ಭಾಷೆಯ ಮಿಶ್ರಣವಾಗಿದ್ದಿತು ಅವನ ಮಾತು.

"ನಿಮ್ಮ ಊರಾವುದು?"

"ನಾವು ಹುಟ್ಟಿದುದೇ ಈ ಕಾಡಿನಲ್ಲಿ ಸ್ವಾಮಿ."

"ಹೊಟ್ಟೆಯ ಪಾಡಿಗೇನು ಮಾಡುತ್ತೀರಿ?"

"ಬೇಟೆಯಾಡುತ್ತೇವೆ. ಕಾಡಿನಲ್ಲಿ ಗೆಡ್ಡೆ ಗೆಣಸು ಸಿಗುತ್ತದೆ ಸ್ವಾಮಿ."

"ನಿಮ್ಮ ಈ ಹೆಂಗಸರು ಏಕೆ ನಗ್ನರಾಗಿದ್ದಾರೆ?" ಟಿಪ್ಪುವಿನ ಪ್ರಶ್ನೆ ಅಲ್ಲಿ ನಿಂತಿದ್ದ ಮಲೈಕೊಂಡಿಗರಿಗೆ ಮೋಜಿನದಾಗಿ ಕಂಡಿರಬೇಕು. ಕಿಸಕಿಸನೆ ನಗತೊಡಗಿದರು.

"ಹುಟ್ಟಿದಾಗಿನಿಂದಲೂ ಹೀಗೆಯೇ ಇದ್ದಾರೆ ಸ್ವಾಮಿ. ಮಲೈಕೊಂಡಿಗರು ಬೇರೆ ಹೇಗೆ ಇರಲು ಸಾಧ್ಯ?"

ಟಿಪ್ಪುಸುಲ್ತಾನನು ಅಂಗರಕ್ಷಕನೊಬ್ಬನನ್ನು ಕರೆದು ಸೈನಿಕರ ವಸ್ತ್ರದ ಹೇರಿನಿಂದ ಈ ಕಾಡು ಜನರಿಗೆಲ್ಲಾ ಸಾಕಾಗುವಷ್ಟು ನೀಳವಾದ ಬಟ್ಟೆಯನ್ನು ತೆಗೆದುಕೊಂಡು ಬರುವಂತೆ ಶಿಬಿರದ ಬಕ್ಷಿಯವರಿಗೆ ತಿಳಿಸುವಂತೆ ಆಜ್ಞಾಪಿಸಿದ.

ಮಲೈಕೊಂಡಿಗರ ಯಜಮಾನನನ್ನು ಕುರಿತು ಟಿಪ್ಪು, "ಇಂದಿನಿಂದ ನೀವು ಹೀಗೆ ನಗ್ನರಾಗಿರ–ಕೂಡದು. ನಿಮ್ಮ ಹೆಂಗಸರಿಗೂ ನಿಮಗೂ ಸಾಕಾಗುವಷ್ಟು ಬಟ್ಟೆಯನ್ನು ಪ್ರತಿವರ್ಷ ನಾವು ಒದಗಿಸುತ್ತೇವೆ." ಎಂದು [illegible] ಹೇಳಿದಾಗ ಯಜಮಾನನಿಗೆ ಏನು ಹೇಳಲೂ ತೋಚಲಿಲ್ಲ. ಸ್ವಲ್ಪ ಸಾವರಿಸಿಕೊಂಡು "ಮಲೈಕೊಂಡಿಗರು ಬಟ್ಟೆಗಳನ್ನು ತೊಡಲಾರರು ಸ್ವಾಮಿ. ಎಂದಿಗೂ ಹೀಗೆಯೇ ಇರುವವರು ನಾವು." ಎಂದ ವಿನೀತನಾಗಿ.

ಟಿಪ್ಪುವಿಗೆ ಯಜಮಾನನ ಮಾತು ಮೋಜಿನದಾಗಿ ಕಂಡಿರಬೇಕು.

ಅಷ್ಟರಲ್ಲಿ ಬಕ್ಷಿಯವರು ಶಿಬಿರದಿಂದ ಬಟ್ಟೆಯ ಥಾನನ್ನು ಹೊರಿಸಿಕೊಂಡು ಅಲ್ಲಿಗೆ ಬಂದರು. ನಗ್ನರಾಗಿ ಲಜ್ಜಾರಹಿತರಾಗಿ ನಿಂತಿದ್ದ ಸ್ತ್ರೀ–

ಪುರುಷರನ್ನು ಕಂಡು ಅವನಿಗೆ ವಿಸ್ಮಯವಾಯಿತು.

ಟಿಪ್ಪುವಿನ ಸೂಚನೆಯಂತೆ ಅಂದಾಜಿನ ಮೇಲೆ ಬಟ್ಟೆಯನ್ನು ಕತ್ತರಿಸಿ ಅಲ್ಲಿ ನೆರೆದಿದ್ದ ಗಂಡು ಹೆಣ್ಣುಗಳಿಗೆ ಹಂಚಿದರು. ಆ ಕಾಡು ಜನರು ಬಿಟ್ಟ ಕಣ್ಣು ಬಿಟ್ಟಂತೆ ಅಪೂರ್ವವಾದ ವಸ್ತುವನ್ನು ಗಮನಿಸುವಂತೆ ಅಚ್ಚರಿಯಿಂದ ತಮ್ಮ ಕೈಯಲ್ಲಿನ ವಸ್ತ್ರಗಳನ್ನು ತದೇಕ ದೃಷ್ಟಿಯಿಂದ ನೋಡುತ್ತಿದ್ದರು.

ಇದ್ದ ಧೈರ್ಯವನ್ನೆಲ್ಲ ಒಟ್ಟುಗೂಡಿಸಿಕೊಂಡು ಯಜಮಾನ ಮೈ ಬಾಗಿಸಿ, "ಮಲೈಕೊಂಡಿಗರು ಬಟ್ಟೆಯನ್ನು ತೊಟ್ಟರೆ ಅವರು ನಾಶವಾದಾರು ಸ್ವಾಮಿ," ಎಂದು ಕಂಪಿಸುವ ಕಂಠದಿಂದ ನುಡಿದ.

ಟಿಪ್ಪು ಅವನನ್ನು ಕುರಿತು, "ಇದು ನಮ್ಮ ಆಜ್ಞೆ. ನಾಳೆ ಬೆಳಗ್ಗೆ ನಾವು ಇಲ್ಲಿಗೆ ಮತ್ತೆ ಬಂದಾಗ ನೀವೆಲ್ಲ ಬಟ್ಟೆಯನ್ನು ತೊಟ್ಟಿರುವುದನ್ನು ನಾವು ಕಾಣಬೇಕು. ಇಲ್ಲದಿದ್ದರೆ ನಿಮ್ಮ ತಪ್ಪಿಗೆ ಶಿಕ್ಷೆ ಸಿಗುತ್ತದೆ" ಎಂದು ಮಕ್ಕಳನ್ನು ಗದರಿಸುವಂತೆ ಗದರಿಸಿ ಮಾಡಿದ ಕೃತಕಾರ್ಯವನ್ನು ಗೈದವನಂತೆ ಸಂತೋಷದಿಂದ ಶಿಬಿರಕ್ಕೆ ಹಿಂದಿರುಗಿದ.

ಮಾರನೆಯ ದಿನ ಮೈಸೂರಿನ ಸೇನೆ ಅಲ್ಲಿಂದ ಮುಂದೆ ಸಾಗಲು ಸಜ್ಜಾಯಿತು. ಸೇನೆ ಅಲ್ಲಿಂದ ಮುಂದುವರಿಯುವದಕ್ಕೆ ಮೊದಲು ಟಿಪ್ಪು ಬಕ್ಷಿ ಮತ್ತು ಸೇನಾಧಿಕಾರಿಗಳೊಂದಿಗೆ ಹಿಂದಿನ ದಿನ ಹೋಗಿದ್ದ ಮಲೈಕೊಂಡಿಗರ ಹಾಡಿಗೆ ಹೊರಟ. ಹಾಗೆ ಸಾಗುತ್ತಿದ್ದಂತೆ ಚಿತ್ರವಿಚಿತ್ರ ಮಲೈಕೊಂಡಿಗರ ಹೆಣ್ಣುಗಳು ಬಟ್ಟೆಯನ್ನು ತೊಟ್ಟು ಹೇಗೆ ಕಾಣಬಹುದೆಂದು ಮನದಲ್ಲಿಯೇ ಊಹಿಸಿ ಸಂಭ್ರಮಪಡುತ್ತಿದ್ದ ಟಿಪ್ಪು.

ಟಿಪ್ಪು ತನ್ನ ಪರಿವಾರದೊಂದಿಗೆ ಹಾಡಿಯ ಬಳಿ ಹೋದಾಗ ಮಲೈಕೊಂಡಿಗರ ಸುಳಿವೇ ಇರಲಿಲ್ಲ. ನಿನ್ನೆ ದಿನ ಅಲ್ಲಿದ್ದ ಗುಡಿಸಲುಗಳು ಹಿಡಿ ಬೂದಿಯಾಗಿ ಅವರು ನಡು ಕಾಡಿಗೆ ಗುಳೆ ಹೋಗಿದ್ದುದಕ್ಕೆ ಸಾಕ್ಷಿಯಾಗಿದ್ದಿತು. ತನ್ನ ಉದಾರ ಕೊಡುಗೆಯನ್ನು ಧಿಕ್ಕರಿಸಿ ಹೋದ ಆ ಕಾಡು ಜನರ ಮೇಲೆ ಟಿಪ್ಪುವಿನ ಮನಸ್ಸಿನಲ್ಲಿ ಕೋಪ ಭುಗಿಲ್ಲೆಂದಿತು. ಕಾಡಿನಲ್ಲಿ ಅವರ ಜಾಡನ್ನು ಹಿಡಿದು ಬೆನ್ನಟ್ಟಿ ನರಬೇಟೆಯಾಡುವ ಮನಸ್ಸಾಗಿರಬಹುದು ಅವನಿಗೆ. ಆದರೆ ಆ ಕೋಪ ಮಂಜಿನಂತೆ ಕರಗಿಹೋಯಿತು. ಸ್ವಲ್ಪ ಹೊತ್ತು ಮೂಕನಂತೆ ಸ್ತಂಭಿತನಾಗಿ ನಿಂತಿದ್ದ. ಅದಕ್ಕೆ ಕಾರಣ ಅವನಿಗೆ ಉಡಲು ಕೊಟ್ಟಿದ್ದ ಬಟ್ಟೆಗಳು ಮರದ ಕೆಳಗೆ ಗುಪ್ಪೆಯಾಗಿ ಬಿದ್ದಿದ್ದುವು.

ಬಕ್ಷಿಯವರು ಗುಪ್ಪೆಯಾಗಿ ಬಿದ್ದಿದ್ದ ಬಟ್ಟೆಗಳನ್ನು ಗಂಟು ಕಟ್ಟಿ ಶಿಬಿರಕ್ಕೆ ತೆಗೆದುಕೊಂಡು ಹೋಗಲು ಭಟರಿಗೆ ಅಜ್ಞಾಪಿಸಿದರು. ಟಿಪ್ಪು ಬಕ್ಷಿಯವರನ್ನು ಕುರಿತು, "ಬಟ್ಟೆಯ ಗಂಟನ್ನು ಶಿಬಿರಕ್ಕೆ ತೆಗೆದುಕೊಂಡು ಹೋಗಬೇಡಿ. ಈ ಮರದ ಕೊಂಬೆಗೆ ಗಂಟನ್ನು ಕಟ್ಟಿಬಿಡಿ. ಎಂದಾದರೂ ಒಂದು ದಿನ ಅವರಂಥ ಕಾಡು ಜನರು ಈ ಬಟ್ಟೆಗಳನ್ನು ಬಳಸಿಕೊಂಡರೂ ಬಳಸಿಕೊಳ್ಳಬಹುದು" ಎಂದು ನೀರಸವಾದ ಸೋತ ಧ್ವನಿಯಲ್ಲಿ ಹೇಳಿ ಶಿಬಿರದ ಕಡೆಗೆ ನಡೆಯತೊಡಗಿದ. ಸ್ವಲ್ಪ ಸಮಯದಲ್ಲಿ ಮೈಸೂರಿನ ಸೇನೆ ತನ್ನ ಮುಂದಿನ ಪ್ರಯಾಣವನ್ನು ಕೈಗೊಂಡಿತು.

(ಸಾಧಾರ)

ನಿರುಪಯುಕ್ತ ಮಾಹಿತಿ

ಗುಜರಾತಿನ ಖಂಬಾಯತ ಆಖಾತದ **ಲೋಥಲ್** ಎಂಬಲ್ಲಿ **ಕ್ರಿ.ಪೂ. ೨೪೫೦ ರ** ಕಾಲಕ್ಕೇ ಇಂದಿನ ಮುಂಬೈ, ವಿಶಾಖಪಟ್ಟಣಗಳ ರೇವುಗಳನ್ನು ಹೋಲಬಹುದಾದಷ್ಟು ದೊಡ್ಡ ಬಂದರು ಇತ್ತೆಂಬುದು ಭೂಶೋಧನೆಗಳಿಂದ ವ್ಯಕ್ತವಾಗಿದೆ. ಈ ಬಂದರು ದೊಡ್ಡ ವಿದೇಶೀ ವ್ಯಾಪಾರಕೇಂದ್ರವಾಗಿತ್ತೆಂಬುದಕ್ಕೆ ಆಧಾರಗಳು ದೊರೆತಿವೆ. ಕ್ರಿ. ಶ. ಒಂದನೆಯ ಶತಮಾನದ 'ಪೆರಿಪ್ಲಸ್' ಎಂಬ ಗ್ರಂಥದಲ್ಲಿ ಅನೇಕ ವಾಣಿಜ್ಯ ರೇವುಗಳ ಉಲ್ಲೇಖವಿದೆ. ಗೋಕರ್ಣದ ಸಮೀಪದ ತದಡಿ, ಉಡುಪಿ ಸಮೀಪದ ಉದ್ಯಾವರ, ಕಾಸರಗೋಡು ಸಮೀಪದ ನೀಲೇಶ್ವರ ಮೊದಲಾದವು ಕ್ರಿ.ಶ. ೨-೩ನೆಯ ಶತಮಾನದಲ್ಲಿನ ಪ್ರಸಿದ್ಧ ರೇವುಗಳು.

ಒಸಡುಗಳ ತೊಂದರೆಯ ಮೊದಲ ಗುರುತುಗಳು?



ಪ್ಲೇಕ್ (Plaque)
ಹಲ್ಲು ಮತ್ತು ಒಸಡುಗಳ ಸುತ್ತಲೂ, ಯಾವಾಗಲೂ ಕಂಡುಬರುವ, ಅದೃಶ್ಯವಾದ ಬ್ಯಾಕ್ಟೀರಿಯಾ-ಪೊರೆ. ಅಲಕ್ಷ್ಯ ಮಾಡಿದರೆ ಇದೇ ದಂತಮಲ (ಟಾರ್ಟರ್) ಆಗುತ್ತದೆ.

ಟಾರ್ಟರ್
ಹಲ್ಲುಗಳ ತಳದಲ್ಲಿ ಸೇರಿಕೊಂಡ ದಂತಮಲ. ಇದು ನಿಮ್ಮ ಒಸಡುಗಳನ್ನು ಕೆರಳಿಸಿ ಬಾಯುವಂತೆ ಮಾಡುತ್ತದೆ. ನಂತರ ಒಸಡು ಮತ್ತು ಎಲುಬು ಹಿಂದೆ ಸರಿದಾಗ, ಹಲ್ಲು ಬೀಳಲೂ ಬಹುದು.

ಒಸಡುಗಳಿಂದ ರಕ್ತ ಬರುವುದು
ಹಲ್ಲು ಉಜ್ಜುವಾಗ ದುರ್ಬಲವಾದ ಮತ್ತು ಸ್ಪಂಜಿನಂತಹ ಒಸಡುಗಳಿಂದ ರಕ್ತವು ಸ್ರವಿಸಬಹುದು. ಇದರಿಂದ ನೋವಾಗುವುದಿಲ್ಲವಾದರೂ, ರಕ್ತಸ್ರಾವವಾಗುವ ಒಸಡುಗಳು ಗಂಭೀರ ಸಮಸ್ಯೆಯನ್ನು ತಂದೊಡ್ಡಬಹುದು.

ದಂತವೈದ್ಯರಿಂದ ಸೃಷ್ಟಿಸಲ್ಪಟ್ಟ ಟೂಥ್‌ಪೇಸ್ಟ್ ಆದ ಫೋರ್‌ಹನ್ಸ್‌ನಿಂದ ನಿಮ್ಮ ಒಸಡುಗಳನ್ನು ರಕ್ಷಿಸಿಕೊಳ್ಳಿರಿ



ಡಾ. ಫೋರ್‌ಹನ್ಸ್‌ರ ಅಪ್ರತಿಮ ಫಾರ್ಮ್ಯುಲಾ

ಡಾಕ್ಟರ್ ಫೋರ್‌ಹನ್ಸ್ ಅವರ ಫಾರ್ಮ್ಯುಲಾ ತನ್ನ ಪ್ರಭಾವಶಾಲಿ ಬಂಧಕ (ಅಸ್ಟ್ರಿಂಜಂಟ್) ಕ್ರಿಯೆಯಿಂದ ನಿಮ್ಮ ಒಸಡುಗಳ ಹೊರಮೈಯನ್ನು ಗಟ್ಟಿಗೊಳಿಸಿ ಅವುಗಳಿಗೆ ಒಸಡುಗಳ ತೊಂದರೆಯನ್ನು ಪ್ರತಿರೋಧಿಸುವ ಶಕ್ತಿಯನ್ನು ನೀಡುತ್ತದೆ.

ದಂತವೈದ್ಯರು ಹೇಳುತ್ತಾರೆ

ಒಸಡುಗಳ ತೊಂದರೆಯಿಂದ ಆರೋಗ್ಯಕರ ಹಲ್ಲುಗಳು ಕೂಡ ಬೀಳಬಹುದು. ಪ್ರತಿದಿನ ರಾತ್ರಿ ಮತ್ತು ಮುಂಜಾನೆ ನಿಮ್ಮ ಹಲ್ಲುಗಳನ್ನು ಸ್ವಚ್ಛಗೊಳಿಸಲು ಹಾಗೂ ಒಸಡುಗಳನ್ನು ಮಸಾಜು ಮಾಡಲು ಫೋರ್‌ಹನ್ಸ್ ಟೂಥ್‌ಪೇಸ್ಟ್ ಮತ್ತು ಫೋರ್‌ಹನ್ಸ್ ಡಬಲ್ ಆ್ಯಕ್ಷನ್ ಟೂಥ್‌ಬ್ರಶ್ ಉಪಯೋಗಿಸಿರಿ.

ಒಸಡುಗಳು ಕೆಟ್ಟರೆ, ದೇಹಾರೋಗ್ಯ ಕೆಡುವುದು



ಉಚಿತ! [illegible] ಬೋಧಪ್ರದ ಪುಸ್ತಿಕೆ. ಅಂಚೆವೆಚ್ಚಕ್ಕಾಗಿ 25 ಪೈಸೆ ಸ್ಟ್ಯಾಂಪನ್ನು ಜೊತೆಗಿಟ್ಟು ಈ ವಿಳಾಸಕ್ಕೆ ಬರೆಯಿರಿ. ಫೋರ್‌ಹನ್ಸ್ ಡೆಂಟಲ್ ಅಡ್ವೈಸರಿ ಬ್ಯೂರೋ, ಪೋಸ್ಟ್ ಬ್ಯಾಗ್ ನಂ. 11468, [illegible] P 138-215 ಮುಂಬಯಿ 400 020 ಬೇಕಾದ ಭಾಷೆಯನ್ನು ನಮೂದಿಸಿರಿ.

ಫೋರ್‌ಹನ್ಸ್
ದಂತವೈದ್ಯರಿಂದ ಸೃಷ್ಟಿಸಲ್ಪಟ್ಟ ಟೂಥ್‌ಪೇಸ್ಟ್

215-F-172 KN.

Regd. T.M: Geoffrey Manners & Co. Ltd.

ದೇವರು ಕೊಟ್ಟರೂ ಪೂಜಾರಿ ಬಿಡ

ಹೇಮಲತಾ ಮಹಿಷಿ

ಹೈದರಾಬಾದಿನ ನಿಜಾಮರು ಜಗತ್ತಿನ ಕೋಟ್ಯಧೀಶ್ವರರಲ್ಲಿ ಅಗ್ರಗಣ್ಯರು. ಅವರ ಜಿಪುಣತನದ ಬಗ್ಗೆ ಎಷ್ಟು ಕಥೆಗಳು ಇವೆಯೋ ಅವರ ಅತುಳೈಶ್ವರ್ಯದ ಬಗೆಗೂ ಅಷ್ಟೇ ಕಥೆಗಳಿವೆ. ಅವರ ಸಂಗ್ರಹದಲ್ಲಿದ್ದ ಅಮೂಲ್ಯವಾದ ವಜ್ರ, ವೈಢೂರ್ಯಾದಿ ಆಭರಣಗಳ ಸಂಗ್ರಹ ಬಹುಶಃ ಸಾಮಾನ್ಯ ಜನರ ಊಹೆಗೆ ನಿಲುಕದ ಸಂಗತಿ. ಆದರೆ ಇಷ್ಟೆಲ್ಲಾ ಸಂಪತ್ತಿನ ಸಂಗ್ರಹವಿದ್ದೂ ನಿಜಾಮರ ಕುಲಬಾಂಧವರು ಇಂದು ಶೋಚನೀಯ ಸ್ಥಿತಿಯಲ್ಲಿ ಜೀವನ ನಡೆಸುತ್ತಿರುವುದು ವಿಪರ್ಯಾಸವಲ್ಲದೆ ಮತ್ತೇನು? ಇತ್ತೀಚೆಗೆ ನಿಜಾಮರ ಮನೆತನದ ಕೆಲವು ಅಮೂಲ್ಯ ಆಭರಣಗಳನ್ನು ಮಾರಲು ಹೊರಟಾಗ ಎದ್ದ ವಾದ ವಿವಾದಗಳು ಮೊನ್ನೆ ಮೊನ್ನೆಯಷ್ಟೇ ತಣ್ಣಗಾಗಿವೆ. ಸುಪ್ರೀಂ ಕೋರ್ಟು ಈ ಬಗ್ಗೆ ಎದ್ದ ವಿವಾದದಲ್ಲಿ ತನ್ನ ತೀರ್ಪನ್ನು ನೀಡಿ ಜನತೆಯ ಕುತೂಹಲವನ್ನು ಕೆರಳಿಸಿದೆ.

ಹೈದರಾಬಾದಿನ ನಿಜಾಮರಾಗಿದ್ದ ದಿವಂಗತ ನವಾಬ್ ಮಿರ್ ಸರ್ ಉಸ್ಮಾನ್ ಅಲಿಖಾನ್ ಬಹಾದೂರ್ ಅವರು ಮಾರ್ಚ್ ೨೯, ೧೯೫೧ರಂದು ಒಂದು ಪತ್ರವನ್ನು ಸಿದ್ಧಪಡಿಸಿ ತಮ್ಮಲ್ಲಿದ್ದ ಎಲ್ಲಕ್ಕಿಂತ ಅತ್ಯಮೂಲ್ಯವೆಂದು ಆರಿಸಲ್ಪಟ್ಟಿದ್ದ ೧೦೭ ಆಭರಣಗಳ ಬಗ್ಗೆ ಒಂದು ನ್ಯಾಸವನ್ನು ರಚಿಸಿ, ಆ ನ್ಯಾಸಪತ್ರದಲ್ಲಿದ್ದ ನಿಯಮಗಳ ಪ್ರಕಾರ ಕರ್ತವ್ಯವನ್ನು ನಿರ್ವಹಿಸಲು ನ್ಯಾಸಧಾರಿಗಳಿಗೆ

ಸುಪ್ರೀಂ ಕೋರ್ಟಿನವರೆಗೂ ಹೋಗಿ ದೇಶದಾದ್ಯಂತ ಕುತೂಹಲ ಕೆರಳಿಸಿದ ಹೈದರಾಬಾದ್ ನಿಜಾಮರ ವಜ್ರ ವೈಢೂರ್ಯಗಳ ಮಾರಾಟ ಪ್ರಕರಣ ಕೊನೆಗೂ ಇತ್ಯರ್ಥವಾಗದೇ ಹೋದದ್ದರ ಹಿನ್ನೆಲೆ.

ಆದೇಶವನ್ನು ನೀಡಿದ್ದರು. ಈ ೧೦೭ ಆಭರಣಗಳು ವಜ್ರ, ಪಚ್ಚೆ, ಕೆಂಪು, ನೀಲ ಮೊದಲಾದ ಅಮೂಲ್ಯ ಕಲ್ಲುಗಳು ಕುಂದಣದ ಕೆಲಸದಿಂದ ಕೂಡಿದ್ದು ತಮ್ಮ ಸೌಂದರ್ಯ ಹಾಗೂ ವಿನ್ಯಾಸಕ್ಕಾಗಿ ಜಗತ್ತಿನಲ್ಲಿಯೇ ಅಪರೂಪದ ಅಮೂಲ್ಯ ವಸ್ತುಗಳೆನಿಸಿವೆ. ನಿಜಾಮರು ಈ ಆಭರಣಗಳೊಂದಿಗೆ ೧೦ ಲಕ್ಷ ರೂಪಾಯಿ ಬೆಲೆ ಬಾಳುವ ಸರಕಾರಿ ಸೆಕ್ಯೂರಿಟಿಗಳನ್ನು ಈ ನ್ಯಾಸಕ್ಕೆ ಒಪ್ಪಿಸಿ ಇದರ ಲಾಭವು ತಮ್ಮ ಇಬ್ಬರು ಮಕ್ಕಳು, ರಾಜಕುಮಾರ ಆಜಂ ಜಾ ಮತ್ತು ಮುಅಜಂ ಜಾ, ಮೊಮಕ್ಕಳು ಮುಕರಂ ಜಾ, ಮುಫಖಂ ಜಾ, ಫಾತಿಮಾ ಫೌಜಿಯಾ, ಅಮೀನಾ ಮರ್ಜಿಯಾ ಮತ್ತು ಮಗಳು ಷಹಜಾದಿ ಬೇಗಂ, ಮಲತಮ್ಮ ಸಾಹೇಬ್‌ಜಾದಾ ನವಾಬ್ ಬಸಲತ್ ಜಾ ಬಹಾದರ್ ಇವರೆಲ್ಲರಿಗೂ ಸೇರಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದ್ದರು.

ನ್ಯಾಸಪತ್ರದ ೧೩ನೇ ಕಲಮಿನ ಪ್ರಕಾರ ನಿಜಾಮರ ವಂಶ ಮುಂದುವರಿದು ಹಿರಿಯ ಮಗ ರಾಜಕುಮಾರ ಅಜಂ ಜಾ ನಿಜಾಮನಾಗಿ ಇರುವ ವರೆಗೆ ಈ ಆಭರಣಗಳನ್ನು ಮಾರುವ ಇಲ್ಲವೇ ಹಾಗೆಯೇ ಉಳಿಸಿಕೊಳ್ಳುವ ವಿವೇಚನೆ ನ್ಯಾಸಧಾರಿಗಳಿಗೆ ಬಿಟ್ಟಿದ್ದು. ಆದರೆ ನಿಜಾಮ್ ಉಸ್ಮಾನ್ ಅಲಿಖಾನ್ ಬಹಾದೂರ್ ಮತ್ತು ಅವರ ಹಿರಿಯ ಮಗ ಅಜಂಜಾ ಸತ್ತನಂತರ, ಅಂದರೆ ಇಬ್ಬರಲ್ಲಿ ಉಳಿದಿರುವ ಕೊನೆಯ ವ್ಯಕ್ತಿ ಸತ್ತ ಮೂರು ವರ್ಷಗಳ ಅವಧಿಯಲ್ಲಿ ಈ ಆಭರಣಗಳನ್ನು ಮಾರಲೇಬೇಕು. ತಮಗೆ ಸರಿತೋರಿದ ಬೆಲೆಗೆ, ಕರಾರಿಗೆ ಮಾರಲು ನಿಜಾಮರು ನ್ಯಾಸಧಾರಿಗಳಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದೂ ಅಲ್ಲದೆ, ಅವುಗಳನ್ನು ಭಾರತದಲ್ಲಿಯೇ ಆಗಲಿ, ಪರದೇಶದಲ್ಲಿಯೇ ಆಗಲಿ ಮಾರಬಹುದು, ಬೆಲೆಯ ಬಗ್ಗೆ ಆಗಲಿ, ಹಾಕಿದ ಕರಾರಿನ ಬಗ್ಗೆ ಅಥವಾ ಮಾರಾಟಕ್ಕೆ ಸಂಬಂಧಪಟ್ಟ ಇನ್ನೂ ಯಾವುದೇ ವಿಷಯದ ಬಗ್ಗೆಯಾಗಲೀ ನ್ಯಾಸಧಾರಿಗಳು ಯಾರಿಗೂ ಜವಾಬ್ದಾರರಾಗಿರಬೇಕಾಗಿಲ್ಲ, ಲೆಕ್ಕ ಒಪ್ಪಿಸಬೇಕಾಗಿಲ್ಲ ಎಂದು ಸ್ಪಷ್ಟವಾಗಿ ನಿಜಾಮರು ನ್ಯಾಸಪತ್ರದಲ್ಲಿ ಬರೆಸಿದ್ದರು. ಆ ನಂತರ ಈ ೧೭೩ ಆಭರಣಗಳನ್ನು ಮುಂಬಯಿಯ ಮರ್ಕಂಟೈಲ್ ಬ್ಯಾಂಕಿನ ಭದ್ರ ತಿಜೋರಿಯಲ್ಲಿ ಇಡಲಾಗಿತ್ತು.

ರಾಜಕುಮಾರ ಮುಫಖಮ್ ಜಾ, ಜಾಹೀರ್ ಅಹಮದ್, ಅತಾವೂರ್ ರಹಮಾನ್ ಮತ್ತು ಎಂ. ಎ. ಅಬ್ಬಾಸಿ ನಿಜಾಮರು ನೇಮಿಸಿದ ನ್ಯಾಸಧಾರಿಗಳಾಗಿದ್ದು ಎಂ. ಎ. ಅಸ್ರಫ್ ಅದರ ಕಾರ್ಯದರ್ಶಿಗಳಾಗಿದ್ದರು. ಕೇಂದ್ರ ಆರ್ಥಿಕ ಮಂತ್ರಾಲಯದ ಅಡಿಷನಲ್ ಸೆಕ್ರೆಟರಿ ಆರ್. ಎನ್. ಮಲ್ಹೋತ್ರಾ ಅವರು ಭಾರತ ಸರಕಾರದಿಂದ ನಿಯಮಿತರಾದ ನ್ಯಾಸಧಾರಿಗಳಾಗಿದ್ದರು.

ಅಕ್ಟೋಬರ್ ೧೯೭೦ರಲ್ಲಿ ರಾಜಕುಮಾರ ಅಜಂ ಜಾ ನಿಧನರಾದರು. ನ್ಯಾಸಪತ್ರದ ಪ್ರಕಾರ ೧೯೭೩ ಅಕ್ಟೋಬರ್ ಒಳಗಾಗಿ ಈ ೧೭೩ ಆಭರಣಗಳನ್ನು ಮಾರುವ ಜವಾಬ್ದಾರಿ ನ್ಯಾಸಧಾರಿಗಳ ಮೇಲೆ ಇದ್ದಿತು. ಆ ಪ್ರಕಾರವೇ ಜುಲೈ ೧, ೧೯೭೨ರಂದು ನ್ಯಾಸಧಾರಿಗಳು ಆಗಿನ ಪ್ರಧಾನಮಂತ್ರಿಗಳಿಗೆ ಒಂದು ಮನವಿಯನ್ನು ಸಲ್ಲಿಸಿ ಈ ಆಭರಣಗಳು ಸಾಂಸ್ಕೃತಿಕವಾಗಿ ಹಾಗೂ ಐತಿಹಾಸಿಕವಾಗಿ ಬಹಳ ಮಹತ್ವಪೂರ್ಣವಾಗಿರುವುದರಿಂದ ಅವನ್ನು ಸರಕಾರವೇ ಪಡೆದುಕೊಂಡು ರಾಷ್ಟ್ರದ ಪರಂಪರಾಗತ ಸ್ವತ್ತಾಗಿ ದೇಶದಲ್ಲಿಯೇ ಉಳಿಸಿಕೊಳ್ಳಬೇಕೆಂದೂ, ಕೇವಲ ವ್ಯಾಪಾರಿ ಮನೋಭಾವದಿಂದ ಕೊಳ್ಳುವವರ ಕೈಯಿಂದ ಈ ಅಮೂಲ್ಯ ಆಭರಣಗಳನ್ನು ರಕ್ಷಿಸಬೇಕೆಂದೂ ಕೇಳಿಕೊಂಡಿದ್ದರು.

ಇದಕ್ಕೆ ಉತ್ತರವಾಗಿ ಭಾರತ ಸರಕಾರವು ತಜ್ಞರ ಸಮಿತಿಯೊಂದನ್ನು ನೇಮಿಸಿ ಪ್ರಾಚ್ಯ ವಸ್ತುಗಳು ಹಾಗೂ ಕಲಾವಸ್ತುಗಳ ಸಂಗ್ರಹಕ್ಕೆ ಸಂಬಂಧಪಟ್ಟ ಶಾಸನದನ್ವಯ ಇವುಗಳಲ್ಲಿ ಯಾವುದೇ ಆಭರಣವನ್ನಾಗಲೀ ಕೊಳ್ಳಲು ಬರುವದೇ ಎಂಬುದರ ಬಗ್ಗೆ ಸಲಹೆ ನೀಡಲು ಕೇಳಿತು. ರಾಷ್ಟ್ರದ ಹಿತದೃಷ್ಟಿಯಿಂದ ಉಳಿಸಿಕೊಳ್ಳಬೇಕಾದ ಆಭರಣಗಳನ್ನು ಆಯ್ಕೆ ಮಾಡುವುದು, ಅದರ ಬೆಲೆ ಕಟ್ಟುವುದು ಈ ಸಮಿತಿಯ ಮುಖ್ಯ ಕೆಲಸವಾಗಿತ್ತು. ಸಮಿತಿಯ ಸದಸ್ಯರು ಇದಕ್ಕಾಗಿ ಮರ್ಕಂಟೈಲ್ ಬ್ಯಾಂಕಿಗೆ ಭೇಟಿ ನೀಡಿ ಆಭರಣಗಳನ್ನು ವೀಕ್ಷಿಸಿದ್ದರು. ಸರಕಾರ ನೇಮಿಸಿದ್ದ ಬೆಲೆ ಕಟ್ಟುವವರ ಸಮಿತಿಯು ಎಲ್ಲಾ ೧೭೩ ಆಭರಣಗಳಿಗೂ ಬೆಲೆ ಕಟ್ಟಿ ಅದರ ಬೆಲೆ ೬,೭೩,೫೮,೫೦೦ ರೂಪಾಯಿಗಳಾಗಬಹುದೆಂದು ಅಂದಾಜುಮಾಡಿ ವರದಿಯನ್ನು ಸಲ್ಲಿಸಿತು. ಇದೇ ಕಾಲಕ್ಕೆ ನ್ಯಾಸಧಾರಿಗಳಿಂದ ನಿಯಮಿತರಾಗಿದ್ದ ಹಿರಾಲಾಲ [illegible] ವರು ಈ ೧೭೩ ಆಭರಣಗಳಲ್ಲಿ ಅತಿ ಸುಂದರ ಹಾಗೂ ಅಮೂಲ್ಯ ಎನ್ನಿಸಿದ ೩೭ ಆಭರಣಗಳಿಗೆ ಬೆಲೆ ಕಟ್ಟಿ ೧೦, ೨೬, ೫೦,೦೦೦ ರೂಪಾಯಿ ಬೆಲೆಯಾಗಬಹುದೆಂದು ಅಂದಾಜು ಮಾಡಿದ್ದರು. ಇಷ್ಟೆಲ್ಲಾ ಆದನಂತರ ಭಾರತ ಸರಕಾರವು ೧೮ ಆಭರಣಗಳನ್ನು ಆರಿಸಿಕೊಂಡು ತನ್ನ ಪುರಾತನ ವಸ್ತುಗಳ ಭಂಡಾರಕ್ಕೆ ಸೇರಿಸಿಕೊಂಡಿತು. ಅದಕ್ಕೆ ಸರಕಾರವು ತೆತ್ತ ಬೆಲೆ ೧ ಕೋಟಿ ೧೨ ಲಕ್ಷ ರೂಪಾಯಿಗಳು.

ಈ ವೇಳೆಗೆ ರಾಜಧನ ರದ್ದಾಗಿದ್ದ ನಿಜಾಮರ ಮನೆತನದವರ ಆರ್ಥಿಕ ಸ್ಥಿತಿ ಶೋಚನೀಯವಾಗಿತ್ತು. ನ್ಯಾಸದಿಂದ ಬರುವ ಹಣವೆಲ್ಲಾ

ಆದಾಯ ತೆರಿಗೆ, ಸಂಪತ್ತು ತೆರಿಗೆ ಮೊದಲಾದ ತೆರಿಗೆಗಳನ್ನು ತುಂಬಲು ಹೋಗುತ್ತಿದ್ದು ತಮ್ಮನ್ನು ತಾವು ಪೋಷಣೆ ಮಾಡಿಕೊಳ್ಳುವುದೇ ದುರ್ಭರವಾಗಿತ್ತು. ಫಲವಾಗಿ ನ್ಯಾಸದಿಂದ ಬರುವ ಫಲ ಉಣ್ಣಬೇಕಾಗಿರುವ ನಿಜಾಮರ ಸಂಬಂಧಿಗಳು ತಕ್ಷಣವೇ ಆ ೩೭ ಆಭರಣಗಳನ್ನು ಮಾರುವಂತೆ ನ್ಯಾಸಧಾರಿಗಳ ಮೇಲೆ ಒತ್ತಡ ತರಹತ್ತಿದರು.

ಮುಂದಿನ ಕ್ರಮ ಯೋಜಿಸಲು ಜನವರಿ ೯, ೧೯೭೮ ರಂದು ಸೇರಿದ ನ್ಯಾಸಧಾರಿಗಳ ಸಭೆಯಲ್ಲಿ ಸರಕಾರಕ್ಕೆ ೩೭ ಆಭರಣಗಳನ್ನು ಪಡೆಯುವ ಯಾವ ಯೋಚನೆಯೂ ಇಲ್ಲವೆಂದು ಅಧ್ಯಕ್ಷರಾದ ಮಲ್ಹೋತ್ರಾ ಸಭೆಗೆ ನಿಶ್ಚಯಾತ್ಮಕವಾಗಿ ತಿಳಿಸಿದ್ದರಿಂದ ಸಭೆಯು ಆ ಕೂಡಲೇ ಆಭರಣಗಳನ್ನು ಮಾರುವ ಮುಂದಿನ ಕ್ರಮ ಕೈಕೊಳ್ಳಬೇಕೆಂಬ ನಿರ್ಣಯವನ್ನು ಅಂಗೀಕರಿಸಿತು. ನ್ಯಾಸಧಾರಿಗಳ ಮುಂದಿನ ಸಭೆಯು ಜನವರಿ ೨೫, ೧೯೭೮ರಲ್ಲಿ ನಡೆದಾಗ ಕಾರ್ಯಬಾಹುಲ್ಯದ ನಿಮಿತ್ತ ಮಲ್ಹೋತ್ರಾ ಹಾಜರಿರಲಿಲ್ಲ.

ಜನವರಿ ೯, ೧೯೭೮ರ ನಿರ್ಣಯದ ಮೇರೆಗೆ ನ್ಯಾಸದ ಕಾರ್ಯದರ್ಶಿಯು ಆಭರಣಗಳನ್ನು ಮಾರಲು ಅನುಮತಿ ನೀಡಬೇಕೆಂದು ಕೋರಿ ಭಾರತೀಯ ಪುರಾತತ್ತ್ವ ಪರಿಶೀಲನಾ ಸಂಸ್ಥೆಯ ನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸಿದರು. ಮುಂಬಯಿಯ ಪ್ರಸಿದ್ಧ ರತ್ನಪಡಿ ವ್ಯಾಪಾರಿ ದಿನ್‌ಷಾ ಜಹಾಂಗೀರ ಗಜಧರ್ ಹಾಗೂ ನ್ಯಾಸಧಾರಿ ಪಿ. ಎ. ಅಬ್ಬಾಸಿ ಅವರ ಸಲಹೆಯನ್ನು ತೆಗೆದುಕೊಂಡು ೩೭ ಆಭರಣಗಳನ್ನು ವಿಕ್ರಯಿಸುವ ವಿಧಾನವನ್ನು ನಿರ್ಧರಿಸಿದರು. ಆ ವಿಧಾನದಂತೆ ಮಾರಾಟದ ವಿಷಯವನ್ನು ಭಾರತದ ಹಾಗೂ ವಿದೇಶದ ಹಲವು ಪ್ರಸಿದ್ಧ ರತ್ನಪಡಿ ವ್ಯಾಪಾರದ ಸಂಸ್ಥೆಗಳಿಗೆ ತಿಳಿಸಿ ಅವರಿಂದ ಟೆಂಡರ್ ಕರೆಯಬೇಕು. ಅವರಲ್ಲಿ ದೊರೆತ ಹೆಚ್ಚಿನ ಬೆಲೆಯನ್ನು ಒಪ್ಪಿಕೊಂಡು ಆಭರಣಗಳನ್ನು ಅವರಿಗೆ ಒಪ್ಪಿಸಬೇಕು.

ಈ ಪ್ರಕಾರವೇ ಜನವರಿ ೩೧, ೧೯೭೮ ರಂದು ಜಹಾಂಗೀರ್ ಗಜಧರರು ಹಲವಾರು ವಿದೇಶಿ ಹಾಗೂ ಸ್ವದೇಶಿ ರತ್ನ ವ್ಯಾಪಾರಿಗಳಿಗೆ, ಸಂಸ್ಥೆಗಳಿಗೆ ಆಭರಣಗಳ ಮಾರಾಟದ ಸುದ್ದಿಯನ್ನು ತಿಳಿಸಿದರು.

ಮಾರಾಟಕ್ಕಿಟ್ಟ ೩೭ ಆಭರಣಗಳನ್ನು ೧೬ ಗುಂಪುಗಳಾಗಿ ವಿಂಗಡಿಸಲಾಗಿತ್ತು. ಕೊಳ್ಳಲು ತಯಾರಿರುವ ವ್ಯಕ್ತಿಗಳ ವೀಕ್ಷಣೆಗಾಗಿ ಈ ಆಭರಣಗಳನ್ನು ಮಾರ್ಚ್ ೬ರಿಂದ ೮ರ ವರೆಗೆ ತೆರೆದಿಡಲಾಗಿತ್ತು. ೯ನೇ ತಾರೀಖಿನ ಒಳಗಾಗಿ ಎಲ್ಲರೂ ತಮ್ಮ ಕೊಳ್ಳುವ ಬೆಲೆಯನ್ನು ಸೂಚಿಸಬೇಕಾಗಿತ್ತು. ಮಲ್ಹೋತ್ರಾ ಅವರು ೮ ರಂದು ೨೦ ದಿವಸ ಮರ್ಕಂಟೈಲ್ ಬ್ಯಾಂಕಿನಲ್ಲಿದ್ದು ಆಭರಣಗಳ ವೀಕ್ಷಣೆಯ ಮೇಲ್ವಿಚಾರಣೆ ನೋಡಿ ಸುಮಾರು ೬೦ ಪ್ರಸಿದ್ಧ ರತ್ನವ್ಯಾಪಾರಿಗಳನ್ನು ವೀಕ್ಷಿಸಿದರು. ಅನಂತರ ನ್ಯಾಸಧಾರಿಗಳ ಸಭೆಯೂ ನಡೆಯಿತು.

ಮಾರ್ಚ್ ೯, ೧೯೭೮ರಂದು ಟೆಂಡರುಗಳನ್ನು ನ್ಯಾಸಧಾರಿಗಳ ಸಭೆಯಲ್ಲಿ ತೆರೆದಾಗ ದುರದೃಷ್ಟವಶಾತ್ ಸಭಾಧ್ಯಕ್ಷ ಮಲ್ಹೋತ್ರಾ ಅವರು ತುರ್ತು ಕಾರ್ಯದ ನಿಮಿತ್ತ ದಿಲ್ಲಿಗೆ ಹೋಗಬೇಕಾಗಿ ಬಂತು. ಅವರ ಗೈರು ಹಾಜರಿಯಲ್ಲಿ ಉಳಿದ ನಾಲ್ಕು ನ್ಯಾಸಧಾರಿಗಳು ಟೆಂಡರುಗಳನ್ನು ತೆರೆದು ಆಭರಣಗಳ ಬಗ್ಗೆ ಬಂದಿದ್ದ ಅತಿ ಹೆಚ್ಚಿನ ಬೆಲೆಗಳನ್ನು ಸ್ವೀಕರಿಸಿದರು. ಮಾರನೆಯ ದಿನವೇ ಕಾರ್ಯದರ್ಶಿಗಳು ಅತಿ ಹೆಚ್ಚಿನ ಬೆಲೆ ನೀಡಿದ ವ್ಯಕ್ತಿಗಳಿಗೆ ಪತ್ರ ಬರೆದು, ಮಾರ್ಚ್ ೨೧ ಮತ್ತು ೨೨ರ ಒಳಗಾಗಿ ಬಾಕಿ ೯೦% ಹಣವನ್ನು ಕೊಟ್ಟು ತಮ್ಮ ಆಭರಣಗಳನ್ನು ತೆಗೆದುಕೊಂಡು ಹೋಗುವಂತೆ ಸೂಚಿಸಿದರು. ೧೦% ಹಣವನ್ನು ಮೊದಲೇ ವಿಶ್ವಾಸ ಠೇವಣಿ ಎಂದು ಮಕ್ತೆದಾರರಿಂದ ತೆಗೆದುಕೊಳ್ಳಲಾಗಿತ್ತು.

ಈ ಮಧ್ಯೆ ಮಾರ್ಚ್ ೧೦, ೧೯೭೮ ರಂದು ನಿಜಾಮರ ಮೊಮ್ಮಗಳಾದ ರಾಜಕುಮಾರಿ ಫಾತಿಮಾ ಫೌಜಿಯಾ ಹೈದರಾಬಾದಿನ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಈಗಿನ ನ್ಯಾಸಧಾರಿಗಳು ೩೭ ಆಭರಣಗಳನ್ನು ಮಾರುವಲ್ಲಿ ಸರಿಯಾಗಿ ನಡೆದುಕೊಂಡಿಲ್ಲವೆಂದೂ ಕರ್ತವ್ಯಪ್ರಜ್ಞೆ ಇಲ್ಲದೇ ಅಲಕ್ಷ್ಯದಿಂದ ನಡೆದುಕೊಂಡು ದುರಾಡಳಿತ ನಡೆಸಿದ್ದಾರೆಂದು ಆರೋಪಿಸಿ ಅದಕ್ಕಾಗಿ ಅವರನ್ನು ತೆಗೆದುಹಾಕ

ಬೇಕೆಂದೂ ಹಾಗೂ ಈಗ ಕೈಗೊಂಡ ಮಾರಾಟವನ್ನು ಪೂರ್ತಿ ಮಾಡಲು ಅವಕಾಶಕೊಡದಂತೆ ಅವರ ವಿರುದ್ಧ ತಡೆ ಆಜ್ಞೆ ನೀಡಬೇಕೆಂದೂ ಪ್ರಾರ್ಥಿಸಿದಳು.

ಮಾರ್ಚ್ ೧೪ ರಂದು ತಡೆಯಾಜ್ಞೆ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಂಡು ನ್ಯಾಯಾಲ-ಯವು ಅದೇ ದಿನವೇ, ನ್ಯಾಸಧಾರಿಗಳು ಆಭರಣಗಳ ಮಾರಾಟವನ್ನು ಪೂರ್ತಿ ಮಾಡುವಂತಹ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಾರದೆಂದು ಮಸಾಯಿ ಆಜ್ಞೆ ನೀಡಿತು. ಮಾರ್ಚ್ ೧೬ ರಂದು ನ್ಯಾಸಧಾರಿಗಳ ಪರವಾಗಿ ಎಂ. ಎ. ಅಬ್ಬಾಸಿ ಅದಕ್ಕೆ ತಕರಾರುಗಳನ್ನು ಸಲ್ಲಿಸಿ ತಡೆ ಆಜ್ಞೆಯನ್ನು ಕಿತ್ತುಹಾಕಬೇಕೆಂದ ಪ್ರಾರ್ಥಿಸಿದರು. ಮಾರ್ಚ್ ೨೭, ೧೯೭೮ರಂದು ನ್ಯಾಯಾಲಯವು ಉಭಯ ಪಕ್ಷದವರ ವಾದವನ್ನು ಕೇಳಿದ ನಂತರ ತಾನು ಈ ಮೊದಲೇ ನೀಡಿದ್ದ ತಡೆ ಆಜ್ಞೆಯನ್ನು ವಜಾ ಮಾಡಿತು.

ಮಾರ್ಚ್ ೨೮ ರಂದು ಈ ವಜಾ ಆಜ್ಞೆಯ ವಿರುದ್ಧ ರಾಜಕುಮಾರಿ ಫಾತಿಮಾ ಫೌಜಿಯಾ ಆಂಧ್ರಪ್ರದೇಶ ಹೈಕೋರ್ಟಿನಲ್ಲಿ ಅಪೀಲು ಸಲ್ಲಿಸಿದಳು. ಎಪ್ರಿಲ್ ೧೩ ರಂದು ಹೈಕೋರ್ಟು ಯಥಾಸ್ಥಿತಿಯನ್ನು ಮುಂದುವರಿಸಬೇಕೆಂದೂ ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯನ್ನು ಮಾಡಬಾರದೆಂದೂ ಆಜ್ಞೆ ನೀಡಿತು.

ಈ ಮಧ್ಯದಲ್ಲಿ ಪರಿಸ್ಥಿತಿಗೆ ತಿರುವು ಕೊಡುವಂತಹ ಮತ್ತೊಂದು ಘಟನೆ ನಡೆಯಿತು. ಪೀಟರ್ ಜಾನ್ಸನ್ ಫರ್ನಾಂಡಿಸ್ ಎಂಬುವನು ತಾನು ಇದೇ ೩೭ ಆಭರಣಗಳನ್ನು ಒಂದೇ ಕಂತಿನಲ್ಲಿ ತೆಗೆದುಕೊಳ್ಳುವುದಾಗಿಯೂ ಉಳಿದವರು ನೀಡಿದ ೧೪. ೪೩ ಕೋಟಿ ರೂಪಾಯಿಗಳ ಬದಲಿಗೆ ೨೦.೨೫ ಕೋಟಿ ರೂಪಾಯಿಗಳನ್ನು ಕೊಡಲು ಸಿದ್ಧನಿರುವುದಾಗಿಯೂ, ತನ್ನನ್ನು ಎಂಟನೇ ಪ್ರತಿವಾದಿಯನ್ನಾಗಿ ಅಪೀಲಿನಲ್ಲಿ ದಾಖಲು ಮಾಡಿಕೊಳ್ಳಬೇಕೆಂದೂ ಕೇಳಿಕೊಂಡು ಒಂದು ಅರ್ಜಿಯನ್ನು ಸಲ್ಲಿಸಿದನು. ಎಪ್ರಿಲ್ ೧೮ ರಂದು ಆಭರಣಗಳನ್ನು ಕೊಂಡಿದ್ದ ಸಂಸ್ಥೆಗಳಲ್ಲಿ ಒಂದಾಗಿದ್ದ ಶಾಂತಿ ವಿಜಯಾ ಆ್ಯಂಡ್ ಕಂಪನಿ ತಾನೂ ಒಂದು ಅರ್ಜಿ ಸಲ್ಲಿಸಿ ತನ್ನನ್ನು ಒಬ್ಬ ಪ್ರತಿವಾದಿಯನ್ನಾಗಿ ಸೇರಿಸಿಕೊಳ್ಳಬೇಕೆಂದು ಪ್ರಾರ್ಥಿಸಿತು. ಹೈಕೋರ್ಟು ಶಾಂತಿ ವಿಜಯಾ ಆ್ಯಂಡ್ ಕಂಪನಿ ಅಪೀಲಿನಲ್ಲಿ ಪ್ರತಿವಾದಿಯಾಗಲು ಅನುಮತಿ ನೀಡಿತು. ಪೀಟರ್ ಜಾನ್ಸನ್ ಫರ್ನಾಂಡಿಸನ ಹೇಳಿಕೆಯ ಸತ್ಯತೆಯನ್ನು ಪರೀಕ್ಷಿಸಲು ಹೈಕೋರ್ಟು ಅವನು ಒಂದು ವಾರದಲ್ಲಿ ೨೦.೨೫ ಕೋಟಿ ರೂಪಾಯಿಗಳನ್ನು ಠೇವಣಿ ಇಡಬೇಕೆಂದೂ ಆನಂತರ ಆಭರಣಗಳನ್ನು ವೀಕ್ಷಿಸಬಹುದೆಂದೂ ತಿಳಿಸಿತು. ಮೇ ೮ ರಂದು ಹೈದರಾಬಾದಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅವನ ಪರವಾಗಿ ಗ್ಯಾರಂಟಿ ನೀಡಿದ ನಂತರ ಮೇ ೨೭ ರಂದು ಮರ್ಕಂಟೈಲ್ ಬ್ಯಾಂಕಿನಲ್ಲಿ ಆಭರಣಗಳನ್ನು ವೀಕ್ಷಿಸಲು ಹೈಕೋರ್ಟು ಅವನಿಗೆ ಅನುಮತಿ ನೀಡಿತು. ಇದರ ನಂತರ ಪೀಟರ್ ಫರ್ನಾಂಡಿಸ್ ತಾನು ಹಿಂದೆ ನೀಡಿದ ಬೆಲೆಯನ್ನು ಪುನಃ ಒಪ್ಪಿಕೊಂಡು, ೨೦.೨೫ ಕೋಟಿ ರೂಪಾಯಿಗಳನ್ನು ಹೈಕೋರ್ಟಿನಲ್ಲಿ ಠೇವಣಿ ಇಟ್ಟನಂತರವೇ ಕೋರ್ಟು ಪ್ರತಿವಾದಿಯಾಗಲು ಅವನಿಗೆ ಅನುಮತಿ ನೀಡಿತು.

ಇಷ್ಟೇ ಸಾಲದಂತೆ ವಾದಿ ಫಾತಿಮಾ ಫೌಜಿಯಾ ಒಂದು ಅರ್ಜಿ ಸಲ್ಲಿಸಿ ತಾನು ಅಪೀಲನ್ನು ಹಿಂತೆಗೆದುಕೊಳ್ಳುವುದಾಗಿ ನ್ಯಾಯಾಲಯಕ್ಕೆ ತಿಳಿಸಿದಳು. ಉಭಯಪಕ್ಷದವರ ವಾದವನ್ನು ಕೇಳಿ ನ್ಯಾಯಲಯ ಈ ಅರ್ಜಿಯ ಮೇಲೆ ನಿರ್ಣಯ ನೀಡುವುದರೊಳಗಾಗಿ ಮತ್ತೊಂದು ಚಮತ್ಕಾರ ನಡೆಯಿತು. ರಾಜಕುಮಾರಿ ಫಾತಿಮಾ ಫೌಜಿಯಾಳ ಸೋದರಿ ಹಾಗೂ ಎರಡನೇ ಪ್ರತಿವಾದಿಯಾಗಿದ್ದ ರಾಜಕುಮಾರಿ ಅಮೀನಾ ಮಿರ್ಜಿಯಾ ತಾನೊಂದು ಅರ್ಜಿ ಸಲ್ಲಿಸಿ ಅಪೀಲನ್ನು ವಾಪಸು ಪಡೆಯಲು ಫಾತೀಮಾ ಫೌಜಿಯಾಗೆ ಅನುಮತಿ ನೀಡಿದರೆ ತಾವೆಲ್ಲರೂ ಹೆಚ್ಚಿನ ೫ ಕೋಟಿ ೭೮ ಲಕ್ಷ ರೂ.ಗಳನ್ನು ಕಳೆದುಕೊಳ್ಳುವುದಾಗಿಯೂ ಆದ್ದರಿಂದ ತನಗೆ ಎರಡನೇ ವಾದಿಯಾಗಲು ನ್ಯಾಯಾಲಯ ಅನುಮತಿ ನೀಡಬೇಕೆಂದೂ ಕೇಳಿಕೊಂಡಳು. ೧೯೭೮ ಜೂನ್ ೧೨ ರಂದು ರಾಜಕುಮಾರಿ ಫಾತಿಮಾ ಫೌಜಿಯಾಗೆ ಅಪೀಲನ್ನು ವಾಪಸು ಪಡೆಯಲು ಅನುಮತಿ ಇತ್ತ ನ್ಯಾಯಾಲಯ

ರಾಜಕುಮಾರಿ ಅಮೀನಾ ಮಿರ್ಜಿಯಾ ಎರಡನೇ ವಾದಿಯಾಗಿ ಅಪೀಲನ್ನು ಮುಂದುವರಿಸಿಕೊಂಡು ಹೋಗಲು ಪರವಾನಿಗೆ ನೀಡಿತು.

ತೋರಿಕೆಗೆ ಸರಳವಾಗಿ ಕಂಡರೂ ಇದರ ಹಿಂದಿರುವ ಶಕ್ತಿಗಳ ಕೈವಾಡವನ್ನು ಯಾರಿಗೂ ಗುರುತಿಸದೇ ಇರಲು ಸಾಧ್ಯವಿಲ್ಲ.

೧೯೭೮ ಜೂನ್ ೧೨ ರಂದು ಅಪೀಲಿನ ಮೇಲೆ ನಿರ್ಣಯ ನೀಡುವ ಹೈಕೋರ್ಟ್ ೧೪.೪೩ ಕೋಟಿ ರೂಪಾಯಿಗಳ ಎರಡೂ ಪಕ್ಷಗಳ ಮಧ್ಯ ಆದ ಹಿಂದಿನ ಒಪ್ಪಂದವು ಪೂರ್ತಿಯಾಗಿರಲಿಲ್ಲವೆಂಬ ಕಾರಣದ ಮೇಲೆ ಮಾರಾಟವನ್ನು ರದ್ದುಗೊಳಿಸಿ, ಪೀಟರ್ ಜಾನ್ಸನ್ ಫರ್ನಾಂಡಿಸ್ ನೀಡಿದ ಬೆಲೆಯನ್ನು ಅಂಗೀಕರಿಸಿ ಅವನಿಗೆ ೨೦.೨೫ ಕೋಟಿ ರೂಪಾಯಿಗಳಿಗೆ ಕೊಂಡುಕೊಳ್ಳಲು ಆದೇಶ ನೀಡಿತು.

ಶಾಂತಿ ವಿಜಯಾ ಆ್ಯಂಡ್ ಕಂ., ಈ ನಿರ್ಣಯದ ಮೇಲೆ ಸುಪ್ರೀಂ ಕೋರ್ಟಿಗೆ ಅಪೀಲು ಸಲ್ಲಿಸಿತು. ಇದರಲ್ಲಿ ಹೈಕೋರ್ಟಿನ ಅಪೀಲಿನಲ್ಲಿ ಕೇವಲ ಶಾಂತಿ ವಿಜಯಾ ಆ್ಯಂಡ್ ಕಂ. ಮಾತ್ರ ಪ್ರತಿವಾದಿಗಳಾಗಿದ್ದು ಆಭರಣಗಳನ್ನು ಕೊಂಡ ಉಳಿದ ವ್ಯಕ್ತಿ ಸಂಸ್ಥೆಗಳು ಹೊರಗಡೆಯೇ ಉಳಿಯಬೇಕಾಯಿತೆಂಬ ಅವರ ವಾದವನ್ನು ಪುರಸ್ಕರಿಸಿ ಸುಪ್ರೀಂ ಕೋರ್ಟು ೧೯೭೮ ಸೆಪ್ಟೆಂಬರ್ ೧೪ ರಂದು ಎಲ್ಲಾ ಉಳಿದ ವ್ಯಕ್ತಿಗಳನ್ನು ಪ್ರತಿವಾದಿಗಳನ್ನಾಗಿ ಮಾಡಿಕೊಂಡು, ಅವರೆಲ್ಲರ ವಾದವನ್ನು ಕೇಳಿದ ಮೇಲೆ ಪುನಃ ನಿರ್ಣಯ ಕೊಡಬೇಕೆಂದು ತಿಳಿಸಿ ಅಪೀಲನ್ನು ಆಂಧ್ರಪ್ರದೇಶ ಹೈಕೋರ್ಟಿಗೆ ವಾಪಸು ಕಳಿಸಿತು. ಸುಪ್ರೀಂ ಕೋರ್ಟಿನ ಆದೇಶದಂತೆ ಹೈಕೋರ್ಟು ಎಲ್ಲರ ವಾದ ಪ್ರತಿವಾದವನ್ನು ಕೇಳಿ ಕೂಲಂಕಷವಾಗಿ ವಿಷಯವನ್ನು ಚರ್ಚಿಸಿ ಪುನಃ ತನ್ನ ಹಿಂದಿನ ನಿರ್ಣಯವನ್ನೇ ಪುಷ್ಟೀಕರಿಸಿತು.

ಆ ನಿರ್ಣಯದ ಮೇಲೆ ಹಲವು ಪ್ರತಿವಾದಿಗಳು ಸುಪ್ರೀಂ ಕೋರ್ಟಿನಲ್ಲಿ ಅಪೀಲನ್ನು ಸಲ್ಲಿಸಿದರು. ೧೯೭೯ ಅಗಸ್ಟ್ ೩೧ ರಂದು ತೀರ್ಪು ನೀಡಿದ ಸರ್ವೋಚ್ಚ ನ್ಯಾಯಾಲಯವು ಒಂದು ವಿಷಯವನ್ನು ಬಿಟ್ಟು ಉಳಿದವೆಲ್ಲ ವಿಷಯಗಳಲ್ಲಿ ಹೈಕೋರ್ಟ್ ನಿರ್ಣಯವನ್ನು ಸಮರ್ಥಿಸಿತು. ಟೆಂಡರುಗಳನ್ನು ತೆರೆದು ಹೆಚ್ಚಿನ ಬೆಲೆಯನ್ನು ಒಪ್ಪಿಕೊಂಡ ದಿನ, ೧೯೭೮ರ ಮಾರ್ಚ್ ೯ ರಂದು ಕೇವಲ ನಾಲ್ಕು ನ್ಯಾಸಧಾರಿಗಳು ಇದ್ದರೆಂದೂ ಮಲ್ಹೋತ್ರಾ ಹಾಜರಿರಲಿಲ್ಲವೆಂದು ಆ ಕಾರಣಕ್ಕಾಗಿ ಒಪ್ಪಂದವು ಪೂರ್ತಿಯಾಗಲಿಲ್ಲವೆಂದು ಕೋರ್ಟು ಕಾರಣ ನೀಡಿತು. ಅದಲ್ಲದೇ ಈ ಮಧ್ಯೆ ಹೈದರಾಬಾದಿನ ನಗರ ನಾಗರಿಕ ನ್ಯಾಯಾಲಯ ತಡೆಯಾಜ್ಞೆ ನೀಡಿ ಮಾರಾಟ ಪೂರ್ತಿಯಾಗುವುದನ್ನು ನಿಷೇಧಿಸಿದ್ದರಿಂದಲೂ ಒಪ್ಪಂದ ಪೂರ್ತಿಯಾಗದೇ ಉಳಿಯಿತೆಂದು ನಿಷೇಧಿಸಿದ್ದರಿಂದಲೂ ಪೂರ್ತಿಯಾಗದೇ ಉಳಿಯಿತೆಂದು ಅಭಿಪ್ರಾಯಪಟ್ಟಿತು. ನ್ಯಾಸಧಾರಿಗಳು ಆಭರಣ ಮಾರಾಟಮಾಡಲು ಕೈಕೊಂಡ ಕ್ರಮದ ಬಗ್ಗೆ ಕೇವಲ ಕೆಲವಾರು ರತ್ನವ್ಯಾಪಾರಿ ಸಂಸ್ಥೆಗಳಿಗೆ ತಿಳಿಸಿ ಟೆಂಡರ್ ಕರೆಯುವುದರ ಬದಲು ಪತ್ರಿಕೆಗಳಲ್ಲಿ ಹಾಗೂ ಉಳಿದ ಪ್ರಚಾರ ಮಾಧ್ಯಮಗಳ ಮೂಲಕ ಹೆಚ್ಚಿನ ಪ್ರಚಾರ ಕೊಟ್ಟಿದ್ದರೆ ಇನ್ನೂ ಹೆಚ್ಚಿನ ಬೆಲೆ ಬರುವ ಸಾಧ್ಯತೆ ಇದ್ದಿತೆಂದು ಅಪ್ಪರ, ಮಟ್ಟಿಗೆ ನ್ಯಾಸಧಾರಿಗಳು ಹೆಚ್ಚಿನ ಲಕ್ಷ್ಯಕೊಟ್ಟು ವರ್ತಿಸಲಿಲ್ಲವೆಂದು ಅಭಿಪ್ರಾಯಪಟ್ಟು ೧೪.೪೩ ಕೋಟಿ ರೂಪಾಯಿಗಳ ಕ್ರಯ ಕ್ರಮಬದ್ಧವಲ್ಲವೆಂದು ತೀರ್ಪು ನೀಡಿತು. ಆದರೆ ಹೈಕೋರ್ಟಿನ ತೀರ್ಪಿನಿಂದ ಬೇರೆಯಾಗಿ ಅಭಿಪ್ರಾಯ ಪಡುತ್ತಾ, ಪ್ರಚಾರ ದೊರೆತರೆ ಪೀಟರ್ ಫರ್ನಾಂಡಿಸ್ ನೀಡಿದ ೨೦.೨೫ ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಬೆಲೆ ಬರುವುದೆಂದು ನಿರೀಕ್ಷಿಸಿ ಹೈಕೋರ್ಟು ಅವನ ಪರವಾಗಿ ಮಾಡಿದ ಆಜ್ಞೆಯನ್ನು ತಳ್ಳಿಹಾಕಿ, ಆಭರಣಗಳನ್ನು ಪುನಃ ಹಾಜರಮಾಡಬೇಕೆಂದು ನಿರ್ಣಯ ನೀಡಿತು.

ಒಟ್ಟಿನಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯದ ವರೆಗೂ ನಡೆದ ಈ ಕಾನೂನಿನ ಹೋರಾಟ ಯಾವ ಪಕ್ಷದವರಿಗೂ ಲಾಭ ತರದೇ ಹೋಯಿತು. ನಿಜಾಮರ ಸಂಬಂಧಿಗಳ ಶೋಚನೀಯ ಆರ್ಥಿಕ ಸ್ಥಿತಿ ಹಾಗೆಯೇ ಉಳಿಯಿತು. ಈ ಮಧ್ಯೆ ಭಾರತ ಸರಕಾರವು ಈ ಆಭರಣಗಳನ್ನು ಪ್ರಾಚೀನ ಕಲಾವಸ್ತುಗಳೆಂದು ಘೋಷಿಸಿ ಅವುಗಳನ್ನು ಪರದೇಶಕ್ಕೆ ರವಾನಿಸುವದನ್ನು ನಿಷೇಧಿಸಿ ಎಲ್ಲ ಗೊಂದಲಗಳಿಗೆ ಸದ್ಯಕ್ಕೆ ಮಂಗಳ ಹಾಡಿದೆ. ✿

ಹೆಚ್ಚು ಪ್ರಚಾರದಲ್ಲಿಲ್ಲದ ಇವು ಪೌಷ್ಟಿಕಾಂಶಗಳ ಗಣಿಗಳೇ ಸರಿ

ಅಪರಿಚಿತ ಆಹಾರಗಳು

ಡಾ. ವೈ. ಎಸ್. ಲೂಯಿಸ್

ಅಕ್ಕಿ, ಗೋಧಿ, ಜೋಳ, ಬೇಳೆಗಳು, ಕಾಳುಗಳು, ಹಾಲಿನ ಉತ್ಪನ್ನಗಳು, ಮೊಟ್ಟೆ, ಮೀನು, ಮಾಂಸ ಮುಂತಾದ ಆಹಾರ ಪದಾರ್ಥಗಳು ಎಲ್ಲರಿಗೂ ಪರಿಚಿತವಾದುವು. ಇವು ನಿತ್ಯ ಬಳಕೆಯ ಪದಾರ್ಥ ಗಳು. ಆದರೆ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಬಡ ಜನರು ಹಲವಾರು ಸಸ್ಯಮೂಲ ಪದಾರ್ಥ ಗಳನ್ನು ಮೊದಲಿನಿಂದಲೂ ಆಹಾರಗಳಾಗಿ ಉಪಯೋಗಿಸುತ್ತಿದ್ದಾರೆ. ಇವುಗಳಲ್ಲನೇಕವು ಪೌಷ್ಟಿಕ ಗುಣದಲ್ಲಿ ಉತ್ತಮವಾಗಿದ್ದರೂ ಹೊರ ಗಿನವರಿಗೆ ಹೆಚ್ಚಾಗಿ ತಿಳಿಯವು. ಅವುಗಳ ಬಗ್ಗೆ ಹೆಚ್ಚಿನ ಕೃಷಿ ಸಂಶೋಧನೆಗಳೂ ನಡೆದಿಲ್ಲ. ಬರ ಗಾಲದಲ್ಲಿ ಮತ್ತು ಬಹು ಕಡಿಮೆ ಮಳೆಯಾ ಗುವ ಪ್ರದೇಶಗಳಲ್ಲಿ ಇವು ಮನುಷ್ಯರಿಗೆ ಎಷ್ಟೋ ಉಪಕಾರ ಮಾಡಿವೆ, ಜೀವನಾಧಾರವಾಗಿವೆ.

ಸಣ್ಣ ಕಾಳುಗಳಿರುವ 'ಮಿಲ್ಲೆಟ್ಸ್' ಎಂದು ಕರೆಯಲ್ಪಡುವ ಗುಂಪಿಗೆ ಸೇರಿದ ಧಾನ್ಯಗಳು ಇವುಗಳಲ್ಲಿ ಮುಖ್ಯವಾದುವು. ಬಂಜರು ಭೂಮಿ, ಒಂದೆರಡು ಸಣ್ಣ ಮಳೆ ಮಾತ್ರ ಆಗುವ ಸ್ಥಳಗಳು, ಗೊಬ್ಬರ ಹೆಚ್ಚಿಗೆ ದೊರೆಯದ ಪ್ರದೇಶ, ಇಂತಹ ಕಡೆಗಳಲ್ಲೂ ಇವು ಬೆಳೆಯ ಬಲ್ಲವು. ಕೃಷಿ ವಿಧಾನ ಸುಲಭ. ಸ್ವಲ್ಪ ಉತ್ತು, ಮಳೆಯಾದಾಗ ಬೀಜ ಚೆಲ್ಲಿದರೆ ಸಾಕು, ೩–೪ ತಿಂಗಳಲ್ಲಿ ಪೈರು ಬೆಳೆದು ಕಟಾವು ಮಾಡಲು ಸಿದ್ಧವಾಗುತ್ತವೆ. ನೀರಿನ ಆಸರೆ ಇದ್ದರೆ ಇನ್ನೂ ಚೆನ್ನಾಗಿ ಬೆಳೆಯಬಲ್ಲವಾದರೂ, ಶುಷ್ಕ ವಾತಾವರಣದಲ್ಲೂ ಬಿತ್ತಿದವನ ಜೀವನಾಧಾರಕ್ಕೆ ಮೋಸವಿಲ್ಲ. ಇವಕ್ಕೆ ರೋಗರುಜಿನ ತಗಲುವುದೂ ಅಪರೂಪ. ಕಟಾವು ಮಾಡಿದ ಪೈರನ್ನು ನಿಧಾನ ವಾಗಿ ಒಣಗಸಲು ಬಿಟ್ಟು ಬೇಕೆಂದಾಗ ತೆನೆ ಬಡಿದು ಕಾಳು ಪಡೆಯಬಹುದು. ಉಳಿದ ಕಡ್ಡಿಯನ್ನು ದನಗಳಿಗೆ ಕೊಡಬಹುದು.

ಈ ಕಾಳುಗಳಲ್ಲಿ ಕೆಲವಕ್ಕೆ ಹೊರಗಿನ ಸಿಪ್ಪೆ ಮಂದವಾಗಿಯೂ ನಾರಿನಿಂದ ಕೂಡಿದುದೂ ಆಗಿರುತ್ತದೆ. ಆದುದರಿಂದ ಇವುಗಳನ್ನು ಹಾಗೇ ಉಪಯೋಗಿಸುವುದು ಕಷ್ಟ. ಸುಲಭವಾಗಿ ಜೀರ್ಣ ವಾಗುವುದಿಲ್ಲ. ಆದರೆ ಸೂಕ್ತ ವಿಧಾನದಿಂದ ಸಿಪ್ಪೆ ತೆಗೆದುಬಿಟ್ಟರೆ ಒಳಗಿನ ಹಿಟ್ಟು ಹೆಚ್ಚಾಗಿರುವ ಭಾಗ ಉತ್ತಮ ಆಹಾರವಾಗುತ್ತದೆ. ಅದರಲ್ಲಿ


ಅಕ್ಕಿ, ಗೋಧಿಗಳಷ್ಟೇ ಪಿಷ್ಟಿನ ಅಂಶದ ಸಸಾರ-ಜನಕ ಪದಾರ್ಥ, ಜಿಡ್ಡು, ಖನಿಜ ಪದಾರ್ಥಗಳು ಮತ್ತು ಅನ್ನಾಂಗಗಳೂ ಇದ್ದು ಪುಷ್ಟಿದಾಯಕ-ವಾಗಿರುತ್ತವೆ. ಕಾಳುಗಳನ್ನು ಅನ್ನದಂತೆ ಬೇಯಿಸಿಯಾಗಲಿ ಹಿಟ್ಟು ಬೀಸಿ ರೊಟ್ಟಿ ಮಾಡಿಯಾಗಲಿ ತಿನ್ನಬಹುದು, ಇಲ್ಲವೆ ಗಂಜಿ ಕಾಯಿಸಬಹುದು.

ಸಣ್ಣ ಧಾನ್ಯಗಳಲ್ಲಿ ರಾಗಿ ಬಹಳ ಮುಖ್ಯವಾದರೂ ಇದನ್ನು ದಕ್ಷಿಣ ಭಾರತದಲ್ಲಿ ಅಧಿಕವಾಗಿ ಬೆಳೆಯುತ್ತಿದ್ದುದು ಎಲ್ಲರಿಗೂ ತಿಳಿದಿರುವುದರಿಂದ ಇಲ್ಲಿ ಹೇಳುವುದು ಬೇಡ. ಇದಕ್ಕೆ ಮುಂದೆ ಬರುವುದು **ಸಜ್ಜೆ** (ಕನ್ನಡ) ಕಂಬು (ತಮಿಳು) ಅಥವಾ ಬಾಜ್ರ (ಹಿಂದಿ) ಎಂದು ಕರೆಸಿಕೊಳ್ಳುವ ಧಾನ್ಯ. ತಿಳಿನೀಲಿ ಬಣ್ಣದ ಸಣ್ಣ ಗೋಲಾಕಾರದ ಕಾಳುಗಳಿರುವ ಉದ್ದನೆಯ ಬುಗುರಿ ಯಾಕಾರದ ತೆನೆಗಳು. ಇದು ಮೊದಲು ಆಫ್ರಿಕದಿಂದ ಬಂದದ್ದು ಎಂದು ನಂಬಿಕೆ. ಕರ್ನಾಟಕ, ರಾಜಸ್ಥಾನ, ಉತ್ತರ ಪ್ರದೇಶ ಮುಂತಾದ ಕಡೆ ಮಳೆ ಕಡಿಮೆ, ಬಿಸಿಲು ಹೆಚ್ಚಾಗಿರುವ ಪ್ರದೇಶ



ಸಜ್ಜೆ

ಗಳಲ್ಲಿ ಇದನ್ನು ಬೆಳೆದು ಸ್ವಂತ ಉಪಯೋಗಕ್ಕಿಟ್ಟುಕೊಳ್ಳುತ್ತಾರೆ. ಮಾರಾಟಕ್ಕೆ ಕಳುಹಿಸುವುದು ಕಡಿಮೆ. ಒಟ್ಟು ಐವತ್ತು ಲಕ್ಷ ಟನ್ನುಗಳಷ್ಟು ಉತ್ಪತ್ತಿಯಾಗುತ್ತಿದೆ ಎಂದು ಅಂದಾಜು.



ಬರಗು

ಬರಗು ಎನ್ನುವ ಧಾನ್ಯ ಒಂದು ಜಾತಿಯ ಹುಲ್ಲಿನಿಂದ ದೊರೆಯುತ್ತದೆ. ದಕ್ಷಿಣ ಭಾರತದ ಪ್ರಾಂತಗಳಲ್ಲಿ ಸುಮಾರು ಎರಡು ಮಿಲಿಯ ಟನ್ನುಗಳಷ್ಟು ಬೆಳೆಯುತ್ತಾರೆ. ಸಿಪ್ಪೆ ತೆಗೆದು ಅಕ್ಕಿಯಂತೆಯೇ ಉಪಯೋಗಿಸುತ್ತಾರೆ. ಪಿಷ್ಟ ಮತ್ತು ಸಸಾರಜನಕ ಪದಾರ್ಥ ಹೆಚ್ಚಾಗಿರುತ್ತವೆ. ಹರತ ಎನ್ನುವ ಇನ್ನೊಂದು ಜಾತಿಯ ಧಾನ್ಯವನ್ನೂ ದಕ್ಷಿಣದಲ್ಲಿ ಕೆಲವು ಕಡೆ ಬೆಳೆಯುತ್ತಾರೆ. ಆದರೆ ಇದರಲ್ಲಿ ಸಿಪ್ಪೆಯ ಭಾಗವೇ ಶೇಕಡ ೪೦ ರಷ್ಟು ಇರುತ್ತದೆ.



ನವಣೆ

ಕನ್ನಡದಲ್ಲಿ **ನವಣೆ** ಎಂದು ಕರೆಯಲ್ಪಡುವ ಸಣ್ಣ ಧಾನ್ಯವನ್ನು ಭಾರತದ ಅನೇಕ ಕಡೆ ಮಳೆ ಹೆಚ್ಚು ಬೀಳದ ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಎರಡು ಮೂರು ಲಕ್ಷ ಟನ್ನುಗಳಷ್ಟು ಬೆಳೆಯುತ್ತಿರಬಹುದು. ಸಿಪ್ಪೆ ತೆಗೆದರೆ ಸೇಕಡ ೮೦ ರಷ್ಟು ಉತ್ತಮ ಒಳಗಿನ ಕಾಳು ಸಿಗುತ್ತದೆ. ರೊಟ್ಟಿ ಅಥವಾ ಗಂಜಿ ಮಾಡಲು ಉಪಯೋಗಿಸುತ್ತಾರೆ.

ಸಾಮೆ ಎಂದು ಕರೆಯುವ ಕಾಳುಗಳನ್ನು ಭಾರತದ ಅನೇಕ ಕಡೆ ಬೆಳೆಯುತ್ತಾರೆ. ಇದರಲ್ಲೂ ಸಿಪ್ಪೆಯ ಭಾಗ ಕಡಿಮೆ. (೨೦%) ಇದ್ದು,



ಸಾಮೆ

ಒಳಗಿನ ಆಹಾರ ಯೋಗ್ಯ ಕಾಳು ಹೆಚ್ಚಾಗಿರುತ್ತದೆ. ಮಣ್ಣು ಫಲವತ್ತಾಗಿಲ್ಲದೆ, ಮಳೆ ಬಹಳ ಕಡಿಮೆ ಬೀಳುವ ಕಡೆಯೂ ಇದು ಬೆಳೆಯಬಲ್ಲದು.

ಸಣ್ಣ ಧಾನ್ಯಗಳ ಉಪಯೋಗದಲ್ಲಿ ಒಂದು ತೊಂದರೆ ಎಂದರೆ ಅವುಗಳ ಮೇಲೆ, ಹೊಲದಲ್ಲಿದ್ದಾಗಲೇ, ಒಮ್ಮೊಮ್ಮೆ ಬೂಷ್ಟುಗಳು ಬೆಳೆದುಕೊಳ್ಳುವುದು. ಇವು ವಿಷಕಾರಕಗಳು. ರೈತರು ಇದನ್ನು ತಿಳಿದುಕೊಂಡು ಅಂತಹ ಧಾನ್ಯವನ್ನು ತಿರಸ್ಕರಿಸುವರಾದರೂ ಕೆಲವು ವೇಳೆ ಆಕಸ್ಮಿಕಗಳು ಸಂಭವಿಸುವುದುಂಟು. ಎರ್ಗಾಟಿಸ್ಮ್ ಎನ್ನುವುದು ಇಂತಹ ಒಂದು ಕಾಯಿಲೆ.



ರಾಜಗಿರಿ



ಸಿಂಘಾರಾ

ರಾಜ್‌ಗೀರಾ, ಅಮರಾಂತ್, ಕೀಲೆಸೊಪ್ಪು ಮುಂತಾದ ಹೆಸರುಗಳಿಂದ ಕರೆಯಲ್ಪಡುವ ದಂಟು ದೊಡ್ಡ ತೆನೆಗಳನ್ನು ಬಿಡುತ್ತದೆ. ತೆನೆಯ ತುಂಬಾ ಸಣ್ಣ ಕಾಳುಗಳಿರುತ್ತವೆ. ಈ ಸಸ್ಯ ಉತ್ತರ ಭಾರತದಲ್ಲಿ ಅನೇಕ ಕಡೆ ಕಾಳುಗಳಿಗಾಗಿ ಬೆಳೆಸಲ್ಪಡುತ್ತದೆ. ಅದಕ್ಕೆ ಅನಾದಾರ್ನ್ ಎಂದು ಹೆಸರು. ಕಾಳುಗಳಲ್ಲಿ ಸೇಕಡ ೬೦ ರಷ್ಟು ಪಿಷ್ಟವಿದ್ದು ಪ್ರೋಟೀನ್ ಅಥವಾ ಸಸಾರಜನಕ ಪದಾರ್ಥವೂ ಹೆಚ್ಚಾಗಿ ಆಹಾರಯೋಗ್ಯವಾಗಿರುತ್ತವೆ. ಇವನ್ನು ಶಾಖದಿಂದ ಅರಳು ಮಾಡಿಯಾಗಲಿ ಬಿಡಿಸಿ ಹಿಟ್ಟು ಮಾಡಿಯಾಗಲಿ ಉಪಯೋಗಿಸುತ್ತಾರೆ. ಪುರಿ ಉಂಡೆ ರೀತಿ ಬೆಲ್ಲದೊಡನೆ ತಿನ್ನುವುದೂ ಉಂಟು. ಇದು ಬಡವರಿಗೊಂದು ಉತ್ತಮ ಆಹಾರ.

ಸಿಂಘಾರಾ ಟ್ರಾಪ ಅಥವ ವಾಟರ್ ಚೆಸ್ಟ್‌ನಟ್ ಎಂದು ಕರೆಯಲ್ಪಡುವ ಕಾಯಿಗಳು ನೀರಿನಲ್ಲಿ ಬೆಳೆದುಕೊಳ್ಳುವ ಟ್ರಾಪ ಬಿಸ್ಪಿನೋಸ ಎಂಬ ಬಳ್ಳಿಯಿಂದ ದೊರೆಯುತ್ತವೆ. ಉತ್ತರ ಭಾರತದ ಅನೇಕ ಕೊಳ, ಕುಂಟೆ, ಕೆರೆಗಳಲ್ಲಿ ಈ ಬಳ್ಳಿಗಳನ್ನು ಬೆಳೆಸುತ್ತಾರೆ. ಕಾಯಿಗಳು ಸಿಹಿಯಾಗಿದ್ದು, ಪಿಷ್ಟಪೂರಿತವಾಗಿರುತ್ತವೆ. ಹಸಿಯಾಗಿದ್ದಾಗ ಹಾಗೇ ತಿನ್ನುತ್ತಾರೆ. ಒಣಗಿಸಿ, ಹಿಟ್ಟುಮಾಡಿ ರೊಟ್ಟಿ ಸುಡುವುದು ಹೆಚ್ಚು.


ಸೈಕಾಡ್ ಎಂಬ ತಾಳೆ ಗಿಡದಂತೆ ಕಾಣುವ ಮರಗಳು ಕೇರಳ, ದಕ್ಷಿಣ ಕನ್ನಡ ಮುಂತಾದ ಕಡೆ ತಾವೇ ತಾವಾಗಿ ಎಲ್ಲಾ ಕಡೆ ಬೆಳೆದುಕೊಂಡಿರುತ್ತವೆ. ಮರಗಳ ನೆತ್ತಿಯಲ್ಲಿ ಗೊಂಚಲು

ಈ ಧಾನ್ಯಗಳಿಗೆ ಭವ್ಯ ಭವಿತವ್ಯ

ಕ್ವಿನುಆ



ಮೆಕ್ಸಿಕೋದ ಇಂಕಾ ಜನಾಂಗದವರು ಬೆಳೆಯುತ್ತಿದ್ದ ಧಾನ್ಯ. ಇದು ಈಗಲೂ ಆ್ಯಂಡಿ ಪರ್ವತ ಶ್ರೇಣಿಯಲ್ಲಿ ವಾಸಿಸುವ ರೆಡ್ ಇಂಡಿಯನ್ನರ ಆಹಾರವಾಗಿದೆ. ಗಟ್ಟಿಯಾಗಿರುವ ಕ್ವಿನು ಅದಲ್ಲಿ ಪ್ರೋಟೀನಿನ ಅಂಶ ಅಧಿಕವಾಗಿರುತ್ತದೆ. ಇದರ ಬೀಜದ ಬಹಿರಾವರಣ ಕಹಿಯಾಗಿದ್ದು ಅದನ್ನು ನೀರಲ್ಲಿ ನೆನಸಿದರೆ ಕಹಿ ಹೊರಟು ಹೋಗುತ್ತದೆ. ಇದರ ಕಹಿಯಿಲ್ಲದ ಬೂದು ತಳಿಯನ್ನು ಈಗ ಅಭಿವೃದ್ಧಿಪಡಿಸಲಾಗುತ್ತಿದೆ.



ವಿಂಗ್ಡ್ - ಬೀನ್ಸ್


ಬಟಾಣಿಯಂತಿರುವ ವಿಂಗ್ಡ್-ಬೀನ್ಸ್‌ನಲ್ಲಿ ಶೇಕಡಾ ೩೭ ರಷ್ಟು ಪ್ರೋಟೀನ್ ಇರುತ್ತದೆ. ಇದರ ಗಡ್ಡೆಗಳಲ್ಲಿ ಆಲೂಗಡ್ಡೆಗಿಂತ ಹತ್ತು ಪಟ್ಟು ಹೆಚ್ಚು ಪ್ರೋಟೀನ್ ಇರುತ್ತದೆ.



ಮರಮ - ಬೀಜ

ಇದರ ಒಳಭಾಗ ಕೆನೆಬಣ್ಣದ್ದಿದ್ದು, ಅದರಲ್ಲಿ ಸೋಯಾಬೀನಿನಲ್ಲಿರುವಷ್ಟೇ ಪ್ರೋಟೀನು ಹಾಗೂ ಬಟಾಣಿಯಲ್ಲಿರುವಷ್ಟೆ ಪಿಷ್ಟವಿರುತ್ತದೆ. ಇದರ ಗಡ್ಡೆಗಳನ್ನು ಕುದಿಸಿದರೆ ಅಥವಾ ಹುರಿದರೆ ರುಚಿಯಾಗಿರುತ್ತವೆ.

ಎಮ್ಮೆ ಕಾಯಿ



ಪಶ್ಚಿಮ ಅಮೆರಿಕದಲ್ಲಿರುವ ಇಂಡಿಯನ್ನರು ಶತಮಾನಗಳಿಂದ ಇವುಗಳನ್ನು ಸೇವಿಸುತ್ತಿದ್ದಾರೆ. ಎಮ್ಮೆ ಕಾಯಿಗಳಲ್ಲಿ ಶೇಕಡಾ ೩೫ ರಷ್ಟು ಪ್ರೊಟೀನಿನ ಅಂಶವೂ ಶೇಕಡಾ ೩೪ ರಷ್ಟು ತೈಲಾಂಶವೂ ಇರುತ್ತದೆ. ಇದರಲ್ಲಿ ಶೇ. ೫೦ರಷ್ಟು ಪಿಷ್ಟವಿದ್ದು, ಅದರಲ್ಲಿರುವ ಕಟು ಭಾಗವನ್ನು ತೆಗೆಯಲು ಉಪ್ಪಿನ ನೀರಲ್ಲಿ ಅದನ್ನು ನೆನೆಸಲಾಗುತ್ತದೆ.

ಸ್ಪಿರ್ಯುಲಿನಾ

ಸರೋವರ ಹಾಗೂ ಉಪ್ಪಿನಾಂಶವಿರುವ ಕೊಳಗಳಲ್ಲಿ ಬೆಳೆಯುವ ನೀಲಿ ಹಸಿರು ಮಿಶ್ರಿತ ಅಂತರ್ ವಳ್ಳಿ. ಸ್ಪಿರ್ಯುಲಿನಾದಲ್ಲಿ ಉನ್ನತ ಮಟ್ಟದ ಶೇಕಡಾ ೭೦ ರಷ್ಟು ಪ್ರೊಟೀನು ಇರುತ್ತದೆ. ಇದರಿಂದ ಪ್ರತಿನಿತ್ಯ ಒಂದು ಟನ್ನಿನಷ್ಟು ಪುಷ್ಟಿಕರವಾದ ಹಿಟ್ಟನ್ನು ತಯಾರಿಸುವ ಕಾರಖಾನೆಯು ಇತ್ತೀಚೆ ಮೆಕ್ಸಿಕೊ ಸಿಟಿಯಲ್ಲಿ ಹುಟ್ಟಿಕೊಂಡಿದೆ.

ತೌರ್ವಿ

ಆ್ಯಂಡಿ ಪರ್ವತಶ್ರೇಣಿಯಲ್ಲಿರುವ ಇಂಡಿಯನ್‌ರು ೧೫೦೦ ವರ್ಷಗಳಿಂದ ಬಳಸುತ್ತಿರುವ ಬೆಳೆ. ಇದರ ಬೀಜಗಳಲ್ಲಿ ಶೇಕಡಾ ೪೬ ರಷ್ಟು ಪ್ರೊಟೀನಿನಾಂಶವಿರುತ್ತದೆ. ತ್ರಾರ್ವಿ ಬೀಜಗಳಿಂದ ಒಳ್ಳೆಯ ಖಾದ್ಯ ತೈಲ ತಯಾರಿಸಬಹುದಾಗಿದೆ.



ಅಮರಂತ್



ಅಜ್ಟೆಕ್ ಇಂಕಾ ಹಾಗೂ ಅಮೆರಿಕದ ಉಷ್ಣ ವಲಯದಲ್ಲಿರುವ ಇಂಡಿಯನ್ನರು ಸು. ೧೬ ನೇ ಶತಮಾನದಿಂದೀಚೆ ಬಳಸುತ್ತಿರುವ ಮುಖ್ಯ ಧಾನ್ಯ. ಏಕದಳ ಧಾನ್ಯಗಳಲ್ಲಿರುವುದಕ್ಕಿಂತ ಅಧಿಕ ಪ್ರೊಟೀನಾಂಶ ಈ ಧಾನ್ಯದಲ್ಲಿರುತ್ತದೆ. ಇದರಲ್ಲಿ ಅಮೈನೊ ಆಮ್ಲ ಹಾಗೂ ಜೀವಸತ್ವಗಳು. ಅವಶ್ಯವಾದ ಲಾಯ್‌ಸಿನ್ ಹೆಚ್ಚಾಗಿರುತ್ತದೆ. ವಿಷಮ ವಾತಾವರಣದಲ್ಲೂ ಈ ಧಾನ್ಯ ತೀವ್ರಗತಿಯಲ್ಲಿ ಬೆಳೆಯುತ್ತದೆ. ✡

ಗೊಂಚಲು ದಪ್ಪ ಗೋಲಿ ಗಾತ್ರದ ಕಾಯಿಗಳು ಬಿಡುತ್ತವೆ. ಮಲೇಶಿಯಾ, ಇಂಡೋನೇಶಿಯಾ, ಕಡೆ ಈ ಕಾಯಿಗಳು ಇನ್ನೂ ದೊಡ್ಡ



ಸೈಕಾಡ್

ಗಾತ್ರದ್ದಾಗಿರುತ್ತವೆ. ಕಾಯಿಗಳ ತುಂಬಾ ಪಿಷ್ಟವಿರುತ್ತದೆ. ಆದರೆ ಅವರ ಜೊತೆಗೆ ಒಂದು ನಂಜಿನ ಗ್ಲೈಕೊಸೈಡ್ ಪದಾರ್ಥವೂ ಸ್ವಲ್ಪ



ಬಿದಿರು ಅಕ್ಕಿ

ಇರುತ್ತದೆ. ಪಿಷ್ಟವನ್ನು ನೀರಿನಲ್ಲಿ ತೊಳೆಯುವುದರಿಂದ ನಂಜನ್ನು ಹೋಗಲಾಡಿಸಬಹುದು. ಅವುಗಳನ್ನು ಉಪಯೋಗಿಸುವ ಜನರಿಗೆ ಅದು ಗೊತ್ತು. ಈ ಸೈಕಾಡ್ ಕಾಯಿಗಳ ಪಿಷ್ಟವನ್ನು ಆ ಸ್ಥಳಗಳ ಜನರು ಆಹಾರವಾಗಿ ಉಪಯೋಗಿಸುತ್ತಿದ್ದಾರೆ.

ಬಿದಿರು ಅಕ್ಕಿ: ಕಾಡುಗಳಲ್ಲಿ ಬಿದಿರಿನ ಗಿಡ ತೆನೆ ಬಿಟ್ಟು ಬತ್ತದಂತಹ ಕಾಳುಗಳನ್ನು ಕೊಡುತ್ತದೆ. ಅದನ್ನು ಸಂಗ್ರಹಿಸಿ 'ಲಂಬಾಣಿ'ಮುಂತಾದ ಜನರು ಬಿದಿರು ಅಕ್ಕಿ ಮಾಡಿಕೊಳ್ಳುತ್ತಾರೆ. ಇದನ್ನು ಅನ್ನ ಅಥವಾ ರೊಟ್ಟಿ ಮಾಡಿಕೊಳ್ಳಲು ಉಪಯೋಗಿಸುತ್ತಾರೆ. ಹೊಸಬರು ಜೀರ್ಣಿಸಿಕೊಳ್ಳುವುದು ಕಷ್ಟ. ಆದರೆ ಅಭ್ಯಾಸವಿರುವವರಿಗೆ ಅದು ಪೋಷಕ ಆಹಾರವಾಗುತ್ತದೆ. ಪಿಷ್ಟ, ಪ್ರೋಟೀನುಗಳು ಅದರಲ್ಲಿ ಸಾಕಷ್ಟು ಇರುತ್ತವೆ.



ಕತ್ತಾಳೆ

ಕತ್ತಾಳೆ ಗಿಡ: ದಕ್ಷಿಣ ಅಮೇರಿಕದ ಕಡೆಯಿಂದ ಬಂದದ್ದು. ಈಗ ನಮ್ಮ ರೈಲು ಮಾರ್ಗಗಳ ಪಕ್ಕದಲ್ಲಿ ಬೇಲಿಗಾಗಿ ಬೆಳೆಸುತ್ತಾರೆ. ಬೇರೆ ಬಂಜರು ಭೂಮಿಗಳಲ್ಲೂ ಇದು ತಾನೇ ತಾನಾಗಿ ಬೆಳೆದುಕೊಳ್ಳುತ್ತಿದೆ. ಇದರ ಎಲೆಗಳ ನಾರನ್ನು ತೆಗೆದು ಹಗ್ಗ, ನಾರು ಮಡಿ ಮುಂತಾದುವನ್ನು ತಯಾರಿಸುತ್ತಾರೆ. ಅಗೇವ್ ವೆರಾ ಕ್ರೂಜ್ ಎಂಬ ಜಾತಿಯ ಕತ್ತಾಳೆಯನ್ನು ಮೆಕ್ಸಿಕೋ, ಯುಕಟಾನ್ ಮುಂತಾದ ಕಡೆ ಕೆಲವು ಔಷಧಗಳ

ತಯಾರಿಕೆಗಾಗಿ ಬೆಳೆಸುತ್ತಿದ್ದಾರೆ. ಗಿಡದ ಕಾಂಡದಲ್ಲಿ ನೀರಲ್ಲಿ ಕರಗುವ ಪಾಲಿಪ್ರಕ್ಟಾನ್ ಎಂಬ ಬಹುಶರ್ಕರವು ಅಧಿಕವಾಗಿರುತ್ತದೆ. ಇವನ್ನು ಆಮ್ಲದಿಂದ ಸಂಸ್ಕರಿಸಿದರೆ ಬಹು ಸಿಹಿಯಾದ–ಫ್ರಕ್ಟೋಸ್ ಸಕ್ಕರೆ ದೊರೆಯುತ್ತದೆ. ಜೇನಿನಲ್ಲಿ ಇದೇ ಹೆಚ್ಚಾಗಿರುವುದು. ಬರಗಾಲದಲ್ಲಿ ಕೆಲವರು ಕಾಂಡವನ್ನು ಹುಳಿ ರಸದಲ್ಲಿ ಬೇಯಿಸಿ ತಿನ್ನುವುದುಂಟು. ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಇದರ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯಿತು. ಇಲ್ಲಿನ ವಿಜ್ಞಾನಿಗಳೊಬ್ಬರು ಈಗ ಮೆಕ್ಸಿಕೋ ಸರಕಾರಕ್ಕೆ ಈ ಬಗ್ಗೆ ಸಹಾಯ ನೀಡಲು ಹೋಗಿದ್ದಾರೆ. ಫ್ರಕ್ಟೋಸ್ ಸಿರಪ್ (ಸಕ್ಕರೆ ಪಾಕ) ತಯಾರಿಸುವ ಕೈಗಾರಿಕೆ ಸ್ಥಾಪಿಸಬೇಕೆಂಬ ಇಚ್ಛೆ ಅವರದು.

ಕಾಳುಗಳು ಸಾಮಾನ್ಯವಾಗಿ ಪ್ರೋಟೀನು, ಜಿಡ್ಡು, ಶರ್ಕರ ಪದಾರ್ಥಗಳಲ್ಲಿ ಸಮೃದ್ಧವಾಗಿರುತ್ತವೆ. ಅದರಲ್ಲೂ ಕೆಲವು ವಿಶೇಷ ಪ್ರಮಾಣದಲ್ಲಿ ಇವನ್ನು ಹೊಂದಿರುತ್ತವೆ. ಆದುದರಿಂದ ಅವು ಬಹು ಉತ್ತಮ ಆಹಾರವಾಗಬಲ್ಲವು. ಸೋಯಾಬೀನು ಚೀನದಲ್ಲಿ ಜನಪ್ರಿಯವಾಗಿ ಅನೇಕ ವರ್ಷಗಳಿಂದ ಉಪಯೋಗಿಸಲ್ಪಡುತ್ತಿತ್ತು. ಇತರ ದೇಶಗಳವರು ಇತ್ತೀಚೆಗೆ ಅದರ ಗುಣವನ್ನು ಕಂಡುಕೊಂಡು ಈಗ



ಮರಮ ಬೀನ್ಸ್



ವಿಂಗ್ಡ್ ಬೀನ್ಸ್

ತಾವೂ ಬೆಳೆದು ಉಪಯೋಗಿಸುತ್ತಿದ್ದಾರೆ. ಇಂತಹ ಇನ್ನೂ ಕೆಲವು ಕಾಳುಗಳು ಅಲ್ಲಲ್ಲಿ ಬೆಳೆಯುತ್ತಿದ್ದು ಬಡವರಿಗೆ ಉತ್ತಮ ಆಹಾರವಾಗುತ್ತಿವೆ.

ಮರಮ ಬೀನ್ಸ್ ಎನ್ನುವುದು ದಕ್ಷಿಣ ಆಫ್ರಿಕದ ಕಲಹರಿ ಮುಂತಾದ ಬೆಂಗಾಡು ಮರುಭೂಮಿ ಪ್ರದೇಶಗಳಲ್ಲಿ ಬೆಳೆಯುತ್ತಿದೆ. ಅಲ್ಲಿನ ಬುಷ್‌ಮೆನ್, ಬಂಟು ಮುಂತಾದ ಜನರು ಕೇವಲ ಕಾಡು ಹಣ್ಣು ಗಿಡಗಳು, ಬೇಟೆ ಮಾಂಸ ತಿಂದು ಬದುಕುವವರು. ಇವರಿಗೆ ಮರಮ ಬೀನ್ ಉತ್ತಮ ಪೋಷಣೆ ನೀಡುತ್ತದೆ. ಈ ಬಳ್ಳಿ ಮರಳು ಮಣ್ಣು ಮಿಶ್ರಿತ ಭೂಮಿಯಲ್ಲಿ ಬಹು ಉದ್ದವಾಗಿ ಹರಡಿಕೊಂಡು ಚಪ್ಪಟೆಯಾದ ದೊಡ್ಡ ಕಾಯಿಗಳನ್ನು ಬಿಡುತ್ತದೆ. ಒಳಗೆ ದುಂಡನೆಯ ಕಾಳುಗಳಿರುತ್ತವೆ. ಕಾಳಿನ ಸಿಪ್ಪೆ ಗಟ್ಟಿಯಾಗಿದ್ದರೂ ಒಳಗಿನ ತಿರುಳು ಮೃದುವಾಗಿ ಹೆಚ್ಚು ಜಿಡ್ಡಿನಿಂದ ಕೂಡಿರುತ್ತದೆ. ಕಾಳುಗಳನ್ನು ಹುರಿದು, ರುಚಿಯಾದ ತಿರುಳಿನಿಂದ ಗಂಜಿ ಮಾಡಿ ಕುಡಿಯುತ್ತಾರೆ.

ವಿಂಗ್ಡ್ ಬೀನ್ಸ್ ಪೋಷಕ ಗುಣಗಳಲ್ಲಿ ಬಹುಶಃ ಇತರ ಸಸ್ಯಗಳನ್ನು ಮೀರಿಸುತ್ತದೆ. ಈ ಗಿಡದ ಎಲ್ಲಾ ಭಾಗಗಳು ಆಹಾರ ಯೋಗ್ಯ

ಮಾಡುವು. ಈಗ ಅವನ್ನು ಮುಖ್ಯವಾಗಿ ನ್ಯೂ ಗಯಾನ ಮತ್ತು ಆಗ್ನೇಯ ಏಷಿಯಾ ದೇಶಗಳಲ್ಲಿ ಮಾತ್ರ ಉಪಯೋಗಿಸುತ್ತಿದ್ದಾರೆ. ಇದರ [illegible]. ಕಾಯಿಗಳು ಎಳೆ ಬಳ್ಳಿ ಮತ್ತು ಹೂವುಗಳನ್ನು ಸಹ [illegible] ಜನರು ಆಹಾರವಾಗಿ ಉಪಯೋಗಿಸುತ್ತಾರೆ. ಬೆಳೆ ಮುಗಿದ ನಂತರ ನೆಲವನ್ನು ಅಗೆದು ಬಲಿತು ಗಡ್ಡೆಗಳಂತಿರುವ ಬೇರುಗಳನ್ನು ತೆಗೆದು ತಿನ್ನುತ್ತಾರೆ. ಬಳ್ಳಿಯಂತಹ ಒತ್ತಾಗಿ ಬೆಳೆದ ಗಿಡದಲ್ಲಿ ಉದ್ದುದ್ದವಾದ ಕಾಯಿಗಳು ಬಿಡುತ್ತವೆ. ಇವುಗಳ ನಾಲ್ಕು ಮೂಲೆಗಳಲ್ಲೂ ರೆಕ್ಕೆಗಳಂತಹ ಭಾಗಗಳಿರುವುದರಿಂದ ಇದನ್ನು 'ರೆಕ್ಕೆ ಕಾಯಿ' ಎಂದು ಕರೆಯುವರು. ಈ ಕಾಯಿಗಳು ಸಮೃದ್ಧವಾಗಿ ಬಿಡುತ್ತ ಬಹುದಿನಗಳ ವರೆಗೆ ಉತ್ತಮ ಆಹಾರವನ್ನು ಒದಗಿಸುತ್ತವೆ. ಅಪೌಷ್ಟಿಕತೆಯಿಂದ ನರಳುತ್ತಿರುವ ಪ್ರಪಂಚದ ಬೇರೆ ಬೇರೆ ಭಾಗಗಳ ಜನರಿಗೆ ಈ ಗಿಡವು ಅತ್ಯಂತ ಹೆಚ್ಚಿನ ಉಪಕಾರವನ್ನು ಮಾಡಬಲ್ಲದು. ಇದರ ಬೆಳೆಯನ್ನು ಅಂತಹ ಕಡೆಗಳಲ್ಲಿ ಪ್ರಾರಂಭಿಸಬೇಕು. ಗಾಳಿಯ ಸಸಾರಜನಕದಿಂದ ಜೀವಾಣುಗಳ ಸಹಾಯದಿಂದ ಗಿಡ ಪ್ರೋಟೀನು ಪದಾರ್ಥಗಳನ್ನು ತಯಾರಿಸುವುದರಿಂದ ಗೊಬ್ಬರದ ಅವಶ್ಯಕತೆಯಿಲ್ಲ.

ಬಂಬಾರ ನೆಲಗಡಲೆ: ಆಫ್ರಿಕದ ಅನೇಕ ಕಡೆ ಬೆಳೆಸಲ್ಪಡುತ್ತಿದೆ. ಇದರ ಕಾಳುಗಳು ಒಂದು ದೃಷ್ಟಿಯಲ್ಲಿ ಕಡಲೆ ಕಾಯಿಗಿಂತ ಉತ್ತಮ. ಇವುಗಳಲ್ಲಿ ಹೆಚ್ಚು ಪ್ರೋಟೀನು,



ಬಂಬಾರ ನೆಲಗಡಲೆ

ಜಿಡ್ಡು ಮತ್ತು ಪಿಷ್ಟವಿರುತ್ತದೆ. ಅಲ್ಲದೆ ಇದರ ಪ್ರೋಟೀನಿನಲ್ಲಿ ಲಾಯ್‌ಸಿನ್ ಎಂಬ ಅಪೇಕ್ಷಿತ ಅಮೈನೋ ಅಮ್ಲ ಅಧಿಕವಾಗಿರುತ್ತದೆ. ಬಂಬಾರ ಗಿಡ ನೆಲದಲ್ಲಿ ಎರಡು ಕಾಳುಗಳಿರುವ ಕಾಯಿಗಳನ್ನು ಬಿಡುತ್ತದೆ. ಹೆಚ್ಚು ನೀರು ಸಿಗದ, ಮಣ್ಣು ಫಲವತ್ತಾಗಿಲ್ಲದ ಭೂಮಿಗಳಲ್ಲೂ ಬಂಬಾರ ಚೆನ್ನಾಗಿ ಬೆಳೆದು ಕೊಳ್ಳುತ್ತದೆ. ಉಷ್ಣವಲಯದ ದೇಶಗಳಿಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ.

ಇಂತಹ ಅನೇಕ ಪುಷ್ಟಿಕರ, ಆದರೆ ಹೆಚ್ಚು ಪ್ರಚಾರದಲ್ಲಿಲ್ಲದ ಸಸ್ಯಗಳನ್ನು ಅಧ್ಯಯನ ಮಾಡಿ, ಅವುಗಳ ಬೆಳೆಯಿಂದ ಬಡ ಜನರ ಅಪೌಷ್ಟಿಕತೆಯನ್ನು ಪರಿಹರಿಸಲು ಪ್ರಯತ್ನಮಾಡುವುದು ಅವಶ್ಯ. ✡

ಲಾಟರಿಯ ಕಥೆ ಇಂದು ನಿನ್ನೆಯದಲ್ಲ. ರೋಮನ್ ಸಾಮ್ರಾಜ್ಯ ಉಚ್ಛ್ರಾಯದಲ್ಲಿದ್ದಾಗಲೆ ಅದು ಜಾರಿಯಲ್ಲಿತ್ತು. ಇಂದಿನ ಸರಕಾರಗಳು ಹೇಳುವ ಹಾಗೆಯೆ ರೋಮನ್ ಚಕ್ರವರ್ತಿ ಆಗಸ್ಟಸನೂ ಅದರಿಂದ ಬರುವ ಆದಾಯವನ್ನು ನಿರ್ಮಾಣ ಕಾರ್ಯಗಳಿಗೆ ಉಪಯೋಗಿಸುವುದಾಗಿ ಹೇಳಿದ್ದ. ರಶಿಯಾದಂತಹ ಕಮ್ಯೂನಿಸ್ಟ ರಾಷ್ಟ್ರವೂ ಕಷ್ಟಕಾಲದಲ್ಲಿ ಲಾಟರಿಯನ್ನು ಅವಲಂಬಿಸಿದ್ದುಂಟು. ಎರಡನೆ ಮಹಾಯುದ್ಧದ ವೆಚ್ಚವನ್ನು ನಿಭಾಯಿಸುವುದು ದುಸ್ಸಾಧ್ಯವಾದಾಗ ಅದು ಲಾಟರಿಯನ್ನು ಪ್ರಾರಂಭಿಸಿ ಒಂದು ಲಕ್ಷ ರೂಬಲ್ಲುಗಳ ಮೊದಲ ಬಹುಮಾನವನ್ನು ಘೋಷಿಸಿತ್ತು.



M. K. Publicity



ಮುಕ್ಕಣ್ಣಪ್ಪ ಒಬ್ಬ ಮಂತ್ರವಾದಿ. ಮಂತ್ರ ತಂತ್ರ ಹಾಗಿರಲಿ, ನೋಡೋದಕ್ಕೇನೆ ವಿಚಿತ್ರವಾಗಿದ್ದ. ಕುಳ್ಳ ಅಂತಲೇ ಹೇಳಬಹುದಾದ ಎತ್ತರ; ಎಣ್ಣೆಗೆಂಪು ಬಣ್ಣ; ಅಗಲವಾದ ಕಣ್ಣು; ಮೇಲೆ ದಟ್ಟವಾದ ಹುಬ್ಬುಗಳು; ದೊಡ್ಡ ಕಿವಿಯ ಸುತ್ತಲೂ ಗಂಟು ಕಟ್ಟಿದ ಉದ್ದ ಕೂದಲು. ಮೈಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಿಗೆಲ್ಲ ವಿಭೂತಿ. ತುಂಡು ಪಂಚೆ ಬಿಟ್ರೆ ಮೈಮೇಲೆ ಬೇರೆ ಏನೂ ಇಲ್ಲ – ಯಾವಾಗಲಾದರೂ ಒಂದು ಕೆಂಪು ವಸ್ತ್ರ ಹೆಗಲ ಮೇಲೆ ಇರುತ್ತಿತ್ತು ಅಷ್ಟೇ. ಕೆಂಪಗಿರುವ ಕಣ್ಣು; ಸೊಟ್ಟ ಹಲ್ಲುಗಳು; ದೊಡ್ಡ ಹೊಟ್ಟೆ–ಎದೆ ತುಂಬ ಕೂದಲು. ಇವನು ನಕ್ಕರೆ ನಾಲ್ಕು ಮೈಲಿ ಆಚೆ ಧ್ವನಿ ಕೇಳಿಸುತ್ತಿತ್ತು. ಮಾತಿಗಿಂತ ನಗುತ್ತಿದ್ದುದೇ ಹೆಚ್ಚು. ಯಾವಾಗಲೂ ಬಾಯಿ ತುಂಬ ಎಲೆ ಅಡಿಕೆ. ಮಾತು ಅಸ್ಪಷ್ಟವಾಗಿರುತ್ತಿತ್ತು.

ಈ ಮುಕ್ಕಣ್ಣಪ್ಪನನ್ನು ನಾನು ಮೊದಲು ನೋಡಿದ್ದು ನಮ್ಮೂರಿನ ಬೆಟ್ಟದ ಮೇಲಿನ ಮಠದ ಪಕ್ಕದ ಹಜಾರದಲ್ಲಿ. ಒಂದೆರಡು ಬಾರಿ ಅವನನ್ನು ಅಲ್ಲಿ ನೋಡಿ ಅವನ ಬಗ್ಗೆ ನನಗೆ ಕುತೂಹಲ ಕೆರಳಿತ್ತು. ಒಂದು ಸಂಜೆ ನನ್ನ ಸ್ನೇಹಿತನ ಜೊತೆಗೆ ಹೋಗಿ ಅವನ ಹತ್ತಿರ ನಿಂತೆ. ನಮ್ಮನ್ನು ನೋಡಿಯೂ ನೋಡದಂತೆ ಹಾಗೆ ನಟಿಸಿದ. ಆ ಮೇಲೆನಮ್ಮ ಕಡೆ ತಿರುಗಿ ಕಾರಣವಿಲ್ಲದೆ ನಕ್ಕ. ನಾನೂ ನಕ್ಕೆ. "ಹುಚ್ಚಾ ಅಂತ ತಿಳ್ಕೊಂಡ್ರ?" ಅಂದ. "ಹಂಗೆ ತಿಳ್ಕೊಂಡಿದ್ರೆ ನಿಮ್ಮ ಛತ್ರಕ್ಕೆ ನಾವ್ಯಾಕೆ ಬರ್ತಿದ್ವಿ?" ಅಂದೆ. "ಯಾವಪೈಕಿ ನೀವು?" ಅಂತ ಕೇಳಿದ. "ಇಲ್ಲೇ ಹೊಂಡದ ಪಕ್ಕದ ಮನೆ ಚನ್ನಕೇಶವಯ್ಯನವರ ಮೊಮ್ಮಗ," ಅಂದೆ. ಕಣ್ಣರಳಿಸಿ, "ಯಾರು ಛತ್ರ ಕಟ್ಟಿಸಿದ್ದಾರಲ್ಲ ಅವರಾ? ಅವರ ಹತ್ರ ಹೋಗಿ ಛತ್ರದಲ್ಲಿ ಸ್ವಲ್ಪ ಜಾಗ ಕೊಡಿ ಅಂತ ಕೇಳಿದ್ರೆ, ನಿಮ್ಮಂಥವರಿಗೆಲ್ಲ ಕೊಡಲ್ಲ ಅಂ-



ದ್ಬುಟ್ರು..ನಾವೇನು ಪೋಲಿಗಳಾ ಅಥವಾ ಕಳ್ಳರಾ? ...ನಮ್ಮೂರಾಗೆ ಅಸ್ತಿ-ಪಾಸ್ತಿ ಎಲ್ಲ ಬಿಟ್ಟು ಬಂದ್ಬಿಟ್ಟಿದೀನಿ. ನನ್ಗೇನೂ ತಿನ್ನಾಕಿಲ್ಲ ಅಂತಲ್ಲ. ಏನೋ ನನ್ನ ಗುರು ಹೇಳ್ಕೊಟ್ಟ ವಿದ್ಯೇನ ನಾಲ್ಕಡೆ ತೋರಿಸ್ಬೇಕು ಅಂತ ಮನೆ ಬಿಟ್ಟು ಬಂದಿದೀನಿ," ಅಂದ. "ಏನ್ ವಿದ್ಯೆ ನಿಮ್ದು?" ಅಂದೆ. "ಮಂತ್ರ ಹಾಕೋದು, ಅಂಜನ ಕಾಣಿಸೋದು...ಇವೆಲ್ಲವರಿಂದ ಏನ್ ಬೇಕಾದ್ರೂ ಮಾಡ್ತೀನಿ...ಮೊನ್ನೆ ಮಾಡನಹಳ್ಳಿ ಪಕ್ಕದ ಕೆರೆ ನೀರನ್ನ ನಮ್ಮ ಹಳ್ಳಿ ಕೆರೆಗೆ ಟ್ರಾನ್ಸ್‌ಫರ್ ಮಾಡಿ ಬತ್ತೋಗಿದ್ದ ಕೆರೆ ಭರ್ತಿಮಾಡಿದೆ...ಗೊತ್ತ? ಆದ್ರೆ ಇಂಥಾ ಕೆಲ್ಸಾನ ದುಡ್ಡಿಗೆ ಮಾಡಲ್ಲ ನಾನು," ಅಂದ. "ಇಷ್ಟೆಲ್ಲ ಶಕ್ತಿ ಇರೋರು ಅದ್ಯಾಕೆ ಬೆಟ್ಟ ಹತ್ತಿ ಬಂದ್ಬಿಟ್ಟಿರಲ್ಲ," ಅಂತ ಕೇಳಿದ್ದಕ್ಕೆ, "ಸಾಧನೆ ಮಾಡ್ಬೇಕು. ಊರಾಗಿದ್ರೆ ಆಗಲ್ಲ...ರಾತ್ರಿ ಹೊತ್ತು ದೇವತೆಗಳನ್ನು ಕರಸಿ ಡ್ಯಾನ್ಸ್ ಮಾಡಿಸ್ತೀನಿ"

ಎಚ್. ಜಿ. ಸೋಮಶೇಖರರಾವ್

ಅಂದ. ನಮ್ಮ ಕುತೂಹಲ ಹೆಚ್ಚಾಗಿ, "ನಿಮ್ಮ ಹೆಸರೇನು?" ಅಂತ ಕೇಳಿದೆ. ಅದಕ್ಕೆ ಅವನು, "ನನ್ನ ಹೆಸರು ಮಂತ್ರವಾದಿ ಮುಕ್ಕಣ್ಣಪ್ಪ" ಅಂದ. ನಾನು—"ಸ್ವಾಮಿ, ಮುಕ್ಕಣ್ಣಪ್ಪನವರೇ ನಮ್ಗೆ, ದೇವತೆಗಳ ಡ್ಯಾನ್ಸ್ ತೋರಿಸ್ತೀರಾ? ಅದು ರಾತ್ರಿ ಯಾವಾಗ ಶುರು ಅಂತ ಹೇಳಿದ್ರೆ ಹಾಜರಾಗ್ಬಿಡ್ತೀವಿ" ಅಂದೆ. "ಹಾಗೆಲ್ಲ ಬರಕ್ಕಾಗಲ್ಲ. ಅದಕ್ಕೆ ವಿಧಿಗಳು ಇವೆ. ಸಾಧನೆ ಮಾಡ್ದೆ ದೇವತೆಗಳ ಡ್ಯಾನ್ಸ್ ನೋಡಿದ್ರೆ ಎಚ್ಚರತಪ್ಪಿ ಸಾಯಲೂಬಹುದು... ಬೇಡಾ ಅಂದ್ರು ಬಿಡ್ದೆ ಕೇಳದೆ ಬಂದು ಡ್ಯಾನ್ಸ್ ನೋಡ್ತಾ ಉರಿ, ಉರಿ ಅಂತ ಕೂಗಿ, ಅವನ ಕಣ್ಣು ಇಂಗಿ ಹೋಗಿಬಿಡ್ತು. ಕೂತಕಡೆ ಹೊರಳೀಹೊರಳೀ ಸತ್ತೋ

ಹೋದ..." ಅಂದದ್ದಕ್ಕೆ ನಾನು: "ಬೇಡ, ಬೇಡ... ನಮಗೆ ಬ್ಯಾಡ ಬಿಡಿ...ಸುಮ್ಮನೆ ಕೇಳ್ದೆ...ಸುಲಭ ವಾಗಿ ಸಾಧ್ಯವಿದ್ರೆ ನೋಡಿಬಿಡೋಣ ಅಂತ." ಅಂದೆ. ಅದಕ್ಕೆ ಅವನು "ಎಲ್ಲಾ ಸುಲಭಕ್ಕೆ ನೋಡ್ಬೇಕು ಅಂದ್ರೆ ಹ್ಯಾಗೆ...ಅಲ್ಲೀ ಸಿನೀಮಾದಲ್ಲಿ ಕ್ಯಾಬರೆ ಡ್ಯಾನ್ಸ್ ನೋಡೂದಕ್ಕೂ ೪-೫ ರೂಪಾಯಿ ಕೊಡ್ಬೇಕು... ಅಂತಾದ್ರಲ್ಲಿ ಸಾಕ್ಷಾತ್ ದೇವತೆಗಳ ಡ್ಯಾನ್ಸ್ ಅಂದ್ರೆ ಸುಮ್ಮನೇನ?" "ಹಾಗಾದ್ರೆ ಟಿಕೆಟ್ ಇದ್ರೆ ಹೇಳಿ ತಗೋತೀನಿ..." ಅಂದೆ. ಅವನು ಜೋರಾಗಿ ನಕ್ಕ. "ಥತ್...ಟಿಕೆಟ್‌ಗೆಲ್ಲಾದ್ರೂ ದೇವತೆಗಳು ಡ್ಯಾನ್ಸ್ ಮಾಡ್ತಾರೇನ್ರಿ... ಅದೇನು ಕೆಟ್ಟ ಸಿನೀಮಾನ...ಮಂತ್ರಶಕ್ತಿ ಆವಾಹನೆ ಮಾಡಿ ಹವಾ ಹಿಡಿದು ನಿಲ್ಲಿಸಿ, ಆಕಾಶದಿಂದ ದೇವತೆಗಳನ್ನೆಲ್ಲಾ ಇಳಿಸಿಬಿಡ್ತೀನಿ... ಗೊತ್ತಾಯ್ತ?... ಒಂದೊಂದು ಸಾರೀನೂ ಬೇರೆ ಬೇರೆ ದೇವತೆಗಳು ಬರ್ತಾರೆ...ಕೆಲವು ಸಾರಿ ವಿದೇಶದ ದೇವತೆಗಳೂ ಬಂದು ಡ್ಯಾನ್ಸ್ ಮಾಡಿ ಹೋಗ್ತಾರೆ...ನಮ್ಮ ಗುರು ಹಿಮಾಲಯದಲ್ಲಿ ಇಪ್ಪತ್ಮೂರು ವರ್ಷ ನೀರಿನಲ್ಲಿ ನಿಂತು ಸುತ್ತ ಬೆಂಕಿ ಹಾಕ್ಕೊಂಡು ತಪಸ್ಸುಮಾಡಿ ಸಾಧಿಸಿದ ಈ ವಿದ್ಯೇನ ನನಗೆ ಧಾರೆ ಎರದ್ರು... ಎರಡನೆ ದಿನಾನೆ ಅವರು ಸತ್ತುಹೋದ್ರು..." ಮುಕ್ಕಣ್ಣಪ್ಪ ಸುತ್ತಲೂ ನೋಡಿ, "ಈ ಬೆಟ್ಟದಲ್ಲಿ ಎಂತೆಂಥ ಯುದ್ಧಗಳಾಗಿವೆ ಗೊತ್ತ?...ಈ ಕೋಟೆ ಕೊತ್ತಲು ಇದೆಯಲ್ಲ, ಇಲ್ಲಿ ಸಾವಿರಾರು ಮುತ್ತೈದೆಯರು ನೀರಿಗೆ ಹಾರಿಕೊಂಡು ಸತ್ತ ಜಾಗ ಇದು ...ಇಲ್ಲಿ ವಜ್ರ ವೈಢೂರ್ಯ ಹೂತುಕೊಂಡಿದೆ. ಅಮಾವಾಸ್ಯೆ ರಾತ್ರಿ ಬಂದ್ರೆ ನೆಲದಿಂದ ದೀಪಹೊರಟಂಗೆ ಬೆಳಕು ಬರುತ್ತೆ...ಗೆಜ್ಜೆ ಸದ್ದು, ಬಳೆಗಳ ಸದ್ದು, ನಗೋದು-ಅಳೋದು ಎಲ್ಲ ಕೇಳುತ್ತೆ...ಮಂತ್ರದಿಂದ ಅವರನ್ನೆಲ್ಲ ಬಂಧಿಸಿ ಅವರಿಂದಲೇ ಆ ಐಶ್ವರ್ಯವನ್ನೆಲ್ಲ ಗಂಟುಮೂಟೆ ಕಟ್ಟಿಸಿ ತರಿಸಬಲ್ಲೆ... ಅಂಥಾ ಶಕ್ತಿ ಇದೆ...ಆದ್ರೆ ನನಗೋಸ್ಕರ ಅದನ್ನೆಲ್ಲ ಮಾಡಬಾರದು...ವಿದ್ಯೆ ನಾಶವಾಗುತ್ತೆ," ಅಂದ. ನನ್ನ ಸ್ನೇಹಿತ, "ನಮಗಾದ್ರೆ ಮಾಡ್ತೀರ?" ಅಂತ ಕೇಳಿಬಿಟ್ಟ. ಉತ್ತರವಾಗಿ ಮುಕ್ಕಣ್ಣಪ್ಪ ಗಟ್ಟಿಯಾಗಿ ನಕ್ಕ. ಇಡಿಯ ಬೆಟ್ಟವೇ ನಡುಗಿದ ಹಾಗೆ ಆ ನಗು ಪ್ರತಿಧ್ವನಿಸಿತು.

ಆತ ಎದ್ದು ನಿಂತ, ಎರಡು ಹೆಜ್ಜೆ ಮುಂದೆ ನಡೆದ. ಆಗ ತಿಳೀತು ಅವನಿಗೆ ಒಂದು ಕಾಲು ಕುಂಟು ಅಂತ. ಪೂರ್ವಕ್ಕೆ ಕೈ ಚಾಚಿ, ಆಕಾಶದ ಕಡೆ ಮುಖ ಎತ್ತಿ, ನಮಗೆ ಗೊತ್ತಿಲ್ಲದ ಭಾಷೆಯಲ್ಲಿ ಏನೋ ಗೊಣಗಿದ...ಮೇಲಕ್ಕೆ ಬೀಸಿದ ಕೈ ಕೆಳಕ್ಕೆ ಇಳಿದು, ಅದರಲ್ಲಿ ಒಂದು ನಿಂಬೆಹಣ್ಣು ಬಂತು. ನನ್ನ ಕೈಲಿ ಅದನ್ನಿಟ್ಟ. ಇದ್ದಕ್ಕಿದ್ದಂತೆ ತುಂಬ ಪರಿಚಯದವನಂತೆ, "ತಗೋ ಇದನ್ನ...ಸರ್ವಶಕ್ತಿ – ಸರ್ವಯುಕ್ತಿ ಮಂತ್ರವನ್ನು ಇದರೊಳಗೆ ಸೇರಿಸಿದ್ದೀನಿ... ಯಾರಿಗೂ ತೋರಿಸಬೇಡ, ಬೇರೆ ಯಾರೂ ಮುಟ್ಟಬಾರದು" ಅಂದು, ತನ್ನ ಮುಷ್ಟಿಯಿಂದ ನನ್ನ ತೋಳನ್ನು ಬಿಗಿಯಾಗಿ ಹಿಡಿದು ಎಳೆಯುತ್ತ, "ನಿನಗೆ ಬಂಗಾರದ ಯೋಗವಿದೆ...ಈ ನೆಲದಲ್ಲಿ ಇರೋ ಶಕ್ತಿಗಳು ನಿನ್ನಕಡೆ ಕೈ ತೋರಿಸ್ತಾ ಇವೆ... ಇಲ್ಲಿರೋ ಐಶ್ವರ್ಯ ಎಲ್ಲ ನಿನಗೇ ಸೇರುತ್ತೆ... ಯಾರಿಗೂ ಹೇಳಬೇಡ...ನಾನು ನಿನಗೆ ಮತ್ತೆ ಸಿಕ್ಕೋಲ್ಲ. ರಾತ್ರಿ ಅದೃಶ್ಯನಾಗಿ ಹೋಗಿಬಿಡ್ತೀನಿ. ಹೋಗು...ಮನೆಗೆ ಹೋಗಿ ನಿಂಬೆಹಣ್ಣನ್ನು ಹಿಂಡಿ ಅದರ ರಸ ಕುಡಿ...ಅದ್ರೆ ಜೋಕೆ...ಬೇರೆ ಯಾರೂ ಇದನ್ನು ಉಪಯೋಗಿಸಬಾರ್ದು...ಅದರ ಮೈ ನೀಲಿ ಬಣ್ಣಕ್ಕೆ ತಿರುಗಿ, ಮೂರು ಗಂಟೇಲಿ ಗೊಟಕ್ ಅಂದುಬಿಡ್ತಾರೆ..." "ಗೊತ್ತಾಯಿತು" ಅಂತ ಹೇಳಿ, ನಾನು ನನ್ನ ಸ್ನೇಹಿತ ಬೆಟ್ಟದಿಂದ ಸರಸರ ಇಳಿದು ನಮ್ಮ ನಮ್ಮ ಮನೆ ಸೇರಿದೆವು.

ನಾನು ಮನೆಗೆ ಬಂದಾಗ ನಮ್ಮ ಅಪ್ಪ ನಡುಮನೆ ಕಂಬಕ್ಕೆ ಒರಗಿ ಕೂತಿದ್ರು. ಅವರನ್ನು ಕಂಡರೆ ನನಗೆ ಬಹಳ ಭಯ. ಏನು ಕೇಳುತ್ತಾರೋ ಅಂತ ನಡುಗುತ್ತ ಒಳಕ್ಕೆ ಹೋಗಿ ಅವರ ಕಣ್ಣು ತಪ್ಪಿಸಿ ನನ್ನ ರೂಮು ಸೇರಿಕೊಂಡೆ. ನಮ್ಮಮನೇಲಿ ಎಲೆಕ್ಟ್ರಿಕ್ ದೀಪ ಇರಲಿಲ್ಲ .ಕತ್ತಲು ರೂಮಿನಲ್ಲಿ ಬಟ್ಟೆ ಬದಲಾಯಿಸಿ, ಅಪ್ಪನ ಎದುರಿಗೆ ತಿರುಗಿ ಹಾದು ಹೋಗಬೇಕಲ್ಲ ಅಂತ ಮಂತ್ರದ ನಿಂಬೆಹಣ್ಣನ್ನು ನನ್ನ ಪಂಚೆ ಮಡಿಕೆಯಲ್ಲಿ ಸೇರಿಸಿ ಬಚ್ಚಲಮನೆ ಕಡೆ ಹೊರಟೆ... ಭಯ, ಅವಸರ, ನಿಂಬೆಹಣ್ಣು ಹೀರುವ ಆತುರ- ಎಲ್ಲ ಸೇರಿ ಅಪ್ಪನ ಮುಂದೆ ಹೋಗುವಾಗ ನಿಂಬೆ ಹಣ್ಣು ಬಿದ್ದುಹೋಗಿದೆ...ಅದನ್ನು ನಾನು ಗಮನಿಸಲೇ ಇಲ್ಲ. ಬಚ್ಚಲ ಮನೆಗೆ ಹೋಗಿ ಕೈ ಕಾಲು

ತೊಳೆದು ನೋಡಿಕೊಂಡೆ. ನಿಂಬೆ ಹಣ್ಣು ಇಲ್ಲದೆ ಗಾಬರಿಯಿಂದ ಒಳಗೆ ಬಂದೆ. "ಎಲ್ಲೋ ಒಳ್ಳೆ ನಿಂಬೆ ಹಣ್ಣು ತಂದಿದ್ದಾನೆ ಕಣೆ...ನಿಂಬೆಹಣ್ಣಿನ ಪಾನಕ ನನಗಿಷ್ಟ ಅಂತ ಅವನಿಗೆ ಗೊತ್ತು... ತಗೋ, ಬೇಗ ಒಂದು ಲೋಟ ಪಾನಕ ಮಾಡಿ ಕೊಡು" ಅಂತ ನನ್ನ ಅಪ್ಪ ನಿಂಬೆಹಣ್ಣು ಕುಯ್ದು ಅಮ್ಮನಿಗೆ ಕೊಡ್ತಾ ಇದ್ದರು...ಕೂಗಿಕೊಳ್ಳೋಣ ಅಂದ್ರೆ ನಾಲಿಗೆ ಅಲ್ಲಾಡಲಿಲ್ಲ. ಎದೆ ಹೊಡೆದು ಕೊಳ್ಳುತ್ತಿತ್ತು. ಇನ್ನೇನು ಅನಾಹುತವೋ ಅಂತ ಬಾಯಿ ಒಣಗಿ, ಕೈಕಾಲು ನಡುಗಿ, ತಲೆ ತಿರುಗಿತು. ಅಷ್ಟರಲ್ಲಿ ಅಮ್ಮ ಅಪ್ಪನಿಗೆ ಲೋಟದಲ್ಲಿ ಪಾನಕ ಕೊಟ್ಟಳು. ಅಪ್ಪ ಆನಂದವಾಗಿ ಸೇವಿಸಿದರು. ಬಾಯಿ ಚಪ್ಪರಿಸಿ "ಸೊಗಸಾಗಿದೆ" ಅಂದರು. ಪಕ್ಕದ ಕೋಣೆಗೆ ಹೋಗಿ ಮಾಮೂಲಿನಂತೆ ಹಾಸಿಗೆಯ ಮೇಲೆ ಪವಡಿಸಿದರು.

ನಾನು ನನ್ನ ಕೋಣೆಯಲ್ಲಿ ತಲೆ ಮೇಲೆ ಕೈ ಹೊತ್ತು ಕೂತೆ. ಸ್ವಲ್ಪ ಹೊತ್ತಾದ ಮೇಲೆ ಅಪ್ಪನ ರೂಮಿಗೆ ಇಣುಕಿದೆ. ಅಪ್ಪ ಜೋರಾಗಿ ಗೊರಕೆ ಹೊಡೆಯುತ್ತಿದ್ದರು. ಪರವಾಗಿಲ್ಲ—ಪ್ರಾಣ ಇದೆ ಎಂದು ಸಮಾಧಾನದ ಉಸಿರು ಬಿಟ್ಟೆ. ವಾಪಸ್ಸು ಬಂದು ಹಾಸಿಗೆಯ ಮೇಲೆ ಮೈ ಚೆಲ್ಲಿದೆ. ನಿದ್ದೆ ಬರಲಿಲ್ಲ. ಕಸಿವಿಸಿ, ಸಂಕಟ, ತಲೆಭಾರ ಎಲ್ಲ ಶುರುವಾಯಿತು. ನಮ್ಮಪ್ಪನಿಗೆ ಆಗೋದು ನನ—ಗಾತ್ತಾ ಇದೆಯಲ್ಲ ಅಂತ ಎದೆ ಮುಟ್ಟಿ ನೋಡಿಕೊಂಡೆ. ನಗಾರಿಯ ಹಾಗೆ ಹೊಡ್ಕೋತಾ ಇತ್ತು. ಹಾಗೂ ಹೀಗೂ ಮಧ್ಯರಾತ್ರಿಯ ತನಕ ಹೊರ—ಳಾಡ್ತಾ ಇದ್ದೆ. ಮಂತ್ರವಾದಿ ಮುಕ್ಕಣ್ಣಪ್ಪನ ಮುಖ ಕಣ್ಣೆದುರಿಗೆ ಬಂತು. ಗಾಬರಿಯಾಗಿ ಕಣ್ಣುಜ್ಜಿಕೊಂಡೆ. ಎದ್ದು ಕುಳಿತೆ. ಮೆಲ್ಲಗೆ ಕತ್ತಲಲ್ಲಿ ಸವರಿಕೊಂಡು ನಮ್ಮಪ್ಪನ ರೂಮಿಗೆ ಹೋದೆ. ಗೊರಕೆ ಸದ್ದು ನಿಂತಿತ್ತು. ಉಸಿರಾಡ್ತಾ ಇದ್ದಾರೋ ಇಲ್ಲವೋ ನೋಡಬೇಕೆಂದು ಮೆಲ್ಲಗೆ ಅವರ ಹತ್ತಿರ ಹೋಗಿ ಎದೆ ಮೇಲೆ ಕೈಯಿಟ್ಟೆ...ನಮ್ಮಪ್ಪ ಎರಡೂ ಕಾಲನ್ನು ಒಮ್ಮೆಲೆ ಮೇಲಕ್ಕೆತ್ತಿ ಒಂದೇ ಸಾರಿಗೆ ಛಂಗನೆ ಹಾರಿ ಹಾಸಿಗೆಯ ಮೇಲೆ ಎಗರುತ್ತಾ, "ಪೆಗ್ಗಣ...ಪೆಗ್ಗಣಾ..." ಅಂತ ಕಿರುಚಿದರು. ನಾನು ಎದ್ದು—ಬಿದ್ದು ಕತ್ತಲಲ್ಲಿ ನನ್ನ ರೂಮಿಗೆ ಓಡಿ ಬಂದೆ. ಮುಸುಕು ಹಾಕಿ ಮಲಗಿದೆ. ನಮ್ಮಪ್ಪ ಹೆಣವಾಗಿ ಏನಾದರೂ ಎದ್ದು ಬಿಟ್ಟಿರಬೇಕು ಅಂತ ಹೆದರಿದೆ. ಅಷ್ಟರಲ್ಲಿ ಅಪ್ಪ—ಅಮ್ಮ ಲಾಂದ್ರದ ದೀಪ ಹಿಡಿದು ಓಡಾಡ್ತಾ ಇದ್ದದ್ದು ನೋಡಿ ಅಪ್ಪ ಇನ್ನೂ ಸತ್ತಿಲ್ಲ ಅಂತ ಸಮಾಧಾನಪಟ್ಟುಕೊಂಡೆ. ಪುನಃ ಒಂದೆರಡು ಗಂಟೆ ನಿದ್ರೆಯಿಲ್ಲದೆ ಕಳೆದೆ. ತಣ್ಣಗೆ ತಂಗಾಳಿ ಬೀಸೋದಕ್ಕೆ ಪ್ರಾರಂಭವಾಯ್ತು. ಬೆಳಗಿನ ಜಾವ. ಕೊನೇ ಸಾರಿ ಅಪ್ಪನನ್ನು ನೋಡಿ ಬರೋಣವೆಂದು ಎದ್ದು ಹೋದೆ...ನಮಪ್ಪ ತಂಬಿಗೆ ಹಿಡಿದು ಹಿತ್ತಲ ಕಡೆ ಹೋಗ್ತಾ ಇದ್ದರು.

ಈ ನಿಂಬೆಹಣ್ಣು ನಮ್ಮಪ್ಪನ ಮೇಲೆ ಕೆಲಸ ಮಾಡಿಲ್ಲ ಅಂತ ಒಂದು ಕಡೆ ಸಂತೋಷ: ಇನ್ನೊಂದು ಕಡೆ ನನಗೆ ಸಿಗುವ ಐಶ್ವರ್ಯ ಹೀಗೆ ಕೈ ಬಿಟ್ಟಿತಲ್ಲ ಎಂದು ಸಂಕಟ. ಮಂತ್ರವಾದಿಗೆ ನಾನು ದುಡ್ಡು—ಕಾಸು ಕೊಟ್ಟಿರಲಿಲ್ಲ. ಹೋಗಿ ಪುನಃ ನೋಡೋಣವೆಂದರೆ, "ನಾನು ಇರೋಲ್ಲ, ಅದೃಶ್ಯನಾಗಿ ಹೋಗಿಬಿಡ್ತೀನಿ" ಅಂತ ಹೇಳಿದ್ದ. ಹೇಗಾದರೂ ಆಗಲಿ ಅಂತ ನನ್ನ ಸ್ನೇಹಿತನ ಜೊತೆ ಕೋಟೆ ಹತ್ತಿ ಕೊಡು ಹಾದು, ಹೊಂಡ ಬಳಸಿ, ಬಂಡೆ ಇಳಿದು ಮಠದ ಹತ್ತಿರ ಹೋದೆ. ಮಧ್ಯಾಹ್ನ. ರಣರಣ ಬಿಸಿಲು; ಮುಕ್ಕಣ್ಣಪ್ಪ ಅಲ್ಲೇ ಕೂತಿದ್ದು ಕಾಣಿಸಿತು...ಹತ್ತಿರ ಹೋದಾಗ ಏನೂ ಆಗದವನ ಹಾಗೆ ಬಾಳೆಹಣ್ಣು ತಿನ್ನುತ್ತ ಕುಳಿತಿದ್ದ: "ಬನ್ನಿ ...ಏನ್ ಸಮಾಚಾರ...ರಾತ್ರಿ ವಿಶೇಷ ಪೂಜೆ ಇಟ್ಕೊಂಡಿದ್ದೆ. ಅದ್ಕೆ ಊರಲ್ಲೆ ಉಳ್ಕಂಡೆ" ಅಂದ. ನನ್ನ ಸ್ನೇಹಿತ ತಕ್ಷಣವೇ, "ಅಲ್ರೀ, ಮುಕ್ಕಣ್ಣಪ್ಪ ನೀವು ಕೊಟ್ಟಿದ್ದ ನಿಂಬೆಹಣ್ಣು ಇವರ ಅಪ್ಪ ತಿಂದ್ಬಿಟ್ರು...ಏನ್ ಹೇಳ್ಬೇಕು ಅದ್ರ ಫಜೀತಿ..."ಅಂತ ಮಾತು ಮುಗಿಸೋದ್ರಲ್ಲಿ ಮುಕಣ್ಣಪ್ಪ "ಅಲ್ರೀ, ...ನಾನು ಹೇಳಿದ್ದೆ, ಜೋಕೆ ಅಂತ...ಇರಲಿ ಏ-ನಾಯ್ತು ಹೇಳಿ...ಆಮೇಲೆ ನಾನು ಹೇಳ್ತೀನಿ..." ಅಂದ. ನಾನು, "ನೀವು ಹೇಳಿದ ಹಾಗೆ ಎಲ್ಲಿ ನಮ್ಮಪ್ಪ ಸತ್ತು ಹೋಗ್ತಾರೋ ಅಂತ ತುಂಬ ಹೆದರಿದ್ದೆ...ಸಧ್ಯ ಏನೂ ಆಗ್ಲಿಲ್ಲ...ದೇವರ ದಯ" ಅಂದೆ. ಅದಕ್ಕೆ ಮುಕ್ಕಣ್ಣಪ್ಪ..."ಲೋ ಮಗಾ... ದೇವರು ಎಲ್ಲಿ ಬರ್ತಾನೋ ನನ್ನ ಮಂತ್ರದ ಮುಂದೆ...ನನಗೆ ಗೊತ್ತಿಲ್ಲ ಅನ್ಕೊಂಡ್ರ ಏನಾಯ್ತು

ಅಂತ...ನನ್ನ ಮಂತ್ರ ಅಂದ್ರೆ ಕೆಲಸ ಮಾಡ್ಲೇ ಬೇಕು...ರಾತ್ರಿ ಪೂಜೆಲಿದ್ದಾಗ 'ಧಂ' ಅಂತ ಯಾರೋ ಹೊಡೆದ ಹಾಗಾಯಿತು....ಮಂತ್ರ ದೃಷ್ಟೀಲಿ ನೋಡ್ದೆ...ನಿಂಬೆಹಣ್ಣು ನಿನ್ನ ಕೈಯಿಂದ ಬಿಟ್ಟು ಹೋಗಿತ್ತು. ಬೇರೆ ಯಾರು ಮುಟ್ಟಿದರೂ ತಿಂದರೂ ತಲೆ ಸಹಸ್ರ ಹೋಳಾಗುತ್ತೆ ಅಂತ ಕೂಡ್ಲೆ ಆ ಮಂತ್ರದ ನಿಂಬೆ ಹಣ್ಣನ್ನು ಮತ್ತೊಂದು ಮಂತ್ರ ಹಾಕಿ ವಾಪಸ್ಸು ತರಿಸಿಬಿಟ್ಟೆ ... ಗೊತ್ತಾಯ್ತು ... ನಿಮ್ಮ ಅಪ್ಪ ತಿಂದವ್ರು ಬೇರೆ ನಿಂಬೆಹಣ್ಣು...ನನ್ನ ಮಂತ್ರದ ನಿಂಬೆಹಣ್ಣು ಇಲ್ಲೆ ಇದೆ ನೋಡು..." ಅಂದು ಜೇಬಿನಿಂದ ಒಂದು ನಿಂಬೆಹಣ್ಣು ತೆಗೆದು, ಅದನ್ನು ಕೈಯಲ್ಲಿ ಜಜ್ಜಿ ಎದುರಿಗಿದ್ದ ಒಂದು ಹಳೇ ಚೊಬಿನಲ್ಲಿ ಹಿಂಡಿಬಿಟ್ಟ. ಅದರಲ್ಲಿದ್ದದ್ದನ್ನು ಎದುರಿಗೆ ಚೆಲ್ಲಿದ. ಕೆಂಪನೆ ನೀರು ಕೆಳಕ್ಕೆ ಬಿತ್ತು. "ನೋಡೋ ಗ್ರಹಚಾರದ ಕೆಂಪು ಹ್ಯಾಗಿದೆ...ಎಲ್ಲ ಬಗೆಹರೀತು ಬಿಡು..." ಅಂದ. "ಮುಂದೇನು?" ಅಂತ ಕೇಳಿದೆ. ನನ್ನ ಕಡೆ ಒಂದು ಸಾರಿ ಕ್ರೂರವಾಗಿ ನೋಡಿದ. "ಮಗೂ ಅದೃಷ್ಟ ಸ್ಥಾನಪಲ್ಲಟವಾಗಿದೆ... ನಿನ್ನದು ದರಿದ್ರಯೋಗ...ಲಕ್ಷ್ಮಿ ಮನೆ ಬಾಗಿಲು ತಟ್ಟಿದರೂ ಕದ ತೆರೀದೇ ಹೋಗು ಅಂದು ಬಿಟ್ಟೆ." ಅಂದು ಕಣ್ಣು ಮುಚ್ಚಿ, ಕೈ ಹಿಚುಕಿಕೊಂಡು, ತಲೆಯ ಮೇಲಿನ ಕೂದಲಲ್ಲಿ ಕೈಯಾಡಿಸುತ್ತ ನನ್ನ ಸ್ನೇಹಿತನಕಡೆ ತಿರುಗಿದ ಮುತ್ಕಣ್ಣಪ್ಪ, "ಈಗ ಅದೃಷ್ಟ ನಿನ್ನ ಕಡೆ ತಿರುಗಿದೆ. ಇವತ್ತು ರಾತ್ರಿ ಅಂಜನ ಹಾಕಿ ಬಂಗಾರ ಎಲ್ಲಿದೆ ಹುಡುಕಿ ನಿನಗೇ ಸಿಗುವ ಹಾಗೆ ಮಾಡ್ತೀನಿ...ತಯಾರಿದ್ದೀಯ?" ಅಂತ ಕೇಳಿದ...



"ಒಳ್ಳೇ ಹಲ್ಕ ಕಾದಂಬರಿ ಕಣಯ್ಯ... ನಾಲ್ಕು ಸಾರೆ ಓದಿ ಮುಗಿಸೋದ್ರೊಳಗೆ ವಾಕರಿಗೆ ಬಂದ್ಬಿಡತ್ತೆ."

ಈ ನನ್ನ ಸ್ನೇಹಿತನ ಹೆಸರು ರಾಮಣ್ಣ ಅಂತ. ಅವನ ಅಡ್ಡಹೆಸರು 'ಕೊಡಲಿ ರಾಮಣ್ಣ' ಅಂತ. ಅವನ ಪೂರ್ವಿಕರು ನಮ್ಮ ಊರಿನ ಕೋಟೆ ಕೊತ್ತಲಗಳಲ್ಲಿ ವಾಸವಾಗಿದ್ದು, ಸಣ್ಣ ರಾಜನ ಹಾಗೆ ಜೀವನ ಮಾಡುತ್ತಿದ್ದರಂತೆ...ಅವರಲ್ಲಿ ಒಬ್ಬ ಕೊಡಲಿ ತಿರುಗಿಸಿ ಶತ್ರುಗಳನ್ನು ಧ್ವಂಸಮಾಡುವುದರಲ್ಲಿ ಗಟ್ಟಿಗನಂತೆ. ಅವನು ಕೊಡಲಿ ಹಿಡಿದು ಹೊರಟರೆ ಸುತ್ತ ಹತ್ತು ಊರಿನ ಪಾಳೆಗಾರರು ನಡುಗುತ್ತಿದ್ದರಂತೆ. "ಅವರಿವರ ದಾಳಿಗೆ ಸಿಕ್ಕ ನಾವು ರಾಜ್ಯ ಕಳಕೊಂಡೆವು" ಅಂತ ಹೇಳ್ತಾ ಇರ್ತಾನೆ ಈ ರಾಮಣ್ಣ. ಅವನಿಗೆ ಒಂದು ದೊಡ್ಡ ಭ್ರಮೆ ಇತ್ತು. ಎಂದಾದರೂ ಒಂದು ದಿನ ತನ್ನ ರಾಜ್ಯ ತನಗೆ ಸಿಕ್ಕು ತಾನು ರಾಜನ ಹಾಗೆ ಮೆರೀಬಹುದು ಅಂತ. ವಯಸ್ಸು ಮೂವತ್ತು ದಾಟಿದ್ರೂ ಮದುವೆಯಾಗದೆ, ರಾಜ್ಯಪ್ರಾಪ್ತಿಯಾದ ಮೇಲೆ ಲಗ್ನಆಗಬೇಕು ಅಂತ ಕಾಯುತ್ತಿದ್ದ. ಅವನನ್ನು ನೋಡಿದಾಗ ಅವನಿಗೂ ಕೊಡಲಿಗೂ ಏನೂ ಸಂಬಂಧವಿದ್ದ ಹಾಗೆ ಕಾಣ್ತಾ ಇರಲಿಲ್ಲ. ಗಾಳಿಗೆ ಹಾರಿಹೋಗುವ ಹಾಗೆ ಮೂಳೆ ಚಕ್ಕಳ ಇಟ್ಟುಕೊಂಡಿರುವ ಈ ವ್ಯಕ್ತಿ ಕೊಡಲಿ ಹಿಡಿಯುವುದು ಸಾಧ್ಯವಿರಲಿಲ್ಲ. ಆದರೂ ಆಸೆಗಳ ಒತ್ತಡಕ್ಕೆ ಸಿಕ್ಕು, ರಾಜನಾಗುವ ಕನಸು ಕಾಣುತ್ತ ಎದೆ ಉಬ್ಬಿಸಿ ಓಡಾಡುತ್ತಿದ್ದ. ತಲೆಯ ಕೂದಲು ಉದುರುತ್ತ ಹಣೆ ವಿಶಾಲವಾಗಿತ್ತು. ಅದರ ಮೇಲೆ ಯಾವ ಹೊತ್ತಿನಲ್ಲಿ ನೋಡಿದರೂ ದೊಡ್ಡ ಕುಂಕುಮ. ಅದಕ್ಕೆ ಮತ್ತೊಂದು ಹೊಂದಿಕೊಳ್ಳದಂತಹ ಉಡುಪು. ಕೈಯಲ್ಲಿ ಕತ್ತಿಯೋ ಹಾವಿಯುಕ್ತ ಒಂದು ಬೆತ್ತ. ಅವನಿಗೆ ನಮ್ಮ ಊರಿನ ಸಣ್ಣ ಓಣಿಯಲ್ಲಿ

ಒಂದು ಪುಟ್ಟ ಮನೆಯಿತ್ತು. ಜೊತೆಗೆ ಊರಿನ ಹತ್ತಿರ ಹದಿನೇಟು ಎಕರೆ ಜಮೀನು ಇತ್ತು. ಮನೆಯಲ್ಲಿ ಒಂದು ಹಳೆಯ ಕಾಲದ ಕೊಡಲಿ ನೇತುಹಾಕಿರುತ್ತಿತ್ತು. ಅದನ್ನು ಯಾರು ಬಂದರೂ ದೂರದಿಂದಲೇ ತೋರಿಸುತ್ತ ತನ್ನ ಪೂರ್ವಿಕರ ಧೈರ್ಯ, ಶೌರ್ಯ, ಸಾಹಸಗಳ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ.

ರಾಜನಾಗಬೇಕೆಂಬ ಆಸೆಯಿದ್ದ ಈ ಕನಸುಗಾರ ರಾಮಣ್ಣನಿಗೆ ಮುಕ್ಕಣ್ಣನ ಮಾತು ಆಸರೆಯಾಗಿ ಸಿಕ್ಕಿತು. ಖುಷಿಯಾಗಿ ಎದೆಯುಬ್ಬಿ "ಏನ್ ಬೇಕಾದ್ರು ಮಾಡಕ್ಕೆ ತಯಾರಿದ್ದೀನಿ ಗುರುಗಳೇ– ಹೇಳಿ, ನೀವು ಹೇಳಿದ ಹಾಗೆ ಕೇಳ್ತೀನಿ" ಅಂದ. ಮುಕ್ಕಣ್ಣಪ್ಪ "ಎಲ್ಲಿ ತಿರುಗು. ನಿನ್ನ ಬೆನ್ನು ನೋಡ್ತೀನಿ" ಅಂದು ರಾಮಣ್ಣನ ಅಂಗಿ ಎತ್ತಿ ಬೆನ್ನು ಸವರಿ–"ಹಾ, ನಂಗೊತ್ತಿಲ್ಲವ...ಇಲ್ಲಿದೆಯಲ್ಲ ನೋಡು ಇದೇ ವಿಷ್ಣುಚಕ್ರ. ಲಕ್ಷ್ಮಿ ವಿಷ್ಣು ಹೆಂಡ್ತಿ...ಚಕ್ರ ಉರುಳ್ತಾ ಇದೇ ನಿನ್ಹತ್ರ ಬಂದ ತಕ್ಷಣ ಕೆಲ್ಸ ಆದ್ಹಾಗೇನೆ... ಇಂಥ ಕೆಲಸ ಸುಲಭಕ್ಕೆ ಆಗಲ್ಲಯ್ಯ...ಇದಕ್ಕೆ ಕೆಲವು ಪೂಜಾ ವಿಧಿಗಳು ಇವೆ...ಅದಕ್ಕೆ ಮುಂಚೆ ನಿನ್ನ ಬೆನ್ನಿನ ಚಕ್ರ ಯಾವ ಕಡೆ ಉರುಳ್ತಾ ಇದೆ ತಿಳ್ಕೋಬೇಕು. ನಾಡಿದ್ದು ಶುಕ್ರವಾರ...ಸಂಜೆ ಏಳು ಗಂಟೆಗೆ ಬೆಟ್ಟಕ್ಕೆ ಬಾ...ಒಬ್ಬನೇ ಬರಬೇಕು. ಹೆದರಬಾರ್ದು... ಹೆದರಿದರೆ ದುಷ್ಟ ಶಕ್ತಿಗಳು ನಿನ್ನನ್ನು ಇನ್ನಷ್ಟು ಹೆದರಿಸುತ್ತವೆ......ನೀನು ವೀರ...ಕಿರೀಟ ಧರಿಸಿ, ವಜ್ರಕವಚ ತೊಟ್ಟು, ಕತ್ತಿಹಿಡಿದು ತೊಡೆ ತಟ್ಟಿ ನಿಂತಿರೋ ವೀರ-ಅಂತ ಭಾವಿಸಿಕೊ... ಹೋಗು" ಅಂದು ಉತ್ತರಕ್ಕೂ ಕಾಯದೆ ಕುಂಟುತ್ತ ಹೊರಟುಬಿಟ್ಟ. ನನ್ನ ಸ್ನೇಹಿತನ ಕಡೆ ನೋಡಿದೆ. ಎಡಗೈ ತನ್ನ ಬೆನ್ನಮೇಲೆ ಆಡಿಸಲು ಪ್ರಯತ್ನಿಸುತ್ತ ಚಕ್ರವನ್ನು ಹಿಡಿಯಲು ಕಾತುರನಾಗುತ್ತಿದ್ದ. ಬಹುಶಃ ಅವನ ಬೆನ್ನಿನ ಚಕ್ರ ಸ್ವರ್ಗ ಮರ್ತ್ಯ ಪಾತಾಳಗಳನ್ನೆಲ್ಲ ಸುತ್ತಿಕೊಂಡು ಬರಲು ಹೋಗಿತ್ತು ಅಂತ ಕಾಣುತ್ತೆ... ಸಕಲೈಶ್ವರ್ಯಭರಿತನಾದ ಜಗದೈಕ ವೀರನಂತೆ ಹೆಜ್ಜೆ ಹಾಕುತ್ತ ನನ್ನ ಜೊತೆ ಮಾತೂ ಆಡದೆ ಬೆಟ್ಟ ಇಳಿದು ತನ್ನ ಮನೆಗೆ ಹೊರಟುಬಿಟ್ಟ. ನನಗೆ ತುಂಬ ಸಂಕಟವಾಯಿತು. ಅಪ್ರಾರ್ಥಿತವಾಗಿ ಬರುವ ಐಶ್ವರ್ಯ ಕೈ ತಪ್ಪಿಹೋಯಿತಲ್ಲ ಅಂತ. ಅಷ್ಟೊಂದು ಅತುಲೈಶ್ವರ್ಯ ಲಭಿಸಿದಾಗ ನನ್ನ ಸ್ನೇಹಿತ ನನಗೆ ಏನಾದ್ರೂ ಕೊಟ್ಟೇ ಕೊಡುತ್ತಾನೆ ಅನ್ನುವ ಆಸೆಯಲ್ಲಿ ಹಾಸಿಗೆಯ ಮೇಲೆ ಬಿದ್ದು ಕನಸು ಕಾಣತೊಡಗಿದೆ.

ಎರಡು ದಿನಗಳ ಮೇಲೆ ನನ್ನ ಸ್ನೇಹಿತನ ಭೇಟಿಯಾಯಿತು. ಅವನು ಹಿಂದಿನ ರಾತ್ರಿ ಬೆಟ್ಟಕ್ಕೆ ಹೋಗಿದ್ದು, ಮುಕ್ಕಣ್ಣಪ್ಪನನ್ನು ಕಂಡು ಅಲ್ಲಿ ಏನಾಯಿತು ಅನ್ನುವುದನ್ನು ನನಗೆ ಹೇಳಿದ. ಅದು ಏನೆಂದರೆ: ಮುಕ್ಕಣ್ಣಪ್ಪ ಈ ಕೊಡಲಿ ರಾಮಣ್ಣನನ್ನು ಕೂಡಿಸಿ ಅವನ ತಲೆಯ ಮೇಲೆ ಅರಿಶಿನ ಕುಂಕುಮ ಸುರಿದು, ಕೈಯಲ್ಲಿ ಒಂದು ಕಲ್ಲು ಕೊಟ್ಟು, ಕಣ್ಣು ಮುಚ್ಚಿಸಿ ಬಿಟ್ಟಿಸಿಕೊಂಡು ಹೊರಡಿಸಿದನಂತೆ. "ನಿನಗೆ ಯಾಕಡೆ ಹೋಗ್ಬೇಕು ಅನ್ಸುತ್ತೋ ಆ ಕಡೆ ಹೋಗು... ಬೆನ್ನಿನ ಚಕ್ರ ಯಾವಕಡೆ ಕರಕೊಂಡು ಹೋಗುತ್ತೋ ನೋಡೋಣ..." ಅಂತ ಹೇಳಿದನಂತೆ. ರಾಮಣ್ಣ ಎಲ್ಲಿಯ ತನಕ ಆ ಬೆಟ್ಟದ ಕಲ್ಲು ಮುಳ್ಳುಗಳಲ್ಲಿ ಎಡವಿ ಬಿದ್ದು ನಡೆಯಲು ಸಾಧ್ಯವೋ ಅಲ್ಲಿ ತನಕ ಹೋಗಿ ಕೈಯಲ್ಲಿದ್ದ ಕಲ್ಲನ್ನು ಬಿಸಾಡಿದನಂತೆ. ಆಗ ಮುಕ್ಕಣ್ಣಪ್ಪ ಜೋರಾಗಿ ನಕ್ಕನಂತೆ...."ಹಾ. ಇಲ್ಲಿದೆ ನಿಧಿ...ಈ ಜಾಗದಲ್ಲೆ ಅರಮನೆ ಇರೋದು, ಸಾವಿರ ವರ್ಷಗಳಷ್ಟು ಹಳೇದು...ಅಲ್ಲಿ ನೋಡು ನಂದಾದೀಪ ಉರೀತಾನೆ ಇದೆ. ಅಲ್ಲಿರೋ ಕುರ್ಚಿ–ಟೇಬಲ್ಲುಗಳು. ಎಲ್ಲ ಅಪರಂಜೀದು... ಈ ಕಡೆ ನೋಡು ಬಂಗಾರದ ಟೇಬಲ್ಲುಗಳು ಎಲ್ಲ ಬಂಗಾರದ ಪಾತ್ರೆಲಿ ಹಾಲು, ಮೊಸರು. ತುಪ್ಪ ತುಂಬಿದೆ. ಈ ಕಡೆ... ಆಹಾ...ಬಂಗಾರದ ಮಂಚ...ಅದರ ಮೇಲೆ ವಜ್ರ ಖಚಿತ ಹೊದಿಕೆ–ನೀನು ಅದೃಷ್ಟವಂತ ಕಣಯ್ಯ... ಲೋಕದ ಐಶ್ವರ್ಯವೆಲ್ಲ ನಿನ್ನದೆ ಆಗುತ್ತೆ" ಎಂದು ಮುಕ್ಕಣ್ಣಪ್ಪ ಒಂದು ಪುಟ್ಟ ಭಾಷಣವನ್ನೆ ಮಾಡಿದನಂತೆ. ಇದನ್ನು ಕೇಳಿ ರಾಮಣ್ಣ ಸುತ್ತಲೂ ಕಣ್ಣು ರಳಿಸಿ ನೋಡಿದನಂತೆ. ಬಂಗಾರ ಎಲ್ಲೂ ಕಾಣಲಿಲ್ಲ. ಬರೀ ಕಲ್ಲು, ಮಣ್ಣು, ಗುಡ್ಡ, ಹಳ್ಳ, ದಿನ್ನೆ...ಬಾಯಿ ಬಿಟ್ಟುಕೊಂಡು ನಿಂತಿದ್ದ ರಾಮಣ್ಣನನ್ನು ಕುರಿತು, ಮುಕ್ಕಣ್ಣಪ್ಪ "ರಾಮಣ್ಣ ಇದೆಲ್ಲ ಎಲ್ಲರಿಗೂ ಕಾಣೆ ಸೋಲ್ಲ" ಅಂದ. ರಾಮಣ್ಣನಿಗೆ ಅವಸರ. "ಗುರುಗಳೆ ಕಾಣಿಸದೆ ಇದ್ರೆ ಬೇಡ. ಕೈಗೆ ಸಿಕ್ರೆ ಸಾಕು... ಏನ್ ಮಾಡ್ಬೇಕು ಹೇಳಿ...ಇದೆಲ್ಲ ಯಾವಾಗ ನನಗೆ ದಕ್ಕೋದು?" ಅಂತ ಪ್ರಶ್ನೆಗಳ ಸುರಿಮಳೆ ಹಾಕಿದ.

"ಹಾ. ಆತುರ ಬೇಡ...ಹಾಗೂ...ಬಲ್ಗೆ ತಿರುಗು... ನಿನ್ನ ಚಿನ್ನ ಚಕ್ರ ಹ್ಯಾಗ ಓಡಾಡ್ತ ಇದೆ ನೋಡ್ತೀಯ. ಸರಿ ... ತೊಂದ್ರೆಯಿಲ್ಲ ... ಚಕ್ರ ಈ ದಿಕ್ಕಿಗೇ ತಿರುಗಿದೆ" ಅಂತ ಹೇಳಿ. ಅವನಿಗೆ ಮುಂದೇನು ಮಾಡಬೇಕೆಂದು ವಿವರಿಸಿದನಂತೆ....

ಮತ್ತೆರಡು ದಿನ ಬಿಟ್ಟು ನಾನು ನನ್ನ ಸ್ನೇಹಿತನ ಮನೆಗ ಹೋದೆ. ಸಂಜೆ. ಆಗಲೇ ಕತ್ತಲಾಗುತ್ತಿತ್ತು. ಬಾಗಿಲಲ್ಲಿ ದಟ್ಟವಾಗಿ ಗಂಧದಕಡ್ಡಿ ಹೊಗೆ ಬರ್ತಾ ಇತ್ತು. ಗಂಟೆ ಶಬ್ದ. ಅದೇ ಮುಕ್ಕಣ್ಣಪ್ಪನ ನಗು... ಒಳಗೆ ಇಣುಕಿದೆ...ಹೌದು, ಅಲ್ಲಿ ಮುಕ್ಕಣ್ಣಪ್ಪ ಇದ್ದ. ಕೊಡಲಿ ರಾಮಣ್ಣ ನನ್ನ ಕಿವಿಯಲ್ಲಿ ಹೇಳಿದ, "ಗಲಾಟೆ ಮಾಡ್ಬೇಡ...ದೇವತೆಗಳನ್ನೆಲ್ಲಾ ಕರಸ್ತಾ ಇದ್ದಾರೆ ಗುರುಗಳು..." ನಾನು ನಡುಮನೆಗೆ ಹೋದೆ. ಮಧ್ಯೆ ದೊಡ್ಡದಾಗಿ ಬೆಂಕಿಯ ಕುಂಡ; ಸುತ್ತಲೂ ಅರಿಶಿನ ಕುಂಕುಮದ ರಾಶಿರಾಶಿ; ಹತ್ತಾರು ನಿಂಬೆಹಣ್ಣುಗಳ ಉರುಳಾಟ; ಧೂಪದೀಪಗಳ ಬೆಳಕು...ಒಂದು ಮಿಟ್ಟಿನಲ್ಲಿ ಮಾಡಿಟ್ಟಿದ್ದ ಗೋಪುರ...ಅದರ ಮೇಲೆ ಹೂವಿನ ರಾಶಿ...ಹಾಲು ತುಪ್ಪದ ಹೊಳೆ. ಹಣ್ಣು ಹಂಪಲು...ಕಾಯಿಕೊಬ್ಬರಿ... ಹೀಗೆ ಇಡೀ ನಡುಮನೆ ತುಂಬಿದೆ. ಮಧ್ಯದಲ್ಲಿ ಮಂತ್ರವಾದಿ ಮುಕ್ಕಣ್ಣಪ್ಪ ಪದ್ಮಾಸನದಲ್ಲಿ ಕುಳಿತಿದ್ದಾನೆ...ಕಣ್ಣು ಮುಚ್ಚಿ ಬಾಯಿ ತೆರೆದು. ಏನೋ ಹೇಳಿಕೊಳ್ಳುತ್ತ ಗಂಭೀರವಾದ ವಾತಾವರಣ...ಆಗಾಗ ಅವನು ಕಣ್ಣು ಬಿಟ್ಟು ಸುತ್ತಲು ನೋಡಿ ಪುನಃ ತನ್ನ ಕಾರ್ಯದಲ್ಲಿ ಮಗ್ನನಾಗುತ್ತಿದ್ದ. ನನ್ನ ಸ್ನೇಹಿತನ ಸಂಭ್ರಮ ಹೇಳತೀರದು. ಕೈ ಕಟ್ಟಿ ಸೇವಕನಂತೆ ಮುಕ್ಕಣ್ಣಪ್ಪನ ಅಪ್ಪಣೆಗಾಗಿ ಕಾದಿದ್ದ. ಆಗ ಈಗ ಮುಕ್ಕಣ್ಣಪ್ಪ ಕೈ–ಸನ್ನೆಯಿಂದ ಬೇಕಾದ ವಸ್ತುಗಳನ್ನು ರಾಮಣ್ಣನಿಂದ ತರಿಸುತ್ತಿದ್ದ. ಕೊಡಲಿ ರಾಮಣ್ಣ ನಾಲ್ಕು ಬಾರಿ ಒಳಗೆ ಹೋಗಿ ಅದು–ಇದು ತರುತ್ತಿದ್ದ. ಬೆಳ್ಳಿಯ ಸಾಮಾನುಗಳು ಎಲ್ಲಿ ಹೊರಕ್ಕೆ ಬಂದಿತ್ತು. ಒಂದು ಬೆಳ್ಳಿ ತಟ್ಟೆಯಲ್ಲಿ ಗರಿಗರಿಯಾದ ಹೊಸ ನೋಟುಗಳನ್ನು ತಂದಿದ್ದ. ಸರಿ ಮಂಗಳಾರತಿ ಶುರು... ದೊಡ್ಡದಾಗಿ ಗಂಟೆಯ ಶಬ್ದ... ಆಮೇಲೆ ಕಟ್ಟ ಮೌನ...ಮುಕ್ಕಣ್ಣಪ ಮೈ ಮೇಲೆ ಏನೋ ಬಂದ ಹಾಗೆ "ಈಗ ನಿಮ್ಮ ಕೆಲಸಕ್ಕೆ ಹೋಗಿ...ನಾನು ತೋರಿಸಿದ ಜಾಗದಲ್ಲಿ ಗುಂಡಿ ತೋಡಿರಿ...ಬೆಳಗಾಗೋದ್ರಲ್ಲಿ ಕೊಪ್ಪರಿಗೆ ದಕ್ಕುತ್ತೆ... ಯಾರಿಗೂ ಗೊತ್ತಾಗದ ಹಾಗೆ ಇಲ್ಲಿಗೆ ತನ್ನಿ...ನಾನು ಇಲ್ಲಿ ಇದ್ದು ದುಷ್ಟಶಕ್ತಿಗಳನ್ನೆಲ್ಲ ನನ್ನ ಮಂತ್ರಶಕ್ತಿಯಿಂದ ಕಟ್ಟಿ ಹಾಕಿರ್ತೀನಿ...ಇಲ್ಲದಿದ್ರೆ ಏನೂ ಲಭಿಸೊಲ್ಲ..." ಅಂದ. ಕೊಡಲಿ ರಾಮಣ್ಣ ನನ್ನ ಕಡೆ ತಿರುಗಿ. "ನೀನೂ ಬಾ ಬೆಟ್ಟಕ್ಕೆ. ಆಗಲೆ ೫–೬ ಜನಾನ ಗುದ್ದಲಿ ಪಿಕಾಸಿ, ಹಾರೆ ಜೊತೆಮಾಡಿ ಕಳಿಸಿದೀನಿ–ಎರಡು ಗ್ಯಾಸ್‌ಲೈಟೂ ಕಳಿಸಿದೀನಿ ಅಂದ. ನನಗೂ ಉತ್ಸಾಹ ಆಸೆ ಎಲ್ಲಿ ಸೇರಿ."ನಡಿ ಹೋಗೋಣ" ಅಂದೆ.ಊರಿನ ಜನಕ್ಕೆ ಗೊತ್ತಾಗಬಾರದು ಅಂತ ಆ ಅರ್ಧರಾತ್ರಿ ಮೈಲ್ಲೂ–ತಲೆಗೆ ಬಟ್ಟೆ ಸುತ್ತಿಕೊಂಡು ತಯಾರಾದೆವು. ರಾಮಣ್ಣ ಅವನ ಗುರುಗಳಿಗೆ ನಮಸ್ಕಾರ



"ಮೊದಲು ಭಾರೀ ಕಳ್ಳನಾಗಿದ್ದನ ಪರಿವರ್ತನೆ ಹೊಂದಿ ಅಂಚೆ ಕಲ್ಸಕ್ಕೆ ಸೇರಿದ. ಆದರೂ ಪತ್ರ ತೆಗೆಯೋ ರೀತಿ ಮೊದಲಿಂದೇ."

ಮಾಡಿದ. ಮುಕ್ಕಣ್ಣಪ್ಪ ನಮ್ಮಿಬ್ಬರ ತಲೆಯ ಮೇಲೂ ಮಂತ್ರದ ಅಕ್ಕಿಯನ್ನು ಎರಚಿದ.

ಕೋಟೆಯ ಹತ್ತಿರ ನಮ್ಮ ಜನ ತಯಾರಾಗಿದ್ದರು ಗ್ಯಾಸ್‌ಲೈಟು ಹಚ್ಚಿಕೊಂಡು. ಮೊದಲೆ ಗುರುತು ಮಾಡಿದ್ದ ಜಾಗ ತಲುಪಿದೆವು. ನಿರ್ಜನ ಗುಡ್ಡದಲ್ಲಿ ನಮಗೆ ಹೇಳಿಕೊಳ್ಳಲಾರದಂಥ ಹೆದರಿಕೆ. ರಾತ್ರಿ ಒಂದು ಗಂಟೆಯೂ ಮೀರಿರಬೇಕು. ಕೆಳಗೆ ಕಣ್ಣಾಡಿಸಿದರೆ ಇಡೀಯ ಊರು ಮಲಗಿದೆ...ಹೆಪ್ಪು ಕಟ್ಟಿಕೊಂಡಂತೆ ಕತ್ತಲು...ಕೆಲಸ ಪ್ರಾರಂಭವಾಯಿತು. ಒಂದೊಂದು ಅಡಿ ನೆಲ ಅಗಿದಾಗಲೂ ನಾನು–ನನ್ನ ಸ್ನೇಹಿತ ಬಗ್ಗಿ ನೋಡುತ್ತ ಕೊಪ್ಪರಿಗೆಗೆ ಕಾಯುತ್ತಿದ್ದೆವು. ಏನಾದರೂ "ಠಣ್" ಅಂದರೆ ಸಾಕು. ದೀಪ ಹಾಕಿ ನೋಡೋದು, ಅದು ಕೊಪ್ಪರಿಗೆ ಅಲ್ಲ, ಕಲ್ಲು ಅಂತ ತಿಳಿದು ಪುನಃ ಅಗೆತ ಮುಂದುವರಿಸುವುದು. ಸುಮಾರು ೧೪–೧೫ ಅಡಿಗಳು ದಾಟಿದರೂ ಕೊಪ್ಪರಿಗೆ ಕಾಣಿಸಲಿಲ್ಲ. ಆಗಲೆ ಸುಮಾರು ನಾಲ್ಕು ಗಂಟೆಯ ಸಮಯ. ಬೆಳಕು ಹರಿದರೆ ಊರಿನಲ್ಲಿ ಸುದ್ದಿ ಹರಡಿ ನಮಗೆ ಗ್ರಹಚಾರ ಬಿಡುಗಡೆಯಾಗುತ್ತದೆ ಎಂಬ ಭಯ ಶುರುವಾಯಿತು. ನಾನು ಹೇಳಿದೆ "ಲೊ, ರಾಮಣ್ಣ ಆ ಮಂತ್ರವಾದಿ ತೋರಿಸಿದ ಜಾಗ ಬಿಟ್ಟು ಬೇರೆ ಎಲ್ಲೋ ನೀನು ಗುಂಡಿ ತೋಡಿಸ್ತಾ ಇದ್ದೀಯ ಅಂತ ಕಾಣುತ್ತೆ...ಬೇಕು ಹರೀತ ಇದೆ. ಊರಿಗೆ ಊರೆ ಎದ್ದು ಬೆಟ್ಟದ ಬುಡಕ್ಕೆ ಬೆಳಿಗ್ಗೆಯ ಕೆಲಸಕ್ಕೆ ಬರ್‍ತಾರೆ...ಇಂಥ ಕೆಲಸದಲ್ಲಿ ಸಿಕ್ಕಿಬಿದ್ರೆ ಊರಿನ ಜನ ನಮ್ಮನ್ನು ತುಕಡಮಾಡ್ತಾರೆ" ಅಂತ. ರಾಮಣ್ಣನೂ ಸ್ವಲ್ಪ ಯೋಚಿಸಿ, "ಹಾಗಾದ್ರೆ ಈಗ ಮನೆಗೆ ವಾಪಸ್ಸು ಹೊರಟು ಬಿಡೋಣ. ಪುನಃ ಇವತ್ತು ರಾತ್ರಿ ಮುಕ್ಕಣ್ಣಪ್ಪನನ್ನೂ ಕರಕೊಂಡು ಬಂದು, ಸರಿಯಾದ ಜಾಗದಲ್ಲಿ ಗುಂಡಿ ತೋಡಿ ಕೊಪ್ಪರಿಗೆ ತೆಗೆಯೋಣ" ಅಂದ. ಸರಿ. ಬೇಗ ಬೇಗನೆ ಹತ್ಯಾರಗಳನ್ನೆಲ್ಲ ಜವಾಯಿಸಿ ಬಿಟ್ಟು ಇಳಿದೆವು. ದಾರಿಯುದ್ದಕ್ಕೂ ಹೊಂಡದಲ್ಲಿ ಮುಖ ತೋರಿದೆವು. ಸ್ವಲ್ಪ ಬೆಳಕು ಹಾಯ್ತು, ಕೊಡಲಿ ರಾಮಣ್ಣನ ಮನೆಯ ಬಾಗಿಲಿಗೆ ಬಂದೆವು.

ರಾಮಣ್ಣನ ಮನೆಯ ಮುಂದಿನ [illegible] ಹಾಕಿರಲಿಲ್ಲ. ಬಹುಶಃ ಮುಕ್ಕಣ್ಣಪ್ಪ ಪೂಜೆಯಲ್ಲಿ ಇರಬೇಕು ಅಂತ ಮನೆ ಒಳಹೊಕ್ಕೆವು. ಪಡಸಾಲೆಯಲ್ಲಿ ಕಾಲಿಟ್ಟಾಗ ಅಲ್ಲಿಯ ವಸ್ತುಗಳೆಲ್ಲ ಚೆಲ್ಲಾಪಿಲ್ಲಿಯಾಗಿದ್ದವು. ಮುಕ್ಕಣ್ಣಪ್ಪ ಕಾಣಲಿಲ್ಲ. ಆ ಕಡೆ ಈ ಕಡೆ ಹುಡುಕಿದೆವು. ಎಲ್ಲೂ ಸುಳುವಿಲ್ಲ. ಅಷ್ಟರಲ್ಲಿ [illegible] ಕೋಣೆಯಿಂದ ಕೊಡಲಿ ರಾಮಣ್ಣ, "ಅಯ್ಯೋ [illegible]" ಅಂತ ಕೂಗಿಕೊಂಡ. "ಏನೋ [illegible]" "ಇಲ್ಲಿ ನೋಡೋ ಒಂದು ಬೆಳ್ಳಿಪಾತ್ರೆ [illegible] ದುಡ್ಡು ಮಾಯ...ಮನೇಲಿರೋ ಬೆಲೆಬಾಳೋದೆಲ್ಲ ಹೋಗಿಬಿಟ್ಟಿದೆ..." ಅಂತ ಅಳುವುದಕ್ಕೆ [illegible] ಮಾಡಿದ. ನಾನೆಂದೆ, "ರಾಮಣ್ಣ–ಇದೆಲ್ಲ ಆ ಮುಕ್ಕಣ್ಣಪ್ಪಂದೆ ಕೆಲಸ...ಅವನು ಮಂತ್ರಶಕ್ತಿ ನಿನ್ನ ಮನೇಲಿದ್ದ ಬೆಳ್ಳಿಪಾತ್ರೆ ದುಡ್ಡಿನ ಮೇಲೆ ಪ್ರಯೋಗಿಸಿದ್ದಾನೆ; ಚುರಾಕು...[illegible]ವಲ್ಲ ಬೇಸ್ತು. ಎಂಥ ಕೆಲಸವಾಯ್ತು..." ಅಂದೆ.

ಆಗಲೆ ಬೆಳ್ಳಂಬೆಳಗಾಗಿತ್ತು. ತಣ್ಣಗೆ ಗಾಳಿ ಬೀಸುತ್ತಿತ್ತು. ರಾಮಣ್ಣ ನಿಂತ ಕಡೆ ಕುಸಿದು ಕುಳಿತುಬಿಟ್ಟ. ನಾನು ಎದುರಿಗೆ [illegible] ಅಂಗಡಿಯಿಂದ ಚಹ ತರಿಸಿ ಎಲ್ಲರಿಗೂ ಕೊಟ್ಟೆ. ನಾನು ಕುಡಿಯಲು ಪ್ರಾರಂಭಮಾಡಿ, ಎರಡು ಗುಟುಕು ಹೀರಿ ನಡುಮನೆಯಲ್ಲಿ ಪೂಜೆ ಮಾಡಿದ್ದ ಜಾಗದ ಸುತ್ತಲೂ ಉರಿದು ಬಿದ್ದಿದ್ದ ಬೂದಿ ನೋಡುತ್ತ ಕುಳಿತೆ. ✡

ಡಾ. ಸರ್ವಪಲ್ಲಿ ರಾಧಾಕೃಷ್ಣನ್ನರು ಉಪರಾಷ್ಟ್ರಪತಿಗಳೂ ರಾಜ್ಯಸಭೆಯ ಅಧ್ಯಕ್ಷರೂ ಆಗಿದ್ದ ಕಾಲದಲ್ಲಿ ಒಮ್ಮೆ ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ವಿಧೇಯಕದ ಬಗೆಗೆ ಚರ್ಚೆ ನಡೆದಿತ್ತು. ದಂಪತಿಗಳಲ್ಲಿ ಯಾರಾದರೊಬ್ಬರು ಹುಚ್ಚರಾಗಿದ್ದ ಪಕ್ಷದಲ್ಲಿ ವಿವಾಹ ವಿಚ್ಛೇದನೆಗೆ ಅನುಮತಿ ಕೊಡಬಹುದು ಎಂಬ ಕಲಮಿನಲ್ಲಿ 'ಹುಚ್ಚ' ಎಂಬ ಪದವನ್ನು ತೆಗೆದುಹಾಕಿ 'ತಲೆ ಸರಿಯಿಲ್ಲದವರು' ಎಂದು ಸೇರಿಸಬೇಕು ಎಂಬ ತಿದ್ದುಪಡಿಯನ್ನು ರಾಜ್ಯಸಭೆಯ ಸದಸ್ಯರೊಬ್ಬರು ಮಂಡಿಸಿದಾಗ ರಾಧಾಕೃಷ್ಣನ್ನರು, "ಸ್ವಾಮಿ, ನೀವು ಹೇಳುವುದೇನೋ ಸರಿ, ಆದರೆ ನಾವೆಲ್ಲ ತಲೆ ಕೆಟ್ಟವರೇ ಆಗಿದ್ದೇವಲ್ಲ — ನಮ್ಮ ನಮ್ಮ ಹೆಂಡಂದಿರ ದೃಷ್ಟಿಯಲ್ಲಿ," ಎಂದು ಆಕ್ಷೇಪವೆತ್ತಿದರಂತೆ.

ಗೇಟ್‌ವೇ ಆಫ್ ಇಂಡಿಯಾ– ಭಾರತದ್ವಾರ. ಆನೋಂದು [illegible] ಮುಂಬಯಿ ಬಂದರಿನಲ್ಲಿ ನಿಂತಿರುವ ಭವ್ಯ ಶಿಲಾಮಂಟಪ. ಅದನ್ನು [illegible]ಗ ಅಂತರ್ಮುಖಿಯ ಒಳಮನಸ್ಸು ಅವನನ್ನು ಇನ್ನೆಲ್ಲೋ ಕರೆದೊಯ್ಯುತ್ತು. ಮನಸಿನಾಟವನ್ನಿಲ್ಲಿ ನೋಡಿ……

ಒಳಗಣ್ಣು ತೆರೆಸಿತ್ತು...

ಶಿವ ರಾಮು ಜೋಶಿ

ಮುಂಬಯಿ ಗೇಟ್‌ವೇ ಆಫ್ ಇಂಡಿಯಾದ ಬಳಿ ನಿಂತೆ. ಧಕ್ಕೆಯಲ್ಲಿ ದೋಣಿಗಳು ಹೊಯ್ದಾಡುತ್ತಿದ್ದವು. ಜನಸಂದಣಿ ಅಷ್ಟೇನೂ ಇರದೆ ವಿರಳವಾಗಿತ್ತು. ದೂರದಲ್ಲಿ ಸಮುದ್ರದಲ್ಲಿ ಜಹಜೊಂದು ನಿಂತಿತ್ತು. ಮುಂಜಾನೆ ಹತ್ತು ಗಂಟೆಯ ಸಮಯ. ಬ್ರಿಟನ್ನಿನ ರಾಜಕುಮಾರ ಭಾರತವನ್ನು ಸಂದರ್ಶಿಸಲು ಬಂದಾಗ ಸ್ವಾಗತಕ್ಕೆಂದು ಈ ಗೇಟ್‌ವೇ ಆಫ್ ಇಂಡಿಯಾ ಸ್ಮಾರಕವನ್ನು ನಿರ್ಮಿಸಲಾಯಿತಂತೆ. ಭಾರತವು ಅಧ್ಯಾತ್ಮದ ಕಣಜ. ಬ್ರಿಟಿಶ್ ರಾಜಕುಮಾರ ಭಾರತಕ್ಕೆ ಬಂದು ಏನು ಅಧ್ಯಾತ್ಮ ಕಂಡನೋ ಅರಿಯುವುದು ಕಠಿಣ. ಭಾರತದ ಅಥವಾ ಜಗತ್ತಿನ ಇತಿಹಾಸಕಾರರು ಈ ಕುರಿತಾಗಿ ಏನು ಹೇಳಿದ್ದಾರೋ ನನಗೆ ತಿಳಿಯದು. ಕಾರಣ ನಾನು ಇತಿಹಾಸದ ಪ್ರೊಫೆಸರ್ ಅಲ್ಲ, ವಿದ್ಯಾರ್ಥಿಯೂ ಅಲ್ಲ. ಇದಾಗಿ ಇತಿಹಾಸದಿಂದ ನಮಗೆ ಆಗುವ ಪ್ರಯೋಜನವಾದರೂ ಏನು?

ನಮ್ಮೂರ ಬಳಿಯ ಕೋಟೆಯ ಬಳಿ ಹೋಗಿ ಬೃಹದಾಕಾರದ ಅದರ ಗೋಡೆಯ ತುದಿಯ ಮೇಲೆ ನಾನು [illegible] ಒಂದು ಸಾರ್ತಿ ಹಾಕಿದಾಗ [illegible] ಒಂದು ದೊಡ್ಡ ಇತಿಹಾಸದ [illegible] ಕೊಡುತ್ತದೆ. ನಾನು [illegible] ಏರಿ ಸುತ್ತುವರಿದಾಗ ಅದರ [illegible] ಅನಿಸಿದ್ದು ಇದು. ಅದರ [illegible] ರಸ್ತೆಗುಂಟ ಒಂದು [illegible] ವಾಗಿದೆ. ಸುತ್ತಲಿನ [illegible] ಕಂಡಾಗ ಒಂದು ದೊಡ್ಡ [illegible] ಕೋಟೆ ನಿಂತಿತ್ತೆಂದು ಅನಿಸುತ್ತದೆ.

ಕೋಟೆಯ [illegible] ದೊಡ್ಡ ಫಿರಂಗಿಗಳು [illegible] ತ್ತಿದ್ದವೆಂದು ಕೋಟೆಯ [illegible] ಬುರುಜುಗಳು [illegible] ಬಂದೂಕುಗಳು ಸಾಲು [illegible] ವು. ಶತ್ರುಗಳು ದೂರದ [illegible] ಗುಂಡು ಮದ್ದು ಹಾರಿ [illegible] ಟೆಯ ಬಾಗಿಲಿಗೆ ಮೈಗಳು [illegible] ಗಳಿಂದ ಲಗ್ಗೆ ಹಾಕಿದರೂ [illegible]

ಕಾರದಲ್ಲಿ ದೊಡ್ಡ ದೊಡ್ಡ ಬಾಗಿಲುಗಳಿಗೆ ಜಡಿದ ಉದನೆಯ ಶರದಂತಹ ಮೊಳೆಗಳು ಬಾಗಿಲು ಮುರಿಯದಂತೆ ರಕ್ಷಿಸುತ್ತಿದ್ದವು. ಮೊದಲನೆಯ ಬಾಗಿಲು ಮುರಿದು ದಂಡು ಒಳಗೆ ಬಂದರೂ ಎಡಕ್ಕೋ ಬಲಕ್ಕೋ ತಿರುಗಬೇಕಾದ ಪ್ರಸಂಗ ಬಂದು ಎರಡನೆ ಸುತ್ತಿನ ಕೋಟೆಯ ಗೋಡೆಯ ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನು ಕಂಡೇ ಶತ್ರುಗಳ ಎದೆ [illegible]ಪ್ರದಾಟು.

ಎರಡನೆಯ ಬಾಗಿಲು ದಾಟಿ ಮೂರನೆಯ ಬಾಗಿಲಿಗೂ ದಂಡು ಬಂದಿತೆಂದರೆ ಕೋಟೆ ಕೊಳ್ಳೆ ಹೊಡೆಯುವುದರೊಳಗೆ ಊರನ್ನೇ [illegible] ಮಸೀದೆ ಮಾಡಿ ಸುರಂಗ ಮಾರ್ಗದಿಂದ ಆರು ಮೈಲು ದೂರದ ಗುಡ್ಡಕೊಳ್ಳವನ್ನು [illegible] ಬಿಟ್ಟ ಸಂಪತ್ತನ್ನು ರಹಸ್ಯವಾಗಿ ತೆಗೆದು [illegible] ಪಾರಾಗಿಬಿಡಬಹುದು. ಒಳನುಗ್ಗಿದ ಶತ್ರುಗಳು ಮದ್ದು ಗುಂಡುಗಳ ಆಗರ ನೋಡಿ ಎದೆಯೊಡೆದು ಸಾಯುವರು. ಅವು ಇನ್ನೂ ಸುಲಭವಾಗಿ ಎತ್ತಲಾರದ ಕಬ್ಬಿಣದ ಗುಂಡುಗಳ ರೂಪದಲ್ಲಿ ಬಿದ್ದಿವೆ. ಬಹುಶಃ ಅವುಗಳನ್ನು ಅಲ್ಲಿಯೇ ತಯಾರಿಸುತ್ತಿದ್ದಿರಬೇಕು. ಈಗೀಗ ಅಲ್ಲಿ ಸರಕಾರದವರು ಒಂದು ಕಬ್ಬಿಣ ಗುಂಡಿನ ಕಾರ್ಖಾನೆಯನ್ನೇ ತೆರೆದಿದ್ದಾರೆ. ನಾನೊಮ್ಮೆ ಅಲ್ಲಿಗೆ ಹೋದಾಗ ದಾರಿಯಲ್ಲಿ ಈ ಕೋಟೆಯ ನೆನಪಾಯಿತು. ಅದರಲ್ಲಿಯ ಸುರಂಗ ಮಾರ್ಗ ಈ ಭಾಗದಲ್ಲಿ ಎಲ್ಲೋ ತೇಲುತ್ತ [illegible] ಈಗ ಮೈಲು ಮಾರ್ಗ ಆಗಿ [illegible] ಕಬ್ಬಿಣದ ಅದಿರು ಲಕ್ಷ [illegible] ಪ್ರಮಾಣದಲ್ಲಿ [illegible] ಸಾಗಾಟವಾ[illegible]ದೆ. [illegible] ಯುರೋಪಿನವರು [illegible] ಈ ಭಾಗದ ಕಂದಕಗಳಲ್ಲಿ ಕಬ್ಬಿಣ ಲೋಹದ ಅದಿರು ಅಗೆದು ತೆಗೆಯಲು ಬಹಳಷ್ಟು ಕೆಲಸ [illegible]ರೆ. ಈ ನಮ್ಮ ಊರಿಗೆ ಅವರು ಬರಲು [illegible] ಮಾರ್ಗ—ಅದು ಕೋಟೆಯ ಮಾರ್ಗವಾಗಿ.

ಅಲ್ಲಿಂದ ಪಾರಾಗಿ ಬಂದರೆ ಹೋಗಲೂ ಒಂದೇ ಮಾರ್ಗ. ದೊಡ್ಡ ಕೋಟೆಯಂತೆ ಸಾಲು ಸಾಲುಗುಡ್ಡಗಳು, ಹಿಮಾಲಯದಂತೆ ಆಕಾಶದೆತ್ತರಕ್ಕೆ ನಿಂತಿರದಿದ್ದರೂ ಗೋಡೆಯಂತೆ ನೇರವಾಗಿ ಭದ್ರವಾಗಿ ನಿಂತಿವೆ. ಗುಡ್ಡದ ಮಧ್ಯ ತಾನಾಗಿಯೆ ನಿರ್ಮಾಣವಾದ ಎರಡೂ ಬದಿಯ ಮಾರ್ಗದಲ್ಲಿ ನದಿ ಹರಿಯುತ್ತದೆ. ಜ್ವಾಲಾಮುಖಿಯಂತೆ ಹರಿದುಬಂದ ಲಾವಾರಸ ಗುಡ್ಡದ ಬಂಡೆಗಲ್ಲುಗಳನ್ನು ಕೊಚ್ಚಿ ಹಾಕಿ ಕರಗಿಸಿದ ಕುರುಹು ಇನ್ನೂ ಕಣ್ಣಿಗೆ ಕಟ್ಟುವಂತೆ ಇದೆ. ಶಾಪಗ್ರಸ್ತ ಅಹಲ್ಯೆಯಂತೆ ಕಪ್ಪು ಶಿಲೆಗಳಾಗಿ ಬಿದ್ದ ಈ ಕಪ್ಪುಕಲ್ಲುಗಳ ಮೇಲೆ ನಾನು ಎಷ್ಟೋ ಬಾರಿ ಎಷ್ಟೋ ಹೊತ್ತು ಕಾಲ ಕಳೆದಿದ್ದೇನೆ. ಭೀಭತ್ಸ ದೃಶ್ಯ ಕಂಡು ಮುದುಡಿಕೊಂಡು ಒಂದೆ ಸರಿದಿದ್ದೇನೆ. ಹರಿಯುವ ನೀರಿನ ಶಬ್ದಲಹರಿಯಲ್ಲಿ ಒಂದಾಗಿ ಹರಿದು ಹೋಗಿದ್ದೇನೆ. ವಿಚಾರಕ್ಕೆ ಸಿಲುಕಿ ಆನಂದಿಸಿದ್ದೇನೆ. ತಲೆಯೆತ್ತಿ ಆಕಾಶ ನೋಡುವಂತೆ ನೋಡಿದಾಗ ಉತ್ತುಂಗದಲ್ಲಿ ಕಾಣುವುದು ಎರಡು ಶಿಖರಗಳು; ಬಿದ್ದು ಹೋದ ಮಂಟಪ ದ್ವಾರದಂತೆ ಬಾಯಿ ತೆರೆದು ನಿಂತಿವೆ. ಒಂದು ಬದಿಯ ಶಿಖರದ ಮೇಲೆ ಒಂದು ಸಣ್ಣ ಕೋಟೆಯಿದೆ. ದೂರದ ಶತ್ರುವನ್ನು ಕಾಯಲು ಕಟ್ಟಿದ ಕಾವಲು ಕೋಟೆ ಇದು. ಅಲ್ಲಿಂದ ಇಣುಕಿ ನೋಡಿದರೆ ಕಾಣುವದು ಪಾತಾಳವೇ. ಯಾರೋ ಇಬ್ಬರು ಭಗ್ನ ಪ್ರಣಯಿಗಳು ಕೋಟೆಯ ಮೇಲಿನಿಂದ ಹಾರಿಕೊಂಡು ಪ್ರಾಣ ಕಳೆದುಕೊಂಡರಂತೆ. ಹಾಗೆಂದು ಅವರ ಸ್ಮಾರಕವೊಂದನ್ನು ಮಾತ್ರ ಯಾರೂ ಅಲ್ಲಿ ನಿರ್ಮಿಸಲಿಲ್ಲ. ಆದರೆ ಪ್ರತಿವರ್ಷ ಕಾಮನ ಹಬ್ಬಕ್ಕೆ ಸಾವಿರಾರು ಪ್ರಣಯಿಗಳು ಅಲ್ಲಿ ಮೆರೆಯುತ್ತಿದ್ದ ಕುರುಹು ಇನ್ನೂ ಅಲ್ಲಿದೆ.

ವಿಶಾಲ ರಾಜ ಬೀದಿಯಲ್ಲಿ ಮುರಿದು ಬಿದ್ದ ಕಟ್ಟಿಗೆಯ ರಥ ನಿಂತಿದೆ. ಈಗಲೂ ಹೋಳಿಹುಣ್ಣಿವೆಗೆ ಅಲ್ಲಿ ಜಾತ್ರೆಯಾಗುತ್ತದೆ. ಎಲ್ಲರಂತೆ ಬಣ್ಣದ ಪೋಷಾಕು ತೊಟ್ಟು ಅನೇಕ ಸಲ ಈ ಜಾತ್ರೆಗೆ ಹೋಗಿದ್ದೇನೆ. ಏಕಾಂಗಿಯಾಗಿ ಬಿಡಿದಿನಗಳಲ್ಲಿ ಮಂಟಪದಲ್ಲಿ ಮಲಗಿ ಕಾಲ ಕಳೆದಿದ್ದೇನೆ. ತಪಸ್ಸು ಮಾಡಲು ಇದ್ದ ಒಳ್ಳೆಯ ಜಾಗೆಯೆಂದು ಅಂದುಕೊಂಡಿದ್ದೇನೆ. ಆಗ ನನ್ನ ಸುತ್ತು ವಾನರಗಳು ಚಿನ್ನಾಟವಾಡುತ್ತಿರುತ್ತವೆ. ತಾಯಿಯೊಂದು ತನ್ನ ಚಿಕ್ಕ ಮಗುವಿನೊಂದಿಗೆ ಸರಸವಾಡುತ್ತಿದೆ. ತನ್ನ ಮೊಲೆಯೂಡಲು ತಾಯಿಗೆ ಆತುರ. ಮಗು ತಾಯಿಯ ಬಳಿ ಸುಳಿದು, ತೊಡೆಯೇರಿ ಕೆಳಗಿಳಿದು ಅತ್ತಿತ್ತ ಜಿಗಿ

ಯು ತೊಡಗುತ್ತದೆ. ಕೊನೆಗೆ ಅದು ತಾಯಿಯನ್ನು ಅಪ್ಪುತ್ತಲೇ ಅದನ್ನು ತನ್ನ ವಕ್ಷಸ್ಥಳದಲ್ಲಿ ಆಲಂಗಿಸಿಕೊಂಡು ಬದಿಯ ಮರಕ್ಕೆ ಜಿಗಿದು ಹೋಗುತ್ತದೆ. ಅಷ್ಟರಲ್ಲಿ ನಾನು ನನ್ನ ತಪಸ್ಸಿನ ವಿಚಾರ ಮರೆತು ಮನೆಯ ಕಡೆಗೆ ಕಾಲು ಹಾಕುತ್ತೇನೆ. ಊರಿನ ಪುರಾತನ ದೇವಾಲಯದ ಗೋಪುರ ಕಾಣುತ್ತ ಅದರ ಶಿಲ್ಪಸಮೂಹದಲ್ಲಿ ಮೂಲೆಯಲ್ಲಿ ಒಂದು ಕಡೆ ಮಂಗವೊಂದು ತನ್ನ ಮಗುವಿಗೆ ಮೊಲೆ ಊಡುತ್ತ ಕುಳಿತಿರುವುದನ್ನು ಕಾಣುತ್ತೇನೆ. ಗುಡಿಯೊಳಕ್ಕೆ ಹೋದಾಗ ಕಲ್ಲುಗಂಬಗಳನ್ನು ಸುತ್ತಿ ಹಾಕುವಾಗ ಸುಗ್ರೀವ ಹನುಮಂತರ ಸಂಭಾಷಣ ಚಿತ್ರಣ ಕಾಣುತ್ತೇನೆ. ರಂಗ ವಿಠಲ ಏಕಾಂಗಿಯಾಗಿ ತನ್ನ "ನಾನಿರುವೆ ಇಲ್ಲಿ" ಎಂಬ ಮೋಹಕ ಟೊಂಕದ ಮೇಲೆ ಕೈಗಳನ್ನಿಟ್ಟು ನಿಂತಿರುತ್ತಾನೆ. ನಾನು ನನ್ನ ಕೈಗಳನ್ನೆತ್ತಿ ನಮಸ್ಕರಿಸುತ್ತೇನೆ. ಆ ಮೇಲೆ ನನಗೆ ನೆನಪಾಗುತ್ತದೆ, ಗಂಟೆಯನ್ನೇಕೆ ನಾನು ಬಾರಿಸಲಿಲ್ಲ ಎಂದು. ನಾದಬ್ರಹ್ಮನನ್ನು ಕಂಡಾಗ ಶಬ್ದಬ್ರಹ್ಮನ ಅವಾಂತರವೇಕೆಂದು "ವಿಠಲಾ" ಎಂಬ ಆರ್ತ ಕರೆಯನ್ನು ನಾನು ಕೂಗುವುದಿಲ್ಲ. ಆ ಹೊತ್ತಿಗೆ 'ವಿಠಲ ವಿಠಲ' ಎಂದು ಸಾಧ್ವಿ ಭಕ್ತೆಯೊಬ್ಬಳು ಬಂದಿರುತ್ತಾಳೆ, ವಿಠಲ ಮುಗುಳುನಗೆಯಿಂದ ಅವಳ ಕರೆಯನ್ನು ಆಲಿಸುತ್ತಾನೆ. ಅಷ್ಟರಲ್ಲೇ ನಾನು ಅಲ್ಲಿಂದ ನಿರ್ಗಮಿಸಿರುತ್ತೇನೆ. ಮನೆಗೆ ಬಂದಾಗ ಕಾದುಕುಳಿತ ತಾಯಿ ಕೇಳುತ್ತಾಳೆ, "ಎಲ್ಲಿಗೆ ಹೋಗಿದ್ದೆ?" ಎಂದು.

"ವಿಠಲನ ಗುಡಿಗೆ," ಎಂದೆನ್ನುತ್ತೇನೆ.

ಗಂಟೆಗಟ್ಟಲೆ ಗುಡಿಯಲ್ಲಿ ಏನು ಕೆಲಸ? ಎಂದು ನನ್ನ ತಾಯಿ ಕೇಳುವುದಿಲ್ಲ. ನಾನು ಬಂದುದು ಗುಡಿಯಿಂದ. ಗುಡ್ಡಗಳಲ್ಲಿ ಅಲೆದು ಗುಡಿಗೆ ಬಂದಿರುತ್ತೇನೆ ಎಂದು ಆಕೆಗೆ ಗೊತ್ತು. ದಿನಗಟ್ಟಲೆ ಹೀಗೆ ಕಾಲ ಹಾಕಿದ್ದೇನೆ. ನನ್ನ ತಾಯಿಗೆ ಚಿಂತೆ ಎಲ್ಲಿಗೂ ಹೊಂದಲಿಲ್ಲ ಮಗ ಎಂದು. ಈಗಲೂ ಆಕೆಗೆ ಅದೇ ಚಿಂತೆ. ನನ್ನಿಂದ ನೂರಾರು ಮೈಲು ದೂರದಲ್ಲಿರುವ ನನ್ನ ತಾಯಿಯ ಈ ಚಿಂತೆಗೆ ಇನ್ನೂ ಮುಕ್ತಿ ದೊರಕಿಲ್ಲ. ನಿತ್ಯವೂ ನನ್ನ ತಾಯಿ ದೇವರಲ್ಲಿ ಪ್ರಾರ್ಥಿಸುತ್ತಾಳೆ, ಮಗನಿಗೆ ಬೇಗ ಏನಾದರೂ ದಾರಿ ಹತ್ತಲೆಂದು. ದೇವರಿಗೆ ಒಂದು ಆಟ. ನಾನು ಅವನನ್ನು ನೋಡಿದಾಗಲೆಲ್ಲ ನಗೆಯುಲಾಸ್ಯ ಅವನ



ಮುಖದಲ್ಲಿ ಸುಳಿದಿರುತ್ತದೆ. ಕೈಮುಗಿಯುವ ನನ್ನ ತಾಯಿಗೆ ನಾನು ಅನ್ನುತ್ತೇನೆ, "ಏಕೆ ಅವನಿಗೆ ಕೈಮುಗಿಯುತ್ತೀ ಬಿಡು," ಎಂದು.

"ಹಾಗೆಂದರೆ ಹೇಗೆ? ಅವನು ಕರುಣಿಸಿದರೆ ನೀನು ಸುಖವಾಗಿರುತ್ತೀ. ದಿನವೂ ನೀನು ಗುಡಿಗೆ ಹೋಗುತ್ತೀ, ಕೈಮುಗಿಯುವುದಿಲ್ಲವೇನು?" ಎಂದು ಕೇಳುತ್ತಾಳೆ.

"ಇಲ್ಲ ಅವನನ್ನು ನೋಡಿಕೊಂಡು ಬರುತ್ತೇನೆ, ಕೈಮುಗಿಯುವುದಿಲ್ಲ:ಸುಮ್ಮನೆ ನೋಡಿಬರುತ್ತೇನೆ" ತಾಯಿಯ ಪ್ರಶ್ನೆಗೆ ಒಮ್ಮೆಲೆ ನನಗೆ ನಗು ಬರುತ್ತದೆ. ದೇವರು ಭವಸಾಗರದಲ್ಲಿ ತನ್ನ ಭಕ್ತರಿಗೆ ಬೇಡಿದುದನ್ನು ಅವನು ಇಟ್ಟಿರುತ್ತಾನೊ ಇಲ್ಲಪ್ಪೋ? ಊಟಕ್ಕೆ ಹೊತ್ತಾಗಿರುತ್ತದೆ. ನನ್ನ ತಾಯಿ ಊಟಕ್ಕೆ ಹಾಕುತ್ತಾಳೆ. ನಾನು ಊಟ ಮಾಡುತ್ತೇನೆ. ತಾಯಿಯ ಕೊರಗು ನನಗೆ ಗೊತ್ತು: ದೇವರ ಅಧ್ಯಾತ್ಮವನ್ನು ನಾನು ಆಕೆಗೆ ಹೇಳಿಬಿಡುತ್ತೇನೆ.

"ನಾಳೆ ನೀನು ದೇವರ ಪೂಜೆ ಮಾಡು" ಅನ್ನುತ್ತಾಳೆ. ಅದು ಏನೋ ವಿಶೇಷವಿರಬೇಕು ಯಾವುದೋ ಹಬ್ಬ ಚಿಕ್ಕಂದಿನಿಂದ ದೇವರ ಪೂಜೆಗೆ ಕೂಡಿಸುತ್ತಿದ್ದಳು ನನ್ನ ತಾಯಿ.

"ನಿನಗೆ ಎಲ್ಲಿಯಾದರೂ ಕೆಲಸ ಸಿಕ್ಕರೆ ಸತ್ಯನಾರಾಯಣ ಮಾಡಿಸುತ್ತೇನೆ," ಅನ್ನುತ್ತಾಳೆ. ಇನ್ನೂ ತನಕ ಸತ್ಯನಾರಾಯಣನಿಗೆ ಪೂಜೆಯ ಯೋಗ ಬಂದೇ ಇಲ್ಲ. ವ್ಯಥಾ ಯಾರು ಪೂಜೆಮಾಡುತ್ತಾರೆ? ಆದರೆ ಸತ್ಯನಾರಾಯಣ ಯಾವುದಾದರೂ ಒಂದು ಕಾರಣದಿಂದ ನಮ್ಮ ಮನೆಯಲ್ಲಿ ಪೂಜೆ ಮಾಡಿಸಿಕೊಂಡೇ ಇರುತ್ತಾನೆ.

ಬ್ರಿಟಿಶರು ಭಾರತಕ್ಕೆ ಬಂದ ಒಂದೆರಡು ಶತಮಾನಗಳಲ್ಲಿ ನಮ್ಮ ದೇವರುಗಳ ಬಗ್ಗೆ ಏನು ತಿಳಿದುಕೊಂಡರೋ ನನಗಿನ್ನೂ ಅರ್ಥವಾಗಿಲ್ಲ. ಹೋಗುವಾಗ ಅವರು ನಮ್ಮ ಯಾವ ದೇವರನ್ನೂ ಕರೆದುಕೊಂಡು ಹೋಗಲಿಲ್ಲ. ಬ್ರಿಟಿಶ ರಾಜಕುಮಾರ ಭಾರತದ ತಡಿಯನ್ನು ಸೇರಿದಾಗ ಸ್ವಾಗತ ಭವ್ಯವಾಗಿ ಸಿಕ್ಕಿರಬೇಕು. ಅದಕ್ಕಾಗಿ ಕಟ್ಟಿದ ಸ್ವಾಗತ ದ್ವಾರದಲ್ಲಿ ಒಂದಾದರೂ ದೇವರ ಮೂರ್ತಿ ಇಲ್ಲ.

ಭಾರತದ ಯಾವ ಶಿಲ್ಪವೂ ದೇವರುಗಳಿಲ್ಲದೆ ಪೂರ್ತಿಯಾಗಿಲ್ಲ. ಭಗವದ್ಗೀತೆಯ ಒಂದು ಶ್ಲೋಕಕವನ್ನಾದರೂ ಗೇಟ್‌ವೇ ಮೇಲೆ ಕೆತ್ತಬಹುದಾಗಿತ್ತು. ಅದೂ ಇಲ್ಲ. ರಾಜಕುಮಾರನಿಗೆ ಭಗವದ್ಗೀತೆಯೆಂದರೇನು ಎಂಬ ಅಧ್ಯಾತ್ಮವೂ ಗೊತ್ತಾಗಿರಲಿಕ್ಕಿಲ್ಲ. ಲಂಡನ್ನಿನ ಥೇಮ್ಸ್ ನದಿಯಲ್ಲಿ ನೀರಿಗೇನು ಕೊರತೆ? ಭಾರತದ ಗಂಗೆಯಲ್ಲಿಯೂ ನೀರಿಗೆ ಕೊರತೆಯಿಲ್ಲ. "ನದೀನಾಂ ಗಂಗಾ" ಎಂದು ಶ್ರೀ ಕೃಷ್ಣ ಹೇಳಿದ್ದಾನೆ. "ನದಿಗಳಲ್ಲಿ ನಾನು ಗಂಗಾನದಿ, ಈಜಿಪ್ತದ ನೈಲ, ಲಂಡನ್ನಿನ ಥೇಮ್ಸ, ಅಮೇರಿಕದ ಮಿಸಿಸಿಪ್ಪಿ, ರಶ್ಯಾದ ವೋಲ್ಗಾ ಎಲ್ಲಾ ನದಿಗಳೇ. ಅವುಗಳೂ ಗಂಗಾನದಿಗಳೇ. ಶ್ರೀ ಕೃಷ್ಣ ಈ ಸತ್ಯವನ್ನು ಭಾರತದಲ್ಲಿ ಮಾತ್ರ ಪ್ರಕಟಗೊಳಿಸಿದ್ದಾನೆ. ಜಗತ್ತಿನ ಎಲ್ಲ ಸತ್ಯಕ್ಕೆ ಭಾರತ ಸಾಕ್ಷಿಭೂತವಾಗಿದೆ. ಅಂಥ ದೇಶವನ್ನು ನಾನು ಬಿಟ್ಟು ಹೋಗಿ ಬಿಡುವ ನನ್ನ ವಿಚಾರ ಮೂರ್ತೀಭವಿಸಲು ಸಮಯ ಸನ್ನಿಹಿತವಾಗಿತ್ತು. ತೆರೆಗಳಿಂದ ಅಪ್ಪಳಿಸುವ ಸಾಗರಕ್ಕೆ ಧುಮುಕಲು ನನ್ನ ಮನಸ್ಸು ಹೊಯ್ದಾಡತೊಡಗಿತು. ತೆರೆಗಳೊಂದಿಗೆ ದೂರದ ಜಹಜು ಸೇರಿಕೊಳ್ಳುವ ನಿರ್ಧಾರ ನನ್ನದು. ನನ್ನ ಬಳಿ ನನ್ನದು ಎಂಬುದೇನೂ ಉಳಿದಿರಲಿಲ್ಲ. ನಾನು ಮಾತ್ರ ಉಳಿದಿದ್ದೆ. ಬಹುಶಃ ನಾನು ಸ್ವಾಮಿವಿವೇಕಾನಂದ ಅಥವಾ ವೀರ ಸಾವರಕರ ಆಗಿದ್ದರೆ ಸಮುದ್ರಕ್ಕೆ ಜಿಗಿದು ಬಿಡುತ್ತಿದ್ದೆ. ಕನ್ಯಾಕುಮಾರಿಯಿಂದಾಚೆ ಸಮುದ್ರದ ಮಧ್ಯೆ ಎತೆಎತ್ತಿರುವ ಕಲ್ಲು ಬಂಡೆಗೆ ವಿವೇಕಾನಂದರು ಈಜಿಹೋಗಿ ಸೇರುತ್ತಿದ್ದರಂತೆ. ಅಲ್ಲಿ ಧ್ಯಾನಮಗ್ನರಾಗಿರುತ್ತಿದ್ದರಂತೆ. ಸುತ್ತಲೂ ಎಡೆಬಿಡದೆ ಅರ್ಭಟಿಸುತ್ತಿರುವ ಸಾಗರ. ತೆರೆಗಳ ನಡುವೆ ಕಲ್ಲಾಗಿರುವ ಬಂಡೆಯ ಮೇಲೆ ಸ್ವಾಮಿ ವಿವೇಕಾನಂದರು ಎಂತಹ ಧ್ಯಾನ ಮಾಡಿರಬೇಕು? ಈಗ ಅಲ್ಲೊಂದು ಸ್ಮಾರಕ ನಿರ್ಮಿಸಿದ್ದಾರಂತೆ. ದೇಶದಲ್ಲಿಯ ಆರ್ತ ಕೂಗು ಕೇಳಿ ವಿವೇಕಾನಂದರು ಸಮುದ್ರಕ್ಕೆ ಜಿಗಿದು ಅಲ್ಲಿ ಕುಳಿತು ಧ್ಯಾನ ಮಾಡಿರಬೇಕು. ದೇಶದ ಅಳಲು ಅರಿತು ಕಣ್ಣೀರಿಡುತ್ತಿದ್ದ ಮಹಾತ್ಮಾ ಗಾಂಧಿಗೆ ಕೂಡ ಈಗ ದೇಶದಲ್ಲಿ ದೊಡ್ಡ ಸ್ಮಾರಕ ಕಟ್ಟಿದ್ದಾರೆ. ಅದು ರಾಜಘಾಟ. ನಮ್ಮ ದೇಶಕ್ಕೆ ಯಾರು ಬಂದರೂ ರಾಜಘಾಟಕ್ಕೆ ಹೋಗಿ ನಮಸ್ಕರಿಸಿ ಹೋಗುತ್ತಾರೆ. ರಮಣರ ಮಾಗ ಕರ್ಮಯೋಗಿಯೇ. ಅವರಲ್ಲಿ

ಗಾಂಧಿ ನಿಂತರು ಅವರ ತತ್ತ್ವ ನಿಂತಿತು, ಆದರೆ ಅವರೆತ್ತರಕ್ಕೆ ದೇಶ ನಿಲ್ಲಲಿಲ್ಲ. ಗಾಂಧೀಜಿ ಕಂಡ ಭಾರತ ಬ್ರಿಟಿಶರ ಕೈಯಿಂದ ಭಾರತೀಯರಿಗೆ ಬಂದರೂ ಇನ್ನೂ ಮೂರ್ತಿಮಂತವಾಗಿ ನಿಲ್ಲಲಿಲ್ಲ. ಬ್ರಿಟಿಶರು ಭಾರತದಿಂದ ಏನೇ ಒಯ್ಯಲಿ ಬಿಡಲಿ, ರಾಮನಾಮ ಜಪಿಸುತ್ತ ಪ್ರಾಣ ನೀಗಿದ ಗಾಂಧೀಜಿ ನೆನಪನ್ನು ತೆಗೆದುಕೊಂಡು ಹೋಗಿರಬೇಕು.

ಭಾರತದ ಆಧ್ಯಾತ್ಮ ಅಲ್ಲಿಯ ದೇವರುಗಳೇ ಪ್ರಜೆಗಳೇ ವೇದಗಳೇ ಅವರ ಜ್ಞಾನವೇ ಪುರಾಣ ಉಪನಿಷತ್ತುಗಳೇ ಅವರ ಪರಂಪರೆಯೇ? ರಾಜಕೀಯವೆ? ಭಾರತಕ್ಕೆ ಯಾವುದರಿಂದ ಮೋಕ್ಷವೆಂಬುದು ಇನ್ನೂ ಅರ್ಥವಾಗಿಲ್ಲ. ಭಾರತದ ಸಂಪತ್ತು ಬೆಳೆದಿದೆ. ಆದರೆ ಅದರಿಂದ ಮೋಕ್ಷವಿಲ್ಲ. ಕಣಜಗಳು ಬೆಳೆದಿವೆ, ಅದರಿಂದ ಮೋಕ್ಷವಿಲ್ಲ. ನಾಗರಿಕತೆ ಬೆಳೆದಿದೆ, ನಗರ ಬೆಳೆದಿದೆ, ಉದ್ದಿಮೆಗಳು ಬೆಳೆದಿವೆ, ಪ್ರಜೆಗಳು ಬೆಳೆದಿದ್ದಾರೆ, ರಾಜಕೀಯ ಬೆಳೆದಿದೆ. ಪ್ರಜಾಸತ್ತೆ ಬೆಳೆದಿದೆ, ಐದು ವರ್ಷ ಬಾಳಬೇಕಾದ ಮುರಾರಜಿ ಆಡಳಿತ ಬದುಕಲಿಲ್ಲ. ಚರಣಸಿಂಗರ ಆಡಳಿತ ಉಳಿಯಲಿಲ್ಲ. ಪ್ರಜಾಸತ್ತೆ ಎಲ್ಲಿ ಉಳಿಯಿತು ಎಂದು ಗೊತ್ತಾಗಲಿಲ್ಲ. ೧೯೭೭ರಲ್ಲಿ ನಿರಾಕರಿಸಿದ ಇಂದಿರಾ ಕಾಂಗ್ರೆಸ್ಸನ್ನೇ ಮತ್ತೆ ಮತದಾರರು ಅಧಿಕಾರಕ್ಕೆ ತಂದರು. ದೇಶಕ್ಕೆ ಎಂತಹ ಆಡಳಿತವಿರಬೇಕು ಎಂದು ಇನ್ನೂ ನಿಶ್ಚಿತವಾಗಿ ಯಾರಿಗೂ ತಿಳಿದಿಲ್ಲ. ದೇಶದ ಆಡಳಿತ ಒಂದು ವ್ಯವಹಾರ. ಅದು ಸುರಾಷ್ಟ್ರ ನಿರ್ಮಾಣಕ್ಕೆ ನಿಮಿತ್ತ. ಆಡಳಿತವೇ ಕೊನೆಯದಲ್ಲ, ಅದೇ ಗುರಿಯಲ್ಲ. ಅಧಿಕಾರವನ್ನೇ ಗುರಿಯಾಗಿರಿಸಿಕೊಂಡವರಿಂದಾಗಿ ದೇಶದ ಆಡಳಿತ ಕೆಟ್ಟಿತು, ದೇಶ ಕೆಟ್ಟಿತು.

ನಾನು ನನ್ನ ಮನಸ್ಸು ಬಿಗಿ ಹಿಡಿದೆ. ನೀರನ್ನು ಕಂಡರೆ ಜಿಗಿದು ಬಿಡುವ ಸ್ವಭಾವ ನನ್ನದು. ಗಂಟೆಗಟ್ಟಲೆ ಸಣ್ಣವನಿದ್ದಾಗ ಈಜಾಡಿದ್ದೇನೆ. ಕೆರೆಗಳಲ್ಲಿ ಬಾವಿಗಳಲ್ಲಿ ಈಜು ಹೊಡೆದಿದ್ದೇನೆ. ನದಿ ಕೊಳ್ಳಗಳನ್ನು ದಾಟಿದ್ದೇನೆ. ನನ್ನ ಕಣ್ಣ ಮುಂದೆ ವಿಶಾಲವಾಗಿ ನಿಂತ ಸಮುದ್ರದಲ್ಲಿ ಜಿಗಿದು ಈಜು ಹೊಡೆದು ಹೋಗುವದು ನನಗೆ ಅಸಾಧ್ಯವೆಂದೆನಿಸಿರಲಿಲ್ಲ. ಮನಸ್ಸು ಸ್ಥಿಮಿತಕ್ಕೆ ಬಂದಿತು. ನನ್ನ ದೇಹ ಸ್ವಾಸ್ಥ್ಯದಲ್ಲಿತ್ತು. ಹೋಗುವ ವಿಚಾರವೇನೋ ಸರಿ. ಆದರೆ ನಂತರ? ಆ ಜಹಜು ಯಾವಾಗ ಬಂದರು ಬಿಡುವುದೊ? ಯಾವ ದೇಶಕ್ಕೆ ಹೋಗುವುದೊ? ಅಲ್ಲಿಯ ತನಕ? ನನ್ನನ್ನು ಜಹಜಿನ ಕಪ್ತಾನ ಒಪ್ಪಿಕೊಳ್ಳುವನೇ? ಅಷ್ಟು ಸುಲಭವಲ್ಲ. ಗೇಟ್‌ವೇ ಕಟ್ಟೆಯನ್ನು ಸುತ್ತು ಹಾಕಿ ಹಾಕಿ ಗೇಟ್‌ವೇ ನೆರಳಿಗೆ ಬಂದೆ. ಮಧ್ಯಾಹ್ನ ಸಮೀಪಿಸುತ್ತಿತ್ತು. ಹಿಂದೊಮ್ಮೆ ನಾನು ಮೊದಲಬಾರಿಗೆ ಸಮುದ್ರ ಕಂಡಾಗ ನೀರಿಗಿಳಿದು ಭೂಮಿಯನ್ನು ನೆನೆದು ಮೈಮರೆತು ಅರ್ಘ್ಯಬಿಟ್ಟಿದ್ದೆ. ಸಾಗರದ ನೀರನ್ನು ಸಾಗರಕ್ಕೆ ಚೆಲ್ಲಿಕೊಟ್ಟಿದ್ದೆ. ಸಮುದ್ರ ವಸದೇವಿ...ನನ್ನ ನಿತ್ಯ ಸ್ತೋತ್ರಪಠಿಸಿದ್ದೆ. ಈಗ ಕೂಡ ಅದೇ ಸಮುದ್ರ. ಅದು ನನಗೆ ಭೀತಿ ತರ



"ಅವರಿಬ್ಬರೂ ತಮ್ಮ ಪಕ್ಷಗಳು ಬರುವ ಚುನಾವಣೆಯಲ್ಲಿ ಸೀಟುಗಳ ಹೊಂದಾಣಿಕೆ ಮಾಡಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ."

ಲಿಲ್ಲ. ಅದರ ಘೋರ ತರಂಗಗಳನ್ನು ಕೇಳುತ್ತ ಒಂದು ಸಲ ಸಾಗರ ತೀರದಲ್ಲಿಯ ಮೂರಂತಸ್ತಿನ ಮಾಳಿಗೆಯಲ್ಲಿ ಮಲಗಿದ್ದಾಗ ನನಗೆ ಒಂದು ತೆರನಾದ ಭೀತಿಯಾಗುತ್ತಿತ್ತು. ಕತ್ತಲಲ್ಲಿ ಸಾಗರದ ಅಲೆ ಎದ್ದು ಎದ್ದು ಭೋರ್ಗರೆಯುತಿದ್ದವು. ಕೆಳಗಿಳಿದು ಹೋಗಿಬಿಡಲೆ ಅನ್ನಿಸಿತು. ಆದರೆ ಸಕೆ. ಮಾಳಿಗೆಯ ಮೇಲೆಯೇ ನಿಂತು ಸಾಗರವನ್ನು ನಿಟ್ಟಿಸಿದೆ. ಅದೊಂದು ಘೋರ ದೃಶ್ಯ. ಭೀಭತ್ಸ ಸನ್ನಿವೇಶ. ಸಮುದ್ರದಲ್ಲಿ ಮಿಂದಾಗ ತೆರೆಯೊಂದಿಗೆ ತೇಲಿ ಹೋಗಿ ಮುಳುಗು ಹಾಕಿದ್ದೆ. ನನಗರಿಯದಂತೆ ಮತ್ತೊಂದು ತೆರೆ ನನ್ನನ್ನು ತೀರ ಸೇರಿಸಿತ್ತು. ಸಂಜೆಯ್ಹೊತ್ತು ಸಾಗರದಂಚಿನಲ್ಲಿ ಮರಳಿನಲ್ಲಿ ಹೋಗುತ್ತಿದ್ದಾಗ ಲಗ್ಗೆ ಹಾಕುವ ಮಕ್ಕಳಂತೆ ಒಂದೊಂದಾಗಿ ಕಾಲುಗಳನ್ನು ನೇವರಿಸಿ ಹೋಗುತ್ತಿದ್ದವು. ಮತ್ತೊಮ್ಮೆ ಸಾಗರದ ವಿಶಾಲ ತೀರದಲ್ಲಿ ಮರಳಿನಲ್ಲಿ ಸೂರ್ಯಾಸ್ತದ ಬಿಸಿಲಿನಲ್ಲಿ ಹೊಳೆಯುವ ಸಮುದ್ರವನ್ನು ನೋಡುತ್ತಿದ್ದೆ. ಸುಂದರ ಸಾಗರದ ಲಾಸ್ಯದಲ್ಲಿ ಶಿವನ ತಾಂಡವ ಮೂಡಿತ್ತು.

ನನಗೆ ದಾಹವಾಯಿತು. ಗೇಟ್‌ವೇದಿಂದ ಮರಳಿದೆ. ಪಾಷ್ ಹೋಟೆಲಿನಲ್ಲಿ ಹೋಗಿ ನೀರು ಕುಡಿದೆ. ಅದು ಸಮುದ್ರದ ನೀರೇ ಇರಬಹುದೆ? ಅಂದುಕೊಂಡೆ. ಇಸ್ರೇಲಿನಂತೆ ನಮ್ಮ ದೇಶದಲ್ಲಿ ಸಮುದ್ರದ ನೀರನ್ನು ಶುದ್ಧಿಕರಿಸುತ್ತಾರೆಯೋ ಇಲ್ಲವೊ ಯಾರಿಗೆ ಗೊತ್ತು? ಆದರೆ ಸಮುದ್ರ ತೀರದಲ್ಲಿಯೇ ಮಡಕೆಗಳಲ್ಲಿ ನೀರು ತುಂಬಿಕೊಂಡು, ಹುಬ್ಬಳ್ಳಿಯ ಮೊಸರು ಪೇಟೆಯಲ್ಲಿ ಮೊಸರು ಮಾರುವವರಂತೆ ಗ್ಲಾಸುಗಳಲ್ಲಿ ನೀರು ತುಂಬಿಕೊಂಡು ಕುಳಿತ ಸಂತೆಯೊಳಗಿನಿಂದ ಹಾದು ಬಂದಿದ್ದೆ. ನಂತರ ನಾನು ಚಹ ತೆಗೆದುಕೊಂಡೆ ನಾನು ಚಹಕ್ಕಾಗಿ ಕೊಟ್ಟ ಹಣ ನನಗೆ ದುಬಾರಿಯೆನಿಸಲಿಲ್ಲ. ಎ ಬಂಬೈ ಹೈ ಎಂದು ಕೂಡ ನಾನು ನುಡಿದುಕೊಳ್ಳರಲಿಲ್ಲ. ಚಹ ಚೆನ್ನಾಗಿತ್ತು.ಅದಕ್ಕಿಂತ ಹೋಟೆಲ್ ಸುಖಕರವಾಗಿತ್ತು. ಸದಾ ತಿರುಗುತ್ತಿರುವ ಎಲೆಕ್ಟ್ರಿಕ್ ಫ್ಯಾನುಗಳ ಅಡಿಯಲ್ಲಿ ವಿರಾಮವಾಗಿ ಕುಳಿತ ಎಷ್ಟೋ ಜನರಲ್ಲಿ ನಾನೂ ಒಬ್ಬನಾಗಿ ಸ್ವಲ್ಪ ಹೊತ್ತು ಕುಳಿತೆ. ಮುಂಬಯಿಯಲ್ಲಿಯಂತೆ ಮುಂಬಯಿಯವರು ಯಾರು ಅಲ್ಲ ಎಂದು ಹೇಳುವದು ಕಠಿಣ. ನಾನು ಮಾತ್ರ ನಾನೇ ಆಗಿದ್ದೆ. ಮುಂಬಯಿಗೆ ಹೋಗಿ ಬಂದವರೆಲ್ಲ ಹೆದರಿಸುತ್ತಿದ್ದಂತೆ ನನ್ನನ್ನು ಅಲ್ಲಿ ಯಾರೂ ಒಮ್ಮೆಯಾದರೂ ಹೆದರಿಸಲಿಲ್ಲ, ಛೇಡಿಸಲಿಲ್ಲ. ನಾನು ಕೇಳುವ ಪ್ರಶ್ನೆಗಳಿಗೆ ವಿನಯದ ವಾಣಿಯೇ ಕೇಳಿಸುತ್ತಿತ್ತು. ಮಾರ್ಗದರ್ಶನ ಸರಿಯಾಗಿರುತ್ತಿತ್ತು.

ನಾನು ದಾರಿಯ ಬದಿಯಲ್ಲಿ ಫುಟ್‌ಪಾತಿನ ಮಗ್ಗಲಿಗೆ ಹೋಗುತ್ತಿದ್ದೆ. ದಾರಿಯಲ್ಲಿ ಒಂದು ಕಡೆ ಒಂದು ಮನಿ ಪರ್ಸ್ ಬಿದ್ದಿತು. ನನ್ನಷ್ಟಕ್ಕೆ ನಾನು ಹೊರಟಿದ್ದೆ. ನಾನು ಅದನ್ನು ದಾಟಿ ಮುಂದೆ ಹೋದೆ. ನಾನೇದರೂ ಅದನ್ನು ಎತ್ತಿಕೊಂಡಿದ್ದರೆ ಮುಂಬಯಿಯ ಬಿಸಿ ನನಗೆ ತಗಲದೆ ಇರುತ್ತಿರಲಿಲ್ಲ. ಇದ್ದಬಿದ್ದ ಹಣವನ್ನು ಕಳೆದುಕೊಂಡು ಹೋಗಬೇಕಾಗುತ್ತಿತ್ತು. ನನಗೆ ಕೂಡಲೆ ಅರಿವಾಯಿತು ಇದರಲ್ಲೆನೋ ಮಸಲತ್ತು ಇದೆ ಎಂದು. ನಾನು ಯಾವುದನ್ನೂ ನೋಡದೆ ನನ್ನಷ್ಟಕ್ಕೆ ನಾನು ಹೊರಟುಹೋದೆ.

ಸಾಯಂಕಾಲವಾಗಿತ್ತು. ಗೇಟ್‌ವೇ ಬಳಿ ಬಂದೆ. ಆಗಿನ ದೃಶ್ಯವೇ ಬೇರೆ. ಆ ಸುಂದರ ಜಗತ್ತಿನಲ್ಲಿ ನಾನು ಮೈ ಮರೆತೆ. ಗೇಟ್‌ವೇ ವಾತಾವರಣದ ವಿಚಾರ ಈಗ ಬೇರೆಯೇ ಆಗಿತ್ತು. ನಾನಿನ್ನೂ ಮುಂಬಯಿಯಲ್ಲಿರಬೇಕಿತ್ತು. ಹೆಚ್ಚು ವಿಚಾರ ಮಾಡಲಿಲ್ಲ. ✡

ಜಗತ್ಪ್ರಸಿದ್ಧ 'ಮೊನಾ ಲಿಸಾ' ಚಿತ್ರವನ್ನು ಬರೆದ ಲಿಯೋನಾರ್ಡೊ ಡ ವಿಂಚಿ, ಪುಸ್ತಕದಲ್ಲಿ ಬಲದಿಂದ ಎಡಕ್ಕೆ ಎಡಗೈಯಲ್ಲಿ ಬರೆಯುತ್ತಿದ್ದ. ಅಂಥ ಟಿಪ್ಪಣಿಗಳೇ ಸುಮಾರು ೯೦೦೦ ಪುಟಗಳಷ್ಟಿದ್ದವು.

ಧಾರವಾಡದ
ಶ್ರೀ ಕೆ. ಜಿ. ನಾಡಗೀರರೊಂದಿಗೆ
ಸಂದರ್ಶನ

‘ತವಾನಿ’ ಪೈಲ್ವಾನ್ ಅಯ್ಯರ್

ಮನೋಜಕುಮಾರ ಪಾಟೀಲ

ಕೋಲಾರದ ವೆಂಕಟೇಶ್ ಅಯ್ಯರ್ (ಕೆ. ವಿ. ಅಯ್ಯರ್) ಅವರನ್ನು ಒಮ್ಮೆ ನ್ಯಾಯಾಲಯದಲ್ಲಿ ನಿಲ್ಲಿಸಲಾಗಿತ್ತು. ಒಬ್ಬನನ್ನು ಹೊಡೆದ ಸುಳ್ಳು ಆಪಾದನೆ ಆ ಭೀಮಕಾಯನ ಮೇಲೆ ಇತ್ತು. ಹೊಡೆಸಿಕೊಂಡವನೆಂದು ಹೇಳಿದ ವ್ಯಕ್ತಿಗೆ ಅಯ್ಯರ್ ನ್ಯಾಯಾಲಯದಲ್ಲಿ,

"ನಾನು ನಿನಗೆ ಈಗ ಒಂದು ಗುದ್ದುತ್ತೇನೆ. ಅದನ್ನು ತಡೆದುಕೋ. ನಂತರ ನಿನ್ನ ಸವಾಲು ಮುಂದುವರಿಸು" ಎಂದರು. ಶಾಂತವಾಗಿ ಮುಷ್ಟಿ ಮುಂದೆ ಮಾಡಿ, ಹೇಳಿದ ಅವರ ಮಾತು ಕೇಳಿ ಆ ಸಣಕಲು ವ್ಯಕ್ತಿ ಮುಖ ತಗ್ಗಿಸಿದ. ಇವರೊಮ್ಮೆ ಗುದ್ದಿದರೆ ತಾನು ಬದುಕುಳಿಯುವುದೇ ಸಂದೇಹಾಸ್ಪದವೆಂಬ ಭಾವ ಅವನ ಮುಖದಲ್ಲಿ ಮೂಡಿಬಿಟ್ಟಿತ್ತು.

ಕೆಲ ದಿನಗಳ ಹಿಂದೆ ನಿಧನರಾದ ಖ್ಯಾತ ವ್ಯಾಯಾಮಪಟು, ಶ್ರೇಷ್ಠ ಸಾಹಿತಿ ಕೆ. ವಿ. ಅಯ್ಯರರ ಬಗ್ಗೆ ಅವರ ಶಿಷ್ಯರೂ ಧಾರವಾಡದ ಮಲ್ಲಸಜ್ಜನ ವ್ಯಾಯಾಮ ಶಾಲೆಯ ಸ್ಥಾಪಕರೂ ಆದ ಕೆ. ಜಿ. ನಾಡಗೀರರು ಹೇಳಿದ ವಿಷಯವಿದು.

ಕೆ.ವಿ. – ಕೆ.ಜಿ. ಗುರು – ಶಿಷ್ಯ ಸಂಬಂಧಕ್ಕೆ ಸ್ವರ್ಣ ಮಹೋತ್ಸವವನ್ನಾಚರಿಸಬೇಕಾದಷ್ಟು ಹಳೆಯ ಇತಿಹಾಸವಿದೆ.

ಆಗಿನ ಮಾತು. ಇನ್ನೂ ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ಸುಮಾರು ೧೯೨೯–೩೦ ಇರಬಹುದು. ಬಾಗಲಕೋಟೆಯಲ್ಲಿ ಅಖಿಲ ಕರ್ನಾಟಕ ವ್ಯಾಯಾಮ ಪರಿಷತ್ತನ್ನು ಕರೆದಿದ್ದರು. ಧಾರವಾಡದಿಂದ ಕೆ.ಜಿ. ನಾಡಗೀರ ಅವರೂ ಹೋಗಿದ್ದರು.

ಎಣ್ಣೆ ಹಚ್ಚಿದಂತಹ ಕಂಚಿನ ಗೊಂಬೆ ತರ ಹದಮೈಮಾಟದ ತವಾನಿ ಪೈಲ್ವಾನ್ ಅಯ್ಯರ್ ಅವರನ್ನು ನಾಡಗೀರರು ಮೊದಲು ಕಂಡದ್ದು ಅಲ್ಲಿ. ಅವರ ಸ್ನಾಯುನಿಯಂತ್ರಣ, ಶಾರೀರಿಕ ಕಸರತ್ತಿನಲ್ಲಿ ಅವರ ಇಚ್ಛೆಯಂತೆಯೆ ಮಣಿಯುತ್ತಿದ್ದ ಮೈ ಇವೆಲ್ಲ ಹದಿವಯದ ಕೆ.ಜಿ.ಗೆ ಹರುಷ ತಂದವು. ಹುರಿಕಟ್ಟಾದ ಮೈಯ, ಪ್ರಮಾಣಬದ್ಧ ಶರೀರದ ಗ್ರೀಕ್ ಪುತ್ಥಳಿಯಂತಹ ಅಯ್ಯರರನ್ನು ಕಂಡು ರೋಮಾಂಚನಗೊಂಡರವರು.

"ನಾನೂ ಕಲೀಲಿಕ್ಕೆ ಬರ್‍ತೀನಿ, ಕಲಿಸ್ತೀರೇನ್ರಿ?"

"ಬನ್ನಿ, ಬೆಂಗಳೂರಿಗೆ" ತುಂಬು–ಹೃದಯದ ಸ್ವಾಗತ ಬಂತು, ಅಯ್ಯರರಿಂದ. ಆಗ ನಾಡಗೀರರ ಸಂಗಡ ಹೋದವರು ಧಾರವಾಡದ ಬಲಭೀಮ ವ್ಯಾಯಾಮಶಾಲೆಯ ಕೆರೂರ ನಾರಾಯಣರಾಯರು ಮತ್ತು ಬಾಳಾಚಾರ್ಯ ಅವಧಾನಿಯವರು. ಕಾಲ ಕ್ರಮೇಣ ಸ್ಥಿರವಾಗಿ ನಿಂತವರು ನಾಡಗೀರ ಒಬ್ಬರೇ.

ಐದು ಅಡಿ ಏಳು ಅಂಗುಲ ಎತ್ತರದ ಅಯ್ಯರರಿಗೆ ನಿಧನರಾಗುವ ವೇಳೆಗೆ ೮೩ ವರ್ಷ. ತಮ್ಮ 'ತವಾನಿ' ದಿನಗಳಲ್ಲಿ ಅವರ ತೂಕ ೧೭೪ ಪೌಂಡುಗಳು. ೧೯೩೦ರ ಜೂನ್‌ನಿಂದ



ಕೆ. ವಿ. – ಕೆ. ಜಿ. ಗುರು – ಶಿಷ್ಯ...

ಕೆ.ಜಿ. ಬೆಂಗಳೂರಿನಲ್ಲಿ ಇರಲು ಪ್ರಾರಂಭಿಸಿದರು. 'ಹರ್ಕ್ಯುಲಸ್ ಜಿಮ್ನಾಸಿಯಂ' ಎಂಬುದು ಅಯ್ಯರ್ ಅವರು ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಪ್ರಾರಂಭಿಸಿದ್ದ ವ್ಯಾಯಾಮಶಾಲೆಯ ಹೆಸರು.

ಅಯ್ಯರ್ ಬಹಳ ಕಠಿಣ ಪರಿಶ್ರಮಿ. ಇಲ್ಲಿ ಶಬ್ದಗಳು ಅತಿರೇಕವಾದರೂ ಅತಿರಂಜಿತವಾದದ್ದೇನಲ್ಲ. ೨೪೦–೨೪೫ ಪೌಂಡು ತೂಕದ ಜರ್ಕ್ ಮಾಡುತ್ತಿದ್ದರು. ಮಧ್ಯಾಹ್ನ ಎಲ್ಲರಿಗೂ ನಿದ್ರೆಯ ಮಂಪರು ಬಂದರೆ ಅಯ್ಯರರ ಹತ್ತಿರ ಅದು ಸುಳಿಯುತ್ತಿರಲೇ ಇಲ್ಲ. ಶಾರೀರಿಕ ಶಿಕ್ಷಣದ ಬಗ್ಗೆ ನೋಟ್ಸು ತಯಾರಿಸುತ್ತಿದ್ದರು. ಪತ್ರವ್ಯವಹಾರದ ಮೂಲಕ ಒಂದು ಕೋರ್ಸನ್ನೂ ಈ ಬಗ್ಗೆ ಅಯ್ಯರ್ ಆಗ ನಡೆಸುತ್ತಿದ್ದರಂತೆ. ಪ್ರತಿ ಪತ್ರಕ್ಕೂ ಕೈಬರಹದಿಂದಲೇ ಉತ್ತರ. ಸಾಯುವ ಮುಂಚೆ ನಾಡಗೀರರಿಗೆ ಅವರು ಬರೆದ ಪತ್ರವೂ ಸ್ವಹಸ್ತಾಕ್ಷರದಲ್ಲೇ ಇತ್ತು. ಮಧ್ಯಾಹ್ನ ಮಾಡಲು ಕೆಲಸ ಇಲ್ಲದಾಗ ಏನು ಮಾಡುವುದು? ಇದಕ್ಕೆ ಅಯ್ಯರ್ ತಮ್ಮಷ್ಟಕ್ಕೆ ತಾವೇ ಉತ್ತರ ಹುಡುಕಿಕೊಂಡಿದ್ದರು. ರೇಡಿಯೋ, ಗಡಿಯಾರ ಮುಂತಾದ ಯಂತ್ರಗಳನ್ನು ಬಿಚ್ಚಿ ಮೊದಲಿದ್ದ ಹಾಗೆ ಜೋಡಿಸುವುದು ಈ ಹವ್ಯಾಸ. ಇದು ಬೃಹದಾಕಾರವಾಗಿ ಬೆಳೆದು ಅಯ್ಯರ್ ಮುಂದೆ ಬೆಂಗಳೂರಿನ ಒಬ್ಬ ಶ್ರೇಷ್ಠ ಯಂತ್ರ ದುರಸ್ತೀದಾರರಾದರಂತೆ.

*

ಅಯ್ಯರರ ಸ್ವಭಾವ ಶಾಂತ. ಅಕ್ಕಸತನ ಅವರಲ್ಲಿ ಸುಳಿಯುತ್ತಿರಲಿಲ್ಲ. ಒಬ್ಬರಿಗೆ ಕೆಟ್ಟದ್ದಾಗಿ ಮಾತನಾಡಿ ಗೊತ್ತೇ ಇರಲಿಲ್ಲ. ಯಾರಾದರೂ ವಾದ ಮಾಡಿದರೆ ಅವರಿಗೆ ತಿಳಿ ಹೇಳಿ ಪ್ರತಿವಾದ ಮಾಡುವ ಪ್ರವೃತ್ತಿಯೇ ಜಾಸ್ತಿ. ಅವರ ಅಭಿರುಚಿ ಚೊಕ್ಕ. ಅಶ್ಲೀಲ ಮಾತು ತಪ್ಪಿ ಕೂಡ ಕೇಳಲಿಲ್ಲವೆಂದು ನಾಡಗೀರ ಹೇಳುತ್ತಾರೆ.

ಅವರ ಲೈಂಗಿಕ ನಿಗ್ರಹ ಶಕ್ತಿಯೂ ಅಪಾರ. ಯಾರೋ ಕೇಳಿದರಂತೆ, "ನಿಮಗೆ ಮಕ್ಕಳೆಷ್ಟು?"

"ನನಗೇ? ನನಗೆ ಒಬ್ಬನೇ ಮಗ ಮತ್ತು ಒಬ್ಬನೇ ಒಬ್ಬ ಮಗ ಮಾತ್ರ" ಎಂದರಂತೆ.



ಭೀಮಕಾಯ.. ...

ಅಯ್ಯರರ ಒಬ್ಬನೇ ಮಗ — ಡಾ. ಕರ್ಣ — ಬೆಂಗಳೂರಿನ ಪ್ರಸಿದ್ಧ ವೈದ್ಯರಾಗಿದ್ದಾರೆ. ಬಹುಶಃ ಅಯ್ಯರ್ ಅವರು ಬ್ರಹ್ಮಚರ್ಯವನ್ನು ಕಟ್ಟುನಿಟ್ಟಾಗಿ ಪಾಲಿಸಿರಬೇಕು ಎಂದು ನಾಡಗೀರ ಊಹಿಸುತ್ತಾರೆ. ಅಯ್ಯರರಿಗೆ ಇದ್ದ ಒಂದೇ ಚಟವೆಂದರೆ ಪ್ರತಿ ರವಿವಾರ ಇಂಗ್ಲಿಷ್ ಸಿನೇಮಾ ನೋಡುವುದು. ಇದನ್ನು ಅನೂಚಾನವಾಗಿ ಪಾಲಿಸಿಕೊಂಡೇ ಬಂದಿದ್ದರಂತೆ. ಇದರಲ್ಲಿಯೂ ಒಂದು ಕ್ರಮ — ತಾವೇ ಕ್ಯೂನಲ್ಲಿ ನಿಂತು ಟಿಕೆಟ್ ತೆಗೆಸುವುದು.

ಅಯ್ಯರರ ಬಟ್ಟೆಬರೆ ಶುಭ್ರ. ನಿತ್ಯ ಒಗೆದ ಬನಿಯನ್, ಧೋತರ, ನೆಹರೂ ಶರ್ಟು. ಚಪ್ಪಲಿ ಇಲ್ಲವೇ ಪಂಪ್ ಷೂ. ಅವರು ಪ್ಯಾಂಟು ಧರಿಸಿದ್ದನ್ನು ತಾವು ನೋಡಿಯೇ ಇಲ್ಲವೆಂದು ನಾಡಗೀರ ಹೇಳುತ್ತಾರೆ.

*

ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರರಿಗೆ ಅಯ್ಯರರು ಆಗ ನಿತ್ಯ ಮೈ ಮಸಾಜ್ ಮಾಡಲು ಹೋಗುತ್ತಿದ್ದರಂತೆ. ಒಂದು ಪೈಸೆಯನ್ನೂ ಇದಕ್ಕೆ ಪ್ರತಿಯಾಗಿ ಅವರು ಅಪೇಕ್ಷಿಸುತ್ತಿರಲಿಲ್ಲವಂತೆ. ವ್ಯಾಯಾಮಶಾಲೆಯ ಕಟ್ಟಡವನ್ನು ಬಹಳ ಕಷ್ಟಪಟ್ಟು ಕಟ್ಟಿಸುತ್ತಿದ್ದರು. ಹಣ ಇಲ್ಲದೇ ಕಟ್ಟಡ ಅರ್ಧಕ್ಕೇ ನಿಂತಿತ್ತು. ಆದರೂ ಅಭಿಮಾನಿ ಅಯ್ಯರ್ ಯಾರ ಹತ್ತಿರವೂ ಈ ವಿಷಯ ಹೇಳಿರಲಿಲ್ಲ. ಹೇಗೋ ಇದು ಮಹಾರಾಜರ ಕಿವಿಗೆ ಬಿತ್ತು. ಒಂದು ದಿನ ಮಸಾಜ್ ಮುಗಿಸುವ ವೇಳೆಗೆ ಮಹಾರಾಜರು ಒಂದು ಲಕೋಟೆಯನ್ನು ಅಯ್ಯರರಿಗೆ ನೀಡಿ, "ಇದು ಗುರುದಕ್ಷಿಣೆ. ನಿರಾಕರಿಸಬೇಡಿ" ಎಂದರು. ಲಕೋಟೆ ಹಗುರವಾಗಿತ್ತು. ಆದರೆ ಅದರಲ್ಲಿಯ ಹಣ ಭಾರವಾಗಿತ್ತು. ಅರ್ಧಕ್ಕೆ ನಿಂತ ಕಟ್ಟಡ ಪೂರ್ತಿ ಆಯಿತು.

*

ಅಯ್ಯರ್ ಇಹಲೋಕಯಾತ್ರೆ ಮುಗಿಸುವುದಕ್ಕೆ ತುಸುವೆ ಮುಂಚಿನ ಮಾತು. ಬಹುಶಃ ೧೯೭೮ ರ ಅಕ್ಟೋಬರ್ ಇದ್ದೀತು. ನಾಡಗೀರ ಬೆಂಗಳೂರಿಗೆ ಹೋಗಿದ್ದರು. ಆಗಲೂ ಅಯ್ಯರ್ ತಮ್ಮ ಶಾಲೆಯಲ್ಲಿ ಶಾರೀರಿಕ ಶಿಕ್ಷಣದ ಕ್ಲಾಸು ತೆಗೆದುಕೊಳ್ಳುತ್ತಿದ್ದರು. "ಎಡಕ್ಕೆ ಬಾಗಿ" "ಬಲಕ್ಕೆ ತಿರುಗಿ" ಎನ್ನುತ್ತಿದ್ದರಂತೆ. ಕ್ಲಾಸಿನ ನಂತರ ಮಾತಿಗಾರಂಭವಾಯಿತು.

"ನಾನು ಇಲ್ಲಿಯ ವರೆಗೆ ೨೫ ಸಾವಿರ ಜನಕ್ಕಾದರೂ ವ್ಯಾಯಾಮ ವಿದ್ಯೆ ಕಲಿಸಿದ್ದೇನೆ. ೧೯೨೦ ರಿಂದಲೂ ತರುಣರಿಗೆ ಹೇಳುತ್ತ ಬಂದಿದ್ದೇನೆ. ವ್ಯಾಯಾಮದ ಮಹತ್ವ ಅರಿಯಿರಿ. ದೇಹಸಂಪತ್ತು ಬೆಳೆಸಿರಿ, ಠೊಣ್ಯಾ ಆಗಿರಿ ಎಂದು. ನನ್ನ ಕೆಲಸ ಸರಕಾರಕ್ಕೆ ಸಮಾಜಕ್ಕೆ ಹಿಡಿಸಿತೋ ಇಲ್ಲವೋ.

"ಶರೀರ ಶಿಕ್ಷಣ ತಜ್ಞ ಕೆ. ವಿ. ಅಯ್ಯರ್ ಸತ್ತ. ಆದರೆ ಸಾಹಿತಿ ಅಯ್ಯರ್ ಬೆಳಕಿಗೆ ಬಂದ. ಅವನ 'ಶಾಂತಲಾ' ಕಾದಂಬರಿಗೆ ಅಕೆಡೆಮಿ ಪುರಸ್ಕಾರ ಬಂತು. ಇದೊಂದೇ ನನಗೆ ಸಂತೋಷದ ವಿಷಯ. ಯಾವುದಕ್ಕಾಗಿ ಜೀವನವನ್ನು ಗಂಧದ ಹಾಗೆ ತೀಡಿದೆನೋ ಅದಕ್ಕೇನೂ ಪುರಸ್ಕಾರ ಇಲ್ಲ..."

*

"ಆನೆ ಬಹು ಭವ್ಯಪ್ರಾಣಿ. ಅದು ಎಂದಾದರೂ ಮಾಂಸಾಹಾರಿಯೇ? ಅದು ತಿನ್ನುವುದು ಕೇವಲ ಹುಲ್ಲನ್ನು."

ಮಾಂಸ ತಿಂದರೇನೇ ದೇಹಕ್ಕೆ ಶಕ್ತಿ ಎಂಬ ವಾದವನ್ನು ಅಯ್ಯರ್ ಈ ರೀತಿ ಖಂಡಿಸುತ್ತಿದ್ದರು. ಅವರ ಊಟ ತಿಂಡಿಗಳಲ್ಲಿ ಶಿಸ್ತು ಕೂಡ ತಪ್ಪಿಯೂ ಇರುತ್ತಿರಲಿಲ್ಲ. ಅವರ ಊಟ ಸಾದಾ, ಅದೂ ಪಚನವಾಗುವಷ್ಟು ಮಾತ್ರ. ಹೀಗೆಂದ ಮೇಲೆ ಅಜೀರ್ಣದ ಮಾತೇ ಇರಲಿಲ್ಲ. ಅನ್ನ, ಸಾರು, ತರಕಾರಿ, ಹಣ್ಣು-ಹಂಪಲು ಇವೇ ಅವರ ನಿತ್ಯದ ಊಟ. ಮುಂಜಾನೆ ಓವಲ್ಟೀನ್, ಇತ್ತಿತ್ತಲಾಗಿ ಕಾಫಿ. ಅದೂ ಹತ್ತು ಔಂಸು ತೆಗೆದುಕೊಳ್ಳುತ್ತಿದ್ದರಂತೆ.

ಊಟದಲ್ಲಿ ಅಯ್ಯರ್ ಅವರದು ಕ್ಲುಪ್ತತನ. ಸಾಯುವವರೆಗೆ ಅವರು ಬಳಸಿದ್ದು ಕೋಲಾರ ಗಿರಣಿ ಅನ್ನ. ಕೈಯಿಂದಲೇ ಕುಟ್ಟಿಸಿದ ಕೆಂಪಕ್ಕಿ ಅನ್ನ. ಇದರಲ್ಲಿ ಕಬ್ಬಿಣ-ಪ್ರೊಟೀನ್ ಅಂಶ ಇರುತ್ತದಂತೆ. ಅವರ ಹತ್ತಿರ ಒಮ್ಮೆ

ಬಂಗಾಲಿ ವಿದ್ಯಾರ್ಥಿಗಳು ಬಂದರಂತೆ. ಅವರಿಗೆ ಕೆಂಪಕ್ಕಿ ಅನ್ನ ತಿನ್ನಲು ಮುಜುಗರವಾಯಿತಂತೆ. ಆಗ ಅಯ್ಯರ್, "ನೀವು ಇದನ್ನೇ ತಿನ್ನಿರಿ. ಏನೂ ಆಗದು. ಒಂದು ವೇಳೆ ಆಗಿ ಸತ್ತರೆ ನಾನು ಜವಾಬ್ದಾರಿ ಹೊರುತ್ತೇನೆ" ಎಂದರಂತೆ.

■

ಕನ್ನಡದ ಖ್ಯಾತ ನಾಟಕಕಾರ ಟಿ. ಪಿ. ಕೈಲಾಸಂ ಹಲವು ವರ್ಷ ಕೆ. ವಿ. ಅಯ್ಯರರ ಮನೆಯಲ್ಲಿಯೇ ಇದರು. ಇವರ ಮೇಲೆ ಅವರ ಪ್ರಭಾವ ಸಾಕಷ್ಟು ಆಗಿದ್ದಿರಬೇಕು. ವ್ಯಾಯಾಮ ಪ್ರದರ್ಶನ ಕಾಲದಲ್ಲಿ ದೀಪ ವ್ಯವಸ್ಥೆ ಮಾಡುವಲ್ಲಿ ಮತ್ತು ಕೈಲಾಸಂ ಸಾಹಿತ್ಯದ ನಿಶ್ಚಿತ ಪ್ರಭಾವ ಅವರ ಮೇಲೆ ಕಂಡುಬರುತ್ತಿತ್ತು.

ಇದಕ್ಕೂ ಒಂದು ಕಾರಣ ಇದೆಯೆಂದು ನಾಡಗೀರ ಹೇಳುತ್ತಾರೆ. ಒಂದು ದಿನ ಕೈಲಾಸಂ ಅವರ ಮುಂದೆಯೇ ಅಯ್ಯರ್ ಒಂದು ಶಬ್ದವನ್ನು ತಪ್ಪಾಗಿ ಅಂದರಂತೆ. ಇದಾದ ನಂತರ ಕೈಲಾಸಂ, "ಮೈಯ ಜೊತೆಗೆ ತಲೇನೂ ಬೆಳೆಸಬೇಕು" ಎಂದು ಸಲಹೆ ನೀಡಿದರಂತೆ. ಇದು ರಾಮಬಾಣವಾಯಿತು ಅವರಿಗೆ. ನಿತ್ಯ ಎಷ್ಟು ಹೊತ್ತಾದರೂ ಸರಿ, ಮಲಗುವ ಮುಂಚೆ ಒಂದು ತಾಸು ಓದಿಯೇ ಮಲಗುತ್ತಿದ್ದರಂತೆ. ಇದೆಲ್ಲವುಗಳ ಫಲ 'ದೆಯ್ಯದ ಮನೆ', 'ಕೈಲಾಸಂ ಸ್ಮರಣೆ', 'ರೂಪದರ್ಶಿ', 'ಶಾಂತಲಾ' ಮುಂತಾದ ಕೃತಿಗಳು–ಒಂದೊಂದೂ ಕನ್ನಡ ಸಾಹಿತ್ಯದ ಗಟ್ಟಿಗಳು.

ಅಯ್ಯರರ ಸೌಂದರ್ಯ ಪ್ರಜ್ಞೆ ಹೆಸರುವಾಸಿಯಾದದ್ದು. ಒಮ್ಮೆ ಮೈಸೂರು ದಸರಾ ಪ್ರದರ್ಶನದಲ್ಲಿ ಕಂಚಿನ ನಾಟ್ಯಸರಸ್ವತಿ ವಿಗ್ರಹ ನೋಡಿದರಂತೆ. ಅದಕ್ಕೆ ಐದುಸಾವಿರ ರೂಪಾಯಿ ಬೆಲೆ. ಆದರೂ ಬಿಡಲಿಲ್ಲ. ಕೊಂಡು ತಂದೇಬಿಟ್ಟರು. 'ಶಾಂತಲಾ' ಕಾದಂಬರಿಯ ಮುಖಪುಟವನ್ನು ಅಲಂಕರಿಸಿದ್ದು ಈ ವಿಗ್ರಹವೇ.

●

೧೯೭೬–೭೭ ಇರಬಹುದು. ಕೆ.ಜಿ. ನಾಡಗೀರರು ಆ ದಿನಗಳಲ್ಲಿ ಅಯ್ಯರರ ಜನ್ಮಕುಂಡಲಿ ತರಿಸಿದ್ದರು. ಕುಂಡಲಿ ಕಳಿಸುವುದರೊಟ್ಟಿಗೆಯೇ ಅಯ್ಯರ್ ಒಂದು ವಾಕ್ಯವನ್ನೂ ಸೇರಿಸಿದ್ದರು. "When I will kick the bucket?" (ನಾನು ಕೊನೆಯುಸಿರನ್ನು ಯಾವಾಗ ಎಳೆಯಬಹುದು?) ಅವನ್ನು ಪರಿಶೀಲಿಸಿದ ಜ್ಯೋತಿಷಿಗಳು ಹೇಳಿದ್ದರಂತೆ ೧೯೮೦ ರವರೆಗೆ ತೊಂದರೆ ಇದೆ; ಇದು ದಾಟಿದರೆ ಮುಂದೆ ೧೦–೧೫ ವರ್ಷಗಳು ನಿಶ್ಚಿಂತ ಎಂದ.

ಭವಿಷ್ಯ ಸುಳ್ಳಾಗಲಿಲ್ಲ. ಪೈಲ್ವಾನ್ ಅಯ್ಯರ್ ೧೯೮೦ರ ಮೊದಲೇ ಕಾಲವಶರಾದರು. ✡

★★★★★★★★★★★★★★

ಸಾವು........

□ ಚಿಕ್ಕಮಕ್ಕಳಿಗೆ ತಿಳಿಯದ ಸಂಗತಿ
□ ಯುವಜನಾಂಗಕ್ಕೆ ದುಃಸ್ವಪ್ನ
□ ಮಧ್ಯವಯಸ್ಕರಿಗೆ ರಸಭಂಗ
□ ವೃದ್ಧರಿಗೆ ನಿರೀಕ್ಷೆಯ ಸಂಗತಿ
□ ಜೀವನದಲ್ಲಿ ಅಭಿರುಚಿಯುಳ್ಳವರಿಗೆ ಕಟುಕ ಸ್ವರೂಪಿ
□ ಜಿಗುಪ್ಸೆ ಹೊಂದಿದವರಿಗೆ ಜೀವ ತೊರೆಯುವ ಸುಲಭೋಪಾಯ
□ ಅಂಜುಗುಳಿಗಳಿಗೆ ಭೀಕರಭೂತ
□ ಧೈರ್ಯಶಾಲಿಗಳಿಗೆ ನಿಸರ್ಗನಿಯಮ
□ ವಿರಕ್ತರಿಗೆ ಅದೊಂದು ಸ್ಥಿತಿ
□ ಸಾಧಕನಿಗೆ ಮುಂದಿನ ಸಾಧನೆಯ ರಹದಾರಿ
□ ಸ್ಥಿತಪ್ರಜ್ಞನಿಗೆ ಕೇವಲ ಶರೀರದ ಬದಲಾವಣೆ

— ಕು. ಗೀತಾ ಕೊಳಗಲ್

(ಪುಟ ೪೦ ರಿಂದ)

ಈ ಸುತ್ತಿನಿಂದ ಓಡಿಸಿ ಅದರ ಸ್ವಂತ ಕಾಡು ಸೇರಿಸಬೇಕೆಂಬ ಯೋಜನೆಯನ್ನು ಮೊದಲು ಹಾಕಿಕೊಂಡಿದ್ದ ಸಿಬ್ಬಂದಿ ದಿನ ರಾತ್ರಿ ತಾವು ತಂದು ಕಟ್ಟಿದ ಹೆಣ್ಣಾನೆಗಳ ಬಳಿ ಬರುತ್ತಿದ್ದ ಆನೆಯನ್ನು ಕಾಡಿಗೋಡಿಸುವ ಬದಲು ಕಷ್ಟಕ್ಕೆ ಕೆಡವಿ ದಕ್ಕಿಹಾಕಿಕೊಳ್ಳುವ ಯೋಚನೆ ಮಾಡಿತು. ತನ್ನ ಕಾಡನ್ನು ಆನೆ ಏಕೆ ಬಿಟ್ಟು ಬಂದಿದೆ; ಅದರ ವಯಸ್ಸೇನು; ಇಂಥ ವಯಸ್ಸಿನ ಒಂಟಿ ಆನೆ ತಮ್ಮ ದಕ್ಕಿಹಾಕಿಕೊಳ್ಳುವ ಯತ್ನವನ್ನು ಸೈರಿಸೀತೆ – ಎಂಬೆಲ್ಲ ಪ್ರಶ್ನೆಗಳು ವನ್ಯಮೃಗ ಸಂರಕ್ಷಣೆಯ ಭಾರ ಹೊತ್ತು ಪರಿಣತ ಪದವಿಗೂ ಏರಿದ್ದ ಸಿಬ್ಬಂದಿಯ ಮನಸ್ಸಿಗೆ ಬರಲೇ ಇಲ್ಲ.

ಕಾಡಿಗಟ್ಟುವುದಕ್ಕಿಂತ ದಷ್ಟಪುಷ್ಟವಾಗಿರುವ ಆನೆಯನ್ನು ಹಿಡಿದರೆ ತಮಗೆ ಸಿಗುವ ಸನ್ಮಾನ ಇಲಾಖೆಗಾಗುವ ಲಾಭ ಅಪಾರ ಎಂಬ ಆಮಿಷ ತುಂಬಿಕೊಂಡ ಸಿಬ್ಬಂದಿ ಅತ್ಯುತ್ಸಾಹದಿಂದ ಸಾಕಷ್ಟು ಆಳವಾದ ಕಪ್ಪವನ್ನು ತೋಡಿಸಿತು. ಗುಂಡಿಯ ತಲೆಯ ಮೇಲೆ ಸೂರೇರಿಸಿ ತೆಳುವಾಗಿ ಮಣ್ಣು ಹರಡಿ ಹುಲ್ಲು ನೆಟ್ಟು ಇಕ್ಕೆಲದಲ್ಲೂ ಹೆಣ್ಣಾನೆಗಳನ್ನು ಕಟ್ಟಿತು.

ತನ್ನ ಹೃದಯಕ್ಕೆ ತೀರ ಹತ್ತಿರ ಆಗಿಹೋಗಿದ್ದ ಹೆಣ್ಣುಗಳನ್ನು ಬಿಟ್ಟಿರಲಾಗದ ಆನೆ ಹೊತ್ತು ಮುಳುಗುವುದನ್ನೇ ಕಾದಿದ್ದು ಅತ್ಯುತ್ಸಾಹದಿಂದ ತನ್ನ ಮನದನ್ನೆಯರೆಡೆಗೆ ಬಂದಿದ್ದಿತು. ತನ್ನ ಹೆಣ್ಣುಗಳು ಇಂದು ಯಾಕೆ ದೂರ ದೂರ ನಿಂತಿವೆ? ಏನಿದೀ ಹೊಸ ಮಣ್ಣು? ಈ ಅನುಮಾನಗಳು ಆನೆಯನ್ನು ಕಾಡಿದ್ದರೂ ಕಾಂತ ಶಕ್ತಿಯ ಬಲ ಮಹತ್ತರವಾಗಿದ್ದ ಕಾರಣ ಆನೆ ಹೊಸ ಮಣ್ಣನ್ನು ಬಳಸಿ ಹೆಣ್ಣಿನ ಬಳಿ ಸಾರಿತು. ತಕ್ಕ ಸಮಯ ಕಾದಿದ್ದ ಸಿಬ್ಬಂದಿ ನಾಲ್ಕಾರು ಕಡೆಗಳಿಂದ ಟಾರ್ಚ್ ಲೈಟು ಬಿಟ್ಟಿತು. ಅನಿರೀಕ್ಷಿತವಾದ ಈ ಬೆಳಕಿನ ಈಟಿಗಳು ಆನೆಯನ್ನು ಬೆದರಿಸಿತು. ಆನೆ ಹೊಸ ಮಣ್ಣನ್ನು ಮರೆತು ಗಾಭರಿಯಿಂದ ಹಿಮ್ಮೆಟ್ಟಿತು. ನಿಂತ ನೆಲವೇ ಕುಸಿದು ಬಾಯಿ ಬಿಟ್ಟಾಗ ಆನೆ ಕಿರ್ರೋ ಎಂದು ಆರ್ತನಾದ ಮಾಡಿ ಗುಂಡಿಗೆ ಬೀಳತೊಡಗಿತು, ಇದೇನು ಎಂಬ ಕರಾಳ ಭಯ ತಾನು ಬೀಳತೊಡಗಿದ ಗುಂಡಿಯಿಂದ ಮೇಲೇಳಲಾರೆ ಎಂಬ ಅಸಹಾಯಕತೆ ಅಯ್ಯೋ ಆಸೆ ಮೋಸಹೋದೆನಲ್ಲಾ ಎಂಬ ದುಃಖ ದಟ್ಟವಾಗಿ ಕವಿದ ಆನೆ ಬೀಳುತ್ತಾ ಮೈ ಕಾಲುಗಳನ್ನು ಝಾಡಿಸಿತು, ಗುಂಡಿಯನ್ನು ಮುಚ್ಚಲು ಮಣ್ಣ ಕೆಳಗೆ ಜೋಡಿಸಿದ ದಬ್ಬೆಗಳನೇಕವು. ಮೈ ಝಾಡಿಸುತ್ತಾ ಕೆಳಗೆ ಬೀಳುತ್ತಿದ್ದ ಆನೆಗೆ ಚುಚ್ಚಿಕೊಂಡವು. ಗುಂಡಿಗೆ ಬಿದ್ದ ಆನೆ ತನಗಾದ ಘಾತವನ್ನು ಮರೆತು ತಿರ್ರನೆ ತಿರುಗಿತು. ತಾನು ಬಿದ್ದಿದ್ದ ಕಪ್ಪದಿಂದೋಡಲು ಕಾಲೆತ್ತಿ ಗೋಡೆ ಗೀಸಿ ಗೀಸಿ ಯತ್ನಿಸಿತು. ವಿಫಲವಾಗಿ ಗುಂಡಿ ಗೋಡೆಗಳನ್ನು ದಂತಗಳಿಂದ ಗೋರಿತು. ತಲೆಯಿಂದ ಘಟ್ಟಿಸಿತು. ಮೈ ಮನಗಳು ಸೋತಾಗ ಮಾತ್ರ ಹತಾಶಮೂಕವಾಗಿ ನಿಲ್ಲುತ್ತಿದ್ದ ಆನೆ ತನ್ನ ಮೈಗಾದ ಘಾಯಗಳನ್ನು ಕಡೆಗಣಿಸಿ ಕಪ್ಪದಲ್ಲಿ ಸುತ್ತಿ ಸುತ್ತಿ ತಿರುಗಿತಿರುಗಿ ಗೋಡೆಗಳನ್ನು ಘಟ್ಟಿಸುತ್ತಿತ್ತು. ತನ್ನನ್ನಲ್ಲಿಂದ ಮುಕ್ತವಾಗಿಸುವ ವಿಷ್ಣುವಿಗಾಗಿ ಮೊರೆಯಿಡುತ್ತಾ ಆರ್ತ ನಾದ ಮಾಡುತ್ತಿತ್ತು.

ಕರಿಘನವೊಂದನ್ನು ದಕ್ಕಿಹಾಕೊಳ್ಳುವುದು ಸುಲಭವೇ? ಸಿಬ್ಬಂದಿ ಆನೆಯ ಆರ್ತನಾದ–ವನ್ನು ಕೇಳುತ್ತಾ ಖುಷಿಯಿಂದ ರಾತ್ರಿ ಕಳೆಯಿತು. ಗುಂದಿಗೆ ಬಿದ್ದ ಆನೆ ಕ್ರಂದಿಸುವುದು ಸಹಜವೇ. ಮೈ ಮನ ತೂತಾಗಿ ಕಣ್ಣೀರು ತೊಟಕಿಸುತ್ತಿದ್ದ ಆನೆ ಬೆಳಗಾಗ ತಾವು ಕೊಡ ಹೋದ ತಿನಿಸನ್ನು ಮೂಸದೆ ಮುಟ್ಟದೆ ತಿರಸ್ಕರಿಸಿದುದನ್ನು ಪಳಗಿದರೆ ಎಲ್ಲ ಸರಿಹೋಗುತ್ತದೆ ಎಂಬ ಸಮಾಧಾನದಿಂದ ಸಿಬ್ಬಂದಿ ಉಪೇಕ್ಷಿಸಿತು.

ಸುತ್ತಲಿನ ಜನಗಳಿಗೆ ಉಪಟಳ ಕೊಡುತ್ತಿದ್ದ ಮದ್ದಾನೆಯನ್ನು ಸುಲಭದಲ್ಲಿ ಹಿಡಿದು ಇಲಾಖೆಗೆ ಅಮೂಲ್ಯ ಲಾಭ ತಂದಿದ್ದೇವೆ ಎಂಬ ಬಡಾಯಿ ಸುದ್ದಿಯನ್ನು ಸಿಬ್ಬಂದಿ ಮೇಲಧಿಕಾರಿಗಳಿಗೆ ತಿಳಿಸಿತು. ಅವರು ಅದನ್ನು ತಿಳಿಸುವವರಿಗೆ ತಿಳಿಸಿದರು. ಕಾರಲ್ಲಿ ಕುಳಿತು ಓಡೋಡಿ ಬಂದಿದ್ದ ಗಣ್ಯ ಮಹನೀಯ ಮಂದಿ ಆನೆ ಇದ್ದ ನೈಜ ಸ್ಥಿತಿಯನ್ನು ಗಮನಿಸದೆಯೇ ಅದರ ಯೌವನ ಕಾಯ ಇತ್ಯಾದಿಗಳನ್ನು ಹೊಗಳಿದ್ದಿತು. ಸುತ್ತಲೂ ಘೇರಾಯಿಸಿದ್ದ ಜನ ಉಘೇ ಎಂದಿದ್ದಿತು. ಜೊತೆಯಲ್ಲಿ

ಬಂದಿದ್ದ ಪತ್ರಿಕೆಯ ಜನ ಕಪ್ಪದಲ್ಲಿ ಬಿದ್ದು ಹೆಣಗುತ್ತಿದ್ದ ಆನೆಯ ಚಿತ್ರದ ಸಮೇತ ಆನೆಯನ್ನು ಹಿಡಿದ ಕಥೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಿತು. ಬಂದಿದ್ದ ಗಣ್ಯರು ದಿಕ್ಕೆಟ್ಟು ಕ್ರಂದಿಸುತ್ತಿದ್ದ ಆನೆಗೆ ನಾಮಕರಣ ಸಹ ಮಾಡಿ, ಪಳಗಿಸುವುದೇ ಇತ್ಯಾದಿ ಮುಂದಿನ ಕಾರ್ಯಗಳನ್ನು ಜರುಗಿಸುವಂತೆ ಸಿಬ್ಬಂದಿಗೆ ಅಪ್ಪಣೆ ಕೊಟ್ಟು ತೆರಳಿದ್ದರು.

ಆನೆಗೆ ದಾರಬಂಧ ಬಿಗಿಯುವ ಕಾರ್ಯ ಮುಗಿದ ಮೇಲೆ ಸಂಜೆಯ ವೇಳೆಯಲ್ಲಿ ಹಿಂಗಟ್ಟು ಮುಂಗಟ್ಟು ಬಿಗಿದ ಆನೆಯನ್ನು ಸಿಬ್ಬಂದಿ ಹೆಣ್ಣಾನೆಗಳ ಸಹಾಯದಿಂದ ಕಪ್ಪದಿಂದ ಹೊರ ಹೊರಡಿಸಿ ಮರವೊಂದಕ್ಕೆ ಬಿಗಿಯಿತು. ಕೇವಲ ಹಿಂದಿನ ದಿನ ಮಹಾದಿಗ್ಗಜದಂತೆ ತೋರುತ್ತಿದ್ದ ಆನೆಯ ಮೈ ಈಗ ಹಠಾತ್ತನೆ ನೂರು ವರ್ಷಗಳ ಸುಕ್ಕನ್ನು ಹೇರಿಕೊಂಡಂತೆ ಆ ಸುಕ್ಕೆಲ್ಲ ವ್ರಣವಾಗುವಂತೆ ಕಂಡಿತು. ಸಿಬ್ಬಂದಿ ಮುಂದೊಡ್ಡಿದ್ದ ತಿನಿಸನ್ನು ಆನೆ ಮೂಸಿ ಕೂಡ ನೋಡಿರಲಿಲ್ಲ. ಅರಿಷ್ಟನಿವಾರಣೆಯಾಯಿತೆಂದು ಖುಷಿಯಿಂದ ಕಪ್ಪದ ಸುತ್ತ ಫೇರಾಯಿಸಿದ್ದ ಜನ ಆನೆ ಈಗ ಅನುಭವಿಸುತ್ತಿದ್ದ ದಾರುಣತೆಯನ್ನು ಕಂಡು ವಿಚಿತ್ರ ಮೌನ ತಳೆದಿತ್ತು.

ಬಂದಿಯಾದ ಆನೆ ರಾತ್ರಿಯೆಲ್ಲ ಅನ್ನ ನೀರು ಬಿಟ್ಟು ವ್ಯಥೆಯಿಂದ ಕೂಗುತ್ತಿತ್ತು. ನಿನ್ನೆ ತಾನೇ ಕರಿಘನವೊಂದನ್ನು ಹಿಡಿದ ವೀರರೆಂದು ಗಣ್ಯರಿಂದ ಹೊಗಳಿಸಿಕೊಂಡು ಪತ್ರಿಕೆಗಳಲ್ಲಿ ಹಾಕಿಸಿಕೊಂಡಿದ್ದ ಸಿಬ್ಬಂದಿ ಬೆಳಗಾಗ ಗಾಭರಿಯಿಂದ ಆನೆಯ ನೂರು ವ್ರಣಗಳಿಗೆ ಮದ್ದು ಲೇಪಿಸುವ ಕಾರ್ಯದಲ್ಲಿ ತೊಡಗಿತು. ಒಳಚೇತನ ಪುಟಿಸುವ ಜೀವನ ಸಂಭ್ರಮವನ್ನು ನೀಗಿಕೊಂಡ ಆನೆ ನರಳಿ ನರಳಿ ನಿಲ್ಲಲೂ ಆರದೆ ಎಲುಬು ಚಕ್ಕೆಗಳ ವ್ರಣಮಯ ಗೋಪುರವಾಗಿ ಪುಟಿದು ಬಿದ್ದಿತು. ಈಗಂತೂ ಪ್ರಾಣವನ್ನು ತ್ಯಜಿಸಲೇ ಕಷ್ಟಪಡುತ್ತಿದ್ದ ಆನೆಯ ಸಂಕಟವನ್ನು ಕಂಡ ಜನತೆ ಆನೆ ತಮಗೆ ಕೊಟ್ಟ ಕಿರುಕುಳವನ್ನು ಮರೆತು ತಾನೂ ದುಃಖಿಸಿತು. ಅರಣ್ಯದ ತೊಡವಿನಂತೆ ಸ್ವತಂತ್ರ ಸ್ವೇಚ್ಛೆಯಿಂದ ಚಲಿಸುತ್ತಿದ್ದ ಆನೆಗೆ ಹೀಗಾಗಬಾರದಾಗಿತ್ತೆಂದು ಶೋಕಿಸಿತು.

ಕೇವಲ ಕೆಲವು ದಿನಗಳ ಹಿಂದೆ ಸಿಬ್ಬಂದಿಯ ಧೀಮಂತರು ಆನೆಯನ್ನು ಹಿಡಿದಾಗ ಪತ್ರಿಕೆಗಳಲ್ಲಿ ಪ್ರಕಟವಾದಂಥ ಬಡಾಯಿ ಸುದ್ದಿ ಆನೆ ಈಗ ಇದ್ದ ಕರುಣಾಜನಕ ಸ್ಥಿತಿಯನ್ನು ಪ್ರಕಟಿಸಿರಲಿಲ್ಲ. ಆದರೆ ಆನೆ ಮೌನವಾಗಿ ಕಣ್ಣೀರು ಸುರಿಸುತ್ತಾ ಸಾಯುವಾಗ ಮಾಡಿದ್ದ ಹತಾಶ ಉದ್ಗಾರಗಳು ಮುಗಿಲು ಮುಟ್ಟಿರಬೇಕು.

ಆನೆ ಪಟ್ಟ ಪಾಡನ್ನು ಸ್ವತಃ ತನ್ನಲ್ಲೇ ಪಟ್ಟು ಆನೆಗಾದ ದುರಂತದಿಂದ ಅಂತಃಕರಣವ್ಯಥಿತನಾದ ಒಬ್ಬಾತನ ಪತ್ರವಾಗಿ ಮತ್ತೊಬ್ಬನ ಒಂದಾನೆಯಿತ್ತೆಂಬ ಕಥೆಯಾಗಿ ಪ್ರಕಟವಾಗಿದ್ದಿತು. ✿



ನೀವು ಆನೆಯನ್ನು ಹಿಂಗಾಲುಗಳಿಂದ ಹಿಡಿದಾಗ ಅದು ಓಡಿಹೋಗಲು ಯತ್ನಿಸುತ್ತಿದ್ದರೆ, ಹಾಗೆ ಮಾಡಲು ಬಿಟ್ಟುಬಿಡುವುದೇ ಶ್ರೇಯಸ್ಕರ.

— ಅಬ್ರಾಹಂ ಲಿಂಕನ್

* * *

ಕುಂಚು-ತುಣುಕುಗಳೇ ನಮ್ಮನ್ನು ಕಂಗೆಡಿಸುವುದು; ನಾವು ಆನೆಯಿಂದ ತಪ್ಪಿಸಿಕೊಳ್ಳಬಹುದು, ಆದರೆ ನೊಣದಿಂದ ಮಾತ್ರ ಪಾರಾಗಲಾರೆವು.

— ಹೆನ್ರಿ ವ್ಹೀಲರ್ ಶಾ


ಮಿಂಚಿನಂತಹ
ಸುಪರ್ ರಿನ್ ಬಿಳುಪು
ಬೇರೆ ಯಾವುದೇ ಡಿಟರ್ಜಂಟ್ ಬಿಲ್ಲೆ
ಅಥವಾ ಬಾರ್‌ಗಿಂತ ಅಧಿಕ ಬಿಳುಪು
ನೋಡಿದೊಡನೆ ತಪ್ಪದೆ ಗುರುತಿಸುವಂಥ ಬಿಳುಪು ನಿಮ್ಮ ಬಟ್ಟೆಗಳಿಗೆ—ನಿಯಮಿತವಾಗಿ
ಸುಪರ್ ರಿನ್‌ನಿಂದ ಒಗೆಯುವುದರಿಂದ ಬಟ್ಟೆಗಳಿಗೆ ಬರುವ ಬಿಳುಪೇ ಬೇರೆ.
ಬೇರೆ ಯಾವುದೇ ಡಿಟರ್ಜಂಟ್ ಬಿಲ್ಲೆ ಅಥವಾ ಬಾರ್‌ಗಿಂತ
ಅಧಿಕ ಬಿಳುಪು ಕೊಡುತ್ತದೆ ಸುಪರ್ ರಿನ್. ಏಕೆಂದರೆ
ಸುಪರ್ ರಿನ್‌ನಲ್ಲಿ ಅಧಿಕ ಬಿಳುಪುಗೊಳಿಸುವ ಶಕ್ತಿ ಇದೆ.
ನಿಮಗೆ ನೀವೇ ಖಾತ್ರಿ ಮಾಡಿಕೊಳ್ಳಿ:
ಬೇರೆ ಯಾವುದೇ ಡಿಟರ್ಜಂಟ್ ಬಾರ್‌ನಿಂದ ಒಗೆದದ್ದು
ಸುಪರ್ ರಿನ್‌ನಿಂದ ಒಗೆದದ್ದು
SUPER RIN
ಸುಪರ್ ರಿನ್‌ನಲ್ಲಿ ಅಧಿಕ ಬಿಳುಪುಗೊಳಿಸುವ ಶಕ್ತಿ ಇದೆ.
ಹಿಂದುಸ್ಥಾನ್ ಲೀವರ್ ಅವರ ಉತ್ಕೃಷ್ಟ ತಯಾರಿಕೆ.
ಲಿಂಟಾಸ್-RIN.40-1811

ನಿಮ್ಮ ಶಬ್ದಭಂಡಾರ ಬೆಳೆಯಲಿ

ಶಬ್ದ ಭಂಡಾರವು ಹಣದ ಭಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. **ಕರ್ಣಾಕರ್ಣಿಕೆ**
(ಅ) ಹೂವಿನ ಮಧ್ಯದಲ್ಲಿರುವ ಕುಸುಮ (ಆ) ಲೆಕ್ಕಕ ಬರೆಯುವ ಪುಸ್ತಕ (ಇ) ಕಿವಿಯ ಆಭರಣ (ಈ) ಕಿವಿಯಿಂದ ಕಿವಿಗೆ ಹಬ್ಬಿದ ಮಾತು

೨. **ಅಂಧಾದುಂದಿ**
(ಅ) ಸಿಕ್ಕಾಬಟ್ಟೆ ವೆಚ್ಚ (ಆ) ಕುರುಡರ ಆಶ್ರಮ (ಇ) ಕತ್ತಲೆಯ ಬಟ್ಟಣೆ (ಈ) ಪಂಜಿನ ಬೆಳಕು

೩. **ಅವಾಢವ್ಯ**
(ಅ) ತಾಳಲಾರದ್ದು (ಆ) ಮದುವೆಯಾಗದ ಹೆಣ್ಣು (ಇ) ಅಳತೆ ಮೀರಿದ (ಈ) ಬೆಳವಣಿಗೆಯಾಗದ

೪. **ಹಚ್ಚಡ**
(ಅ) ಪರಿಮಳ ದ್ರವ್ಯ ಆ) ದಪ್ಪ ಬಟ್ಟೆ (ಇ) ಪ್ರೀತಿ (ಈ) ಚಾಡಿ ಮಾತು

೫. **ಪಟಲ**
(ಅ) ಪತಾಕೆ (ಆ) ಮುಚ್ಚಳ (ಇ) ಚಿತ್ರ (ಈ) ಓದುವಿಕೆ

೬. **ತೇದಿ**
(ಅ) ಸವೆದುಹೋದದ್ದು (ಆ) ನದಿ ದಾಟುವ ಸ್ಥಳ (ಇ) ಹರಿದದ್ದನ್ನು ಹೊಲಿದದ್ದು (ಈ) ತಾರೀಖು

೭. **ತೇಮಾನ**
(ಅ) ಸವೆತ (ಆ) ತಾರೀಖು (ಇ) ಅಹಂಕಾರ (ಈ) ನಿರಹಂಕಾರ

೮. **ತನಿಖೆ**
(ಅ) ದುರ್ಬಲತೆ (ಆ) ಶೋಧ (ಇ) ಶರೀರದ ರೋಗ (ಈ) ಸಂಬಳ

೯. **ಛೇದ**
(ಅ) ತುಂಡರಿಸುವುದು (ಆ) ಬೇರೆ ಬೇರೆ (ಇ) ಒಂದು ದೇಶ (ಈ) ಮೋಸ

೧೦. **ಜಕ್ಕುಲಿಸು**
(ಅ) ತೂಗು (ಆ) ಜಾರು (ಇ) ಕಚಕುಳಿಯಿಕ್ಕು (ಈ) ಉಕ್ಕಿ ಹರಿ

೧೧. **ಘಾತಕ**
(ಅ) ಪಾಪ (ಆ) ಕೊಲ್ಲುವ (ಇ) ಮೊಂಡು ಹಿಡಿಯುವವ (ಈ) ಉಪಾಯಗಾರ

೧೨. **ದರವೇಶಿ**
(ಅ) ಬೆಲೆ ಕಟ್ಟಲಾರದ್ದು (ಆ) ಪ್ರತಿಯೊಂದರ ಬೆಲೆ (ಇ) ಬಾಗಿಲ ಕಾಯುವವ (ಈ) ಭಿಕ್ಷುಕ

'ಶಬ್ದ ಭಾಂಡಾರ'ದ ಸರಿಯಾದ ಅರ್ಥಗಳು

೧. **ಕರ್ಣಾಕರ್ಣಿಕೆ** (ಈ) ಕಿವಿಯಿಂದ ಕಿವಿಗೆ ಹಬ್ಬಿದ ಮಾತು, ಖಚಿತಪಡದ ಸುದ್ದಿ. ಉದಾ:— ಕರ್ಣಾಕರ್ಣಿಕೆಯೆನ್ನು ನಂಬಬೇಡ. [ಸಂ. ಕರ್ಣ = ಕಿವಿ + ಆಕರ್ಣಿಕಾ = ಆಲಿಸಿದ್ದು]

೨. **ಅಂಧಾದುಂದಿ** (ಅ) ಸಿಕ್ಕಾಬಟ್ಟೆ ವೆಚ್ಚ, ಅಪವ್ಯಯ, ದುಂದು ವೆಚ್ಚ. ಉದಾ:— ಅಂಧಾದುಂದಿಯಿಂದ ವ್ಯಾಪಾರ ದಿವಾಳಿಯಾಯಿತು. [ಹಿಂದಿ ಅಂಧಾ = ಕುರುಡ + ದುಂಧ = ಧೂಳಿ ಬೆರೆತ ಕತ್ತಲೆ]

೩. **ಅವಾಢವ್ಯ** (ಇ) ಅಳತೆ ಮೀರಿದ, ಅತಿಯಾದ; ನಿರ್ವಹಿಸಲಾರದ. ಉದಾ:— ಅವಾಢವ್ಯವಾಗಿ ಬೆಳೆದ ನೌಕರಶಾಹಿ. [ಮರಾಠಿ, ಸಂಸ್ಕೃತ ಅವೋಢವ್ಯದಿಂದ, ಅ = ಅಲ್ಲ + ವೋಢವ್ಯ = ಹೊರಬಲ್ಲದ್ದು]

೪. **ಹಚ್ಚಡ** (ಅ) ದಪ್ಪ ಬಟ್ಟೆ, ದುಪ್ಪಟಿ, ಹೊದಿಕೆ; ಉದಾ:— ಹೊದ್ದುಕೊಳ್ಳಲಿಕ್ಕೆ ಹಚ್ಚಡ ಇಲ್ಲ. [ಪಚ್ಚಡ, ಸಂ. ಪ್ರಚ್ಛದ = ಹೊದಿಕೆ]

೫. **ಪಟಲ** (ಅ) ಮುಚ್ಚಳ; ಛಾವಣಿ; ತೆರೆ; ಹೂವಿನ ದಳ, ಕಣ್ಣಿನ ಪರೆ; ಸಮೂಹ. ಉದಾ:—ಮಂಜಿನ ಪಟಲ, [ಸಂ.]

೬. **ತೇದಿ** (ಈ) ತಾರೀಖು, ದಿನಾಂಕ, ದಿವಸ. ಉದಾ:— ಆಶ್ವಿನ ಮಾಸದ ಐದನೇ ತೇದಿ. [ದೇಶ್ಯ, ಸಂ. ತಿಥಿಯಿಂದ?]

೭. **ತೇವಮಾನ** (ಅ) ಸವೆತ; ಸವಕಳಿ; ಲೋಹದ ಕೆಲಸದಲ್ಲಿ ತಿಕ್ಕುವುದರಿಂದಾಗುವ ಕೊರೆ; ನಷ್ಟ. ಉದಾ:— ಕುಸುರಿ ಕೆಲಸದ ಬಳೆಯಲ್ಲಿ ತೇವಮಾನ ಹೆಚ್ಚು. [ದೇ. ತೇಯ್ = ತಿಕ್ಕು + ಮಾನ = ಅಳತೆ.]

೮. **ತನಿಖೆ** (ಅ) ಶೋಧ, ತಪಾಸಣೆ, ನ್ಯಾಯನಿರ್ಣಯಕ್ಕೆ ಬೇಕಾದ ತಥ್ಯಗಳನ್ನು ಕಂಡುಹಿಡಿಯುವುದು; ಉದಾ:—ಪೋಲೀಸರ ತನಿಖೆ ಮುಗಿದಿಲ್ಲ. [ಅರಬ್ಬಿ-ತನ್‌ಕೀಃ]

೯. **ಛೇದ** (ಅ) ತುಂಡರಿಸುವುದು, ಕತ್ತರಿಸುವುದು. ಉದಾ:— ಅವನ ಶಿರಚ್ಛೇದವಾಯಿತು. [ಸಂ. ಛಿದ್ = ಕತ್ತರಿಸುವಿನಿಂದ]

೧೦. **ಜಕ್ಕುಲಿಸು** (ಇ) ಕಚಕುಳಿ ಇಕ್ಕು; ಕಟ್ಟಾಡಿಸು; ಮೆತ್ತಗೆ ಅಪ್ಪಿಕೊಳ್ಳು; ಸಂತೋಷಪಡಿಸು. ಉದಾ:— ಜಕ್ಕುಲಿಸಿ ನಗಿಸುತ್ತಾಳೆ. [ದೇಶ್ಯ]

೧೧. **ಘಾತಕ** (ಅ) ಕೊಲ್ಲುವ; ನಾಶ ಮಾಡುವ; ಬಡಿಯುವ; ಅಪಾಯಕರ. ಉದಾ:— ಇದು ತುಂಬಾ ಘಾತಕ ವ್ಯವಸ್ಥೆ. [ಸಂ.]

೧೨. **ದರವೇಶಿ** (ಈ) ಭಿಕ್ಷುಕ, ತಿರುಕ, ಭಿಕ್ಷೆಯಿಂದ ಉಪಜೀವಿಸುವವ; ಫಕೀರ, ನಿರ್ಗತಿಕ. ಉದಾ:— ದರದೇಶಿಯ ಹಾಗೆ ತಿರುಗುತ್ತಾನೆ. [ಅರಬ್ಬಿ, ದರವೇಶ್ = ಭಿಕ್ಷುಕ]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ, ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯—೧೦ ,,	...	ಉತ್ತಮ
೧೧—೧೨ ,,	...	ಅತ್ಯುತ್ತಮ

ಪುಸ್ತಕ ವಿಭಾಗ



ಅಂಬಳೆ ವೆಂಕಟರಾಂ

ಡಾ. ಪ್ರಭುಶಂಕರ್

ಸಂಗ್ರಹ: ಶ್ರೀ ಹಾ.

ಅಂಬಳೆ ವೆಂಕಟರಾಂ

'ಜನಮನ'*- ಇದೊಂದು ವ್ಯಕ್ತಿ ಚಿತ್ರಗಳ ಸಂಕಲನ. ಪ್ರಭುಶಂಕರರು ತಮ್ಮ ಕೃತಿಯ ವಸ್ತುವಾಗಿ ಆಯ್ದುಕೊಂಡಿರುವವರಲ್ಲಿ ಬಹು ಜನರ ಹೆಸರು ವೃತ್ತಪತ್ರಿಕೆ-ಗಳಲ್ಲಿ ಎಂದೂ ಬಂದದ್ದಲ್ಲ. ಮಹಾರಾಜಾ ಕಾಲೇಜಿನಲ್ಲಿ ಅಟೆಂಡನ್ಸ್ ರಜಿಸ್ಟರ್ ಹೊತ್ತು ತಿರುಗುತ್ತಿದ್ದ ಪುಟ್ಟಯ್ಯನವರೂ ಕೋಲಾರದ ಕಾಲೇಜಿನ ಅಟೆಂಡರ್ ಅಬ್ದುಲ್ ಸತ್ತಾರ್ ಸಾಹೇಬರೂ ವ್ಯವಹಾರಜ್ಞ ಪತ್ರಿಕಾ ಸಂಪಾದಕರ ಕಣ್ಣಿಗೆ ಹೇಗೆ ಬಿದ್ದಾರು! ಪ್ರಭುಶಂಕರರಿಗೆ ಅವರನ್ನು ನೋಡಲು ಬೇಕಾದ ದೃಷ್ಟಿಪಾಟವವಿದೆ. ಇಲ್ಲಿ ಚಿತ್ರಿತವಾಗಿರುವವರು ಕೇವಲ ತಮ್ಮ ಮಾನವತೆಯಿಂದ ನಮ್ಮ ಪ್ರೀತಿಯನ್ನೂ ಗೌರವವನ್ನೂ ಗಳಿಸುವ ಜನ; ಆಕರ್ಷಕವಾದ ಸ್ವಭಾವ ವೈಚಿತ್ರ್ಯದಿಂದಲೂ ಕೊಂಕು ತಿರುವುಗಳಿಂದಲೂ ನಮ್ಮಲ್ಲಿ ನಗೆಯನ್ನು ಅರಳಿಸುವ ಜನ; ತಮ್ಮ ಮಾನವ ಪ್ರೇಮದಿಂದ, ಕರ್ತವ್ಯನಿಷ್ಠೆಯಿಂದ, ದಯಾರ್ದ್ರ ಹೃದಯದಿಂದ ನಮ್ಮ ಹೃದಯ-ವನ್ನು ಹೊಗುವ ಜನ. ಎಷ್ಟು ಬಗೆಯ, ಎಷ್ಟು ವೈವಿಧ್ಯವುಳ್ಳ ಮನೋವೃತ್ತಿಯ ಜನರಿದ್ದಾರೆ, ಇಲ್ಲಿ !

ನನ್ನ ಮನಸ್ಸಿನ ಮೇಲೆ ಮಹತ್ತಾದ ಪರಿಣಾಮವುಂಟು. ಮಾಡಿದ ವ್ಯಕ್ತಿಚಿತ್ರ ಅಂಬಳೆ ವೆಂಕಟರಾಂ ಅವರದು. ಅವರ ಕಥೆಯನ್ನು, ಪ್ರಭುಶಂಕರರು ತುಂಬು ಹೃದಯದಿಂದ ಬರೆದಿರುವ ಮಾತುಗಳಲ್ಲೇ ಓದಬೇಕು.

(ಎ. ಎನ್. ಮೂರ್ತಿರಾಯರ ಮುನ್ನುಡಿಯಿಂದ)

[illegible]ನೇ ಇಸವಿಯಲ್ಲಿ ಅಂದರೆ ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ, ನನಗೆ ಕೋಲಾರದ ಇಂಟರ್‌ಮೀಡಿಯಟ್ ಕಾಲೇಜಿಗೆ ಕನ್ನಡ ಅಧ್ಯಾಪಕನಾಗಿ ವರ್ಗವಾಯಿತು. ಹೋದೆ. ಅಲ್ಲಿ ಇರುವುದೆಲ್ಲಿ ಎಂಬ ಪ್ರಶ್ನೆ ಬಂತು. ನಮ್ಮೂರಿನವರೇ ಆದ ಮಿತ್ರರು ಶ್ರೀನಿವಾಸ ಅಯ್ಯಂಗಾರ್ಯರು ಅಲ್ಲಿ ಭೌತಶಾಸ್ತ್ರದ ಅಧ್ಯಾಪಕರು. ಅವರು, "ನಾವು ಮೂರು ಜನ ಒಂದು ದೊಡ್ಡ ಮನೆಯಲ್ಲಿದ್ದೇವೆ. ನೀವೂ ಬನ್ನಿ, ಅಲ್ಲೇ ಇರಿ," ಎಂದರು. ಈ ಆಹ್ವಾನವೇ ವಜ್ರದ ಗಣಿಗೆ ಕೊರೆದ ದಾರಿಯಾಯಿತು.

ಡಿಸೆಂಬರ್ ತಿಂಗಳ ಒಂದು ಪ್ರಾತಃಕಾಲ, ಗಂಟು ಮೂಟೆ ಹಿಡಿದುಕೊಂಡು ಕೋಲಾರದ ಚಳಿಯಲ್ಲಿ ನಡುಗುತ್ತಾ "ನಮ್ಮ" ಮನೆಯನ್ನು ಪ್ರವೇಶಿಸಿದೆ. ಎತ್ತರವಾದ ತೇಜಸ್ವಿ ವ್ಯಕ್ತಿಯೊಂದು ಶುಭ್ರವಾದ ಒಂದು ಪಂಚೆ ಸುತ್ತಿಕೊಂಡು, ಶುಭ್ರವಾದ ಬನಿಯನ್ ತೊಟ್ಟುಕೊಂಡು ದಪ್ಪನೆಯ ಗಾಜಿನ ಕನ್ನಡಕದ ಹಿಂದೆ ದೊಡ್ಡದಾಗಿ ಕಣ್ಣು ಹೊರಳಿಸುತ್ತಾ "ಬನ್ನಿ ಬನ್ನಿ" ಎಂದಿತು. ತಿರುಗಿ ನೋಡಿದರೆ ಕೈಯಲ್ಲಿ ದೊಡ್ಡ ಸೌಟು! ಆ ಮೇಲೆ ಗೊತ್ತಾಯಿತು, ಆ ವ್ಯಕ್ತಿ ಒಳಗೆ ಸ್ಟೋವಿನ ಮೇಲೆ ಒಂದು ಸೇರು ಹಾಲಿಟ್ಟು ಅದನ್ನು ಕಾಯಿಸಿ, ಅದಕ್ಕೆ ಬಾದಾಮಿ, ಕೇಸರಿ ಹಾಕಿ ಈ ಸೌಟಿನಿಂದ ಅದನ್ನು ತಿರುಗಿಸುತ್ತಿತ್ತು, ಎಂದು. ನಾನು ಗಂಟು ಮೂಟೆ ಕೆಳಗಿಟ್ಟು ಕೈ ಮುಗಿದು ನನ್ನ ಹೆಸರು ಹೇಳಿದೆ. ಆ

* ಪ್ರಕಾಶಕರು : ಶ್ರೀನಿಧಿ ಎಂಟರ್‌ಪ್ರೈಸಸ್, ೩೨೯, ಚಾಮುರಾಜ ಮೊಹಲ್ಲಾ, ಮೈಸೂರು-೪, ೧೯೭೪.

ವ್ಯಕ್ತಿಯ ಹೆಸರು ವೆಂಕಟರಾಂ ಎಂದು ಗೊತ್ತಾಯಿತು. ಅವರು ಅದೇ ಮನೆಯಲ್ಲಿ ವಾಸಿಸುತ್ತಿರುವರೆಂದೂ, ಫಿಸಿಕ್ಸ್ ಅಧ್ಯಾಪಕರೆಂದೂ ಗೊತ್ತಾಯಿತು. ಒಂದು ಲೋಟ ಘಮಘಮಾಯಮಾನವಾದ ಬಾದಾಮಿ ಹಾಲಿನ ಸಾಕ್ಷಿಯಾಗಿ ನಮ್ಮ ಸ್ನೇಹ ಸ್ಥಾಪಿತವಾಯಿತು.

ಎರಡೇ ದಿನದಲ್ಲಿ ಗೊತ್ತಾದ ವಿಷಯ ವೆಂಕಟರಾಂ ಪರಮ ಸ್ನೇಹಮಯಿ ಎಂಬುದು. ಇತರಿಗಾಗಿ ಏನು ಬೇಕಾದರೂ ತ್ಯಾಗ ಮಾಡಲು ಸಿದ್ಧರಾಗಿದ್ದರು. ಇಷ್ಟು ಮೂಲ ಬಂಡವಾಳ ಸಾಕಾಗಿತ್ತು. ನಮ್ಮ ಸ್ನೇಹ ವ್ಯವಹಾರ ವೃದ್ಧಿ ಹೊಂದಲು. ನನ್ನ ವಯಸ್ಸಿನವರೇ ಆದ ಆತ ನನ್ನ ಯೋಗಕ್ಷೇಮವನ್ನು ತಮ್ಮ ಕರ್ತವ್ಯ ಎಂಬಂತೆ ವಹಿಸಿಕೊಂಡರು. ಅದಕ್ಕೆ ಅವರಿಗಿದ್ದ ಅಧಿಕಾರ ನನಗಿಂತ ಸ್ವಲ್ಪ ಸಮಯ ಮುಂಚೆ ಕೋಲಾರಕ್ಕೆ ಹೋಗಿದ್ದುದು. ಊಟ, ಉಪಚಾರ ಎಲ್ಲ ವ್ಯವಸ್ಥೆಗಳನ್ನು ನೋಡಿಕೊಂಡದ್ದು ಮಾತ್ರವಲ್ಲ ಬಟ್ಟೆ–ಬರೆ ವ್ಯಾಸಂಗ–ವಿಚಾರ ಇವುಗಳಲ್ಲಿ ಸಲಹೆ ಸೂಚನೆಗಳನ್ನು ಕೊಡಲು ತೊಡಗಿದರು. ನನ್ನ ಆಗಿನ ಸ್ಥಿತಿಯಲ್ಲಿ ಇವೆಲ್ಲ ಅತ್ಯಂತ ಸ್ವಾಗತಾರ್ಹವಾಗಿದ್ದುವು.

ವೆಂಕಟರಾಂ–ಇನ್ನು ಅವರನ್ನು ಭಟ್ಟ ಎಂದೇ ಕರೆಯುತ್ತೇನೆ, ಏಕೆಂದರೆ ಅವರ ಮನೆಯಲ್ಲಿ ಎಲ್ಲರೂ ಆತನನ್ನು ಕರೆಯುತ್ತಿದ್ದುದು ಭಟ್ಟ ಎಂದೇ. "ಕೆಲವು ಕನ್ನಡ ಕವಿಗಳ ಕಾಲ ವಿಚಾರ" ಎಂಬ ಪುಸ್ತಕದಿಂದ ಕರ್ನಾಟಕದಲ್ಲೂ, ವೈದಿಕ ಸಾಹಿತ್ಯವನ್ನು ಕುರಿತ ಸಂಪುಟಗಳಿಂದ ಮತ್ತು ನೂರಾರು ಲೇಖನಗಳಿಂದ ಭಾರತಾದ್ಯಂತವೂ ಪ್ರಖ್ಯಾತರಾಗಿದ್ದ ಡಾ. ಎ. ವೆಂಕಟಸುಬ್ಬಯ್ಯನವರು ವೆಂಕಟರಾಂನ – ಭಟ್ಟನ – ದೊಡ್ಡಪ್ಪ. ಅವರಿಂದ ಭಟ್ಟನಿಗೆ ಸಸ್ವರವಾಗಿ ವೇದಪಾಠವಾಗಿತ್ತು. ಆ ಕಾಲದಲ್ಲಿ ನನಗೆ ಉಪನಿಷತ್ತುಗಳ ಬಗ್ಗೆ ಹುಚ್ಚು ಎನ್ನುವಷ್ಟರ ಮಟ್ಟಿಗೆ ಮೆಚ್ಚು. ಭಟ್ಟ ನನಗೆ ತೈತ್ತಿರೀಯ ಉಪನಿಷತ್ತನ್ನು ಉಚ್ಚಾರಣಾ ಸಹಿತವಾಗಿ ಬೋಧಿಸಲು ಒಪ್ಪಿದ. ಪ್ರತಿದಿನ ಬೆಳಗಿನ ಜಾವ ಐದು ಗಂಟೆಗೇ ಎದ್ದು ಇಬ್ಬರೂ ಅಡುಗೆಮನೆ ಸೇರಿಕೊಂಡು ಭದ್ರವಾಗಿ ಬಾಗಿಲು ಚಿಲಕ ಹಾಕಿಕೊಂಡು ಗಟ್ಟಿಯಾಗಿ ಕಿರುಚುತ್ತಿದ್ದೆವು. ಇತರರಿಗೆ ತೊಂದರೆಯಾಗಬಾರದು ಎಂಬುದು ನಮ್ಮ ಉದ್ದೇಶ. ಕೆಲವು ಮಿತ್ರರಿಗೆ ಸ್ವಲ್ಪ ಸ್ವಲ್ಪ ಕೇಳಿಸುತ್ತಿತ್ತು ಎಂದು ತೋರುತ್ತದೆ. ಏಕೆಂದರೆ ನಿದ್ರೆಯಲ್ಲಿ ಯಾವುದೋ ಪ್ರಾಣಿಗಳ ಕಿರಿಚಾಟ ಕೇಳುತ್ತದೆ ಎಂದು ಹೇಳುತ್ತಿದ್ದರು! ನನ್ನ ಅನೇಕ ಆಸಕ್ತಿಗಳಂತೆ ಅದೂ ಒಂದೋ, ಎರಡೋ ತಿಂಗಳಲ್ಲಿ ಮುಗಿದುಹೋಯಿತು.

ಭಟ್ಟನಿಗೆ ನಾಲಿಗೆ ಚಪಲ ಹೆಚ್ಚು–ನನ್ನ ಹಾಗೇ. ಶ್ರೀ ತೀ.ನಂ. ಶ್ರೀಕಂಠಯ್ಯನವರು ಹೇಳುತ್ತಿದ್ದರು–ನಾಲಿಗೆಯ, ಅಂದರೆ ತಿಂಡಿತೀರ್ಥಗಳ ಮೂಲಕ ಮೊಳೆಯುವ ಸ್ನೇಹ ಶಾಶ್ವತವಾಗಿ ನಿಲ್ಲುತ್ತದೆ ಎಂದು. ನಮ್ಮ ವಿಷಯದಲ್ಲಂತೂ ಅದು ಸತ್ಯವಾಯಿತು. ಭಟ್ಟನಿಗೆ ದಿನಕ್ಕೆ ಇಷ್ಟೇ ಸಲ ತಿನ್ನಬೇಕು ಎಂದಾಗಲೀ, ಇಷ್ಟೇ ತಿನ್ನಬೇಕು ಎಂದಾಗಲಿ ನಿಯಮ ಇರಲಿಲ್ಲ. ಅವನಿಗೆ ಇದ್ದ ನಿಯಮ ಒಂದೇ ಹಸಿವಾದಾಗ ತಿನ್ನಬೇಕು. ಆ ಹಸಿವೋ ಪದೇ ಪದೇ ಆಗುತ್ತಿರುತ್ತದೆ! ವಯಸ್ಸು ೨೩ ರ ಸುಮಾರು, ಆರೋಗ್ಯ ಚೆನ್ನಾಗಿದೆ. ಜೊತೆಗೆ ಆತ ಕಾಫಿ ಟೀ ಏನೂ ಮುಟ್ಟುವದಿಲ್ಲ. ಹೀಗಾಗಿ ನಮ್ಮದಕ್ಕಿಂತ ಹೆಚ್ಚಾಗಿ ಅವನ ಉದರಾಗ್ನಿ ಸದಾ ಪ್ರಜ್ವಲಿಸುತ್ತಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ.

ವೆಂಕಟರಾಂ ಅರ್ಥಾತ್ ಭಟ್ಟ ಬರೀ ಸಿದ್ಧಾಂತ ಶಿರೋಮಣಿಯಲ್ಲ, ಅನುಷ್ಠಾನ ವೇದಾಂತಿ. ಎಂದರೆ ಬರಿಯ ಸೂತ್ರಗಳನ್ನು ಬೋಧಿಸಿ ತೃಪ್ತಿಪಡುವವನಲ್ಲ, ಪ್ರಯೋಗ ಮಾಡಿಯೇ ತೀರುವವನು. ಒಂದು ಬೆಳಿಗ್ಗೆ ಸ್ಟೋವಿನ ಮೇಲೆ ಎರಡು ಸೇರು ಹಾಲನ್ನು ಇಟ್ಟು ಒಂದು ಸೌಟಿನಲ್ಲಿ ತಿರುವುತ್ತಿದ್ದ. ಏನು ಎಂದು ಕೇಳಿದ್ದಕ್ಕೆ, "ಈ ದಿನ ದೂದ್‌ಫೇಡ ತಯಾರಿಸುತ್ತಿದ್ದೇನೆ" ಎಂದ. ಸುಮಾರು ಎರಡು ಗಂಟೆ ತಿರುವಿದರೂ ಅದು ದ್ರವಾಕೃತಿಯನ್ನು ಬಿಟ್ಟು ಘನಾಕೃತಿಯನ್ನು ತಳೆಯುವ ಯಾವ ಸೂಚನೆಗಳೂ ಕಾಣಲಿಲ್ಲ. ಆಗ ಹತ್ತೂಕಾಲು ಗಂಟೆ, ನನಗೆ ಹತ್ತೂವರೆ ಗಂಟೆಗೆ ತರಗತಿ ಇತ್ತು. "ಅಪ್ಪಾ ಭಟ್ಟ, ನಾನು ಕಾಲೇಜಿಗೆ ಹೋಗುತ್ತೇನೆ" ಎಂದೆ. ಭಟ್ಟ "ಸ್ವಲ್ಪ ಇರಿ, ನನಗೂ ಹತ್ತೂವರೆ ತರಗತಿ ಇದೆ," ಎಂದ. ನಾನು ಐದು ನಿಮಿಷ ಕಾದೆ. ಅವನು ಹಾಲಿನ ಪಾತ್ರೆಯನ್ನು ಕೆಳಕ್ಕೆ ಇಳಿಸಿಬಿಟ್ಟ. ಬರುತ್ತಾನೆ ಎಂದು ನನ್ನ ನಿರೀಕ್ಷೆ. ಆದರ ಬದಲು ಭಟ್ಟ ಒಂದು ಕಾಗದ ತಂದು ಕೈಲಿಟ್ಟು, "ಪ್ರಭು

ಶಂಕರ್, ಈ ರಜ ಚೀಟಿ ಕೊಟ್ಟುಬಿಡಿ. ದೂದ್ ಫೇಡ ಅರ್ಥಕ್ಕೆ ಬಿಟ್ಟು ಬರುವಂತಿಲ್ಲ!" ಎಂದ. ಭಲಾ! ಭೂಪ! ದೂದ್‌ಫೇಡ ತಯಾರಿಕೆಗಾಗಿ ಒಂದು ದಿನ ಕ್ಯಾಷ್ಯುಯಲ್ ರಜೆಯನ್ನೇ ಹಾಕಿ ಬಿಟ್ಟಿದ್ದಾನೆ ಎಂದುಕೊಂಡು ಕಾಲೇಜಿಗೆ ಹೋದೆ.

ಕಾಲೇಜಿಗೆ ಹೋಗಿ ತರಗತಿಗಳಿಗೆ ಪಾಠ ಹೇಳು ತ್ತಿದ್ದರೂ ನನ್ನ ಮನಸ್ಸೆಲ್ಲಾ ಮನೆಯಲ್ಲೇ ಇತ್ತು. ನನಗೂ ಸಿಹಿ ಎಂದರೆ ಪಂಚಪ್ರಾಣ. ಉಳಿದ ಆಹಾರದ ವಿಷಯಗಳಲ್ಲಿ ಎಷ್ಟು ಕಟ್ಟುನಿಟ್ಟೋ ಅದೆಲ್ಲಾ "ಸಿಹಿ" ಎಂದ ಕೂಡಲೇ ಕಟ್ಟೊಡೆದ ಪ್ರವಾಹವಾಗುತ್ತಿತ್ತು. ಆದ್ದರಿಂದ ಹೇಗೋ ಸಂಜೆ ಐದು ಗಂಟೆಯಾಗುವವರೆಗೂ ಕಾದಿದ್ದು ಬಿರಬಿರನೆ ಮನೆಗೆ ಬಂದೆ. ಭಟ್ಟನ ಪ್ರಸನ್ನವದನದ ಸ್ವಾಗತ ದಿಂದಲೇ ಹಸುವಿನ ಹಾಲು ಹಾಲುಖೋವ ರೂಪ ವನ್ನು ತಾಳಿದೆ ಎಂದು ತೀರ್ಮಾನಿಸುವಂತೆ ಇರ ಲಿಲ್ಲ. ಏಕೆಂದರೆ ಭಟ್ಟನ ವದನದಲ್ಲಿ ಅಪ್ರಸನ್ನತೆ ಯನ್ನು ತರಿಸುವುದು ಯಾವುದೇ ವ್ಯಕ್ತಿಗಾಗಲಿ, ಯಾವುದೇ ಪರಿಸ್ಥಿತಿಗಾಗಲಿ ಕಷ್ಟಸಾಧ್ಯವಾದ ಸಾಧನೆಯಾಗಿದ್ದಿತು. ಆದ್ದರಿಂದ ನೇರವಾಗಿ ಕಾರ್ಯ ಕ್ಷೇತ್ರಕ್ಕೆ ನುಗ್ಗಿದೆ. ಒಂದು ತಟ್ಟೆಯಲ್ಲಿ ಹಾಲು ದ್ರವ ಮತ್ತು ಘನಸ್ಥಿತಿಗಳ ನಡುವೆ ಮಿಲಿಗುಟ್ಟು ತ್ತಿತ್ತು. "ಇದೇನಯ್ಯಾ" ಎಂದೆ. ಭಟ್ಟ ಶಾಂತ ವಾಗಿ "ಆಗಿಬಿಡುತ್ತೆ ಪ್ರಭುಶಂಕರ್. ಇದರ ಕ್ರಮ ಹೀಗೇ, ಎರಡು ಗಂಟೆ ಯಾರೂ ಮುಟ್ಟಬಾರದು ಗಟ್ಟಿಯಾಗಿಬಿಡುತ್ತದೆ" ಎಂದ. ಅದು ಆಗಿ ಬಿಡು ವದಿಲ್ಲ ಎಂದು ನನ್ನ ಒಳ ಮನಸ್ಸು ಹೇಳುತ್ತಿತ್ತು. ನನಗೂ ಅದರ ತಯಾರಿಕೆಯ ವಿಧಾನ ತಿಳಿಯದು. ಆದ್ದರಿಂದ ಎರಡು ಗಂಟೆಗಳ ಕಾಲ ಹೇಗೋ ಮನಸ್ಸನ್ನು ಗಟ್ಟಿ ಹಿಡಿದುಕೊಂಡಿರುವುದು ಎಂದು ಸುಮ್ಮನಾದೆ. ರಾತ್ರಿ ಸುಮಾರು ಹತ್ತು ಗಂಟೆ ವರೆಗೆ ಕಾದರೂ ನಮ್ಮ ತಿಂಡಿಯ ತಟ್ಟೆಯಲ್ಲಿದ್ದ ನೀರು ಆವಿಯಾಗಿ ಹೋಗುವ ಸೂಚನೆ ಕಾಣ ಲಿಲ್ಲ. ಇನ್ನು ಬೆಳಗಿನವರೆಗೂ ತಾಳ್ಮೆ ಯಾರಿಗೂ ಇರಲಿಲ್ಲ. ಭಟ್ಟ ಹೇಳಿದ, "ಇಷ್ಟಕ್ಕೂ ಹಾಲು, ಸಕ್ಕರೆ ಎರಡೂ ಇದರಲ್ಲೇ ಇವೆಯಲ್ಲ, ತಿಂದು ಬಿಡೋಣ." ಸ್ವಲ್ಪ ಅಸಮಾಧಾನ ಇದ್ದ ಇತರ ಸದಸ್ಯರೊಬ್ಬರು ಹೇಳಿದರು. "ಕುಡಿದುಬಿಡೋಣ ಎಂದು ಹೇಳಿ!" ನಾನು ಸಮಾಧಾನ ಹೇಳಿದೆ. "ಅಷ್ಟು ನಿರಾಶಾದಾಯಕವಾಗಿಲ್ಲ. ಅದು ದ್ರವ್ಯ ಸ್ಥಿತಿಯನ್ನು ಬಿಟ್ಟಿದೆ, ಇನ್ನೂ ಪೂರ ಘನಸ್ಥಿತಿ ಮುಟ್ಟಿಲ್ಲ. ಚಮಚದಿಂದ ವ್ಯವಹಾರ ಸುಲಭವಾ ಗುತ್ತದೆ." ನಾಲ್ಕು ಚಮಚಗಳನ್ನು ಹುಡುಕಿ ಆ ಮಧುರ ವಸ್ತುವನ್ನು ಸೇವಿಸಲು ಪ್ರಾರಂಭಿಸು ತ್ತಲೇ ಎಲ್ಲರೂ ಒಪ್ಪಿದರು. "ರುಚಿಯಾಗಿದೆ ರುಚಿಯಾಗಿದೆ!" ಎರಡು ಸೇರು ಹಾಲು, ಒಂದೂ ವರೆ ಸೇರು ಸಕ್ಕರೆ ಮತ್ತು ಒಂದು ಕ್ಯಾಷ್ಯುಯಲ್ ರಜೆಯನ್ನು ಬಲಿ ತೆಗೆದುಕೊಂಡಿದ್ದ ಆ ವಸ್ತು ನಮ್ಮ ನಾಲಿಗೆಯನ್ನು ತಣಿಸಿತು. ಎಲ್ಲರೂ ಭಟ್ಟ ನನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದೆವು.

ನಮಗೆ ಆಗ ಬರುತ್ತಿದ್ದ ಸಂಬಳ ರೂ. ೧೧೮–೮–೦. ಕಾಲೇಜು ಅಧ್ಯಾಪಕರಿಗೆ ಬರುತ್ತಿದ್ದ ಸಂಬಳ ನೂರು. ಅಲೋಯೆನ್ಸ್ ಹದಿನೆಂಟು ರೂಪಾಯಿ ಎಂಟಾಣೆ (ಈಗ ಕಾಲೇಜು ಅಧ್ಯಾಪಕರಾಗಿ ಸೇರಿ ದವರಿಗೆ ಕೂಡಲೇ ಸಾವಿರ ರೂಪ್ಯೆ ಸಿಕ್ಕುತ್ತದೆ ಯಂತೆ). ಆಗಿನ ಕಾಲದಲ್ಲಿ ಅದೇ ಯಥೇಚ್ಛ ವಾಗಿತ್ತು. ಆದರೂ ಕಾಲೇಜು ಅಧ್ಯಾಪಕರ ಸಂಬಳ ನೂರರಿಂದ ಇನ್ನೂರೈವತ್ತಕ್ಕೆ ಏರುತ್ತದೆ ಎಂಬ ವದಂತಿ ಒಂದು ದಿನ ಇದ್ದಕ್ಕಿದ್ದಂತೆ ನಮ್ಮ ಕಿವಿಯ ಮೇಲೆ ಬಿತ್ತು. ಅಂದಿನಿಂದ ಪ್ರತಿ ರಾತ್ರಿ ನಮ್ಮ ಭಟ್ಟ ತಪ್ಪದೆ ರೇಡಿಯೊ ತಿರುಗಿಸಿ ನ್ಯೂಸ್ ಕೇಳಲು ಪ್ರಾರಂಭಿಸಿದ. ಅವನಿಗೆ ವರ್ತಮಾನ ಪತ್ರಿಕೆ ಓದುವ ಹವ್ಯಾಸ ಇರಲಿಲ್ಲ. ಚಿಕ್ಕಂದಿನಲ್ಲೇ ಕಣ್ಣಿನ ದೋಷ ಇದ್ದದ್ದರಿಂದ, ಅವನು ಹೆಚ್ಚಾಗಿ ಓದಕೂಡದು ಎಂದು ಕಣ್ಣಿನ ವೈದ್ಯರು ಕಟ್ಟಪ್ಪಣೆ ಮಾಡಿದ್ದರು. ಆದ್ದರಿಂದಲೇ ಪಾಪ, ತುಂಬ ಪ್ರತಿಭಾಶಾಲಿಯಾಗಿದ್ದರೂ ಎಂ.ಎಸ್‌ಸಿ. ಯಲ್ಲಿ ಸೆಕಂಡ್ ಕ್ಲಾಸಿನಲ್ಲಿ ಪಾಸಾಗಿದ್ದ. ಈ ಸ್ಥಿತಿಯಲ್ಲಿ ವೃತ್ತಾಂತ ಪತ್ರಿಕೆ ಓದದೇ ಇದ್ದರೆ ಅಪರಾಧ ಅಲ್ಲ, ಆದರೆ ಅವನಿಗೆ ವರ್ತಮಾನಗಳಲ್ಲೂ ಆಸಕ್ತಿ ಇಲ್ಲದೇ ಇದ್ದದ್ದು ಆಶ್ಚರ್ಯದ ಸಂಗತಿ. ಅದು ಹೋಗಲಿ ಈಗ ದಿನಾ ವರ್ತಮಾನ ಕೇಳಲು ಕಾರಣ? ಒಂದು ಸಂಜೆ ಕೇಳಿದೆ. "ಇದೇನಯ್ಯಾ, ಇಷ್ಟು ವ್ರತನಿಷ್ಠನಾಗಿ ವರ್ತಮಾನ ಕೇಳುತ್ತಿದ್ದೀ ಯಲ್ಲ?" "ಓ ನಿಮ್ಮ ಕಿವಿಗೆ ಬಿದ್ದಿಲ್ಲವೆ?–ನಮ್ಮ ಸಂಬಳ ಇನ್ನೂರೈವತ್ತಕ್ಕೆ ಏರಿಸುತ್ತಾರಂತೆ. ಆ ವರ್ತಮಾನಕ್ಕೆ ಕಾಯುತ್ತಾ ಇದ್ದೀನಿ." ಸ್ವಲ್ಪ ದಿನ

ಕೇಳಿ ಕೇಳಿ ಬೇಜಾರಾಗಿ ಬಿಟ್ಟುಬಿಡುತ್ತಾನೆ ಎಂದು ಸುಮ್ಮನಾದೆ. ಆದರೆ ಅವನು ಬೇರೆ ಬೇರೆ ಹೊತ್ತಿನಲ್ಲಿ ರೇಡಿಯೋ ಹಚ್ಚಲು ಶುರು ಮಾಡಿದ. "ಇದೇನಯ್ಯಾ?" ಎಂದು ಮತ್ತೆ ಕೇಳಿದೆ. ಭಟ್ಟ ಕೊಟ್ಟ ಉತ್ತರದಿಂದ ಮನೆಯಲ್ಲಿದ್ದ ಇತರ ಮೂರು ಜನ ಮಾತು ಕಳೆದುಕೊಂಡು ಕುಳಿತು ಬಿಟ್ಟೆವು. "ಇದು ಸಾಮಾನ್ಯ ವಿಷಯವೆ? ಖುದ್ದಾಗಿ ರಾಷ್ಟ್ರಾಧ್ಯಕ್ಷರೇ ಪ್ರಸಾರ ಭಾಷಣ ಮಾಡಿ ಇದನ್ನು ರಾಷ್ಟ್ರಕ್ಕೆಲ್ಲ ತಿಳಿಸುತ್ತಾರೆ. ಇದ್ದಕ್ಕಿದ್ದಂತೆ ಘೋಷಿಸಿ ಅಧ್ಯಾಪಕರನ್ನು ಸಂತೋಷಪಡಿಸಬೇಕು ಎಂಬುದು ಅವರ ಉದ್ದೇಶ ಆಗಿರಬಹುದು !"

ಸರಿ, ಸಂಬಳ ಎರಡೂವರೆಯಷ್ಟು ಹೆಚ್ಚಾದರೆ ಏನು ಮಾಡುವುದು ಎಂಬುದು ಅಂದಾಜಾಗಬೇಕಲ್ಲ. ಅದಕ್ಕೆ ಭಟ್ಟನ ಯೋಜನೆ ಹೀಗಿತ್ತು; ನಾವು ಕೊಡುತ್ತಿರುವ ಬಾಡಿಗೆ ಏನೇನೂ ಸಾಲದು. ನಮ್ಮ ಮನೆಯ ಮಾಲಿಕರಾದ ಶ್ರೀಮತಿ ಕಮಲಮ್ಮನವರು ಯಾವ ಕಾರಣಕ್ಕೋ ನಮಗೆ ತಿಂಗಳಿಗೆ ೩೨ ರೂಪಾಯಿ ೮ ಆಣೆ ಬಾಡಿಗೆಗೆ ಇಷ್ಟು ದೊಡ್ಡ ಮನೆ ಕೊಟ್ಟುಬಿಟ್ಟಿದ್ದಾರೆ. ಮನೆ ಬಾಡಿಗೆಯನ್ನು ಐವತ್ತು ರೂಪಾಯಿಗೆ ನಾವೇ ಏರಿಸತಕ್ಕದ್ದು. ಇನ್ನು ಎರಡನೆಯದು ಭಾರೀ ಯೋಜನೆ. ನಮ್ಮ ಪಕ್ಕದ ಮನೆಯ ಇಬ್ಬರು ಮಕ್ಕಳು–ರವಿ ಮತ್ತು ಮುರಳಿ (ಈಗ ಇಬ್ಬರೂ ಭಾರೀ ಹುದ್ದೆಯಲ್ಲಿದ್ದಾರೆ)–ನಮ್ಮ ಮನೆಯ ಕಾಂಪೌಂಡಿನಲ್ಲಿ ಕ್ರಿಕೆಟ್ ಆಡುತ್ತಿದ್ದರು. ಅವರಿಗೆ ಸ್ವಂತ ದಾಂಡು ಇತ್ತು. ಅದು ಕೋಲಾರದ ಅಂದಿನ ದಿನಗಳಲ್ಲಿ ಯಥೇಚ್ಛವಾಗಿ ಸಿಕ್ಕುತ್ತಿದ್ದ ಸರ್ವೇ ಸೌದೆಯ ತುಂಡುಗಳು. ಚೆಂಡು ನಮ್ಮ ಮನೆಯ ಕಾಂಪೌಂಡಿನಲ್ಲಿದ್ದ ಚಕ್ಕೋತನ ಮರದಿಂದ ಉದುರುತ್ತಿದ್ದ ಅಥವಾ ಹುಡುಗರು ಉದುರಿಸುತ್ತಿದ್ದ ಚಕ್ಕೋತದ ಕಾಯಿಗಳು. ಈಗ, ನಮ್ಮ ಸಂಬಳ ಹೆಚ್ಚಿದ ಕೂಡಲೇ ಇವರಿಗೆ ಹೊಸಾ ಹೊಸಾ ಕ್ರಿಕೆಟ್ ಸೆಟ್ ತೆಗೆದುಕೊಳ್ಳುವುದು–ಎಂದಾಯಿತು. ಅದಕ್ಕೆ ಎಷ್ಟು ಬೆಲೆ ಆಗಬಹುದು ಯಾರಿಗೂ ತಿಳಿಯದು. ವೆಂಕಟರಾಂನ ಘೋಷಣೆಯನ್ನು ಅನುಮೋದಿಸಲಾಯಿತು. ಹೀಗೆಯೇ ಎಷ್ಟೋ ನಿರ್ಣಯಗಳಾದವು. ಅವೆಲ್ಲ ಅವನ ಹೃದಯದ ವೈಶಾಲ್ಯವನ್ನು ಘೋಷಿಸುವಂತಹವು. ಆದರೆ ಯಾವುದನ್ನೂ ಕಾರ್ಯರೂಪಕ್ಕೆ ತರುವ ಸಂದರ್ಭವೇ ಒದಗಲಿಲ್ಲ. ಏಕೆಂದರೆ ದೇಶದ ಉಳಿದ ಕಡೆ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಸಂಬಳ ಹೆಚ್ಚಿಸಿದರೂ ನಮ್ಮ ಮೈಸೂರು ವಿಶ್ವವಿದ್ಯಾನಿಲಯವು ಅದನ್ನು ಜಾರಿಗೆ ತರಲಿಲ್ಲ. ನಮ್ಮ ಸಂಬಳ ಇನ್ನೂರೈವತ್ತು ಆಗುವುದಿರಲಿ, ಇನ್ನೂರಕ್ಕೆ ಏರುವುದಕ್ಕೇ ಐದಾರು ವರ್ಷ ಕಾಯಬೇಕಾಯಿತು.

೧೯೫೪ರ ಮಧ್ಯಭಾಗದಲ್ಲಿ ನಾನು ಮೈಸೂರು ಯುವರಾಜಾ ಕಾಲೇಜಿಗೆ ವರ್ಗ ಮಾಡಿಸಿಕೊಂಡೆ. ಅದೇ ಸಮಯಕ್ಕೆ ವೆಂಕಟರಾಂಗೂ ಅದೇ ಕಾಲೇಜಿಗೆ ವರ್ಗವಾಯಿತು. ಅಲ್ಲಿ ನಮ್ಮ ಇತರ ಮಿತ್ರರು–ಒಂದೆರಡು ವರ್ಷಗಳ ಅಂತರದಲ್ಲಿ–ಕೂಡಿಕೊಂಡೆವು.

ನಾನು ಇದ್ದದ್ದು ಮಹಾರಾಜಾ ಕಾಲೇಜು ಹಾಸ್ಟೆಲಿನಲ್ಲಿ. ವೆಂಕಟರಾಂ ಮನೆ ಸುಬ್ಬರಾಯನ ಕೆರೆ ಹತ್ತಿರ ಸೋನಾರ ರಸ್ತೆಯಲ್ಲಿ. ಅವರ ಮನೆ ಈಗಲೂ ಅಲ್ಲಿಯೇ ಇದೆ. ಮನೆ ಹೆಸರು "ದೇವಪ್ರಸಾದ." ಅಲ್ಲಿಗೆ ನಮ್ಮ ಹಾಸ್ಟೆಲು ಅಷ್ಟೇನು ದೂರವಲ್ಲ. ಆದರೂ ಒಂದು ರಾತ್ರಿ ಸುಮಾರು ಒಂಭತ್ತು ಗಂಟೆ ಸಮಯಕ್ಕೆ ವೆಂಕಟರಾಂ ನನ್ನ ಕೊಠಡಿಗೆ ಬಂದಾಗ ಅಂಥ ಅವೇಳೆಯಲ್ಲಿ ಬಂದದ್ದಕ್ಕೆ ಆಶ್ಚರ್ಯವಾಯಿತು. ನಾನು ಓದುತ್ತಾ ಕುಳಿತಿದ್ದವನು ತಲೆಯೆತ್ತಿ ನೋಡಿದೆ. ವೆಂಕಟರಾಂ ಗಡ್ಡದ ಮೇಲೆ ಕೈಯಾಡಿಸುತ್ತಿದ್ದ. ಸುಮಾರು ಒಂದು ವಾರದ ಬೆಳೆಯಿತ್ತು. ಅದೇನೂ ನನ್ನ ಅವನ ವಿಷಯದಲ್ಲಿ ಅಂಥ ಅಪರೂಪದ ಬೆಳೆ ಅಲ್ಲ. "ಏನು ಸಮಾಚಾರ?" ಅಂದೆ. "ನೋಡಿ ನಾಳೆ ಲೆಕ್ಚರ್ ಕ್ಲಾಸ್ ಇದೆ. ಕ್ಷೌರ ಮಾಡಿಕೋಬೇಕಲ್ಲ." "ಅದಕ್ಕೇನು ಬೇಕು?" "ದುಡ್ಡು." ನಾವಿಬ್ಬರೂ ಇದೇ ಪರಿಸ್ಥಿತಿಯಲ್ಲಿ ತಿಂಗಳಿನಲ್ಲಿ ಅನೇಕ ದಿನಗಳು ಇರುತ್ತಿದ್ದೆವು. ನಮ್ಮಿಬ್ಬರ ನಡುವೆ ಹಣದ ಕೊಳುಕೊಡೆಗಳಿಗೆ ಮಿತಿಯೇ ಇರಲಿಲ್ಲ. ಲೆಕ್ಕವೂ ಇರಲಿಲ್ಲ ಎಂದು ಇಟ್ಟುಕೊಳ್ಳಿ. ಅದರ ವಿಷಯ ಮುಂದೆ ಹೇಳುತ್ತೇನೆ. ನಾನು ಒಂದು ನಾಲ್ಕಾಣೆ ಬಿಲ್ಲೆಯನ್ನು ಜೇಬಿಗೆ ಹಾಕಿಕೊಂಡು ಹೇಳಿದೆ: "ನಡಿ, ನಾನೂ ನೂರಡಿ ರಸ್ತೆವರೆಗೆ ಬರುತ್ತೇನೆ. ಅಲ್ಲಿ ಹೊನ್ನಯ್ಯನ ಅಂಗಡಿಯಲ್ಲಿ ಬ್ಲೇಡು ಕೊಡಿಸುತ್ತೇನೆ" ಎಂದು ಹೊರಟೆ. ದಾರಿ

ಯಲ್ಲಿ ಭಟ್ಟ ತಾನು ವಾರವೆಲ್ಲಾ ಕ್ಷೌರ ಮಾಡಿಕೊಳ್ಳುವುದಿಲ್ಲ ಎಂದೂ ಲೆಕ್ಚರ್ ಕ್ಲಾಸ್ ಬಂದಾಗ ಮಾತ್ರ ಕ್ಷೌರ ಮಾಡಿಕೊಳ್ಳದೇ ತರಗತಿಗೆ ಹೋಗುವುದಿಲ್ಲ ಎಂದೂ ಮತ್ತೆ ಹೇಳಿದ. ಹೊನ್ನಯ್ಯನವರ ಅಂಗಡಿಯ ಮುಂದೆ ನಿಂತ ಕೂಡಲೇ ಭಟ್ಟ ಹೇಳಿದ ಮಾತು–ನಾನಿರಲಿ, ಯಾರೂ ನಂಬಲು ಸಾಧ್ಯವಾಗದೇ ಇರುವಂಥದು; "ಪ್ರಭುಶಂಕರ್, ಮುಖಕ್ಷೌರ ಮುಂದಿನ ವಾರ ಮಾಡಿಕೊಂಡರೆ ಆಗುತ್ತದೆ. ಈಗ ಬಾಲ್ಕಾಣೆಗೆ ಕೊಬ್ಬರಿ ಮಿಠಾಯಿ ತೆಗೆದುಕೊಂಡು ತಿಂದುಬಿಡೋಣ." ಅವನ ಬಲಗೈ ಗಡ್ಡವನ್ನು ಸವರುತ್ತಿತ್ತು. ಅವನ ದೃಷ್ಟಿಯೆಲ್ಲಾ ಅಲ್ಲಿ ಆಕರ್ಷಕವಾಗಿ ಪೇರಿಸಿಟ್ಟಿದ್ದ ಕಪ್ಪುಬಣ್ಣದ ಕೊಬ್ಬರಿ ಮಿಠಾಯಿಯಲ್ಲಿ ನಟ್ಟು ಹೋಗಿತ್ತು! ಅವನ ಆ ಸಣ್ಣ ಆಸೆಯನ್ನು ನಾನು ಸಂತೋಷದಿಂದ ನೆರವೇರಿಸಿದೆ. ಅವನಿಗೂ ಲಾಟರಿಯಲ್ಲಿ ಲಕ್ಷ ರೂಪಾಯಿ ಪಡೆದಂತೆ ಆನಂದ.

ಎರಡು–ಮೂರು ವಿಷಯಗಳಲ್ಲಿ ನಾನು ಪರಮ ಅಜ್ಞನೆಂದೂ ಏನಾದರೂ ಮಾಡಿ ಅವುಗಳಲ್ಲಿ ನನಗೆ ದೀಕ್ಷೆ ನೀಡಬೇಕೆಂದೂ ವೆಂಕಟರಾಂಗೆ ತಡೆದಿಡಲಾರದ ಆಸೆ. ಸಂಗೀತದ ವಿಷಯದಲ್ಲಿ ನನಗಿದ್ದ ಜ್ಞಾನ ಶೂನ್ಯ. ಭಟ್ಟನಿಗೆ ವಂಶಪಾರಂಪರ್ಯವಾಗಿ ಬಂದ ಅಗಾಧ ಜ್ಞಾನ. ಅವನಿಗೆ ಕಂಠ ಚೆನ್ನಾಗಿರಲಿಲ್ಲ. ಆದ್ದರಿಂದ ಪಿಟೀಲನ್ನು ಅಭ್ಯಾಸ ಮಾಡುತ್ತಿದ್ದ. ಯಾವುದನ್ನೇ ಆದರೂ



ಪಟ್ಟುಹಿಡಿದು ಮಾಡುವ ಸ್ವಭಾವ ಅಲ್ಲ ಆದ್ದರಿಂದ ಅಭ್ಯಾಸ ಮುಂದುವರಿಯಲಿಲ್ಲ. ಆದರೆ ಸೊಗಸಾದ ಸಂಗೀತ ಕಚೇರಿ ನಡೆದಾಗಲೆಲ್ಲ ತಪ್ಪದೇ ಹಾಜರಿರುತ್ತಿದ್ದ. ನನಗೆ ಒಂದು ಗಂಟೆ ಸಂಗೀತ ಕೇಳುವುದು ಸಾಧ್ಯವೇ ಇರಲಿಲ್ಲ. ಭಟ್ಟ ಬಿಡಲಿಲ್ಲ. ನನ್ನನ್ನು "ನಾದಬ್ರಹ್ಮ ಸಂಗೀತ ಸಭೆ"ಗೆ ಸದಸ್ಯನನ್ನಾಗಿ ಮಾಡಿ ತಪ್ಪದೆ ಪ್ರತಿ ಕಚೇರಿಗೂ ಕರೆದುಕೊಂಡು ಹೋದ. ಕಚೇರಿಯ ಮಧ್ಯೆ ಪಕ್ಕದಲ್ಲಿ ಒಂದು ನರಪಿಳ್ಳೆಗೂ ಗೊತ್ತಾಗದಂತೆ ಜಲ್ಲಿ ಕಾಗದದ ಕವಚಗಳನ್ನು ಬಿಚ್ಚಿ ಪೆಪ್ಪರಮಿಂಟು, ಚಾಕಲೇಟುಗಳನ್ನು ಗುಳುಮ್ಮನೆ ನುಂಗುವ ಕಲೆಯಲ್ಲಿ ನನ್ನನ್ನು ಪರಿಣಿತನನ್ನಾಗಿ ಮಾಡಿದ. ಸಂಗೀತ ಕೇಳುವವರಿಗೆ ರಾಗ, ತಾಳ, ಶ್ರುತಿ ಜ್ಞಾನ ಸರಿಯಾಗಿರಬೇಕಾದರೆ ಮಧ್ಯೆ ಮಧ್ಯೆ ಅಂಥವನ್ನು ತಿನ್ನುತ್ತಿರಬೇಕಾದದ್ದು ತುಂಬಾ ಅಗತ್ಯ ಎಂಬ ವಾದ ಅವನದು. ಸಂಗೀತ ಕೇಳಿಸಿ ಕೇಳಿಸಿ, ನನಗೆ ಸಂಗೀತ ಎಂದರೆ ಪಂಚಪ್ರಾಣ ಎನ್ನುವ ಹಾಗೆ ಮಾಡಿದ. ಆದರೆ ಮುಂದಿನ ಹೆಜ್ಜೆಯಾಗಿ ನನಗೆ ಶಾಸ್ತ್ರೀಯವಾಗಿ ಸಂಗೀತವನ್ನು ಬೋಧಿಸಲು ಹೊರಟ. ಅದೂ ಎಂಥ ಪ್ರಶಸ್ತವಾದ ಸ್ಥಳದಲ್ಲಿ? ತಿರುವೈಯೂರಿನಲ್ಲಿ, ಕಾವೇರಿ ತೀರದಲ್ಲಿ, ಸಂಗೀತ ಬ್ರಹ್ಮ ತ್ಯಾಗರಾಜರ ಸಮಾಧಿಯ ಬಳಿ. ಗುರುಶಿಷ್ಯರಿಬ್ಬರೂ ಕಾವೇರಿಯಲ್ಲಿ ಮಿಂದು–ಇತರ ಸಹಪ್ರಯಾಣಿಕರು ಕೋಪಿಸಿಕೊಂಡು ಹೊರಟು ಹೋದರೂ ಲೆಕ್ಕಿಸದೆ ಮಡಿಯಾಗಿ ಕುಳಿತೆವು. "ಗುರುಗಳು" ನನ್ನಿಂದ ಸಾ ಪ ಸಾ ಕೂಗಿಸಿದರು. ಕಿರುಚಿಸಿದರು ಎಂಬುದು ಸರಿಯಾದ ಕ್ರಿಯಾಪದ. ತ್ಯಾಗರಾಜರ ಪಂಚರತ್ನ ಕೀರ್ತನೆಯಿಂದ ಪಾಠ ಆರಂಭವಾಯಿತು. ತ್ಯಾಗರಾಜರು ತಮ್ಮ ಸಮಾಧಿಯಲ್ಲಿ ಹೊರಳಿದರು ಎಂದು ನನ್ನ ಸ್ನೇಹಿತರು ಕೂರಿದ್ದು ಕೇವಲ ಹೊತ್ತಾಯಿತು ಎಂಬ ಕಾರಣ ಒಂದಲ್ಲ. ನನ್ನದು ಕತ್ತೆಯ ಕಂಠ, ನಮ್ಮ ಗುರುಗಳದ್ದು–ಗುರುನಿಂದೆ ಮಾಡುತ್ತಿಲ್ಲ, ವಾಸ್ತವಾಂಶ ಹೇಳುತ್ತಿದ್ದೇನೆ–ಸ್ವಲ್ಪ ವಾಸಿ. ಅಲ್ಲದೆ ಇಪ್ಪತ್ತೈದು ವರ್ಷ ಸಂಗೀತವನ್ನು ಆಸೆಯಾಗಿ ಕೇಳಿದರೂ ನನಗೆ ಆರೋಹಣ ಅವರೋಹಣಗಳ ಗಂಧಗಾಳಿಯೇ ಗೊತ್ತಿಲ್ಲ. ಹೀಗಿರುವಾಗ ಎಷ್ಟೇ ಮಹತ್ವಾಕಾಂಕ್ಷೆಯ ಗುರುವೇ ಆದರೂ ನನ್ನಿಂದ ಸಂಗೀತ ಹೊರಡಿಸುವುದು ಹೇಗೆ? ಈ ನನ್ನ ಗುರುವಿಗೆ ಈ ವಿಷಯದಲ್ಲಿ ನನ್ನ ಬೇರೆ ಬೇರೆ ಗುರುಗಳಿಗೆ ಬೇರೆ ವಿಷಯಗಳಿಂದ ಆದ ಹಾಗೆ ಅಪಖ್ಯಾತಿ ಬಂತು.

ಇನ್ನೊಂದು ಅಡುಗೆ ವಿಷಯ. ನಾನಿನ್ನೂ ಮನೆ ಮಾಡಿರಲಿಲ್ಲ. ನಮ್ಮ ಮಿತ್ರರ ಮಡದಿಯರು ಯಾರೂ ನಮ್ಮನ್ನು ಮನೆಯೊಳಕ್ಕೆ ಸೇರಿಸಲು ಒಪ್ಪುತ್ತಿರಲಿಲ್ಲ. ಅವರಿಗೆ ನಮ್ಮಲ್ಲಿ ವಿಶ್ವಾಸವಿರಲಿಲ್ಲ ಎಂದಲ್ಲ, ಆದರೆ ಅನನುಭವಿಗಳಾದ ನಾವು ಅವರ ತಿಂಗಳು ಸಾಮಾನನ್ನೆಲ್ಲ ಒಂದೇ ದಿನ ಧ್ವಂಸ ಮಾಡಿಬಿಡುತ್ತೇವೆ ಎಂಬ ಭಯ ಅವರಿಗೆ. ನಾವು ಹೊಟ್ಟೆಬಾಕರು ಎಂಬ ಆಪಾದನೆಯೂ ನಿಲ್ಲುವಂತಹುದೇ ತಾನೆ. ಆದ್ದರಿಂದ ನಾವು ಮಿತ್ರರಲ್ಲಿ ಯಾರ ಗೃಹಿಣಿಯಾದರೂ ಊರಿಗೆ ಹೋಗುವುದನ್ನೇ ಕಾಯುತ್ತಿದ್ದೆವು. ಅವರು ಬೆನ್ನು ತಿರುಗಿಸಿದ ಕೂಡಲೇ ನಾವು ಅವರ ಅಡುಗೆ ಮನೆಯನ್ನು ಆಕ್ರಮಿಸಿಕೊಳ್ಳುತ್ತಿದ್ದೆವು. ಕೋಸಂಬರಿ ಮುಂತಾದ ಸಾಮಾನ್ಯ ವಸ್ತುಗಳಿಂದ ಹಿಡಿದು ಜಾಮೂನು, ಮೈಸೂರು ಪಾಕು ಮುಂತಾದ ಜಟಿಲವಾದ ವಸ್ತುಗಳವರೆಗೂ ಪ್ರಯೋಗಗಳು ನಡೆಯುತ್ತಿದ್ದವು. ಒಂದು ಸಲ ನಾವು ಸೌಜನ್ಯದಿಂದ ಇನ್ನೊಬ್ಬರ ಮನೆಯಾಕೆಯನ್ನು ಊಟಕ್ಕೆ ಕರೆದರೆ ಆಕೆ ಬಂದು ನಾವು ತಯಾರಿಸಿದ್ದ ಜಾಮೂನುಗಳಲ್ಲಿ ಐದಾರನ್ನು ಕಬಳಿಸಿದ್ದೂ ಅಲ್ಲದೆ ಅವುಗಳನ್ನು ಧಾರಾಳವಾಗಿ ಬಂದೂಕುಗಳಲ್ಲಿ ಬಳಸಬಹುದು, ಎಂದು ಅಭಿಪ್ರಾಯಪಟ್ಟರು! ಅದು ಕೇವಲ ಅಸೂಯೆಯಿಂದ ಎಂಬುದು ಸ್ಪಷ್ಟವಾಗಿತ್ತು. ಪದೇ ಪದೇ ಆಕ್ರಮಣಕ್ಕೆ ಗುರಿಯಾಗುತ್ತಿದ್ದುದು ಶ್ರೀ ಜಿ. ಎಸ್. ಶಿವರುದ್ರಪ್ಪ ಮತ್ತು ಶ್ರೀ ಎ. ಸುಬ್ಬರಾಯರ ಮನೆಯ ಪಾಕಗೃಹಗಳು. ಇಲ್ಲೆಲ್ಲಾ ವೆಂಕಟರಾಂ ನಾಯಕರೆಂದೂ ಹೆಡ್‌ಕುಕ್ ನಾವೆಲ್ಲ ಅವರ ಸಹಾಯಕ ಅಡುಗೆಯವರೆಂದೂ ಪ್ರತ್ಯೇಕವಾಗಿ ಹೇಳುವ ಆವಶ್ಯಕತೆ ಇಲ್ಲವಷ್ಟೆ. ಆದರೂ ಈ ಕ್ಷೇತ್ರದಲ್ಲಿ ನಾನು ಅಷ್ಟೊಂದು ಪರಿಣತಿ ಗಳಿಸಿಕೊಂಡೆ ಎಂದು ಹೇಳುವಂತಿಲ್ಲ.

ಭಟ್ಟನಲ್ಲಿ ಅಹಂ ಎನ್ನುವದರ ಗುರುತು ಕೂಡ ಇರಲಿಲ್ಲ. ಕೋಲಾರದಲ್ಲಿರುವಾಗ ಒಂದು ದಿನ ಸ್ಟೇಷನ್ನಿನಿಂದ ತನ್ನ ಹಾಸಿಗೆಯನ್ನು ಹೆಗಲಮೇಲೆ ಹೊತ್ತುಕೊಂಡು ಬಂದ. "ಇದೇನಯ್ಯಾ, ಹೀಗೆ?

ಊರಿಗೆ ಯಾವಾಗ ಬಂದೆ ?" ಎಂದೆ. "ಈಗ ಬರುತ್ತಾ ಇದ್ದೀನಿ, ಪ್ರಭುಶಂಕರ್. ದುಡ್ಡೆಲ್ಲಾ ದಾರಿಯಲ್ಲಿ ಖರ್ಚಾಗಿ ಹೋಯಿತು. ಗಾಡಿಗೆ ದುಡ್ಡಿಲ್ಲ ಅದಕ್ಕೆ ನಡೆದುಕೊಂಡೇ ಬಂದುಬಿಟ್ಟೆ" ಎಂದ.

ಒಂದು ದಿನ ಅವರ ಮನೆಗೆ ಹೋದಾಗ ದೊಡ್ಡದಾಗಿ ನ್ಯೂಸ್ ಪೇಪರ್ ಹಿಡಿದುಕೊಂಡು ಓದುತ್ತಾ ಕುಳಿತಿದ್ದ. ಅವನು ವೃತ್ತಾಂತ ಪತ್ರಿಕೆ ಓದುತ್ತಿದ್ದುದನ್ನು ನೋಡಿ ನನಗೆ ಆಶ್ಚರ್ಯವಾಯಿತು. "ಇದೇನಯ್ಯಾ?" ಎಂದು ವಿಚಾರಿಸಿದ್ದಕ್ಕೆ ಅವನ ಉತ್ತರ, "ನಮ್ಮ ತಂದೆ ಊರಲ್ಲಿಲ್ಲ." "ಅದಕ್ಕೂ ಇದಕ್ಕೂ ಏನು ಸಂಬಂಧ?" "ನಾನು ಅವರ ಸ್ಥಾನ ವಹಿಸಬೇಕು, ಮಾರ್ಕೆಟ್ಟಿಗೆ ಹೋಗಿ ತರಕಾರಿ ತರಬೇಕು, 'ದಿವ್ಯಜ್ಯೋತಿ' ಅಂಚೆಗೆ ಹಾಕಬೇಕು, ಹಾಗೇ ಈ ನ್ಯೂಸ್ ಪೇಪರ್ ಓದಬೇಕು!"

ಅವನಿಗೂ ನನಗೂ ಸಮಾನವಾದ ತೊಂದರೆ ಒಂದಿತ್ತು– ಜನಗಳನ್ನು ಗುರುತಿಸುವುದರಲ್ಲಿ ಕಷ್ಟ. ಆದರೆ ಬೇರೆ ಬೇರೆ ಕಾರಣಗಳಿಗಾಗಿ ನನಗೆ ಒಬ್ಬರನ್ನು ಹತ್ತಿಪ್ಪತ್ತು ಸಲ ನೋಡುವವರೆಗೂ ಇಂಥವರೇ ಎಂದು ನೆನಪಿನಲ್ಲಿಡಲು ಕಷ್ಟ. ಅವನಿಗೆ ಕಣ್ಣು ಸರಿಯಾಗಿ ಕಾಣಿಸದೇ ಇರುವುದರಿಂದ ಅನೇಕ ಸಲ ಅಭಾಸಗಳಾದದ್ದು ಉಂಟು. ಒಂದು ಸಲ ನೂರಡಿ ರಸ್ತೆಯಲ್ಲಿ ಫುಟ್‌ಪಾತ್‌ನಲ್ಲಿ ನಡೆದು ಹೋಗುತ್ತಿದ್ದೆವು. ಅವನು ಇದ್ದಕ್ಕಿದ್ದಂತೆ ಧಡಧಡನೆ ರಸ್ತೆಯ ಮಧ್ಯಕ್ಕೆ ಹೊರಟು ಹೋದ. ಎರಡು ನಿಮಿಷಗಳಲ್ಲಿ ಪೆಚ್ಚು ಮೋರೆ ಹಾಕಿಕೊಂಡು ಹಿಂದಕ್ಕೆ ಬಂದ. ಯಾರನ್ನೋ ಮಾತನಾಡಿಸಿ ನಮಸ್ಕಾರ ಮಾಡಿದನಂತೆ. ಅವರು ಇವನನ್ನು "ನೀವು ಯಾರೋ ಗುರುತು ಸಿಗಲಿಲ್ಲ" ಎಂದರಂತೆ. ಇವನು, "ಇದೇನು ಹೀಗೆ ಹೇಳುತ್ತೀರಿ, ನೀವು ಮೊನ್ನೆ ನಮ್ಮ ಮನೆಯಲ್ಲಿ ಶ್ರಾದ್ಧಕ್ಕೆ ಬಂದಿರಲಿಲ್ಲವೆ?" ಎಂದನಂತೆ. ಅವರು: "ನಾನಲ್ಲ ಬೇರೆ ಯಾರೋ ಇರಬೇಕು ತಪ್ಪು ತಿಳಿದಿದ್ದೀರಿ" ಎಂದರಂತೆ.


ಇನ್ನೊಂದು ಸಲ ಹೋಗಿ ಈತ ಒಬ್ಬರನ್ನು ಮಾತನಾಡಿಸಿದ. ಬಾಲ್ಯದಲ್ಲಿ ತನಗೆ ಪ್ರೈಮರಿ ಶಾಲೆಯಲ್ಲಿ ಪಾಠ ಹೇಳಿದ ಅಧ್ಯಾಪಕರು ಅವರು ಎಂಬುದು ಇವನ ಭಾವನೆ. ನಿಜವಾಗಿ ಹಾಗಿರಲಿಲ್ಲ. "ಅಲ್ಲಯ್ಯಾ ಯಾಕೆ ಓಡಿಹೋಗಿ ಜನರನ್ನು ಮಾತನಾಡಿಸುತ್ತೀಯ?" ಎಂದು ಕೇಳಿದ್ದಕ್ಕೆ "ಇದೊಳ್ಳೆ ಚೆನ್ನಾಯಿತು ಪ್ರಭುಶಂಕರ್, ಜನರಿಗೆ ಗೌರವ ತೋರಿಸಬೇಡವೇ ?" ಎಂದು ನನ್ನ ಬಾಯಿ ಮುಚ್ಚಿಸಿದ.


ಇನ್ನು ಅವನ ಜೊತೆ ಪುಟ್ಟಪರ್ತಿಗೆ ಹೋದದ್ದೂ ಸ್ವಾರಸ್ಯದ ವಿಷಯವೇ. ನಮಗೆಲ್ಲಾ ತುಂಬಾ ಸ್ನೇಹಿತರಾದ ಶ್ರೀ ಎಚ್. ಎಸ್. ರಾಮಚಂದ್ರರಾಯರು ಅನಂತಪುರದಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ನಮ್ಮ ಮಿತ್ರವೃಂದವನ್ನು ಅವರ ಕಾಲೇಜಿನಲ್ಲಿ ಉಪನ್ಯಾಸಗಳಿಗೆ ಆಹ್ವಾನಿಸಿದ್ದರು. ವೆಂಕಟರಾಂ, ಪ್ರಭುಪ್ರಸಾದ್, ಶಿವರುದ್ರಪ್ಪ ಇಷ್ಟು ಜನ ಹೋಗಿ ಒಂದು ವಾರ ತಂಗಿದೆವು. ರಾಮಚಂದ್ರನ ಮನೆಯಲ್ಲಿ ದಿನವೂ ಹಬ್ಬ. ಅವನ ಶ್ರೀಮತಿಗೆ ಪಾಪ ಎಷ್ಟು ಕಷ್ಟವಾಯಿತೋ! ಒಂದೆರಡು ದಿನ ಅಡುಗೆಯವರೂ ಬಂದಿದ್ದರು. ಒಂದು ದಿನ ಜಿಲೇಬಿ ತಯಾರಾಯಿತು. ಆ ಕ್ರಿಯೆಯಷ್ಟೂ ತನ್ನ ನೇತೃತ್ವದಲ್ಲೇ ನಡೆದಷ್ಟು ಸಂಭ್ರಮದಿಂದ ಭಟ್ಟ ಓಡಾಡುತ್ತಿದ್ದ. ಆಗಾಗ ರುಚಿ ನೋಡಿ ಸರ್ಟಿಫಿಕೇಟು ಕೊಡುವುದು ಅವನ ಪದ್ಧತಿ. ಅಲ್ಲಿ ಸೂರೆ ಮುಗಿಸಿ ಪುಟ್ಟಪರ್ತಿಗೆ ಹೋದೆವು. ಆಗಿನ ದಿನಗಳಲ್ಲಿ ಶ್ರೀ ಸಾಯಿಬಾಬಾ ಅವರ ಭೇಟಿ ಅದೃಷ್ಟ, ಭಕ್ತಿ, ಅವರ ಕೃಪೆ ಯಾವುದನ್ನೂ ಅವಲಂಬಿಸಿರಲಿಲ್ಲ. ಅವರಿಗೆ ಬೇಕಾದಷ್ಟು ವಿರಾಮ ಇತ್ತು. ರಾತ್ರಿ ಅಲ್ಲಿ ತಂಗುವ ಕಾರ್ಯಕ್ರಮವಿತ್ತು. ಆದ್ದರಿಂದ ಮಧ್ಯಾಹ್ನವೆಲ್ಲಾ ಸುಮಾರು ಮೂರು ಗಂಟೆ ಕಾಲ ಶ್ರೀ ಬಾಬಾ ಅವರೊಡನೆ ಮಾತನಾಡುತ್ತಿದ್ದೆವು. ಮರುದಿನ ಬೆಳಿಗ್ಗೆ ಹಿಂದಕ್ಕೆ ಹೊರಡುವ ಮುನ್ನ ಬಾಬಾ ಅವರು ಪ್ರತಿಯೊಬ್ಬರಿಗೂ ವೈಯಕ್ತಿಕ ಭೇಟಿ ದಯಪಾಲಿಸಿದರು. ಅದರ ಕ್ರಮ ಹೀಗೆ: ಪ್ರತಿಯೊಬ್ಬರೂ ಒಂದು ಪೊಟ್ಟಣ ಕಲ್ಲು ಸಕ್ಕರೆ ಹಿಡಿದುಕೊಂಡು ಬಾಬಾ ಅವರ ಕೊಠಡಿಗೆ ಹೋದರೆ ಅವರು ಅದರಲ್ಲಿ ಒಂದು ಸಣ್ಣ ಚೂರನ್ನು ಬಾಯಿಗೆ ಹಾಕಿಕೊಂಡೋ ಇಲ್ಲವೇ ಮುಟ್ಟಿಯೋ ಪೊಟ್ಟಣ ಹಿಂದಕ್ಕೆ ಕೊಡುತ್ತಾರೆ. ಅದು ಪ್ರಸಾದ ಎಂದು ಲೆಕ್ಕ. ನಾನು ಹೋಗಿ ಬಾಬಾ ಅವರನ್ನು ಭೇಟಿ ಮಾಡಿ ಬಂದೆ. "ನಿಮಗೆ ಮಾರ್ಕ್



"...ಒರಟಾದ, ಗಟ್ಟಿ ಕಣಗಳಿರುವ
ಟೂಥ್‌ಪೌಡರ್‌ಗಳು ನಿಮ್ಮ
ಒಸಡು ಮತ್ತು ಹಲ್ಲುಗಳಿಗೆ
ಹಾನಿಯನ್ನುಂಟುಮಾಡಬಹುದು..."

ಕೋಲ್ಗೇಟ್ ಟೂಥ್ ಪೌಡರ್ ಬಳಸಿ ನಿಮ್ಮ ಹಲ್ಲುಗಳನ್ನೂ ಒಸಡುಗಳನ್ನೂ ರಕ್ಷಿಸಿರಿ – ಮತ್ತು ಉಸಿರಿನ ದುರ್ವಾಸನೆಯನ್ನೂ ನಿವಾರಿಸಿರಿ!





ಕೋಲ್ಗೇಟ್ ಟೂಥ್‌ಪೌಡರ್ ಅತಿ ಸೂಕ್ಷ್ಮ ಹಾಗೂ ಬಿಳುಪಾಗಿದೆ. ಅದು ನಿಮ್ಮ ಒಸಡುಗಳನ್ನು ಮೃದುವಾಗಿ ಉಜ್ಜುತ್ತಿರುವಾಗಲೇ ಅದರ ಪಾಲಿಶ್ ಮಾಡುವ ಸೌಮ್ಯ ಸತ್ವ ನಿಮ್ಮ ಹಲ್ಲುಗಳ ಮೇಲಿನ ಕೊಳೆಯ ಪದರವನ್ನು ತೆಗೆದು ಅವುಗಳನ್ನು ಅಧಿಕ ಸ್ವಚ್ಛ ಹಾಗೂ ಬಿಳಿ ಮಾಡುತ್ತದೆ. ಕೋಲ್ಗೇಟ್‌ನ ಹೇರಳ ನೊರೆ ನಿಮ್ಮ ಹಲ್ಲುಗಳ ಎಡೆಗಳನ್ನು ಪ್ರವೇಶಿಸಿ, ದುರ್ಗಂಧವನ್ನೂ ದಂತಕ್ಷಯವನ್ನೂ ಉಂಟುಮಾಡುವ ಕೀಟಾಣುಗಳನ್ನು ನಿವಾರಿಸುತ್ತದೆ; ಮತ್ತು ಶ್ವಾಸದ ದುರ್ಗಂಧವನ್ನು ದೂರಗೊಳಿಸುತ್ತದೆ.

ನಿಮ್ಮ ಕುಟುಂಬದವರಿಗೆ ಕೋಲ್ಗೇಟ್ ಟೂಥ್‌ಪೌಡರ್‌ನ ಮೂಲಕ ಆಧುನಿಕ ದಂತರಕ್ಷಣೆಯನ್ನು ನೀಡಿರಿ. ಅವರಿಗೆ ಅದರ ಶೀತಲವಾದ ಹಾಗೂ ಪೆಪ್ಪರ್‌ಮಿಂಟ್‌ನಂತಹ ಪರಿಮಳ ಇಷ್ಟವಾಗುವುದು.


TP.G.30 KN

ಆದ ಮೇಲೆ ಒಳ್ಳೆಯದಾಗುತ್ತದೆ" ಎಂದು ಅವರು ಹೇಳಿದರು. "ಇಲ್ಲಿಂದ ಮಾರ್ಚ್ ಆದ ಮೇಲೆ ಒಳ್ಳೆಯದಾಗುತ್ತದೆ" ಎಂದು ಮಿತ್ರರಲ್ಲಿ ಯಾರೋ ವ್ಯಾಖ್ಯಾನ ಮಾಡಿದರು. ಉಳಿದವರು ನಕ್ಕರು. ಆದರೂ ಭಟ್ಟ ಮಾತ್ರ ಬಹಳ ಗಂಭೀರ ವಾಗಿ ಕುಳಿತಿದ್ದ. ನಾನು ಹತ್ತಿರ ಹೋಗಿ ಗುಟ್ಟಾಗಿ ವಿಚಾರಿಸಿದಾಗ ಕಾರಣ ಗೊತ್ತಾಯಿತು. ಮೊದಲು ಭಟ್ಟ "ನಾನು ಬಾಬಾ ಅವರನ್ನು ಮಾತನಾಡಿಸಲು ಒಳಕ್ಕೆ ಹೋಗುವುದಿಲ್ಲ" ಎಂದ, "ಏಕೆ" ಎಂದು ಕೇಳಿದ್ದಕ್ಕೆ "ನಾನು ಅವರನ್ನು ಕೇಳ ಬೇಕಾದದ್ದು ಏನೂ ಇಲ್ಲ" ಎಂದ. "ಇಷ್ಟು ದೂರ ಬಂದಿದ್ದೀಯೇ ಹೋಗಿ ಏನಾದರೂ ಮಾತನಾಡಿಸು" ಎಂದೆ. ಏನೋ ಹುಳು ಕಚ್ಚಿ ಅವನ ತುಟಿ ಊದಿಕೊಂಡಿತ್ತು. "ಇದನ್ನು ಪವಾಡದಿಂದ ವಾಸಿ ಮಾಡಿಬಿಡಿ ಎಂದು ಬಾಬಾ ಅವರನ್ನು ಕೇಳಲೆ?" ಎಂದ. "ಹೂಂ" ಎಂದೆ. ಆಮೇಲೆ ಅವನೇ "ಬೇಡ ಅದೇ ವಾಸಿಯಾಗುತ್ತೆ" ಎಂದ. ಬಾಬಾ ಅವರನ್ನು ಏಕೆ ನೋಡುವುದಿಲ್ಲ ಎಂದು ಒತ್ತಾಯ ಮಾಡಿದ್ದಕ್ಕೆ ಅವನು ಹೇಳಿದ್ದು: "ಒಂದು ವೇಳೆ ನನ್ನ ಕೈಯ ಲ್ಲಿರುವ ಕಲ್ಲುಸಕ್ಕರೆ ಪೊಟ್ಟಣ ತೆಗೆದುಕೊಂಡು ಬಾಬಾ ಅದನ್ನು ಹಿಂದಕ್ಕೆ ಕೊಡದೆ ಹೋದರೆ?" ಹಾಗೆ ಮಾಡುವುದಿಲ್ಲ ಎಂದು ಎಷ್ಟು ಹೇಳಿದರೂ ಅವನಿಗೆ ನಂಬಿಕೆ ಇಲ್ಲ. "ಮೂರು ಮೈಲಿ ನಡೆಯ ಬೇಕಲ್ಲ ಬಸ್ ಹತ್ತೋದಕ್ಕೆ. ಅಲ್ಲಿಯವರೆಗೆ ತಿನ್ನೋ ದಕ್ಕೆ ಬೇಕು" ಎಂದ. ಬಾಬಾರವರನ್ನು ನೋಡಿ ಮಿಂಚಿನಂತೆ ಹಿಂದಕ್ಕೆ ಬಂದ. ಅವರು ಕಲ್ಲು ಸಕ್ಕರೆ ಪೊಟ್ಟಣ ಮುಟ್ಟೋದಕ್ಕೆ ಬಿಟ್ಟನೋ ಇಲ್ಲವೋ ಅನುಮಾನ. ದಾರಿಯಲ್ಲಂತೂ ಮುಗಿಸಿದ. ಅದಕ್ಕೆ ನಮ್ಮ ನೆರವೂ ಇತ್ತು ಅನ್ನಿ.

ಗಂಭೀರವಾದ ಸಂದರ್ಭದಲ್ಲೂ ಭಟ್ಟನಿಗೆ ಸಹಜವಾಗಿ ಮೈಗೂಡಿದ್ದ ಅಪೂರ್ವ ಶಮಸ್ಥಿತಿಯನ್ನು ನೋಡಿ ಯಾರೂ ದಿಙ್ಮೂಢರಾಗುತ್ತಿದ್ದರು. ನಾನಂತೂ ಕೆಲವು ನಿಮಿಷಗಳ ವರೆಗೆ ಮಾತುಗಳನ್ನು ಕಳೆದುಕೊಂಡ ಒಂದು ಸಂದರ್ಭ ಹೀಗಿದೆ: ನಾನು ಮೈಸೂರಿನಲ್ಲಿ ಮನೆ ಮಾಡಿದ ಹೊಸದರಲ್ಲಿ ಭಟ್ಟ ನನಗೆ ಒಂದು ಬಟ್ಟೆ ಸ್ಟ್ಯಾಂಡ್ ಕೊಡುವುದಾಗಿ ಹೇಳಿದ್ದ. "ನಾಳೆ ಸಂಜೆ ಏಳು ಗಂಟೆಗೆ ಬನ್ನಿ. ನಮ್ಮ ಸ್ಟೋರ್ ರೂಂನಲ್ಲಿ ಒಂದು ಸ್ಟ್ಯಾಂಡ್ ಕೆಲಸವಿಲ್ಲದೆ ಬಿದ್ದಿದೆ. ನಿಮಗೆ ಕೊಡು ತ್ತೇನೆ." ನಾನು ಏಳು ಗಂಟೆಗೆ ಹೋದೆ. ಹೊರ ಬಾಗಿಲು ತೆರೆದಿತ್ತು. ಭಟ್ಟ ಆಚೆಯೇ ನಿಂತಿದ್ದ. ಅಲ್ಲೇ ನಿಂತು ನಾಲ್ಕಾರು ಯೋಗಕ್ಷೇಮದ ಮಾತು ಆಯಿತು. ಆಮೇಲೆ "ಪ್ರಭುಶಂಕರ್, ಸ್ಟ್ಯಾಂಡು ನಾಳೆ ಬೆಳಿಗ್ಗೆ ಕೊಟ್ಟರೆ ಆಗುತ್ತದೆಯೆ? ಈಗ ಅದನ್ನು ಹೊರಕ್ಕೆ ತರೋದಕ್ಕೆ ಸ್ವಲ್ಪ ಅನಾನುಕೂಲ ಇದೆ," ಎಂದ. ನಾನು "ನಾಳೆ ಅಲ್ಲದಿದ್ದರೆ ಹತ್ತು ದಿನಕ್ಕೆ ಕೊಡು, ಅದಕ್ಕೇನು ಅವಸರ, ಆದರೆ ಅನಾನುಕೂಲ ಏನು?" ಎಂದು ಸಹಜವಾಗಿ ಕೇಳಿದೆ. ಅವನು ಅಷ್ಟೇ ಸಹಜವಾಗಿ ವಿವರಣೆ ನೀಡಿದ. "ಇನ್ನೇನಿಲ್ಲ, ನಮ್ಮ ಸೋದರತ್ತೆ ಸತ್ತು ಹೋಗಿದ್ದಾರೆ. ರಾತ್ರಿಯೋ ಬೆಳಿಗ್ಗೆಯೊ ಶವಸಂಸ್ಕಾರ ಆಗಿ ಬಿಡುತ್ತದೆ." ನಾನು ಮೂಕನಾಗಿ ನಿಂತುಬಿಟ್ಟೆ. ಇವನ ಸೋದರತ್ತೆ ಎಂದರೆ ಈ ಇಡೀ ಕುಟುಂಬಕ್ಕೆ ತಾಯಿ. ಇವರು ಆರೇಳು ಮಕ್ಕಳು. ತಾಯಿ ತುಂಬ ಚಿಕ್ಕಂದಿನಲ್ಲೇ ತೀರಿಕೊಂಡಿದ್ದರು. ಆಗಿನಿಂದಲೇ ಸ್ವತಃ ತಾನೇ ಮನೆ ಕಳೆದುಕೊಂಡಿದ್ದ ಆ ಭಾರೀ ಹೆಂಗಸು, ಹೊರಲಾರದ ದೇಹವನ್ನಿಟ್ಟುಕೊಂಡಿದ್ದರೂ, ಮನೆಗೆ ಆಧಾರವಾಗಿದ್ದರು. ಅವರಿಂದಲೇ ಇವರಿಗೆಲ್ಲ ಊಟ ತಿಂಡಿ; ಅವರೇ ಮನೆಗೆ ಕಾವಲು. ಆಕೆ ಇಲ್ಲದೆ ಈ ಮನೆ ಹೇಗೆ ನಡೆಯುತ್ತದೆ ಎಂಬುದನ್ನು ಕಲ್ಪಿಸಿಕೊಳ್ಳುವುದು ನನಗೇ ಸಾಧ್ಯವಿರಲಿಲ್ಲ. "ಹೇಗಯ್ಯಾ ಸತ್ತರು?" ಎಂದೆ. "ನೋಡಿ ಪ್ರಭುಶಂಕರ್ ಯಥಾಪ್ರಕಾರ ಕೆಲಸ ಎಲ್ಲಾ ಮುಗಿಸಿ ಎರಡು ಗಂಟೆಗೆ ಮಲಗಿಕೊಂಡರು. ಮೂರು ಗಂಟೆಗೆ ಎದ್ದುಬಿಡುತ್ತಾ ಇದ್ದರು. ಇವತ್ತು ನಾನು ಕಾಲೇಜಿನಿಂದ ನಾಲ್ಕಕ್ಕೆ ಬಂದೆ. ಅತ್ತೆ ಎದ್ದಿಲ್ಲ ಎಂದು ಹುಡುಗರು ಹೇಳಿದರು. ಏಳಿಸುತ್ತೇನೆ; ಏಳಲಿಲ್ಲ. ನೋಡಿದರೆ ಸತ್ತೇ ಹೋಗಿದ್ದಾರೆ." ಅವನ ಮಾತಿನಿಂದ ಅವನು ದುಃಖಿತನಾಗಿದ್ದಾನೆ ಎಂಬುದನ್ನು ಗ್ರಹಿಸುವುದು ಸಾಧ್ಯವಿರಲಿಲ್ಲ. ಅಂದ ಮಾತ್ರಕ್ಕೆ ಅವನ ಹೃದಯ ಕಲ್ಲು ಎಂದಾಗಲಿ ಆಲ್ಬರ್ಟ್ ಕಾಮು ಎಂಬ ಲೇಖಕನ ಅನ್ಯ ಎಂಬ ಕಾದಂಬರಿಯ ನಾಯಕ ವಿ. ಜೋಸೆಫ್‌ನಂತೆ ತನ್ನ ಸ್ವಂತ ತಾಯಿಯ ಸಾವನ್ನು ತನಗೆ ಏನೇನೂ ಸಂಬಂಧವಿಲ್ಲದ ಹೊರಗಿನವನೋ ಎಂಬಂತೆ

ನೋಡಿದ, ಎಂದಾಗಲೀ ಅಲ್ಲ. ಈ ಬದುಕಿನಲ್ಲಿ ನಾನು ನೋಡಿರುವ ಎಲ್ಲ ವ್ಯಕ್ತಿಗಳಿಗಿಂತಲೂ ವೆಂಕಟರಾಂ ಸಂಪೂರ್ಣವಾಗಿ ಬೇರೆ ರೀತಿಯವನು.

ಸುಖ ದುಃಖ, ಸಾವು ಹುಟ್ಟು ಇವುಗಳ ಸ್ವರೂಪ ಕುರಿತು ಗೀತೆ ಉಪನಿಷತ್ತುಗಳಿಂದ ಶ್ಲೋಕಗಳನ್ನು ಉದ್ಧರಿಸಿ ಉದ್ದುದ್ದನೆಯ ಮಾತನ್ನಾಡುವ ಅನೇಕರನ್ನು ನಾನು ನೋಡಿದ್ದೇನೆ. ಆದರೆ ಕಷ್ಟ ಸಾವು ಇವುಗಳ ಎದುರಿನಲ್ಲಿ ಅವರು ಸಾಮಾನ್ಯರಿಗಿಂತ ಸಾಮಾನ್ಯರಾಗಿ ನಡೆದುಕೊಳ್ಳುವವನ್ನೂ ನೋಡಿದ್ದೇನೆ. ದುಡ್ಡು ಕಾಸಿನ ವಿಷಯದಲ್ಲೂ ಅಷ್ಟೇ. ಮಾತು ಮಾತ್ರ ದೊಡ್ಡದಾಗಿ ಆಡಿ ಕಾಸಿನ ವಿಷಯದಲ್ಲಿ ಸಣ್ಣವರಾಗಿ ನಡೆದುಕೊಂಡವರ ಅನುಭವ ನನಗೆ ತುಂಬ. ಈತನಲ್ಲಿ ಯಾವುದರ ವಿಷಯಕ್ಕೂ ದೊಡ್ಡ ಮಾತಿಲ್ಲ. ಆದರೆ ನಡತೆಯಲ್ಲಿ ಸಣ್ಣತನ ಎಂಬುದು ಇದರ ಹೆಸರು ಹೇಳಿದವರಿಗೂ ಬರುವುದಿಲ್ಲ. ಬದುಕಿನ ಸ್ವರೂಪ ಇಷ್ಟೇ ಇದಕ್ಕಾಗಿ ಒದ್ದಾಡಿಕೊಂಡು ಪ್ರಯೋಜನವಿಲ್ಲ, ಎಂಬುದು ಮೈಗೂಡಿ ಹೋಗಿ ಅದರಂತೆ ನಡೆಯುತ್ತಿದ್ದ ಪುಣ್ಯಪುರುಷ ಆತ.



"ರಾಜಕೀಯದಲ್ಲೂ ಅವರು ವಿರೋಧಿಗಳಾದ್ದರಿಂದ 'ಡ್ರಾ' ಆಗಲು ಸಾಧ್ಯವೇ ಇಲ್ಲಾಂತ ನಾನು ಹೇಳಿರ್ಲಿಲ್ವೆ?"

ನನ್ನ ಅವನ ನಡುವೆ ಬೇಕಾದಷ್ಟು ಸಾಲ ಸೋಲದ ವ್ಯವಹಾರ ಇತ್ತು. ಹಣ ಬೇಕಾದಾಗ ಎಷ್ಟೋ ಸಲ ಅವನು ಟೆನ್ನಿಸ್ ಆಡುತ್ತಿದ್ದ ಕಡೆಗೆ ಹೋಗಿ ಕಾಣಿಸಿಕೊಳ್ಳುತ್ತಿದ್ದೆ. ಆಡುತ್ತ ಆಡುತ್ತಲೇ, ಆ ಹರುಷ ಮೂರುತಿ, "ಎಷ್ಟು?" ಎಂದು ಕೂಗುತ್ತಿದ್ದ. ನಾನು ನಿಂತಲ್ಲಿಂದಲೇ ಕೈ ಬೆರಳಿನಿಂದ ಐದೋ ಹತ್ತೋ ಎಂದು ಸೂಚಿಸುತ್ತಿದ್ದೆ. ಅವನು "ಇದೆ" ಎಂದರೆ ನಾನು ನಿಂತು ಆಟ ಮುಗಿದ ಮೇಲೆ ತೆಗೆದುಕೊಳ್ಳತಕ್ಕದ್ದು ಎಂಬುದು ನಮ್ಮ ಸಂಕೇತ. ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ನಮ್ಮ ಲೆಕ್ಕ 'ಚುಕ್ತ' ಆಗುತ್ತಿತ್ತು. ನಮ್ಮಿಬ್ಬರಲ್ಲೂ ಏನೇನೂ ದಾಖಲೆ ಇರುತ್ತಿರಲಿಲ್ಲ. ಆದರೆ ಅದು ಚುಕ್ತ ಆಗುತ್ತಿದ್ದ ರೀತಿ ಮಾತ್ರ ಮಜವಾಗಿರುತ್ತಿತ್ತು. ಯಾವತ್ತೋ ನಾನು "ವೆಂಕಟರಾಂ ಈವತ್ತು ಲೆಕ್ಕ ಚುಕ್ತ ಮಾಡಬೇಕು" ಎನ್ನಬೇಕು. ಅವನು "ಎಷ್ಟು?" ಎನ್ನಬೇಕು. ನಾನು "ನೂರು" ಎಂದೆ, ಎಂದು ಇಟ್ಟುಕೊಳ್ಳಿ, ಅವನು "ನಾನು ಕೊಡಬೇಕೋ, ನೀವೋ?" ಎಂದು ಕೇಳುತ್ತಾನೆ. "ನಾನು" ಎನ್ನುತ್ತೇನೆ, "ಸರಿ ಐವತ್ತು ರೂಪಾಯಿ ಕೊಡಿ" ಎನ್ನುತ್ತಾನೆ ನಾನು ಐವತ್ತು ಕೊಟ್ಟರೆ "ಇಲ್ಲಿಗೆ ಚುಕ್ತ. ನಾಳೆಯಿಂದ ಹೊಸ ಲೆಕ್ಕ" ಎನ್ನುತ್ತಾನೆ. ಮೊದಲ ಸಲ ಇದು ನನಗೆ ವಿಚಿತ್ರವಾಗಿ ತೋರಿತು. ಆಗ ವೆಂಕಟರಾಂ ಹೇಳಿದ್ದು: "ನಮ್ಮ ತಂದೆಗೂ ನನಗೂ ವ್ಯವಹಾರ ನಡೆಯೋದು ಹೀಗೇ ಪ್ರಭುಶಂಕರ್. ಅವರು ಊರಿಗೆ ಹೋಗುತ್ತಾರೆ ನೋಡಿ. ನನ್ನ ಕೈಯಲ್ಲಿ ಮನೆಖರ್ಚಿಗೆ ಅಂತ ಹಣ ಕೊಡುತ್ತಾರೆ. ಬಂದಾಗ ಹೀಗೇ ಲೆಕ್ಕ ಚುಕ್ತ ಮಾಡುತ್ತೇನೆ." ಅವನ ತಂದೆ ಶ್ರೀ ಅಂಬಳೆ ವಾಸುದೇವಯ್ಯನವರು ಥಿಯಾಸಫಿಗಾಗಿ ತುಂಬ ಕೆಲಸ ಮಾಡಿದವರು. ಹಾಗೆ ನೋಡಿದರೆ ಅವರ ಇಡೀ ಮನೆತನವೇ ಥಿಯಾಸಫಿಗಾಗಿ ತುಂಬ ಶ್ರಮಿಸಿದೆ. 'ದಿವ್ಯಜ್ಯೋತಿ' ಎಂಬ ಮಾಸಿಕ ತರುತ್ತಾರೆ. ಅವನ ಚಿಕ್ಕಪ್ಪ ಶ್ರೀ ಸುಬ್ರಹ್ಮಣ್ಯಂ ಆಜನ್ಮ ಬ್ರಹ್ಮಚಾರಿ. ಸಬ್ ರಿಜಿಸ್ಟ್ರಾರ್ ಆಗಿ ಕೆಲಸ

ಮಾಡಿ ನಿವೃತ್ತರಾದವರು. ನಾನು ನೋಡಿದ ಪಕ್ಕಾ ಪ್ರಾಮಾಣಿಕ ಸಬ್ ರಿಜಿಸ್ಟ್ರಾರ್. ನಾನು ಹೆಚ್ಚು ಜನರನ್ನು ನೋಡದೇ ಇದ್ದರೂ ನನ್ನ ದುರದೃಷ್ಟ-ವಶರೆ ಒಂದೇ ಒಂದು ಕಾಸಿನ ಮೇಲು ಸಂಪಾ-ದನೆಗೆ ಕೈ ಚಾಚದೇ ಶುದ್ಧವಾಗಿ ಬಾಳಿದ ಅವರನ್ನು ನೋಡಿದ ಪುಣ್ಯವಂತ ನಾನು. ಅವರೂ ಕುಟುಂಬ ವರ್ಗದ ಇತರರಂತೆ ಥಿಯಾಸಫಿಯಲ್ಲಿ ಶ್ರದ್ಧೆ ಉಳ್ಳವರು.

ಭಟ್ಟನಿಗೆ ಸಿನೇಮಾ ನೋಡುವುದು ಎಂದರೆ ಆಗದು. ಏನೋ ಆ ಕಡೆ ಮನಸ್ಸಿಲ್ಲ. ಜೊತೆಗೆ ಕಣ್ಣಿನ ತೊಂದರೆ ಬೇರೆ. ಹೀಗಿದ್ದು ಒಂದು ರಾತ್ರಿ ಒಂಭತ್ತೂ ಮುಕ್ಕಾಲು ಗಂಟೆಗೆ ಭಟ್ಟ ನಮ್ಮ ರೂಮಿಗೆ ಬಂದು "ಸಿನಿಮಾಕ್ಕೆ ಹೋಗೋಣ ಬನ್ನಿ" ಎಂದಾಗ ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ನನಗೂ ಅವನಿಗೂ ನಡೆದ ಸಂಭಾಷಣೆ ಹೀಗಿತ್ತು:

"ಯಾವ ಸಿನಿಮಾ?"

"ವಾರ್ ಅಂಡ್ ಪೀಸ್" (ಕಾದಂಬರಿಯ ಚಿತ್ರೀಕರಣ.)

"ಸರಿ ನೋಡಬೇಕಾದದ್ದೇ ಆದರೆ ನಾಳೆ ಹೋಗೋಣ."

"ಏಕೆ?"

"ಏಕೇಂದ್ರೆ, ಸ್ಪಷ್ಟವಾಗೇ ಇದೆ. ಈಗ ಒಂಬತ್ತೂ ಮುಕ್ಕಾಲು, ಇಲ್ಲಿಂದ (ಕಾಲೇಜ್ ಹಾಸ್ಟೆಲ್) ಗಾಯತ್ರ ಟಾಕೀಸಿಗೆ ಹೋಗೋದಕ್ಕೆ ಕನಿಷ್ಠ ಅರ್ಧ ಗಂಟೆ ಬೇಕು. ಚಿತ್ರ ಶುರುವಾಗಿ ಹೋಗಿರುತ್ತೆ."

"ಅದಕ್ಕೆ ಇವತ್ತೇ ಹೋಗೋಣ."

"ಏನಯ್ಯಾ ಹಾಗಂದ್ರೆ?"

"ಅಲ್ಲ ಪ್ರಭುಶಂಕರ್, ಅದು ನಾಲ್ಕು ಗಂಟೆ ಸಿನಿಮಾ. ಅಷ್ಟನ್ನು ಯಾರು ನೋಡ್ತಾರೆ? ಕಾಲು ಭಾಗ ಮುಗಿದು ಹೋಗಿದ್ರೆ ಒಳ್ಳೇದೇ ಆಯ್ತು, ಬನ್ನಿ."

"ಅಲ್ಲಯ್ಯಾ ಅಷ್ಟು ಕಷ್ಟಪಟ್ಟುಕೊಂಡು ಆ ಸಿನಿಮಾಕ್ಕೆ ಹೋಗಲೇ ಬೇಕಿದ್ರೆ ನಾಳೆ ಏನು?"


"ಹಾಗಲ್ಲ, ಕಾಲೇಜಿನಲ್ಲಿ ಸಿಕ್ಕಿದವರೆಲ್ಲಾ ವಾರ್ ಅಂಡ್ ಪೀಸ್ ನೋಡಿದ್ರಾ, ವಾರ್ ಅಂಡ್ ಪೀಸ್ ನೋಡಿದ್ರಾ ಅಂತ ಕೇಳ್ತಾ ಇದಾರೆ. ಇಲ್ಲ ಅಂದ್ರೆ ಏನೋ ಮಹಾ ಅಪರಾಧ ಮಾಡಿದವನಂತೆ. ಛೆ ಛೆ ಛೆ. ಎಂಥ ಅನ್ಯಾಯ ಅಂತಾರೆ. ಅದಕ್ಕೇ ಹೋದ ಶಾಸ್ತ್ರ ಮಾಡಿಬಿಡೋಣ ಬನ್ನಿ."

ನಮ್ಮಿಬ್ಬರಲ್ಲಿ ಯಾವ ವಿಷಯದಲ್ಲೂ ಅಭಿಪ್ರಾಯ ಭೇದಕ್ಕೆ ಅವಕಾಶವೇ ಇರಲಿಲ್ಲ. ಆದ್ದರಿಂದ ಅವನ ಹಿಂದೆ ಮಾತನಾಡದೇ ಹೊರಟೆ.

ಸಿನಿಮಾ ಮಂದಿರದಲ್ಲಿ ಟಿಕೇಟು ಮಾರುತ್ತಿದ್ದುದನ್ನು ನಿಲ್ಲಿಸಿ ಎಷ್ಟೋ ಹೊತ್ತಾಗಿತ್ತು. ಲೆಕ್ಕ ಬರೆಯುತ್ತಿದ್ದರು. ಆದರೂ ಅವರಿಗೆ ಹೇಳಿ ಟಿಕೆಟ್ ತೆಗೆದುಕೊಂಡದ್ದಾಯಿತು. ಹೋಗಿ ಕುಳಿತೆವು. ಸಿನೇಮಾದಲ್ಲಿ ಯಾರೋ ಒಬ್ಬ ಮರಣಾ-ವಸ್ಥೆಯಲ್ಲಿದ್ದು ಒಂದು ಕರಂಡವನ್ನು ಕೈಯಲ್ಲಿಟ್ಟುಕೊಂಡು ದೀರ್ಘಕಾಲ ಭಾಷಣ ಮಾಡುತ್ತಿದ್ದ. "ಏನನ್ನು ಅವನು ಹೇಳೋದು?" ಎಂದು ಭಟ್ಟ ಕೇಳಿದ. ನನಗೆ ತಿಳಿದಷ್ಟು ವಿವರಿಸಲಿಕ್ಕೆ ಹೊರಟೆ. ಅವನಿಗೆ ಆಸಕ್ತಿ ಹುಟ್ಟಲಿಲ್ಲ. ಅವನು ಹೇಳಿದ, "ನೋಡಿ, ಅದರಲ್ಲಿ ಮಂಜು ಬೀಳೋ ದೃಶ್ಯ ಒಂದೇ ಮುಖ್ಯವಂತೆ. ಅದು ಬಂದಾಗ ಏಳಿಸಿ. ಅಷ್ಟರಲ್ಲಿ ನಿಮಗೆ ನಿದ್ದೆ ಬಂದರೆ ನನ್ನನ್ನು ಏಳಿಸಿ ಬಿಡಿ, ನೀವು ನಿದ್ದೆ ಮಾಡೋವಾಗ ನಾನು ಎದ್ದಿರ್ತೀನಿ" ಎಂದು ಹೇಳಿ ಆ ಒಪ್ಪಂದಕ್ಕೆ ನಾನು ರುಜು ಹಾಕುವುದಕ್ಕೂ ಕಾಯದೇ ನಿದ್ದೆ ಮಾಡಿಬಿಟ್ಟ !

ನಾವು ಹೀಗೆ ರಿಲೇ ನಿದ್ದೆ (ಸರದಿ ಪ್ರಕಾರ ನಿದ್ದೆ) ಮಾಡಿದ್ದು ಇದೇ ಮೊದಲಲ್ಲ. ಇವನ್ನು ಅವನು ಕೋಲಾರದಲ್ಲೇ ಹೇಳಿಕೊಟ್ಟಿದ್ದ. ನಮ್ಮ ಪರಮ ಮಿತ್ರರಾದ ಶ್ರೀ ಸಿ. ರಾಮಾಚಾರ್ಯರು ಆಗ ನಮ್ಮ ಸಹೋದ್ಯೋಗಿಗಳು. ನಮ್ಮ ಮನೆಗೆ ಬಂದು ಗಂಟೆಗಟ್ಟಲೇ ಮಾತನಾಡುತ್ತಿದ್ದರು. ಬಹಳ ಸ್ವಾರಸ್ಯವಾಗಿರುತ್ತಿತ್ತು, ನಮ್ಮ ಮಾತು ಕತೆ. ವ್ಯಕ್ತಿ ತುಂಬ ಸ್ನೇಹಪರ. ಒಂದೇ ದೋಷ ಎಂದರೆ. ಆ ದಿನಗಳಲ್ಲಿ ನಮ್ಮ ಮೇಲೆ ಎಷ್ಟು ವಿಶ್ವಾಸ ಎಂದರೆ, ರಾತ್ರಿ ಎಷ್ಟು ಹೊತ್ತಾದರೂ ನಮ್ಮನ್ನು ಮಲಗಲು ಬಿಡುತ್ತಿರಲಿಲ್ಲ. ಒಂದು ದಿನ ರಾತ್ರಿ ಹನ್ನೊಂದು ಗಂಟೆ ಆಗಿದೆ. ನಾನು, ವೆಂಕಟರಾಂ ಚಾಪೆ ಹಾಕಿಕೊಂಡು ಮಲಗಿಕೊಂಡೆವು. ರಾಮಾಚಾರ್ಯರು ನಮ್ಮಿಬ್ಬರ ಮಧ್ಯೆ ತಲೆ ಹತ್ತಿರ ಕುಳಿತರು. ವೆಂಕಟರಾಂ ಘೋಷಿಸಿದ: ಹನ್ನೊಂದರಿಂದ ಹನ್ನೆರಡು ಪ್ರಭುಶಂಕರ್ ಜೊತೆ ಮಾತು; ನನಗೆ ನಿದ್ದೆ. ಹನ್ನೆರಡರಿಂದ ಒಂದು ಘಂಟೆ ನನ್ನ ಜೊತೆ ಮಾತು: ಪ್ರಭುಶಂಕರ

ರ್ಯಾಲಿ-ಕ್ಲೆಯರ್‌ಟೋನ್‌ನ 6 ಕೆಚ್ಚೆದೆಯ ಯೋಧರು




ಬಟ್ಟೆಗಳ ಮಡಿಕೆಗಳ ಶತ್ರು—

ರ್ಯಾಲಿ ಕ್ಲಿಯರ್‌ಟೋನ್

ಇಸ್ತ್ರಿ ಪೆಟ್ಟಿಗೆಗಳು.

ಗೃಹೋಪಕರಣಗಳ ಕ್ಷೇತ್ರದಲ್ಲಿನ ಒಂದು ಹೆಸರು, ಮಹಾನ್ ಜೋಡಿ ನಿಮಗೆ ಇಸ್ತ್ರಿಪೆಟ್ಟಿಗೆಗಳ ಹೊಸ ಶ್ರೇಣಿಯನ್ನೀಯುತ್ತದೆ— ರ್ಯಾಲಿ ಕ್ಲಿಯರ್‌ಟೋನ್. ಈ ರ್ಯಾಲಿ ಕ್ಲಿಯರ್‌ಟೋನ್‌ನ ಉಚ್ಚ ಮಟ್ಟದ ಗುಣಗಳು ಮತ್ತು ರ್ಯಾಲಿಯ ವಿಶ್ವಾಸಾರ್ಹತೆ ಸಮ್ಮಿಳಿತವಾಗಿವೆ. ನೀವು ಈ ಇಸ್ತ್ರಿಪೆಟ್ಟಿಗೆಗಳ ಶ್ರೇಣಿಯಿಂದ ನಿಮಗೆ ಬೇಕಾದುದನ್ನು ಆಯ್ದುಕೊಳ್ಳಿರಿ.
ಆರು ಉತ್ತಮ ಮಾಡೆಲ್ಲುಗಳಿವೆ— ಇಷ್ಟವಾದುದನ್ನು ಕೊಳ್ಳಿರಿ:
ಆಟೋಮ್ಯಾಟಿಕ್— ನೋವಾ, ಕ್ವೀನ್, ಇಂಪೀರಿಯಲ್.
ನಾನ್-ಆಟೋಮ್ಯಾಟಿಕ್— ಪಾಪ್ಯುಲರ್, ಸೀನಿಯರ್, ಡಿಲೈಟ್.



ರ್ಯಾಲಿ ಕ್ಲೆಯರ್‌ಟೋನ್—ಹೊಸ ಜೋಡಿಯ ಕೆಲಸ ನೋಡಿ, ಅನುಪಮವು ಅದರ ಮೋಡಿ!

ರಿಗೆ ನಿದ್ದೆ. ಈ ಘೋಷಣೆ ಕೇಳಿ ಮನಸ್ಸಿನಲ್ಲದ ಮನಸ್ಸಿನಿಂದ ರಾಮಾಚಾರ್ಯರು ಮನೆ ಕಡೆ ಹೊರಟರು!

ಅವನಿಗೆ ನಾಟಕದಲ್ಲಿ ಪಾತ್ರ ವಹಿಸುವುದು ಎಂದರೆ ಬಹಳ ಇಷ್ಟ. ಹಿಂದೆಯೂ ಎಷ್ಟೋ ನಾಟಕಗಳಲ್ಲಿ ಪಾತ್ರ ವಹಿಸಿದ್ದನಂತೆ. ನಮ್ಮ "ಅಂಗುಲಿಮಾಲ" ನಾಟಕದಲ್ಲಿ ಸಾಧುವಿನ ಪಾತ್ರ ವಹಿಸಿದ್ದನು. ಅವನು ಬುದ್ಧ – ಆ ಪಾತ್ರಕ್ಕೆ ಬಾಳಿ ಹೊಂದುತ್ತಿದ್ದ. ಅವನು ನಾನು ಅವನ ಬಂದು ತೋರುತ್ತದೆ. ಅವನು ಯಾವುದನ್ನೂ ಗಟ್ಟಿ ಮಾಡುತ್ತಿರಲಿಲ್ಲ. ಸಂಭಾಷಣೆ ಮರೆತು ಹೋದ ಕೂಡಲೇ "ಎಲ್ಲ ಅನಂತ. ಕರುಣಾಮಯನು ತಾ" ಎಂದು ಹೇಳಿ ಮುಗಿಸುವ ಅವಸರ ತೋರಿಸುತ್ತಿದ್ದ. ನಾವೋ ಕಕ್ಕಾಬಿಕ್ಕಿ. ಹೇಗೋ ನಾಟಕ ಮುಗಿಸುವ ವೇಳೆಗೆ ಸಾಕು ಸಾಕಾಗಿ ಹೋಯಿತು.

ಟಿ. ಪಿ. ಕೈಲಾಸಂ ಅವರ "ಪರ್ಪಸ್" ನಾಟಕ ಪ್ರದರ್ಶಿತವಾಯಿತು, ಯುವರಾಜಾ ಕಾಲೇಜಿನಲ್ಲಿ. ಅವನು ಅದರಲ್ಲಿ ಅರ್ಜುನ. ಕನ್ನಡಕ ಹಾಕಿಕೊಂಡು ಅರ್ಜುನ ಬರುವಂತಿಲ್ಲವಲ್ಲ. ಇವನು ಬಿಲ್ಲು ಬಾಣವನ್ನು ಯಾರು ಎಂದರೆ ಅವರ ಕಡೆ ತಿರುಗಿಸಿ ಗುರಿ ಇಟ್ಟು ಬಿಡುತ್ತಿದ್ದ. ಒಂದು ಸಲ ದ್ರೋಣರ ಕಡೆಗೆ ಗುರಿ ಇಟ್ಟುಬಿಟ್ಟ! ಅವನಿಗೆ ಕಾಣಿಸದು. ಅವರು ಪಿಸುಮಾತಿನಲ್ಲಿ 'ಬೇರೆ ಕಡೆ ತಿರುಗಿಸಿ' ಎಂದರು.

ಒಂದು ಸಂಜೆ ನಾವು ಯಥಾಪ್ರಕಾರ ಭೇಟಿಯಾದಾಗ ವೆಂಕಟರಾಂ ತಾನು ಮದುವೆ ಮಾಡಿಕೊಳ್ಳಲೇಬೇಕಾದ ಸ್ಥಿತಿ ಬಂದಿದೆ ಎಂದ. ಅದಕ್ಕೆ ಕಾರಣ ಅಂದಿನ ಘಟನೆ. ಮಧ್ಯಾಹ್ನ ಇವನು ಮನೆಗೆ ಹೋದ. ಯಾವುದೋ ಪುಸ್ತಕಗಳನ್ನು ತೆಗೆದುಕೊಂಡು ಮತ್ತೆ ಕಾಲೇಜಿಗೆ ಬರುವುದಕ್ಕೆ ಬರಬೇಕಾಗಿತ್ತು. ಆದರೆ ಎಷ್ಟು ತಟ್ಟಿದರೂ ಮನೆಯ ಬಾಗಿಲು ತೆರೆಯಲಿಲ್ಲ. ಅವನ ತಂದೆ ಯಥಾಪ್ರಕಾರ ಪ್ರವಾಸ ಹೋಗಿದ್ದರು. ಅವನ ತಂಗಿಯರು ಶಾಲೆ ಕಾಲೇಜುಗಳಿಗೆ ಹೋಗಿದ್ದರು. ಇವರ ಅತ್ತೆ ತೀರಿಕೊಂಡರಲ್ಲ. ಅವರು ಇದ್ದಾಗ ಯಾವ ಸಮಸ್ಯೆಯೂ ಇರಲಿಲ್ಲ. ಈಗ ಮನೆಯಲ್ಲಿ ಡಾ. ಎ. ವೆಂಕಟಸುಬ್ಬಯ್ಯನವರು ಒಬ್ಬರೇ. ಅವರಿಗೂ [illegible], ಅವರೇನೋ ಹಾಲಿನ ಬಾಗಿಲಿನ ಒಳಗೆ ಕಾಣುವಂತೆಯೇ ಓದುತ್ತಾ ಕುಳಿತಿರುತ್ತಾರೆ. ಆದರೆ ಹೊರ ಗೋಡೆಯೋ ಎತ್ತರದ ಕಾಂಪೌಂಡು ಗೋಡೆ. ಅದಕ್ಕೊಂದು ಬಾಗಿಲು. ದಾಟಿ ಹೋದರೆ ಮಾತ್ರ ವೆಂಕಟಸುಬ್ಬಯ್ಯನವರು ಗಮನ ಸೆಳೆದು, ಅದೂ ಅವರು ಓದಿನ ಮಧ್ಯೆ ತಲೆ ಎತ್ತಿ ನೋಡಿದರೆ ಮಾತ್ರ, ಬಾಗಿಲು ತೆಗೆಸುವುದು ಸಾಧ್ಯ. ಅವರು ಏಕೋ ಏನೋ ಮರೆತು ಹೊರಬಾಗಿಲು ಹಾಕಿಕೊಂಡುಬಿಟ್ಟಿದ್ದಾರೆ. ಇವನಿಗೋ ಒಳಕ್ಕೆ ಹೋಗಬೇಕಾಗಿದೆ. ಇವನು ಕೊನೆಗೆ ಮಹಾಪ್ರಯಾಸದಿಂದ ಹೊರ ಗೋಡೆಯನ್ನು ಹತ್ತಿ ಇಳಿದ. ಅದಕ್ಕಿಂತ ಹೆಚ್ಚಿನ ಪ್ರಯಾಸದಿಂದ ವೆಂಕಟಸುಬ್ಬಯ್ಯನವರ ಗಮನ ಸೆಳೆದು ಬಾಗಿಲು ತೆಗೆಸಿದ. ಇದು ನಾನು ಬರೆದಿರುವಷ್ಟು ಸುಲಭವಾಗಿ ನಡೆಯಲಿಲ್ಲ ಎಂಬುದು ಊಹೆಗೆ ಸಿಕ್ಕುವ ವಿಷಯ.

ಆ ಒಂದು ಮಧ್ಯಾಹ್ನ ಮನೆಯ ಬಾಗಿಲು ತೆರೆಸಿದ್ದಾಯಿತಲ್ಲ, ಇಷ್ಟು ಸಣ್ಣ ಕಾರಣಕ್ಕೆ ಮದುವೆ ಏಕೆ ಮಾಡಿಕೊಳ್ಳಬೇಕು? ಹೆಂಡತಿ ಎಂದರೆ ಸುಮ್ಮನೆ ಮನೆ ಬಾಗಿಲು ತೆರೆಯಲು ಒದಗುವ ಒಂದು ಅಲ್ಪಶಕ್ತಿ ಮಾತ್ರವೇ? ಮುಂತಾದ ತಾತ್ವಿಕ ಪ್ರಶ್ನೆಗಳನ್ನು ಕೇಳುತ್ತಾ ಕುಳಿತರೆ ಪ್ರಯೋಜನವೇನು? ಕೂಡಲೇ ಮಿತ್ರರ ಒಂದು ಮೀಟಿಂಗ್ ಕರೆದೆವು. ಆ ತುರ್ತು ಸಭೆಯಲ್ಲಿ ಹಾಜರಿದ್ದವರು ವಿವಾಹಿತರಾಗಿದ್ದ ಶಿವರುದ್ರಪ್ಪ, ಸುಬ್ಬರಾಯರು; ಅವಿವಾಹಿತರು – ಚಿದಾನಂದಮೂರ್ತಿ, ಪ್ರಭುಪ್ರಸಾದ್ ಮತ್ತು ನಾನು. ಬ್ರಹ್ಮಚರ್ಯಾಶ್ರಮದಿಂದ ಎರಡು ಕಾಲುಗಳನ್ನೂ ಅನಾಮತ್ತಾಗಿ ಎತ್ತಿ ಗೃಹಸ್ಥಾಶ್ರಮಕ್ಕೆ ಇಡಲು ಸಿದ್ಧನಾಗಿದ್ದ (ಅನಿವಾರ್ಯ ಪರಿಸ್ಥಿತಿಯಿಂದ) ವೆಂಕಟರಾಂ ಮದುವೆಯ ಮಾತೆತ್ತಿದ ಕೂಡಲೇ ವಿಧವಿಧವಾದ ಅಭಿಪ್ರಾಯಗಳು ವ್ಯಕ್ತವಾದವು. ಪವಿತ್ರವಾದ ಗೃಹಸ್ಥಾಶ್ರಮವನ್ನು ಪ್ರವೇಶಿಸಿ ಕಷ್ಟ ಸುಖ(?)ಗಳನ್ನು ಎದುರಿಸಿ ಹೋರಾಡಲು ಹಿಂಜರಿಯುತ್ತಿರುವ ಹೇಡಿಗಳು ನೀವು ಎಂದೂ, ಅದೂ ಕೇವಲ ಯಾವಾಗಲೋ ಒಮ್ಮೊಮ್ಮೆ ಬೆನ್ನಿನ ಮೇಲೆ ಬೀಳಬಹುದಾದ ಗುದ್ದುಗಳಿಗೂ, ಕೇವಲ ಮೃದುವಾದ(!) ನಿಂದೆಯ ಮಾತುಗಳಿಗೂ ಅಂಜಿರುವ ಕಾರಣಕ್ಕಾಗಿ ಎಂದೂ, ಎಂದಿನಂತೆ ಸುಬ್ಬರಾಯರು ನಮ್ಮನ್ನು ಹೀಯಾ

ಕೊಂಡರು. ಆಗ ವೆಂಕಟರಾಂ ಹಾಡುವ ನಿಶ್ಚಯದ ಬಗ್ಗೆ ಪ್ರತಿಪ್ರತಿಕ್ರಿಯೆಗಳು. "ಅಯ್ಯೋ ಪಾಪ" ಎಂದು ಬ್ರಹ್ಮಚಾರಿಗಳ ಗುಂಪು ಲೊಚಗುಟ್ಟಿತು. "ಭೇಷ್. ಧೈರ್ಯ ಎಂದರೆ ಇದಪ್ಪ. ಇನ್ನು ನಮ್ಮ ಗಾದಿಯ ನಿಷೇಧ ಆಗುತ್ತದೆ" ಎಂದು ಗೃಹಸ್ಥರ ಮುಖ ಗಂಟು. ವಿವಾಹಿತರಾದ ಹೆಂಗಸರನ್ನು ಬೇರೆ ಪ್ರಶ್ನೆ ಕೇಳಿತು. ವೆಂಕಟರಾಂರ ಪತ್ನಿಯನ್ನು ಮೆಚ್ಚಿಕೊಂಡರು. "ಪರವಾಗಿಲ್ಲ. ಮುಟ್ಟು ಕಾಲ ತಾನಾಗಿ ಬರುತ್ತದೆ." ಎಂದು ಉದ್ಗರಿಸಿತು! ಕನ್ಯೆಯನ್ನು ನಾನಾರೀತಿ ಪರೀಕ್ಷಿಸುವ ಶಿಕ್ಷಣವಾಯಿತು.

ಭಟ್ಟರದೂ ಕೆಲವು ನಿಯಮಗಳು: ಕನ್ಯೆಯನ್ನು ನೋಡಲು ಮನೆಗೆ ಕರೆದು ತಂದು ತೋರಿಸಬೇಕೆಂದು. ಇದು ಸ್ತ್ರೀತ್ವಕ್ಕೆ ಮಾಡುವ ಘೋರ ಅಪಮಾನ. ನಾವೇ ಕನ್ಯೆಯ ಮನೆಗೆ ಹೋಗಿ ನೋಡತಕ್ಕದ್ದು. ಆದರೂ ಮನೆಯಿಂದ ಮನೆಗೆ ಹೋಗಿ ಕನ್ಯೆಯರನ್ನು ನೋಡುವ ನೆಪದಿಂದ ಅವರು ಕೊಡುವ ನಾನಾದ ತಿಂಡಿತಿನಿಸುಗಳನ್ನು ಧ್ವಂಸಮಾಡುತ್ತಾ ಕುಳಿತುಕೊಳ್ಳತಕ್ಕದ್ದಲ್ಲ. ಒಂದೇ ಒಂದು ಮನೆಗೆ ಹೋಗಿ, ಒಂದೇ ಒಂದು ಕನ್ಯೆಯನ್ನು ನೋಡತಕ್ಕದ್ದು. ಹಾಗಾದರೆ ಹೋಗುವುದು ತಾನೆ ಏಕೆ ಎಂದರೆ ಕನ್ಯೆಗೆ ತನ್ನನ್ನು ತಿರಸ್ಕರಿಸುವುದಕ್ಕೆ ಅವಕಾಶ ಒದಗಿಸೋಣ! ಇನ್ನೊಂದು ನಿಯಮ ಕನ್ಯೆಯ ಮನೆಯವರು ಶ್ರೀಮಂತರಾಗಿರಕೂಡದು. ಕನ್ಯೆಗೆ ಸಂಗೀತದಲ್ಲಿ ಆಸಕ್ತಿ ಇರಬೇಕು. ಮದುವೆ ಅತ್ಯಂತ ಸರಳವಾಗಿ ನಡೆಯಬೇಕು. ಸಾಧ್ಯವಾದರೆ ಒಬ್ಬರೆ ಪರವಾಗಿಲ್ಲ…

ಇವನು ಕೇಳಿದನ್ನು ಗುಣಗಳು–ಸಂಗೀತ ಜ್ಞಾನ ಒಂದು ಬಿಟ್ಟು–ಇದ್ದ ಕನ್ಯೆಯೊಬ್ಬಳನ್ನು ಸ್ನೇಹಿತರು ಕೆಲವು ವರ್ಷಗಳಿಂದಲೂ ಮನಸ್ಸಿನಲ್ಲೇ ಭಟ್ಟರಿಗಾಗಿ ಎಂದು ಮೀಸಲಿಟ್ಟುಕೊಂಡು ಇದ್ದರು. ಅವಳು ಸರಸ್ವತಿ. ಬಿ. ಎ. ವ್ಯಾಸಂಗದಲ್ಲೇ ಮುಗಿಸಿದೆ. ಪಾಪ ಧಾರವಾಡದ ಆಕೆಯು ಅಕ್ಕನ ಜೊತೆ–ಭಾವ ಕೆ. ಜಿ. ಭಟ್ಟರು–ಇದ್ದಾಳೆ.

ಪ್ರಸ್ತಾಪ ನಡೆಯಿತು. ಧಾರವಾಡಕ್ಕೆ ನಾನು, ವೆಂಕಟರಾಂ ಮತ್ತು ಅವನ ಅಕ್ಕ ಶ್ರೀಮತಿ ಜೊತೆ ಹೋಗುವುದು ಎಂದು ಗೊತ್ತಾಯಿತು. ಭಟ್ಟರಿಗೆ ಹೆಣ್ಣು ನೋಡುವುದು ಎಂಬುದು ದಾಗಲೋ ನನ್ನ ಬದುಕಿನ ಒಂದು ಮಹತ್ವಘಟನೆಯಾಗಿ ನನಗೆ ತೋರಿತು. ಅಲ್ಲಿಂದ ಜೀವನದಲ್ಲೇ ಮೊದಲ ಬಾರಿಗೆ ಒಂದು ಹೆಣ್ಣು ನೋಡಿ ಬಂದೆ. (ವರನಾಗಬಯಸಿದ್ದ ಭಟ್ಟ ನಾನಾದ ಬಟ್ಟೆಯನ್ನು ಹೋಲಿಸಿಕೊಳ್ಳಬಹುದು:) ಧಾರವಾಡಕ್ಕೆ ಹೋದದ್ದೂ ಆಯಿತು. ಸರಸ್ವತಿಯ ದರ್ಶನವೂ ಆಯಿತು– ಮದುವೆಯೂ ನಡೆದು ಹೋಯಿತು.

ಭಟ್ಟ ಮಗುವಿನ ಸ್ವಭಾವದವನು. ಉದಾರ ಹೃದಯಿ. ಅಷ್ಟಾಗಿ ವ್ಯವಹಾರ ಜ್ಞಾನ ಇಂಥ ವಿಷಯಗಳಲ್ಲಿ ಆಸಕ್ತಿ ಇಲ್ಲದವನು. ಇವನಿಗೆ ಎಂಥ ಹೆಂಡತಿ ಸಿಕ್ಕುತ್ತಾಳೋ ಎಂದು ನಾವು ಮಿತ್ರರು ಕಳವಳಗೊಂಡಿದ್ದೆವು. ಶ್ರೀಮತಿ ಸರಸ್ವತಿ ವೆಂಕಟರಾಂ ಅವರು ಕೆಲವೇ ದಿನಗಳಲ್ಲಿ ನಮ್ಮ ಆತಂಕವನ್ನು ದೂರಮಾಡಿದರು. ಸ್ತ್ರೀಯಲ್ಲಿ ಎಂಥ ಚಮತ್ಕಾರ ಇದೆ! ಸಜ್ಜನ ಹೃದಯಿಗಳನ್ನು ಒಂದೇ ರೀತಿಯ ಗಾಢಸ್ನೇಹದವರನ್ನು ಬೇರ್ಪಡಿಸಬಹುದಾಯಿತಲ್ಲ ಎಂದು ನಾವೆಲ್ಲ ಹಿಗ್ಗಿದೆವು. ಈಕೆಯಿಂದರಿಂದ ಸ್ನೇಹಿತ ಸ್ನೇಹದಲ್ಲೂ ಜಗಮುಖ್ಯವಾದರೂ ಇಲ್ಲ ವ್ಯವಹಾರ ಚತುರೆಯಾಗಬಾರದಿತ್ತೆ ಎಂದು ಹೇಳಬಹುದು.

ಒಂದು ಮಧ್ಯಾಹ್ನ ಅವರೂ ಅವರ ಮಡದಿಯೂ ನಮ್ಮ ಮನೆಗೆ ಬಂದರು. ಇಬ್ಬರ ಕೈಯಲ್ಲೂ ಒಂದೊಂದು ಬಕೆಟ್ಟು. ಅದರ ತುಂಬ ಕೊಳೆ ಬಟ್ಟೆಗಳು. ಅದನ್ನು ಹಿಡಿದುಕೊಂಡು, ಸೋರುವ ರಸ್ತೆಯಲ್ಲಿರುವ ನಮ್ಮ ಮನೆಯವರ ಸಮ್ಮತಿ ಪ್ರದರ್ಶಿಸುವ ನಮ್ಮ ಮನೆಯವರಿಗೂ ನಮಗೂ ಹೊಂದು ಬಂದಿದ್ದಾರೆ! ಏನು ಸಮಾಚಾರ ಎಂದು ವಿಚಾರಿಸುವುದಕ್ಕೆ ತಿಳಿದುಬಂತು! ಅವರ ಮನೆಯಲ್ಲಿ ನೀರು ನಿನ್ನಿಂದ ನಿಂತು ಹೋಗಿದ್ದುದರಿಂದ; ನಮ್ಮ ಮನೆಯಲ್ಲಿ ಬಾವಿ ನೀರಿನಿಂದ ಬಟ್ಟೆ ಒಗೆದುಕೊಂಡು, ಸ್ನಾನವನ್ನು ಮಾಡಿಕೊಂಡು ಹೋಗುವುದು ಎಂದಾಗಿದ್ದಾರೆ! ಇಡೀ ಮಧ್ಯಾಹ್ನ ನಮ್ಮ ಮನೆಯಲ್ಲಿ ಕಳೆದರು. ಸಾಯಂಕಾಲವಾಗಿ ಬಟ್ಟೆ ಒಣಗಿದ ಮೇಲೆ, ತಿಂಡಿ ತೀರ್ಥಗಳ ಸಮಾರಾಧನೆ. ಮಾತುಕತೆಗಳಿಗೆ ಕೊರತೆಯುಂಟೆ? ಒಬ್ಬರಿಗೊಬ್ಬರು ಸಲಹೆ ನೀಡಿದೆವು. "ಬಕೆಟ್ಟುಗಳನ್ನು ಹಿಡಿದುಕೊಂಡು ಬೀದಿಯಲ್ಲಿ ಹೋಗುವುದು ನಾಚಿಕೆಗೇಡು..."

ಲ್ಲವೆ?" ಎಂದು ನಮ್ಮಲ್ಲಿ ಯಾರೊ ಒಬ್ಬರು ಕೇಳಿದರೆ, "ಅದರಲ್ಲೇನು ಸಂಕೋಚ" ಎಂದ ವೆಂಕಟರಾಂ. ಒದ್ದೆ ಬಟ್ಟೆ ಭಾರವಾದ್ದರಿಂದ ನಾನೇ ಟಾಂಗಾ ತರಿಸಿಕೊಟ್ಟೆ.

ಈಗ ನಾನು ಉಲ್ಲೇಖಿಸಲಿರುವ ಘಟನೆಗೆ ಸಮಾನವಾದದ್ದು ಎಲ್ಲಿ ನಡೆದಿದೆಯೋ ಗೊತ್ತಿಲ್ಲ. ಒಂದು ಸಂಜೆ ನಾನೂ ಭಟ್ಟ ಅವನ ಮನೆಗೆ ಹೋದೆವು. ಅವನ ಹೆಂಡತಿ ಊರಿಗೆ ಹೋಗಿ ಹದಿನೈದು ದಿನಗಳ ಮೇಲಾಗಿತ್ತು. ನಾವು ಮನೆಯೊಳಕ್ಕೆ ಕಾಲಿಡುತ್ತಲೇ ಅವನ ಹೆಂಡತಿಯ ದರ್ಶನವಾಯಿತು. ಭಟ್ಟ ಎಂದಿನಂತೆ ಅನುದ್ವಿಗ್ನನಾಗಿ "ಯಾವಾಗ ಬಂದೆ?" ಎಂದ. ಆಕೆ, "ಇದೇನು ಹೀಗೆ ಕೇಳುತ್ತೀರಿ! ಬೆಳಿಗ್ಗೆ ನಾನು ರೈಲಿನಿಂದ ಬಂದಾಗ ನೀವು ನನ್ನೆದುರಿಗೇ ಕಾಲೇಜಿಗೆ ಹೊರಟಿರಲ್ಲ. ನೋಡಲಿಲ್ಲವೆ?" ಎಂದು ಕೇಳಿದರು. ಇವನು "ಚೆನ್ನಾಯಿತು, ಬೀದೀಲಿ ಹೋಗೋ ಹೆಂಗಸರನ್ನೆಲ್ಲ ನೋಡಿದರೆ ಸರಿಹೋಗುತ್ತದೆಯೆ?" ಎಂದುಬಿಟ್ಟ. ಆಕೆ ನಕ್ಕು ಹೊರಳಾಡಿದರು.



"ಯಾಕ್ರೀ ಭಯಪಡ್ತೀರಿ ?... ನಿಮ್ಮದೇ ಚಪ್ಪಲಿ ಕಣ್ರೀ... ಓಹೋ ನಿನ್ನೆಯ ನಿಮ್ಮ ಸಭೆಯ ಕನಸು ಕಂಡ್ರಾ ?"

ತನ್ನ ಅಧ್ಯಯನ ವಿಷಯವಾದ ಭೌತಶಾಸ್ತ್ರದಲ್ಲಿ ಭಟ್ಟ ತುಂಬ ಗಟ್ಟಿಗ ಎನ್ನಿಸಿಕೊಂಡಿದ್ದ. ತುಂಬ ಪ್ರತಿಭಾಶಾಲಿ ಎನ್ನುವುದರಲ್ಲಿ ಯಾರಿಗೂ ಯಾವ ಸಂದೇಹವೂ ಇರಲಿಲ್ಲ. ವಿದ್ಯಾರ್ಥಿಗಳಿಗೆ ಇವನ ಪಾಠ ಎಂದರೆ ತುಂಬ ಪ್ರೀತಿ. ಹೀಗೆ ಒಳ್ಳೆ ಉಪಾಧ್ಯಾಯನೂ ಒಳ್ಳೆ ಬುದ್ಧಿಶಾಲಿಯೂ ಆದವನನ್ನು ನಾನು ವಿದೇಶಕ್ಕೆ ಹೋಗಿ ಹೆಚ್ಚಿನ ವಿದ್ಯಾಭ್ಯಾಸ ಮಾಡು ಎಂದು ಪೀಡಿಸತೊಡಗಿದ್ದರಲ್ಲಿ ತಪ್ಪೇನೂ ಇಲ್ಲ, ಎಂದೇ ನನ್ನ ಭಾವನೆ. ಈ ವಿಷಯದಲ್ಲಿ ನಮ್ಮ ಸಂಭಾಷಣೆ:

"ವೆಂಕಟರಾಂ, ಫುಲ್‌ಬ್ರೈಟ್ – ಸ್ಮಿತ್‌ಮಂಡ್ಟ್ ಸ್ಕಾಲರ್‌ಶಿಪ್‌ಗೆ ಅರ್ಜಿ ಹಾಕಪ್ಪಾ."

"ಯಾಕೆ?"

"ಯಾಕೇಂದ್ರೆ ಸ್ಕಾಲರಶಿಪ್ ಕೊಡ್ತಾರೆ. ಅಮೇರಿಕಕ್ಕೆ ಹೋಗಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿಕೊಂಡು ಬಾ."

"ಮಾಡಿಕೊಂಡು ಬಂದರೆ ಏನಾಗುತ್ತೆ?"

"ಏನಾದರೂ ಬಡ್ತಿ ಸಿಕ್ಕುತ್ತೆ."

"ಬಡ್ತಿ ಸಿಕ್ಕಿದರೆ ಏನಾಗುತ್ತೆ?"

"ಏನೋಪ್ಪ ನಾಲ್ಕು ಕಾಸು ಹೆಚ್ಚಾಗಿ ಬರಬಹುದು. ನೀನು ಸುಖವಾಗಿರುತ್ತೀಯೆ?"

"ನಾನು ಈಗಲೂ ಸುಖವಾಗಿದ್ದೀನಲ್ಲ..."

ನನ್ನ ಬಾಯಿ ಮುಚ್ಚಿ ಹೋಗುತ್ತಿತ್ತು. ಆದರೆ ನನಗೋ ಈ ವಿಷಯದಲ್ಲಿ ತುಂಬ ಚಪಲ: ವಿಜ್ಞಾನ ಎಷ್ಟು ಮುಂದುವರಿಯುತ್ತಿದೆ. ವಿದೇಶಗಳಲ್ಲಿ, ಅದರಲ್ಲೂ ಅಮೇರಿಕದಲ್ಲಿ ಎಷ್ಟೋ ಸಂಶೋಧನೆಗಳು ನಡೆಯುತ್ತಿವೆ. ಇಂಥ ಪ್ರತಿಶಾಲಿ ಅವನ್ನೆಲ್ಲ ನೋಡಬೇಡವೆ ಎಂದು ಯೋಚನೆ. ಪದೇ ಪದೇ ಅವನನ್ನು ಪೀಡಿಸಿದ್ದರ ಪರಿಣಾಮವಾಗಿ ಕೊನೆಗೊಮ್ಮೆ ಭಟ್ಟ ಸ್ಕಾಲರ್‌ಶಿಪ್‌ಗೆ ಅರ್ಜಿ ಹಾಕಿದ. ಮದರಾಸಿಗೆ ಹೋಗಿ ಪರೀಕ್ಷೆ ಕೊಟ್ಟು ಬಂದ. ಇಂಟರ್‌ವ್ಯೂ ಆಯಿತು. ಅಮೇರಿಕದ ಲೂಸಿಯಾನಾ ಪ್ರಾಂತದ ಬೇಟನ್‌ರೂಜ್ ಎಂಬಲ್ಲಿ ಪಿಯೆಚ್.ಡಿ. ವ್ಯಾಸಂಗ ಮಾಡಲು ಹೋಗುವುದು, ಎಂದಾಯಿತು. ನಮಗೆಲ್ಲ ತುಂಬ ಸಂತೋಷ. ಮಿತ್ರರ ಮನೆಯಲ್ಲೆಲ್ಲ ಭೋಜನ ಕೂಟಗಳು ನಡೆದವು.

ಆ ವೇಳೆಗೆ ಅವನಿಗೆ ಒಂದು ಹೆಣ್ಣು ಮಗು ಆಗಿತ್ತು. "ಸರಸ್ವತಿಯನ್ನೂ ಮಗುವನ್ನೂ ಕರೆದುಕೊಂಡು ಹೋಗು" ಎಂದೆ. "ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೋಗುವಂತಿಲ್ಲ ಎಂದು ಬರೆದಿದ್ದಾರೆ. ಇಲ್ಲಿ ನೋಡಿ ಇಲ್ಲಿ ನೋಡಿ" ಎಂದು ಕಾಗದ ತೋರಿಸಿದ. ಆಮೇಲಾದರೂ ಕರೆಸಿಕೊ ಎಂದದ್ದಕ್ಕೆ ಆಗಲಿ ಎಂದ. ೧೯೬೩ನೇ ಇಸವಿ ಆಗಸ್ಟ್ ತಿಂಗಳು ವೆಂಕಟರಾಂ ಹೊರಟು ಹೋದ.


ಮೂರನೆಯ ವರ್ಷ ಹೆಂಡತಿ, ಮಗುವನ್ನು ಕರೆಸಿಕೊಂಡ. ನಮ್ಮಲ್ಲಿ ಬೇಕಾದಷ್ಟು ಪತ್ರವ್ಯವಹಾರ ನಡೆಯುತ್ತಿತ್ತು. ಅವನ ವ್ಯಾಸಂಗ ತುಂಬ ಸಮರ್ಪಕವಾಗಿ ಮುಂದುವರಿದಿತ್ತು. ೧೯೬೫ರಲ್ಲಿ ಇನ್ನೊಂದು ಹೆಣ್ಣು ಮಗು ಆಯಿತು, ಎಂದೂ ಕಾಗದ ಬಂತು. ಥೀಸಿಸ್ ಮುಗಿಯುತ್ತಾ ಬಂದಿದೆ ಎಂದೂ ಆ ವರ್ಷದ ಕೊನೆಗೆ ಡಾಕ್ಟರೇಟ್ ದೊರೆಯುವದೆಂದೂ ಬರೆದ. ಮೂರನೆಯ ವರ್ಷ ಎಂದರೆ ಎಂದರೆ ೧೯೬೬ರ ಕೊನೆಯಲ್ಲಿ ಊರಿಗೆ ಬಂದುಬಿಡುವುದಾಗಿ ತಿಳಿಸಿದ್ದ.

೧೯೬೫ರ ಮೇ ತಿಂಗಳಲ್ಲಿ ನಾನು ಕನಕದಾಸರ ನಾಲ್ಕನೆಯ ಶತಮಾನೋತ್ಸವದಲ್ಲಿ ಭಾಗಿಯಾಗಲು ಉಡುಪಿಗೆ ಹೋಗಿದ್ದೆ. ಹೋಗುವಾಗಲೆ ನಾನು ನಡೆಸುತ್ತಿದ್ದ ಕಾರಿನ ಬ್ರೇಕ್ ಕೈಕೊಟ್ಟು ಅಲ್ಲಿದ್ದವರೆಲ್ಲ ಸಾಯಬೇಕಾಗಿತ್ತು. ಹೇಗೋ ಸರಿ ಮಾಡಿಸಿಕೊಂಡು ರಾತ್ರಿ ೧೨ಕ್ಕೆ ಹೋಗಿ ಮುಟ್ಟಿದೆವು. ಆಮೇಲೂ ಎರಡು ಸಲ ಅಲ್ಲೇ ಆಸುಪಾಸಿನಲ್ಲಿ ಸಾವು ಮುಟ್ಟಿ ಮುಟ್ಟಿ ಹೋಗಿತ್ತು. ಕೊನೆಗೆ ಮಂಗಳೂರಲ್ಲಿ ಕಾರನ್ನು ಸರಿಯಾಗಿ ರಿಪೇರಿ ಮಾಡಿಸಿಕೊಂಡು ಹೊರಟು ಮರಳಿ ಮೈಸೂರಿಗೆ ಬರುತ್ತಿದ್ದೆವು. ಕಾರಿನಲ್ಲಿ ನಾನು ನನ್ನ ಹೆಂಡತಿ ಶಾಂತಿ ಮತ್ತು ಅವಳ ತಂಗಿ ಇಂದಿರಾ ಇದ್ದೆವು. ಮಡಿಕೇರಿಯಲ್ಲಿ ಸ್ವಲ್ಪ ಹೊತ್ತು ನಿಂತು ರಮ್ಯವಾದ ದೃಶ್ಯಗಳನ್ನು ನೋಡಿಕೊಂಡು ಹೊರಟೆವು. ಮೈಸೂರು ಹತ್ತಿರ ಬರುತ್ತಿದ್ದಂತೆ ನಾನು ಹೇಳಿದೆ. "ಏನೊ ತುಂಬ ದಾರುಣವಾದ ವಾರ್ತೆಯೊಂದು ನಮಗಾಗಿ ಕಾದಿರುತ್ತದೆಯೆಂದು ನನ್ನ ಮನಸ್ಸು ಹೇಳುತ್ತಿದೆ." ಅವರಿಬ್ಬರೂ ಸುಮ್ಮನಿದ್ದರು. ಗಂಗೋತ್ರಿಯಲ್ಲಿದ್ದ ನಮ್ಮ ಮನೆಗೆ ಇನ್ನೇನು ಕಾರನ್ನು ತಿರುಗಿಸಬೇಕು, ಅಷ್ಟರಲ್ಲಿ ನಮ್ಮ ಮಿತ್ರ ಶ್ರೀ ಕೆ. ಜಿ. ನಾಗರಾಜಪ್ಪನವರು ಸನ್ನೆ ಮಾಡಿ ಕಾರನ್ನು ನಿಲ್ಲಿಸಿದರು. ಮೇಲುಸಿರು ಬಿಡುತ್ತಾ ಹೇಳಿದರು: "ಸಾರ್ ನಿಮ್ಮ ಸ್ನೇಹಿತರು ವೆಂಕಟರಾಂ ಸತ್ತುಹೋದರು."

"ಸುಳ್ಳು!" ಎಂದು ಕೂಗಿದ್ದಷ್ಟೇ ನನಗೆ ನೆನಪು. ಆಮೇಲೆ ಮನಸ್ಸಿನ ತುಂಬ "ಸುಳ್ಳು ಸುಳ್ಳು ಸುಳ್ಳು" ಎಂಬ ಮಾತುಗಳ ಮೇಳ. ಕಾರು ನಿಲ್ಲಿಸಿ ಅವರನ್ನು "ಏನು ಎಲ್ಲಿ ಹೇಗೆ" ಎಂದೂ ಕೇಳಲಿಲ್ಲ. ಸುಮ್ಮನೆ ಮನೆಯವರೆಗೂ ಬಂದುಬಿಟ್ಟು ಕಾರು ನಿಲ್ಲಿಸಿ ಒಳಗೆ ಹೋದೆವು. ನಾಗರಾಜಪ್ಪ ನನ್ನ ಹಿಂದೆಯೇ ಬಂದರು. "ಸಾರ್ ಕೋಪ ಮಾಡಿಕೊಳ್ಳಬೇಡಿ ಎರಡು ನಿಮಿಷ ನನ್ನ ಮಾತು ಕೇಳಿ. ನಿಮ್ಮ ಸ್ನೇಹಿತರು, ಕೇಳಿತಾ ಸಾರ್, ವೆಂಕಟರಾಂ ಸತ್ತುಹೋದರು. ಸಾರ್ ನಿಜ ಸಾರ್." ನಾಗರಾಜಪ್ಪ ಸುಳ್ಳು ಹೇಳುವವರೇ ಅಲ್ಲ. ಅವರ ಮಾತನ್ನು ನಂಬದೇ ಇರುವದು ಹೇಗೆ?

ಆದರೆ ವೆಂಕಟರಾಂ ಸಾಯುವುದು ಹೇಗೆ ಸಾಧ್ಯ? ಯಮನಾಗಲಿ ಅವನ ಭಟರಾಗಲಿ ಮೃತ್ಯುವಾಗಲಿ ವೆಂಕಟರಾಂನನ್ನು ಮುಟ್ಟುವಷ್ಟು ಶುಚಿಮಂತರೆ? ನನ್ನ ವಿಚಾರಕ್ಕೆ ಮುಚ್ಚುಸೂರಾಗಿತ್ತು. ಕಷ್ಟಪಟ್ಟು "ಹೇಗೆ" ಎಂದೆ. "ಅವರು ಹೆಂಡತಿ ಮಕ್ಕಳೊಡನೆ ಸಮುದ್ರಕ್ಕೆ ಹೋಗಿದ್ದರಂತೆ, ಪಿಕ್‌ನಿಕ್ ಎಂದು. ಅಲ್ಲಿ ಇವರು ನೋಡುತ್ತಿರುವಾಗಲೇ ಒಬ್ಬಳು ಹುಡುಗಿ, ಎಂಟೊಂಬತ್ತು ವರ್ಷದವಳು, ಮುಳುಗಿಹೋಗುತ್ತಿದ್ದಳಂತೆ. ಇವರು ಸೂಟು ಪ್ಯಾಂಟು ಸಹಿತ ಧುಡುಮ್ಮನೆ ನೀರಿಗೆ ಬಿದ್ದರಂತೆ. ಸಾಯುತ್ತಿದ್ದ ಹುಡುಗಿಯನ್ನು ದಡಕ್ಕೆ ನೂಕಿದರಂತೆ, ಆದರೆ ತಾವೇ ಕೊಚ್ಚಿಹೋದರಂತೆ." ನನ್ನ ಕಣ್ಣಿನಲ್ಲಿ ಕಾಣುತ್ತಿದ್ದ ಶೂನ್ಯತೆಯನ್ನು ಗಮನಿಸಿ ನಾಗರಾಜಪ್ಪ ಸುಮ್ಮನಾಗಿಬಿಟ್ಟರು. ನಾನು ನಾಗರಾಜಪ್ಪನನ್ನು ಕಾರಿನಲ್ಲಿ ಕೂರಿಸಿಕೊಂಡು ವೆಂಕಟರಾಂ ಮನೆಗೆ ಹೋದೆ.

ಅವರ ಮನೆಯಲ್ಲಿ ಹಾಲಿನಲ್ಲೇ ಅವರ ತಂದೆ ವಾಸುದೇವಯ್ಯ, ದೊಡ್ಡಪ್ಪ ವೆಂಕಟಸುಬ್ಬಯ್ಯ, ಚಿಕ್ಕಪ್ಪ ಸುಬ್ರಹ್ಮಣ್ಯಂ, ಇನ್ನೊಬ್ಬ ಚಿಕ್ಕಪ್ಪ ಸೂರ್ಯನಾರಾಯಣ- ಪಂಡಿತರು ಕುಳಿತಿದ್ದರು. ಯಾರೂ ಅಳುತ್ತಿರಲಿಲ್ಲ. ಆದರೆ ಘನೀಭೂತವಾದ ಮೌನ ಎಲ್ಲವನ್ನು ಹೇಳುತ್ತಿತ್ತು. ವೆಂ


ಈಗಿನ ದಿನಗಳಲ್ಲಿ ಇನ್ನೂ ಫಿಲ್ಟರ್ ಕಾಫಿಯನ್ನೇ ಕೊಡುತ್ತಿರುವುದು ನನಗೆ ಬಹಳ ಸಂತೋಷ.
ನಿಮಗೆ ಇಷ್ಟವಾದುದಕ್ಕೆ ನಾನು ಸಂತೋಷ ಪಡುತ್ತೇನೆ...ಆದರೆ ಇದು ರಿಕರಿ ಇನ್‌ಸ್ಟೆಂಟ್
ರಿಕರಿ®
ಇನ್‌ಸ್ಟೆಂಟ್
RICORE
ಬಹಳಷ್ಟು ಫಿಲ್ಟರ್ ಕಾಫಿ ಯಷ್ಟೇ ರುಚಿ ಯಾಗಿರುವುದರಿಂದ ವ್ಯತ್ಯಾಸವನ್ನು ಹೇಳುವುದು ಬಹಳ ಕಷ್ಟ
SAA/FSL/R/1162
ತಯಾರಕರು ನೆಸ್‌ಕಾಫೆ—ಜಗತ್ತಿನಾದ್ಯಂತ ಕಾಫಿ ತಯಾರಿಕೆಯಲ್ಲಿ ಸುವಿದಿತರು.

ತರು ನನ್ನನ್ನು ಹೊರಗೆ ಕರೆದೊಯ್ದರು. "ವಿಷಯ ಗೊತ್ತಾಯಿತೆ?" ಎಂದರು. "ಹೂಂ" ಎಂದೆ. ಮತ್ತೊಮ್ಮೆ ಅವರು ಎಲ್ಲವನ್ನು ಹೇಳಿದರು. "ಪ್ರಭುಶಂಕರ್‌ಗೆ ಯಾರೂ ಹೇಳಬೇಡಿ. ಅವರು ಇದನ್ನು ಕೇಳಿದರೆ ತಡೆದುಕೊಳ್ಳಲಾರರು. ನಿಧಾನವಾಗಿ ಅವರಿಗೆ ತಿಳಿಯಲಿ ಎಂದು ಎಲ್ಲರೂ ಹೇಳಿದರು. ಅದಕ್ಕೆ ನಿಮ್ಮ ಮನೆಗೆ ಯಾರೂ ಬರಲಿಲ್ಲ" ಎಂದರು ಪಂಡಿತರು.

ಏನೂ ಮಾತನಾಡದೆ ದುಃಖವನ್ನು ಅಗಿದು ಅಗಿದು ನುಂಗುತ್ತಾ ನಿಂತಿದ್ದೆ. ಹೆಚ್ಚು ಹೊತ್ತು ಅಲ್ಲಿ ಇರಲಾಗದೆ ಮನೆಗೆ ಬಂದೆ. ನಾಗರಾಜಪ್ಪ ಮೌನವಾಗಿ ಸಮಾಧಾನ ನೀಡುವಂತೆ, ನನ್ನ ಜೊತೆಯಲ್ಲೇ ಇದ್ದರು. ಅವರು ನನ್ನ ಶಿಷ್ಯ, ಮೇಷ್ಟ್ರು ಒಂದೇ ಸಮನೇ ಕಣ್ಣೀರು ಕರೆಯು-ವುದನ್ನು ಅಸಹಾಯಕರಾಗಿ ನೋಡುತ್ತಿದ್ದರು.

ಮನೆಗೆ ಬಂದು ನೋಡಿದರೆ ಶಾಂತಿ – ನನ್ನ ಹೆಂಡತಿ – ಒಂದೇ ಸಮನೆ ಕಣ್ಣೀರು ಕರೆಯುತ್ತ ಮಲಗಿದ್ದಾರೆ. ಚೇತರಿಸಿಕೊಂಡು ಮೇಲಕ್ಕೆ ಏಳುವುದಕ್ಕೆ ೨೪ ಗಂಟೆಯೇ ಬೇಕಾಯಿತು.

ಹಾಗೆ ನೋಡಿದರೆ ನಾನು ಎದ್ದೇ ಇಲ್ಲ. ನನ್ನ ದೇಹ ಮನಸ್ಸು ಚೈತನ್ಯಗಳ ಒಂದು ಪ್ರಧಾನವಾದ ಭಾಗವನು ಯಾರೋ ನನ್ನಿಂದ ಕತ್ತರಿಸಿಕೊಂಡು ಹೋದಂತೆ ಅನುಭವವಾದದ್ದು ಬದಲಾಗಲೇ ಇಲ್ಲ. ಶುದ್ಧ ಸ್ನೇಹದ ಏಕೈಕ ಮೂರ್ತಿ ಅದು – ನನ್ನ ಪಾಲಿಗೆ ದೊರೆತದ್ದು – ಇನ್ನೊಂದು ಅಂಥ ಭಾಗ್ಯ ದೊರಕಲಿಲ್ಲ.

ಹನ್ನೆರಡು ವರ್ಷಗಳ ನಂತರ ಇದನ್ನು ಬರೆಯುತ್ತಿದ್ದೇನೆ. ಧಾರಾಕಾರವಾಗಿ ಕಣ್ಣೀರು ಸುರಿಯುತ್ತಿದೆ. ಊಟ ತಿಂಡಿ; ನಿದ್ದೆ ಓಡಾಟ ಓದು ಆಟ ಪಾಠ ಭಾಷಣ ಸಂಗೀತ ಏನೆಲ್ಲ ಈ ಹನ್ನೆರಡು ವರ್ಷಗಳಲ್ಲಿ ನಡೆದಿದೆ. ಅದರಲ್ಲೆಲ್ಲಾ ಅವನ ನೆನಪು ಬೆರೆಯದೆ ಹೋಗೇ ಇಲ್ಲ. ಒಮ್ಮೆ ಕಿತ್ತಳೆ ಹಣ್ಣು ಬಿಡಿಸುತ್ತಿದ್ದೇನೆ, ಅವನ ಮೂರ್ತಿ ನೆನಪಿಗೆ ಬಂತು. ಒಂದು ರಥಸಪ್ತಮಿಯ ದಿನ ವೆಂಕಟರಾಂ ಬಂದಿದ್ದ, "ಪ್ರಭುಶಂಕರ್ ರಥಸಪ್ತಮಿಯನ್ನು ಆಚರಿಸೋದು ಹೇಗೆ ಗೊತ್ತೆ?" ಎಂದು ಕೇಳಿದ. "ಇಲ್ಲ" ಎಂದೆ. "ಬನ್ನಿ ತೋರಿಸುತ್ತೇನೆ" ಎಂದು ಕರೆದುಕೊಂಡು ಹೋದ. ಅದು ಕಿತ್ತಳೆ ಹಣ್ಣಿನ ಕಾಲ. ಮಾರ್ಕೆಟ್ಟಿಗೆ ಹೋಗಿ ಮೂರೋ ನಾಲ್ಕೋ ಡಜನ್ ಕಿತ್ತಳೆ ಹಣ್ಣು ತೆಗೆದುಕೊಂಡು ಚೀಲದಲ್ಲಿ ತುಂಬಿಕೊಂಡ. ಕರ್ಜನ್ ಪಾರ್ಕಿಗೆ ಕರೆದೊಯ್ದು ಅಲ್ಲಿ ಕುಳಿತು ಹೇಳಿದ; "ನೋಡಿ ಇದು ನನ್ನ ಪದ್ಧತಿ. ಕಿತ್ತಳೇ ಹಣ್ಣು ಒಂದೊಂದಾಗಿ ಬಿಡಿಸಿಕೊಂಡು ತಿನ್ನಬೇಕು. ಹೊಟ್ಟೆ ತುಂಬ ಇದೇ ಇವತ್ತು. ಇಷ್ಟನ್ನು ಮುಗಿಸಿಬಿಡೋಣ. ತಿನ್ನಿ ಮತ್ತೆ."

ಯಾರಾದರೂ ವಿದ್ಯಾರ್ಥಿಗಳು ಮುಂದೆ ನಿಂತು "ಸ್ವಲ್ಪ ಸಹಾಯ ಬೇಕು" ಎಂದರೆ ಮತ್ತೆ ಅವನ ನೆನಪು. ಆ ಕಾಲದಲ್ಲಿ ಇಬ್ಬರು ಮೂರು ಜನ ಸೇರಿ ವಿದ್ಯಾರ್ಥಿಗಳಿಗೆ ಊಟ ಫೀಸುಗಳ ವ್ಯವಸ್ಥೆ ಮಾಡುತ್ತಿದ್ದೆವು. "ವೆಂಕಟ್ರಾಂ ಇಂಥ ವಿದ್ಯಾರ್ಥಿ ಬಂದಿದ್ದಾನೆ ಅವನಿಗೆ...ಇವನು" ಮುಂದೆ ಮಾತನಾಡೋದಕ್ಕೆ ಬಿಡುತ್ತಲೇ ಇರಲಿಲ್ಲ. "ನೋಡಿ ನನ್ನ ಪಾಲು ಎಷ್ಟು ಹೇಳಿ ಬಿಡಿ. ಲೆಕ್ಕಕ್ಕೆ ಸೇರಿಸಿ ಬಿಡಿ" ಎನ್ನುತ್ತಿದ್ದ. ನಮ್ಮ ಲೆಕ್ಕಾಚಾರದ ವಿಷಯ ಹೇಳಿದ್ದೇನಲ್ಲ.

ಅಡುಗೆ ಮನೆಗೆ ಕಾಲಿಟ್ಟರಂತೂ ಅವನದೇ ನೆನಪು. ನನಗೆ ಮದುವೆಯಾಗಿ ಮನೆ ತುಂಬ ಜನ ಇದ್ದಾಗಲೂ ಅವನು ಅಡುಗೆಯ ಮನೆಯನ್ನು

ಪ್ರವೇಶಿಸಿ ಅಡುಗೆಯಲ್ಲಿ ತೊಡಗಿರುತ್ತಿದ್ದ. ಕಾಲೇಜಿನಿಂದ ನೇರವಾಗಿ ನಮ್ಮ ಮನೆಗೆ ಬರುತ್ತಿದ್ದ. ಪ್ಯಾಂಟು ಹಾಕಿಕೊಂಡು ಅಡುಗೆಯಲ್ಲಿ ತೊಡಗುವುದು ಅನಾನುಕೂಲ ಎಂದು ನಮ್ಮ ಮನೆಯಲ್ಲಿ ಖಾಯಮ್ಮಾಗಿ ಅವನು ಒಂದು ಪಂಚೆ ಇಟ್ಟುಬಿಟ್ಟಿದ್ದ. ಅವನೇ ಕೊಟ್ಟಿದ್ದ ಸ್ಟ್ಯಾಂಡಿನ ಮೇಲೆ ಆ ಪಂಚೆ ಯಾವಾಗಲೂ ನೇತಾಡುತ್ತಿತ್ತು.

ಅವನು ಸತ್ತಿದ್ದಾನೆಯೆ? ನಾವು ಬದುಕಿದ್ದೇವೆಯೆ? ನನಗೆ ಒಂದೊಂದು ಸಲ ವ್ಯತ್ಯಾಸ ಗೊತ್ತಾಗುತ್ತಿಲ್ಲ. ಅವನು ಬದುಕಿ ಇದ್ದಾಗಲೆ ನಾನು ಈ ಪ್ರಶ್ನೆ ಕೇಳಿಕೊಂಡಿದ್ದೆ; ಏನಾದರೂ ಒಂದಾದರೂ ಆಸೆಗಾಗಿ ಜನ ಬದುಕುತ್ತಾರೆ. ಇವನಿಗೆ ಅದಾವ ಆಸೆ ಇದೆ? ಪದವಿ? ಹಣ? ಕೀರ್ತಿ? ಕಾಮ – ಯಾವುದೂ ಇಲ್ಲ. ಊಟ ತಿಂಡಿ ಆಸೆ ಎಂದು ಬಾಯಲ್ಲಿ ತುಂಬ ಹೇಳುತ್ತಾನೆ. ಆದರೆ ಒಂದು ಇಡೀ ದಿನ ಅವನು ನೀರು ಸಹ ಕುಡಿಯದೇ, ಉಪವಾಸ ಮಾಡುವುದನ್ನು ಕಂಡಿದ್ದೇನೆ. "ಜೀವನಕ್ಕೆ ಯಾವ ಕಾಮವೂ ಇಲ್ಲದ ಇವನು ಯಾವುದಕ್ಕಾಗಿ ಬದುಕಿದ್ದಾನೆ? ಎಷ್ಟು ದಿನ ಬದುಕಿಯಾನು?

ಬಹಳ ದಿನ ಬದುಕಲಿಲ್ಲ. ಅದೂ ಸಾವನ್ನು ಸ್ವೀಕರಿಸಿದ ಸಂದರ್ಭ ಎಂಥದು? ಹೆಂಡತಿ ಮಕ್ಕಳು ನೋಡುತ್ತಿದ್ದಾರೆ. ಮೃತ್ಯುಮುಖದಲ್ಲಿದ್ದಾಳೆ ಎಂದು ಇವನು (ತಪ್ಪಾಗಿ) ಭಾವಿಸಿದ ಮೂಕ ಹುಡುಗಿಯನ್ನು ಬದುಕಿಸಲು ತುಂಬಿ ಹರಿಯುತ್ತಿರುವ ನದಿಗೆ ಧುಮುಕಿದ. ಆ ಹುಡುಗಿಯನ್ನು ಸುರಕ್ಷಿತವಾಗಿ ಸ್ಥಳಕ್ಕೆ ನೂಕಿದ. ತಾನು ಹಿಂತಿರುಗಿ ಬರಲಾಗದ ದಡ ಸೇರಿಬಿಟ್ಟ.

ಇಡೀ ಅಮೇರಿಕಾ ದೇಶ ಅವನನ್ನು ಹಾಡಿ ಹೊಗಳಿತು. ಅಲ್ಲಿಯ ಅನೇಕ ಪತ್ರಿಕೆಗಳಲ್ಲಿ ಅವನ ಫೋಟೋ ಪ್ರಕಟವಾಯಿತು. ಅಮೇರಿಕದ ಉಪಾಧ್ಯಕ್ಷರು ಅವನಿಗೆ ಸಲ್ಲಬೇಕಾಗಿದ್ದ ವೀರ ಪ್ರಶಸ್ತಿಯನ್ನು ಶ್ರೀಮತಿ ಸರಸ್ವತಿ ಅವರಿಗೆ ನೀಡಿದರು. ಜನ ತಾವಾಗಿ ಮುಂದೆ ಬಂದು ಇಪ್ಪತ್ತು ಸಾವಿರ ಡಾಲರುಗಳ ನಿಧಿಯನ್ನು, ಕೆಲವೇ ದಿನಗಳಲ್ಲಿ ಕೂಡಿಸಿದರು. ಒಂದು ಸಣ್ಣ ಹುಡುಗಿ ಇವನ ಸಾವಿನ ಸುದ್ದಿ ಕೇಳಿ ಒಂದು ದಿನದ ಉಪಹಾರ ಬಿಟ್ಟು ಒಂದು ಡಾಲರನ್ನು ಆ ನಿಧಿಗೆ ಕಳಿಸಿತಂತೆ. ಆ ನಿಧಿಯಿಂದ ಬರುವ ಬಡ್ಡಿ ವೆಂಕಟರಾಂನ ಎರಡು ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಇತ್ತು. ಶ್ರೀಮತಿ ಸರಸ್ವತಿ ಅವರಿಗೆ ಎರಡು ವಿದ್ಯಾರ್ಥಿ ವೇತನ ಕೊಟ್ಟು ಮುಂದಕ್ಕೆ ಓದಲು ಅನುಕೂಲ ಕಲ್ಪಿಸಿದರು. ✡

ಜೇಮ್ಸ್ ಮೋಂಟ್‌ಗೋಮೇರಿ ಫ್ಲೇಗ್ ಅಮೇರಿಕದ ಖ್ಯಾತ ಚಿತ್ರಕಾರ. ಒಮ್ಮೆ ರೆಸ್ಟೋರಾ ಒಂದರಲ್ಲಿ ಹಸಿವು ಹಿಂಗಿಸುವುದಕ್ಕಾಗಿ ಹೋದ. ಅವನಿಗೆ ಅಚ್ಚರಿಯಾಯಿತು- ಎದುರಿಗೆ ತನ್ನ ಹೆಂಡತಿ ಮತ್ತು ಆಕೆಯ ಪಕ್ಕದಲ್ಲಿ ಒಬ್ಬ ಹದಿಹರೆಯದ ಸುಂದರಿ ಕುಳಿತದ್ದನ್ನು ಕಂಡು ಮೋಂಟ್‌ಗೋಮೆರಿ ಒಂದರೆನಿಮಿಷ ಹಾಗೇ ಆ ಸುಂದರಿಯನ್ನು ಬಾಯ್ತೆರೆದು ನೋಡುತ್ತ ನಿಂತುಬಿಟ್ಟ. ಅಷ್ಟರಲ್ಲೇ ಪಕ್ಕದಲ್ಲಿ ಹಾದು ಹೋದ ವೇಟರ್‌ನನ್ನು ಕರೆದು ಆತನ ಕೈಯಲ್ಲಿ; 'ಈ ಸುಂದರಿ ಯಾರು?' ಎಂದು ಬರೆದ ಚೀಟಿಯನ್ನು ಕೊಟ್ಟು ಆ ಮಹಿಳೆಗೆ ಕೊಡುವಂತೆ ಹೇಳಿದ- ಆ ಸುಂದರಿ ತನ್ನ ಮಾಡೆಲ್ಲಾದರೆ ಎಷ್ಟಾದರೂ ಸಂಪಾದಿಸಿಯೇನು ಎಂಬಾಶೆ ಆತನಿಗೆ.

ವೇಟರ್ ವಾಪಸ್ ಬಂದ. ಅದೇ ಚೀಟಿಯನ್ನು ವಾಪಸ್ಸು ತಂದಿದ್ದ. ಮೋಂಟ್‌ಗೋಮರಿ ಚೀಟಿಯನ್ನು ಬಿಚ್ಚಿದ. ಅದರಲ್ಲಿ 'ನಿಮ್ಮ ಮಗಳು' ಎಂದು ಬರೆದಿತ್ತು.

Printed & published by P. S. Bhat for the Jayakarnatak News Printers Ltd., at the Samyukta Karnataka Press, Koppikar Road, Hubli-580 020. Rept. Bombay: V. Satyamurty Phone: 522412; Calcutta H. Muzamdar 46-4233: Madras: K. A. Subramanian Phone: 8422·; New Delhi. P. R. Chopra Phone: 714130.

KASTURI PRICE : 1-50 Regd. No. KRNG 43
Registered with the Registrar of Newspapers for India under No. 3533/57

